ಬುಧವಾರ, ಅಕ್ಟೋಬರ್ 11, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 282 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಒಟಿಪಿಯ ಹಂಗಿಲ್ಲದೆ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕಲಾಗುತ್ತಿದೆ!

ಪ್ರಜಾವಾಣಿ@75
44 ಶತಕೋಟಿ ಡಾಲರ್‌ಗೆ 'ಇನ್‌ಸ್ಪೇಸ್' ಗುರಿ 5
ಮಹಿಳಾ ಕಾಳಜಿಯ ಕಥನ
'ಆಧುನಿಕ ರಜಾಕಾರರಿಂದ ರಕ್ಷಣೆ' 7

ಸೆನ್ಸೆಕ್ಸ್	ನಿಫ್ಟಿ	₹/$
66,079	19,689	83.25

ರಾಜಕೀಯ ಸಮಾವೇಶ, ರ‍್ಯಾಲಿಗಳಲ್ಲಿಯೂ ಹಸಿರು ಪಟಾಕಿ ಬಳಕೆಗೆ ಮಾತ್ರ ಅವಕಾಶ: ಸಿ.ಎಂ

'ಹಾನಿಕರ ಪಟಾಕಿ ನಿಷೇಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ರಾಜಕೀಯ ಸಮಾವೇಶ, ಮದುವೆ, ಹಬ್ಬ, ಶುಭ ಸಮಾರಂಭಗಳಲ್ಲಿ ಅಪಾಯಕಾರಿ ಪಟಾಕಿಗಳ ಬದಲು ಹಸಿರು ಪಟಾಕಿ ಬಳಕೆಗೆ ಮಾತ್ರ ಅವಕಾಶ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅತ್ತಿಬೆಲೆ ಪಟಾಕಿ ದುರಂತದ ಬಳಿಕ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಉನ್ನತ ಮಟ್ಟದ ಸಭೆಯನ್ನು ಮುಖ್ಯಮಂತ್ರಿ ಮಂಗಳವಾರ ನಡೆಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಹಸಿರು ಪಟಾಕಿ ಬಳಕೆಗೆ ಮಾತ್ರ ಅವಕಾಶ. ಅಕ್ರಮವಾಗಿ ಪಟಾಕಿ ಮಾರಾಟ ಮಾಡಿದರೆ ಪರವಾನಗಿ ರದ್ದುಗೊಳಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಪಟಾಕಿ ಮಳಿಗೆ, ದಾಸ್ತಾನಿಗೆ ಐದು ವರ್ಷಕ್ಕೆ ನೀಡಲಾಗುವ ಪರವಾನಗಿಯನ್ನು ಇನ್ನು ಮುಂದೆ ಒಂದು ವರ್ಷಕ್ಕೆ ಸೀಮಿತಗೊಳಿಸಲಾಗುವುದು. ಹೀಗಾಗಿ, ಪರವಾನಗಿದಾರರು ಪ್ರತಿವರ್ಷ ನವೀಕರಣ ಮಾಡಿಕೊಳ್ಳಬೇಕು' ಎಂದರು.

ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಡಿಜಿಪಿ ಅಲೋಕ್ ಮೋಹನ್, ಬೆಂಗಳೂರು ಕಮಿಷನರ್ ಬಿ. ದಯಾನಂದ ಸಭೆಯಲ್ಲಿ ಇದ್ದರು

ಹಸಿರು ಪಟಾಕಿ ಎಂದರೆ. .

- ಮಾಲಿನ್ಯಕಾರಕ ಹೊಗೆ ಸೂಸುವ ಪ್ರಮಾಣ ಅತಿ ಕಡಿಮೆ
- ಇಂತಹ ಪಟಾಕಿ ತಯಾರಿಕೆಗೆ ಕಡಿಮೆ ಕಚ್ಚಾವಸ್ತುಗಳನ್ನು ಬಳಸಲಾಗುತ್ತದೆ
- ಪಟಾಕಿಗಳ ಗಾತ್ರವೂ ಚಿಕ್ಕದಾಗಿರುತ್ತವೆ, ಸಿಡಿಸಿದಾಗ ಬೂದಿಯಾಗುವುದಿಲ್ಲ
- ಸಾಮಾನ್ಯ ಪಟಾಕಿಗಳಲ್ಲಿರುವಂತಹ ಅಪಾಯಕಾರಿ ರಾಸಾಯನಿಕ ಅಂಶಗಳು ಕಡಿಮೆ ಪ್ರಮಾಣದಲ್ಲಿ ಇರುತ್ತವೆ
- ಅಧಿಕ ಶಬ್ದ ಮತ್ತು ಹೊಗೆಯ ಬದಲಿಗೆ ಆವಿಯನ್ನು ಬಿಡುಗಡೆ ಮಾಡುತ್ತವೆ

ಮುಖ್ಯಮಂತ್ರಿ ಸೂಚನೆ: 'ಎಲ್ಲ ಪಟಾಕಿ ಮಾರಾಟ ಸ್ಥಳವನ್ನು ಪರಿಶೀಲಿಸಬೇಕು. ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಗೋದಾಮುಗಳು ಮತ್ತು ಮಳಿಗೆಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅತ್ತಿಬೆಲೆ- ಹೊಸೂರು ಗಡಿಭಾಗದಲ್ಲಿರುವ ಎಲ್ಲ ಪಟಾಕಿ ಮಳಿಗೆಗಳ ಮೇಲೆ ತೀವ್ರ ನಿಗಾ ವಹಿಸಬೇಕು. ಸುರಕ್ಷತೆಯನ್ನೂ ತಪಾಸಣೆ ಮಾಡಬೇಕು ಎಂದು ಸೂಚಿಸಿದ ಸಿದ್ದರಾಮಯ್ಯ, 'ಪರವಾನಗಿ ನೀಡುವಾಗ ಜಿಲ್ಲಾಧಿಕಾರಿ, ಎಸ್‌ಪಿ ಮತ್ತು ಅಗ್ನಿಶಾಮಕ ದಳದ ಅಧಿಕಾರಿಗಳು ಸ್ಥಳ ಪರಿಶೀಲಿಸಬೇಕು. ಈ ಕುರಿತು ಇರುವ ನ್ಯಾಯಾಲಯಗಳ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು. ಹಸಿರು ಪಟಾಕಿಗಳ ಮಾರಾಟವನ್ನೂ ಖಾತರಿಪಡಿಸಿಕೊಳ್ಳಬೇಕು' ಎಂದೂ ಅವರು ಅಧಿಕಾರಿಗಳಿಗೆ ಹೇಳಿದರು.

'ಸ್ಫೋಟಕ ವಸ್ತುಗಳ ಕಾಯ್ದೆ ಓದಿದ್ದೀರಾ?'

'ಪಟಾಕಿ ಮಳಿಗೆಗಳಿಗೆ ಪರವಾನಗಿ ನೀಡುವಾಗ ವಹಿಸಬೇಕಾದ ಎಚ್ಚರಿಕೆಯ ಬಗ್ಗೆ ಸ್ಫೋಟಕ ವಸ್ತುಗಳ (ಎಕ್ಸ್‌ಪ್ಲೋಸಿವ್) ಕಾಯ್ದೆಯಲ್ಲಿ ವಿವರಿಸಲಾಗಿದೆ. ಈ ಕಾಯ್ದೆಯನ್ನು ಓದಿದ್ದೀರಾ' ಎಂದು ಅಧಿಕಾರಿಗಳನ್ನು ಸಿದ್ದರಾಮಯ್ಯ ಅವರು ಖಾರವಾಗಿ ಪ್ರಶ್ನಿಸಿದರು.

'ಅತ್ತಿಬೆಲೆಯಲ್ಲಿ ಸಂಭವಿಸಿದ ಪಟಾಕಿ ದುರಂತದಲ್ಲಿ ಜೀವ ಕಳೆದುಕೊಂಡ 14 ಜನರ ಜೀವಕ್ಕೆ ಯಾರು ಹೊಣೆ? ಇನ್ನು ಮುಂದೆ ಈ ಕಾಯ್ದೆಯಲ್ಲಿರುವ ಎಲ್ಲ ಮಾನದಂಡಗಳನ್ನು ಪಟಾಕಿ ಮಾರಾಟ ಪರವಾನಗಿದಾರರು ಪೂರೈಸಿದ್ದಾರೆಯೇ ಎಂದು ನೋಡಬೇಕು. ಕೆಳಹಂತದ ಅಧಿಕಾರಿಗಳು ಸಲ್ಲಿಸಿದ ವರದಿ ಸರಿ ಇದೆಯೇ ಎಂದು ಜಿಲ್ಲಾಧಿಕಾರಿ ಪರಿಶೀಲಿಸಬೇಕು' ಎಂದರು.

'ಅಧಿಕಾರಿಗಳ ಅಮಾನತು'

ಅತ್ತಿಬೆಲೆ ಪಟಾಕಿ ದುರಂತವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಈ ಹಿಂದೆ ಆನೇಕಲ್ ತಹಶೀಲ್ದಾರ್ ಆಗಿದ್ದ ಶಶಿಧರ್ ಮಾಡ್ಯಾಳ, ಉಪ ತಹಶೀಲ್ದಾರ್ ವಿ.ಸಿ.ಶ್ರೀಧರ್, ರಾಜಸ್ವ ನಿರೀಕ್ಷಕ ಪುಷ್ಪರಾಜು ಮತ್ತು ಗ್ರಾಮ ಆಡಳಿತಾಧಿಕಾರಿ ಬಾಗೇಶ್ ಹೊಸಮನಿ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಬೆನ್ನಲ್ಲೇ ಮಂಗಳವಾರ ಅಮಾನತು ಆದೇಶ ಹೊರಬಿದ್ದಿದೆ.

'ಇಂಥ ಘಟನೆ ಮರುಕಳಿಸದಂತೆ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ. ಈ ಮಧ್ಯೆ ಅತ್ತಿಬೆಲೆ ಪಟಾಕಿ ಮಳಿಗೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗೆ ಪೊಲೀಸ್ ವರಿಷ್ಠಾಧಿಕಾರಿ ವರದಿ ಸಲ್ಲಿಸಿದ್ದಾರೆ .

ಗಾಜಾ ಪಟ್ಟಿಯ ದಕ್ಷಿಣ ಭಾಗದಲ್ಲಿನ ಖಾನ್ ಯೂನಿಸ್ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ಶೆಲ್ ದಾಳಿಗೆ ಬಲಿಯಾದವರ ಮೃತದೇಹಗಳ ಬಳಿ ದುಃಖತಪ್ತ ಪಾಲೆಸ್ಟೀನ್ ಮಹಿಳೆಯೊಬ್ಬಳ ಆಕ್ರಂದನ —ಎಎಫ್‌ಪಿ ಚಿತ್ರ

ಗಾಜಾ: 1500 ಮೃತದೇಹ ಪತ್ತೆ

ಜೆರುಸಲೇಂ (ಎಎಫ್‌ಪಿ): ಗಾಜಾ ಗಡಿಯನ್ನು ಬಹುತೇಕ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಇಸ್ರೇಲ್ ಮಂಗಳವಾರ ಹೇಳಿದೆ. ಅಲ್ಲದೆ, ಗಾಜಾ ಗಡಿಗೆ ಸನಿಹದ ಪಟ್ಟಣಗಳಲ್ಲಿ 1,500 ಹಮಾಸ್ ಬಂಡುಕೋರರ ಮೃತದೇಹಗಳು ಪತ್ತೆಯಾಗಿವೆ ಎಂದು ಹೇಳಿಕೊಂಡಿದೆ. ಗಾಜಾ ಗಡಿಗೆ ಹತ್ತಿರದಲ್ಲಿರುವ ಪಟ್ಟಣಗಳಲ್ಲಿರುವ ಜನರನ್ನು ಇಸ್ರೇಲ್ ತೆರವುಗೊಳಿಸುತ್ತಿದೆ.

ಹಮಾಸ್ ಬಂಡುಕೋರರು ಶನಿವಾರ ನಡೆಸಿದ ದಾಳಿಯ ನಂತರ ಆರಂಭವಾದ ಇಸ್ರೇಲ್‌ನ ಸೇನಾ ಕಾರ್ಯಾಚರಣೆಯು 'ಹಮಾಸ್ ಸಂಘಟನೆಯನ್ನು ನಾಶಪಡಿಸುವ ಹಾಗೂ ಮಧ್ಯಪ್ರಾಚ್ಯವನ್ನು ಬದಲಾಯಿಸುವ ಯುದ್ಧದ ಆರಂಭ ಮಾತ್ರ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಹಮಾಸ್ ನಡೆಸಿದ ದಾಳಿಯಲ್ಲಿ ಇಸ್ರೇಲ್‌ನಲ್ಲಿ ಸಾವನ್ನಪ್ಪಿರುವ ಜನರ ಸಂಖ್ಯೆಯು 900ಕ್ಕಿಂತ ಹೆಚ್ಚಾಗಿದೆ. ಗಾಜಾದಲ್ಲಿ ಇದುವರೆಗೆ 687 ಜನ ಮೃತಪಟ್ಟಿದ್ದಾರೆ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ. ಗಾಜಾ ಪಟ್ಟಿಯ ಪೂರ್ವ ಗಡಿಯ ಬಳಿ ಒಂದೇ ಸ್ಥಳದಲ್ಲಿ ಹಮಾಸ್ ಬಂಡುಕೋರರು 100ಕ್ಕೂ ಹೆಚ್ಚು ಮಂದಿಯನ್ನು ಕೊಂದಿದ್ದಾರೆ.

'ಸ್ವೋರ್ಡ್ ಆಫ್ ಐರನ್' ಕಾರ್ಯಾಚರಣೆಗೆ ಇಸ್ರೇಲ್ ಸೇನೆಯು ತನ್ನ ಮೂರು ಲಕ್ಷ ಮೀಸಲು ಯೋಧರನ್ನು ಕರೆಸಿಕೊಳ್ಳುತ್ತಿದೆ.

> **ದೂರವಾಣಿ ಕರೆ ಮಾಡಿ ಸದ್ಯದ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿದ್ದಕ್ಕೆ ಬೆಂಜಮಿನ್ ನೆತನ್ಯಾಹುಗೆ ಧನ್ಯವಾದ. ಈ ಸಂದರ್ಭದಲ್ಲಿ ಭಾರತ ಇಸ್ರೇಲ್ ಜತೆ ದೃಢವಾಗಿ ನಿಲ್ಲುತ್ತದೆ**
> **ನರೇಂದ್ರ ಮೋದಿ,** ಪ್ರಧಾನಿ

7ನೇ ಪುಟ ನೋಡಿ

ಪದ್ಮಾಮೂರ್ತಿಗೆ 'ಸಂಗೀತ ವಿದ್ವಾನ್' ಗೌರವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಪದ್ಮಾಮೂರ್ತಿ

ಮೈಸೂರು: ಪ್ರಸಕ್ತ ಸಾಲಿನ ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿಗೆ ಬೆಂಗಳೂರಿನ ಪದ್ಮಾಮೂರ್ತಿ ಆಯ್ಕೆಯಾಗಿದ್ದಾರೆ. ದಸರಾ ಉದ್ಘಾಟನೆಯ ದಿನವಾದ ಅ.15ರಂದು ಇಲ್ಲಿನ ಅರಮನೆ ಆವರಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

'ಪಂಡಿತ್ ನರಸಿಂಹಲು ವಡವಾಟಿ ಅಧ್ಯಕ್ಷತೆಯ ಆಯ್ಕೆ ಸಮಿತಿಯು, ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಪದ್ಮಾಮೂರ್ತಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರಶಸ್ತಿಯು ₹5 ಲಕ್ಷ ನಗದು, ಸರಸ್ವತಿ ವಿಗ್ರಹದ ಸ್ಮರಣಿಕೆ ಒಳಗೊಂಡಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.

ಪದ್ಮಾ ಅವರು ಮೈಸೂರು ವಾಸುದೇವಾಚಾರ್ಯ, ಟಿ.ಚೌಡಯ್ಯ, ಟಿ.ಪುಟ್ಟಸ್ವಾಮಯ್ಯ ಅವರಲ್ಲಿ ಸಂಗೀತಾಭ್ಯಾಸ ಮಾಡಿದ್ದು, ಎಚ್.ಎಸ್. ಕೃಷ್ಣಮೂರ್ತಿ, ಆರ್.ಎಸ್.ಕೇಶವಮೂರ್ತಿ ಬಳಿ ವೀಣಾವಾದನ ಕಲಿತಿದ್ದಾರೆ. 'ಸಂಗೀತದಲ್ಲಿ ಮನೋವಿಜ್ಞಾನ' ಕುರಿತು ಪಿಎಚ್.ಡಿ. ಪದವಿ ಪಡೆದಿರುವ ಅವರು ಆಕಾಶವಾಣಿ ಬೆಂಗಳೂರು ಕೇಂದ್ರದ 'ಬಿ–ಹೈ' ಕಲಾವಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದ ಮುಖ್ಯಸ್ಥರಾಗಿದ್ದರು. ಮದ್ರಾಸ್ ಸಂಗೀತ ಅಕಾಡೆಮಿ ತಜ್ಞರ ಸಮಿತಿ ಸದಸ್ಯರೂ ಆಗಿದ್ದರು. ಸಾವಿರಾರು ಸಂಗೀತ ಕಛೇರಿ ನೀಡಿರುವ ಅವರು, 'ಕರ್ನಾಟಕ ಸಂಗೀತ ಲಕ್ಷಣ ಸಂಗ್ರಹ' ಎಂಬ ಎರಡು ಸಂಪುಟಗಳ ಕೃತಿ ಬರೆದಿದ್ದಾರೆ. ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಕಲಾಶ್ರೀ ಪ್ರಶಸ್ತಿಯೂ ಅವರಿಗೆ ದೊರೆತಿದೆ.

ಸಾವಿರ ವಿದ್ಯಾರ್ಥಿನಿಯರಿಗೆ ಇರುವುದೊಂದೇ ಶೌಚಾಲಯ

• ನಾರಾಯಣರಾವ ಕುಲಕರ್ಣಿ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಸಾವಿರಕ್ಕೂ ಅಧಿಕ ಬಾಲಕಿಯರಿಗೆ ಕೇವಲ ಎರಡು ಮೂತ್ರಾಲಯ, ಒಂದೇ ಶೌಚಾಲಯವಿದೆ. ಹೀಗಾಗಿ ಶಾಲಾ ಕೊಠಡಿಗಳ ಹಿಂಭಾಗಕ್ಕೆ ತೆರಳಿ 'ನೈಸರ್ಗಿಕ ಕರೆ' ಪೂರೈಸಬೇಕಾದ ಅನಿವಾರ್ಯ ಇಲ್ಲಿ ನಿರ್ಮಾಣವಾಗಿದೆ. ದುರ್ನಾತ ಬರುವುದರಿಂದ ಉಪನ್ಯಾಸಕರು, ವಿದ್ಯಾರ್ಥಿನಿಯರಿಗೆ ನೆರೆಯವರಿಂದ ಬೈಗುಳದ ಸುರಿಮಳೆ ನಿತ್ಯ ನಡೆಯುತ್ತದೆ. ಇಂಥ ದಯನೀಯ ಸ್ಥಿತಿಯಲ್ಲೇ ಕಾಲೇಜಿನಲ್ಲಿ ಪಾಠ, ಪ್ರಯೋಗಗಳು ನಡೆಯುತ್ತಿವೆ.

ಗ್ರಾಮೀಣ ಪ್ರದೇಶದ, ಬಡವರು, ಕೂಲಿಕಾರರು, ಆರ್ಥಿಕವಾಗಿ ಹಿಂದುಳಿದವರ ಹೆಣ್ಣುಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆದಿರುವ ಪಟ್ಟಣದ ಬಾಲಕಿಯರ ಸರ್ಕಾರಿ ಜೂನಿಯರ್ ಕಾಲೇಜಿನ ದುಃಸ್ಥಿತಿಯಿದು.

ಜಾಗ ಗುರುತಿಸಿದ್ದರೂ ಶೌಚಾಲಯ ನಿರ್ಮಾಣದ ಕೆಲಸ ಆರಂಭಗೊಂಡಿಲ್ಲ

ಹೊಸ ಕೊಠಡಿಗಳ ನಿರ್ಮಾಣ ಕೆಲಸ ಅರ್ಧಕ್ಕೇ ನಿಂತಿದೆ. ಅಗತ್ಯ ಜಾಗ ಇದ್ದರೂ ಶೌಚಾಲಯದ ಕೆಲಸ ಆರಂಭಗೊಂಡಿಲ್ಲ. ಕೊಠಡಿಗಳ ಕೊರತೆಯಿಂದ ಬಯಲಲ್ಲಿ ಮತ್ತು ಅಪೂರ್ಣ ಸ್ಥಿತಿಯಲ್ಲಿರುವ ಕೊಠಡಿ ಗಳಲ್ಲೇ ಕುಳಿತು ವಿದ್ಯಾರ್ಥಿನಿಯರು ಸೋಮವಾರದಿಂದ ಅರ್ಧವಾರ್ಷಿಕ ಪರೀಕ್ಷೆ ಬರೆಯುತ್ತಿದ್ದಾರೆ.

> **ಕಾಲೇಜಿನಲ್ಲಿ ಶೌಚಾಲಯ ಹಾಗೂ ಮೂತ್ರಾಲಯದ ಸಮಸ್ಯೆ ಇದೆ. ಈ ಕಟ್ಟಡಗಳನ್ನು ನಿರ್ಮಿಸಲು ಅಗತ್ಯ ಜಾಗವಿದೆ. ಹಣವೂ ಬಿಡುಗಡೆಯಾಗಿದೆ. ಆದರೆ, ಕೆಲಸ ಆರಂಭಿಸಿಲ್ಲ**
> **ಮಾಲಾಬಾಯಿ ಪಡಸಾಲಿಮನಿ**
> ಪ್ರಭಾರ ಪ್ರಾಚಾರ್ಯೆ, ಬಾಲಕಿಯರ ಸರ್ಕಾರಿ ಜೂನಿಯರ್ ಕಾಲೇಜು

6ನೇ ಪುಟ ನೋಡಿ

ಬಿಜೆಪಿ ಆಡಳಿತದಲ್ಲೂ 'ಉರ್ದು ಕವಿಗೋಷ್ಠಿ'

• ಮೋಹನ್ ಕುಮಾರ ಸಿ.

ಮೈಸೂರು: ದಸರಾ ಉತ್ಸವದ ಉರ್ದು ಕವಿಗೋಷ್ಠಿಯ ವಿಷಯವಾಗಿ ಬಿಜೆಪಿ ನಾಯಕರು ಪ್ರಶ್ನೆ ಎತ್ತಿರುವುದು ಚರ್ಚೆಗೆ ಕಾರಣವಾಗಿದೆ. ಆದರೆ, ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಉರ್ದು ಕವಿಗೋಷ್ಠಿ ನಡೆದಿತ್ತು. ಆ ಪರಂಪರೆಯನ್ನು ಈ ಬಾರಿಯೂ ಮುಂದುವರಿಸಲಾಗಿದೆ.

2022ರ ಕವಿಗೋಷ್ಠಿಯನ್ನು ನಗರದ ಬೆಂಗಳೂರು ರಸ್ತೆಯ ಕ್ಲಾಸಿಕ್ ಕನ್ವೆನ್ಷನ್ ಹಾಲ್‌ನಲ್ಲಿ ಆಗಿನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಗೈರಿನಲ್ಲಿ ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದ್ದರು.

ಲತಾ ಹಯಾ, ಶಫೀಖ್ ಆಬೀದಿ, ಡಾ.ರಾಹೀ ಫಿದಾಯಿ, ರಾಜು ರಿಯಾಜ್, ಡಾ.ಹಾಫೀಜ್ ಕರ್ನಾಟಕಿ, ಆಯಿಶಾ ಚಾಂದ್ ಸೇರಿದಂತೆ ದೇಶದ ವಿವಿಧ ಮೂಲೆಗಳ ಉರ್ದು ಕವಿಗಳು ಶಾಹಿರಿ, ಗಜಲ್ ವಾಚಿಸಿದ್ದರು.

'ಈ ಸಲ ಎಂದಿನಂತೆಯೇ ಮುಶಾಯಿರಾ (ಉರ್ದು ಕವಿಗೋಷ್ಠಿ) ಆಯೋಜಿಸಲಾಗಿದೆ. ದೆಹಲಿ, ರಾಜಸ್ಥಾನ, ಗುಜರಾತ್ ಸೇರಿದಂತೆ ದೇಶದ ವಿವಿಧೆಡೆಯಿಂದ ಇಪ್ಪತ್ತು ಕವಿಗಳು ಭಾಗವಹಿಸುತ್ತಿದ್ದಾರೆ. ಕರ್ನಾಟಕದ ನಾಲ್ವರು ಕವಿಗಳಿದ್ದಾರೆ. 19ರಂದು ಸಂಜೆ 7ಕ್ಕೆ ಉರ್ದು ಕವಿಗೋಷ್ಠಿಯನ್ನು ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ' ಎಂದು ಉಪಸಮಿತಿಯ ಉಪ ವಿಶೇಷಾಧಿಕಾರಿ ದಾಸೇಗೌಡ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

2017ರ ದಸರೆಯಲ್ಲೂ ಮುಶಾಯಿರ ನಡೆದಿತ್ತು. ಉರ್ದು ಸಾಹಿತ್ಯವನ್ನು ಪ್ರೋತ್ಸಾಹಿಸಲು ದಸರಾದಲ್ಲಿ ಮೊದಲ ಬಾರಿಗೆ ಗೋಷ್ಠಿ ನಡೆಸಲಾಗಿತ್ತು.

ಮುಖ್ಯಾಂಶಗಳು

- 2017ರಲ್ಲಿ ಮೊದಲ ಬಾರಿ ಆಯೋಜನೆ
- 2019 ಹಾಗೂ 2022ರಲ್ಲೂ ಕವಿಗೋಷ್ಠಿ

6ನೇ ಪುಟ ನೋಡಿ

ಒಳ ಪುಟಗಳು

ಮದುವೆ ಏಕೆ ಆಗಿಲ್ಲ: ರಾಹುಲ್ ಗಾಂಧಿ ಹೇಳಿದ್ದೇನು? 10
ಭಾರತಕ್ಕೆ ಮತ್ತೊಂದು ಜಯದ ಛಲ 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಡಿಎ ಲಂಚ ಪ್ರಕರಣ ಬಿಎಸ್‌ವೈಗೆ ಮತ್ತೆ ತಲೆನೋವು

ಪ್ರಜಾವಾಣಿ ವಾರ್ತೆ

ಯಡಿಯೂರಪ್ಪ

ನವದೆಹಲಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಸತಿ ಯೋಜನೆಯ ಕಾಮಗಾರಿಯ ಗುತ್ತಿಗೆ ನೀಡಲು ಗುತ್ತಿಗೆದಾರರಿಂದ ಲಂಚ ಪಡೆದ ಆರೋಪದ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರಿರುವ ಮಂಜೂರಾತಿ ನಿರಾಕರಣೆ ವಿಷಯವನ್ನು ಮರುಪರಿಶೀಲಿಸುವುದಾಗಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

'ಆರೋಪಗಳು ಗಂಭೀರವಾಗಿರುವುದರಿಂದ ರಾಜ್ಯ ಸರ್ಕಾರವು ವಿಷಯವನ್ನು ಮರುಪರಿಶೀಲಿಸುತ್ತದೆ' ಎಂದು ಕರ್ನಾಟಕದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅಮನ್ ಪನ್ವಾರ್ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರ ಪೀಠಕ್ಕೆ ತಿಳಿಸಿದರು.

ಯಡಿಯೂರಪ್ಪ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, 'ಇದು ಕೇವಲ ಆಡಳಿತದ ಸೇಡಿನ ಪ್ರಕರಣವಾಗಿ ಕಾಣುತ್ತಿಲ್ಲ. ಬದಲಾಗಿ ಸೇಡಿನ ರೂಪಾಂತರವಾಗಿದೆ' ಎಂದು ವಾದಿಸಿದರು.

ಮೂರು ವಾರಗಳ ನಂತರ ಈ ವಿಷಯವನ್ನು ಪರಿಗಣಿಸುವುದಾಗಿ ಪೀಠ ಹೇಳಿತು.

ದೂರುದಾರ ಟಿ.ಜೆ. ಅಬ್ರಹಾಂ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, 'ವಿಷಯವು ದೀರ್ಘಕಾಲದವರೆಗೆ ತಡೆಹಿಡಿಯಲ್ಪಟ್ಟಿರುವುದರಿಂದ ವಿಚಾರಣೆಗೆ ನಿರ್ದಿಷ್ಟ ದಿನಾಂಕವನ್ನು ನೀಡಬೇಕು' ಎಂದು ಕೋರಿದರು.

5ನೇ ಪುಟ ನೋಡಿ

ದೇಶದ ಸಿರಿವಂತರ 2023ರ ಪಟ್ಟಿ ಬಿಡುಗಡೆ ಮಾಡಿದ ಹುರೂನ್ ಇಂಡಿಯಾ

ಬೆಂಗಳೂರಿನಲ್ಲೇ ಇದ್ದಾರೆ 100 ಕುಬೇರರು

ಮುಂಬೈ (ಪಿಟಿಐ): ದೇಶದಲ್ಲಿಯೇ ಅಧಿಕ ಸಂಖ್ಯೆಯ ಸಿರಿವಂತರು ನೆಲೆಸಿರುವ ನಗರಗಳ ಪೈಕಿ ಬೆಂಗಳೂರು ಮೂರನೇ ಸ್ಥಾನದಲ್ಲಿ ಇದ್ದು, ಸಿರಿವಂತರ ಸಂಖ್ಯೆಯು 100ಕ್ಕೆ ಏರಿಕೆ ಆಗಿದೆ. ಕಳೆದ ವರ್ಷ ಬೆಂಗಳೂರಿನಲ್ಲಿ ಸಿರಿವಂತರ ಸಂಖ್ಯೆಯು 89 ಇತ್ತು.

₹1 ಸಾವಿರ ಕೋಟಿಗೂ ಅಧಿಕ ಸಂಪತ್ತು ಮೌಲ್ಯ ಹೊಂದಿರುವ ಸಿರಿವಂತರ ಪಟ್ಟಿಯನ್ನು ಹುರೂನ್ ಇಂಡಿಯಾ ಮತ್ತು 360 ಒನ್ ವೆಲ್ತ್ ಸಂಸ್ಥೆ ಜಂಟಿಯಾಗಿ ಮಂಗಳವಾರ ಬಿಡುಗಡೆ ಮಾಡಿವೆ. '360 ಒನ್ ವೆಲ್ತ್ ಹುರೂನ್ ಇಂಡಿಯಾ ರಿಚ್ ಲಿಸ್ಟ್ 2023'ರ ಮಾಹಿತಿಯಂತೆ, ಅಧಿಕ ಸಿರಿವಂತರು ನೆಲೆಸಿರುವ ನಗರಗಳ ಪೈಕಿ ಮುಂಬೈ ಮೊದಲ ಸ್ಥಾನದಲ್ಲಿದ್ದು, ಇಲ್ಲಿ 328 ಸಿರಿವಂತರು ಇದ್ದಾರೆ. ದೆಹಲಿ (199) 2ನೇ ಸ್ಥಾನ ಪಡೆದುಕೊಂಡಿದೆ.

11ನೇ ಪುಟ ನೋಡಿ

ಅಂಬಾನಿ ದೇಶದ ಸಿರಿವಂತ ವ್ಯಕ್ತಿ

ಮುಕೇಶ್ ಅಂಬಾನಿ

ಗೌತಮ್ ಅದಾನಿ

ಭಾರತದ 2023ರ ಸಿರಿವಂತರ ಪಟ್ಟಿಯಲ್ಲಿ ಉದ್ಯಮಿ ಮುಕೇಶ್ ಅಂಬಾನಿ ಅವರು ಗೌತಮ್ ಅದಾನಿ ಅವರನ್ನು ಹಿಂದಿಕ್ಕಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ ಎಂದು ಹುರೂನ್ ಇಂಡಿಯಾ ಸಂಸ್ಥೆಯು ತಿಳಿಸಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರರ ಸಂಪತ್ತು ಶೇ 2ರಷ್ಟು ಏರಿಕೆ ಕಂಡು ₹8.08 ಲಕ್ಷ ಕೋಟಿಗೆ ತಲುಪಿದೆ. ಆದರೆ, ಅದಾನಿ ಅವರ ಸಂಪತ್ತು ಶೇ 57ರಷ್ಟು ಇಳಿಕೆ ಕಂಡು ₹4.74 ಲಕ್ಷ ಕೋಟಿಗೆ ಕುಸಿದಿದೆ.

ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ಜನವರಿಯಲ್ಲಿ ಅದಾನಿ ಕಂಪನಿಗಳ ವಿರುದ್ಧ ಬಿಡುಗಡೆ ಮಾಡಿದ ವರದಿಯಿಂದಾಗಿ ಗೌತಮ್ ಅದಾನಿ ಅವರ ಸಂಪತ್ತಿನಲ್ಲಿ ಈ ಪ್ರಮಾಣದ ಕುಸಿತ ಕಂಡುಬಂದಿದೆ ಎಂದು ಹುರೂನ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಅನಸ್ ರೆಹಮಾನ್ ಜುನೈದ್ ಹೇಳಿದ್ದಾರೆ.

ಅದಾನಿ ಸಮೂಹವು ಷೇರು ದರಗಳನ್ನು ಅಕ್ರಮವಾಗಿ ಏರಿಳಿತ ಮಾಡಿದೆ ಮತ್ತು ಮಾಹಿತಿಗಳನ್ನು ಮುಚ್ಚಿಟ್ಟಿದೆ ಎನ್ನುವ ಆರೋಪಗಳನ್ನು ಹಿಂಡನ್‌ಬರ್ಗ್ ಮಾಡಿದೆ. ಆದರೆ, ಅದಾನಿ ಸಮೂಹವು ತನ್ನ ಮೇಲಿನ ಎಲ್ಲ ಆರೋಪಗಳನ್ನೂ ಅಲ್ಲಗಳೆದಿದೆ.

ಬೆಂಗಳೂರಿನ ಸಿರಿವಂತರಲ್ಲಿ ಪ್ರಮುಖರು

ಸ್ಥಾನ	ಹೆಸರು	ಕಂಪನಿ	ಸಂಪತ್ತು ಮೌಲ್ಯ (ಕೋಟಿಗಳಲ್ಲಿ)
38	ಅರ್ಜುನ್ ಮೆಂಡಾ ಮತ್ತು ಕುಟುಂಬ	ಆರ್‌ಎಂಜೆಡ್	₹37,000
43	ನಿತಿನ್ ಕಾಮತ್ ಮತ್ತು ಕುಟುಂಬ	ಜೆರೋದಾ	₹35,300
51	ಎಸ್. ಗೋಪಾಲಕೃಷ್ಣನ್ ಮತ್ತು ಕುಟುಂಬ	ಇನ್ಫೊಸಿಸ್	₹31,000
58	ಅಜೀಂ ಪ್ರೇಮ್‌ಜಿ ಮತ್ತು ಕುಟುಂಬ	ವಿಪ್ರೊ	₹30,000
59	ಎನ್.ಆರ್. ನಾರಾಯಣ ಮೂರ್ತಿ ಮತ್ತು ಕುಟುಂಬ	ಇನ್ಫೊಸಿಸ್	₹29,700
68	ರಂಜನ್ ಪೈ	ಮಣಿಪಾಲ್ ಎಜುಕೇಷನ್ ಆ್ಯಂಡ್ ಮೆಡಿಕಲ್	₹27,000
81	ನಿಖಿಲ್ ಕಾಮತ್	ಜೆರೋದಾ	₹23,100
83	ಜಿತೇಂದ್ರ ವೀರ್ವಾಣಿ	ಎಂಬಸಿ ಆಫಿಸ್ ಪಾರ್ಕ್ಸ್	₹22,700
84	ರಾಜ ಬಾಗ್ಮನೆ	ಬಾಗ್ಮನೆ ಡೆವಲಪರ್ಸ್	₹22,600
95	ಕಿರಣ್ ಮಜುಂದಾರ್ ಶಾ	ಬಯೋಕಾನ್	₹21,400

ಸುವರ್ಣ ಉತ್ಸವದ ಲಾಂಛನ ಬಿಡುಗಡೆ ಮಾಡಿ ನಟ ರಮೇಶ್ ಅರವಿಂದ್ ಮಾತನಾಡಿದರು. ಸಂಘದ ಅಧ್ಯಕ್ಷ ಸುರೇಶ್ ಕುಮಾರ್ ಗನ್ನ, ಬಿಜೆಫ್ ಅಧ್ಯಕ್ಷ ದವನಂ ವಿ. ರಮೇಶ್ ಇದ್ದರು

ಅಕ್ಟೋಬರ್ 15ರಿಂದ ನಾಲ್ಕು ನಗರಗಳಲ್ಲಿ 'ಸುವರ್ಣ ಉತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಆಭರಣ ಸಂಘವು ನಾಲ್ಕು ನಗರಗಳಲ್ಲಿ ಅ.15ರಿಂದ ನ.30ರ ತನಕ 'ಸುವರ್ಣ ಉತ್ಸವ' (ಗೋಲ್ಡ್ ಫೆಸ್ಟಿವಲ್) ಆಯೋಜಿಸಿದೆ.

ಸೋಮವಾರ ಉತ್ಸವದ ಲಾಂಛನವನ್ನು ನಟ ಹಾಗೂ ಉತ್ಸವದ ರಾಯಭಾರಿ ರಮೇಶ್ ಅರವಿಂದ್ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, 'ಉತ್ಸವವು 45 ದಿನಗಳ ಕಾಲ ನಡೆಯಲಿದೆ. ನಗರದ ಆಯಾ ಮಳಿಗೆಯಲ್ಲೇ ಉತ್ಸವ ನಡೆಯಲಿದ್ದು, ಗ್ರಾಹಕರಿಗೆ ಬಂಪರ್ ಬಹುಮಾನ ಇರಲಿದೆ. ಚಿನ್ನದ ಮೇಲಿನ ಹೂಡಿಕೆ ಮಾಡಿದರೆ ಕಷ್ಟದ ಕಾಲದಲ್ಲಿ ನೆರವಿಗೆ ಬರಲಿದೆ' ಎಂದು ಹೇಳಿದರು.

ಉತ್ಸವದ ಅಧ್ಯಕ್ಷ ದವನಂ ವಿ. ರಮೇಶ್ ಮಾತನಾಡಿ, 'ಭವಿಷ್ಯದ ದೃಷ್ಟಿಯಿಂದ ಚಿನ್ನದ ಮೇಲಿನ ಹೂಡಿಕೆ ಉತ್ತಮ. ಕಳೆದ ವರ್ಷ 36 ದಿನಗಳ ಕಾಲ ಉತ್ಸವವನ್ನು ನಡೆಸಲಾಗಿತ್ತು. 127 ಮಾಲೀಕರು ಭಾಗವಹಿಸಿದ್ದರು. ಸರ್ಕಾರಕ್ಕೂ ಜಿಎಸ್‌ಟಿ ರೂಪದಲ್ಲಿ ಆದಾಯ ಬಂದಿತ್ತು' ಎಂದು ಹೇಳಿದರು.

'ಈ ವರ್ಷದ ಉತ್ಸವದಲ್ಲಿ ಪಾಲ್ಗೊಳ್ಳಲು ಈಗಾಗಲೇ 150 ಮಂದಿ ಮಾಲೀಕರು ನೋಂದಣಿ ಮಾಡಿಕೊಂಡಿದ್ದಾರೆ. ಗ್ರಾಹಕರು ₹5 ಸಾವಿರ ಮೊತ್ತದ ಚಿನ್ನ ಅಥವಾ ಬೆಳ್ಳಿ ಆಭರಣ ಖರೀದಿಸಿದರೆ ಒಂದು ಕೂಪನ್ ಸಿಗಲಿದೆ. ಬಂಪರ್ ಬಹುಮಾನ, ವಾರಕ್ಕೆ ಒಮ್ಮೆ ಡ್ರಾ ಮಾಡುವ ಬಹುಮಾನಗಳು ಇವೆ. 3 ಕೆ.ಜಿ, 43 ಕೆ.ಜಿ. ಬೆಳ್ಳಿ ಸೇರಿದಂತೆ ಅಂದಾಜು ₹ 2 ಕೋಟಿ ಮೌಲ್ಯದ ಬಹುಮಾನಗಳಿವೆ. ಆಯ್ದ ಮಾಲ್‌ಗಳಲ್ಲಿ ಡ್ರಾ ನಡೆಸಲಾಗುವುದು. 45 ದಿನಗಳ ಕಾಲ ಉತ್ಸವ ನಡೆಯಲಿದೆ' ಎಂದು ಹೇಳಿದರು.

ಬೆಂಗಳೂರನ್ನು 'ಚಿನ್ನದ ನಗರ'ವನ್ನಾಗಿ ಮಾಡಲು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ದುಬೈ ಶಾಪಿಂಗ್ ಫೆಸ್ಟಿವಲ್‌ನಂತೆ ನಗರದಲ್ಲಿ ಗೋಲ್ಡ್ ಫೆಸ್ಟಿವಲ್ ನಡೆಸಬಹುದು. ಇದರಿಂದಾಗಿ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ. ಪ್ರವಾಸಿಗರನ್ನು ಆಕರ್ಷಿಸಲು ಮತ್ತು ಪ್ರವಾಸೋದ್ಯಮ ಉತ್ತೇಜಿಸಲು ನೆರವಾಗುತ್ತದೆ ಎಂದು ಹೇಳಿದರು.

'82 ವರ್ಷಗಳ ಹಳೇ ಸಂಘ ಇದಾಗಿದೆ. ಬೆಂಗಳೂರು, ತುಮಕೂರು, ಹಾಸನ, ಶಿವಮೊಗ್ಗದಲ್ಲೂ ಉತ್ಸವ ನಡೆಯಲಿದೆ' ಎಂದು ಸಂಘದ ಅಧ್ಯಕ್ಷ ಸುರೇಶ್ ಕುಮಾರ್ ಗನ್ನ ಹೇಳಿದರು.

'ಚಿನ್ನವನ್ನು ಉಳಿಸಿ, ಚಿನ್ನ ನಿಮ್ಮನ್ನು ಉಳಿಸುತ್ತದೆ' ಪರಿಕಲ್ಪನೆಯ ಅಡಿ ಉತ್ಸವ ನಡೆಯಲಿದೆ. ಸಮಾರೋಪ ಸಮಾರಂಭದಲ್ಲಿ ಲಕ್ಕಿ ಡ್ರಾನಲ್ಲಿ ಗೆದ್ದ ಗ್ರಾಹಕರಿಗೆ ಬಂಪರ್ ಬಹುಮಾನ ವಿತರಿಸಲಾಗುವುದು ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ಚೇತನ್ ಕುಮಾರ್ ಮೆಹ್ತಾ, ಕಾರ್ಯದರ್ಶಿ ಬಿಪಿನ್ ಮೆಹ್ತಾ, ಜಂಟಿ ಕಾರ್ಯದರ್ಶಿ ಪ್ರವೀಣ್ ಕೆ.ಒಸ್ವಾಲ್, ಖಜಾಂಚಿ ಆರ್. ವಿ.ತುಷಾರ್ ಇದ್ದರು.

ಡಿಸೆಂಬರ್ ಒಳಗೆ ಮುಗಿಯಲಿದೆ ಸಿವಿಲ್ ಕಾಮಗಾರಿಗಳು

ನಾಲ್ಕು ತಿಂಗಳೊಳಗೆ ನಾಗಸಂದ್ರ ಮಾದಾವರ ಮೆಟ್ರೊ ಸಂಪರ್ಕ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಆರು ವರ್ಷಗಳಿಂದ ಕುಂಟುತ್ತಾ ಸಾಗಿರುವ ಮೆಟ್ರೊ ಹಸಿರು ಮಾರ್ಗದ ವಿಸ್ತರಿತ ಕಾಮಗಾರಿ ಕೊನೆ ಹಂತ ತಲುಪಿದ್ದು, ಇನ್ನು ನಾಲ್ಕು ತಿಂಗಳೊಳಗೆ ರೈಲು ಸಂಚಾರ ಆರಂಭವಾಗುವ ಸಾಧ್ಯತೆ ಇದೆ.

ನಾಗಸಂದ್ರದಿಂದ ಮಾದಾವರವರೆಗೆ 3.7 ಕಿ.ಮೀ.ವರೆಗಿನ ಈ ಮಾರ್ಗದಲ್ಲಿ ಶೇ 80ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಡಿಸೆಂಬರ್ ಅಂತ್ಯದ ಒಳಗೆ ಎಲ್ಲ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ಸಿಗ್ನಲ್ ಅಳವಡಿಕೆ, ಸಿಗ್ನಲ್ ಪರೀಕ್ಷೆ, ಹಳಿಗಳ ಸಾಮರ್ಥ್ಯ ಪರೀಕ್ಷೆ, ಓಪನ್ ವೆಬ್ ಗಿರ್ಡರ್ ಪರೀಕ್ಷೆ ಸಹಿತ ವಿವಿಧ ತಾಂತ್ರಿಕ ಪರೀಕ್ಷೆಗಳು ನಡೆಯಲಿವೆ. ಮೆಟ್ರೊ ರೈಲು ಸುರಕ್ಷತಾ ಆಯುಕ್ತರು (ಸಿಎಂಆರ್‌ಎಸ್) ಪರಿಶೀಲನೆ ನಡೆಸಿ ಹಸಿರು ನಿಶಾನೆ ನೀಡಬೇಕು. ಈ ಕಾರ್ಯಗಳಿಗೆ ಮತ್ತೆರಡು ತಿಂಗಳು ಬೇಕಾಗುತ್ತದೆ ಎಂದು ಬಿಎಂಆರ್‌ಸಿ ಅಧಿಕಾರಿಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮೂರು ನಿಲ್ದಾಣ ಆರು ವರ್ಷ: ನಾಗಸಂದ್ರದಿಂದ ಮಾದಾವರವರೆಗಿನ (ಬಿಐಇಸಿ) ರೀಚ್–3 ಕಾಮಗಾರಿಗೆ 2017ರ ಮೇ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ಭೂಸ್ವಾಧೀನ ಮತ್ತು ಕಾಮಗಾರಿಗೆ ₹ 964 ಕೋಟಿ ಮೀಸಲಿಡಲಾಗಿತ್ತು. ಭೂಸ್ವಾಧೀನ ಪ್ರಕ್ರಿಯೆ ಕಗ್ಗಂಟಾಗಿ ಪರಿಣಮಿಸಿತ್ತು. ಹೈಕೋರ್ಟ್‌ನಲ್ಲಿ ವ್ಯಾಜ್ಯ ಇತ್ಯರ್ಥವಾಗಲು ಸುಮಾರು ನಾಲ್ಕು ವರ್ಷಗಳು ಬೇಕಾದವು. ಆನಂತರ ಕಾಮಗಾರಿ ಚುರುಕುಗೊಂಡಿತು.

ಮಂಜುನಾಥನಗರ, ಚಿಕ್ಕಬಿದರಕಲ್ಲು (ಜಿಂದಾಲ್) ಮೆಟ್ರೊ ನಿಲ್ದಾಣಗಳ ಕಾಮಗಾರಿ ಮುಕ್ತಾಯಗೊಂಡಿವೆ. ಮಾದಾವರ ಮೆಟ್ರೊ ನಿಲ್ದಾಣದ ಸಿವಿಲ್ ಕಾಮಗಾರಿ ಬಾಕಿ ಉಳಿದಿದೆ. ಹಳಿ ಜೋಡಿಸುವ ಕಾರ್ಯ ಸೇರಿದಂತೆ ಒಟ್ಟಾರೆ ಶೇ 20ರಷ್ಟು ಕಾಮಗಾರಿ ಬಾಕಿ ಉಳಿದಿದೆ.

ದಟ್ಟಣೆಗೂ ಪರಿಹಾರ: ತುಮಕೂರು ರಸ್ತೆಯಲ್ಲಿ ವಿಪರೀತ ವಾಹನದಟ್ಟಣೆ ಉಂಟಾಗಿದೆ. ನೆಲಮಂಗಲ ಕಡೆಯಿಂದ ಪೀಣ್ಯ ಕೈಗಾರಿಕಾ ವಲಯ ಸಹಿತ ಬೆಂಗಳೂರಿನ ವಿವಿಧೆಡೆಗೆ ಬರುವ ಕಾರ್ಮಿಕರು, ಉದ್ಯೋಗಿಗಳು ನಾಗಸಂದ್ರದವರೆಗೆ ಬಂದು ಮೆಟ್ರೊ ರೈಲು ಹತ್ತುತ್ತಿದ್ದಾರೆ. ಮಾದಾವರವರೆಗೆ ಮೆಟ್ರೊ ಪ್ರಾರಂಭವಾದರೆ, 3 ಕಿ.ಮೀ. ಮೊದಲೇ ಮೆಟ್ರೊ ಸೇವೆ ಅವರಿಗೆ ಲಭ್ಯವಾಗಲಿದೆ. ವಾಹನ ದಟ್ಟಣೆ ಕಡಿಮೆಯಾಗಲಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ವಿಸ್ತರಿತ ಹಸಿರು ಮಾರ್ಗದಲ್ಲಿ ನಿರ್ಮಾಣಗೊಂಡ ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣ

'ಈ ವರ್ಷವೇ ಪೂರ್ಣಗೊಳಿಸಿ'

ಹಸಿರು ಮಾರ್ಗ ಈಗಾಗಲೇ ಬಹಳಷ್ಟು ತಡವಾಗಿದೆ. ಡಿಸೆಂಬರ್ ಒಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಬಿಎಂಆರ್‌ಸಿಎಲ್‌ನ ಜಾಲತಾಣದಲ್ಲಿಯೂ ಹಾಕಿಕೊಂಡಿದ್ದಾರೆ. ಮತ್ತೆ ಕಾಮಗಾರಿ ಮುಂದಕ್ಕೆ ಹೋಗಬಾರದು. ನಾಗಸಂದ್ರ–ಮಾದಾವರ ರೈಲು ಸಂಚಾರ ಆರಂಭವಾದರೆ ಈ ಭಾಗದ ವಾಹನ ದಟ್ಟಣೆಯೂ ಕಡಿಮೆಯಾಗಲಿದೆ. ನೇರಳೆ ಮಾರ್ಗದಲ್ಲಿ ಶೇ 100ರಷ್ಟು ಸಂಚಾರ ಆರಂಭಗೊಂಡಿರುವುದು ಒಳ್ಳೆಯ ಸುದ್ದಿ.

ರಾಜಕುಮಾರ್ ದುಗರ್, ಸಿಟಿಜನ್ಸ್ ಫಾರ್ ಸಿಟಿಜನ್ ಸಂಸ್ಥಾಪಕ

ಅಂಕಿ ಅಂಶ

3.77 ಕಿ.ಮೀ ನಾಗಸಂದ್ರ–ಮಾದಾವರ ನಡುವಿನ ಅಂತರ

80% ಇಲ್ಲಿವರೆಗೆ ಪೂರ್ಣಗೊಂಡಿರುವ ಕಾಮಗಾರಿ ಪ್ರಮಾಣ

2017 ವಿಸ್ತರಿತ ಕಾಮಗಾರಿ ಆರಂಭವಾದ ವರ್ಷ

'ಭೂಗಳ್ಳರ, ಕುಡುಕರ ಬೆಂಗಳೂರು ಮಾಡಿದ್ದೀರಲ್ಲವೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ ಲೋಡ್‌ಶೆಡ್ಡಿಂಗ್ ಮಿತಿ ಮೀರಿದ್ದು, ಪ್ರತಿ ದಿನ ಕನಿಷ್ಠ 3 ಗಂಟೆ ಲೋಡ್ ಶೆಡ್ಡಿಂಗ್ ಆಗುತ್ತಿರುವುದರಿಂದ ಬ್ರ್ಯಾಂಡ್ ಬೆಂಗಳೂರು ನನಸಾಗಲು ಸಾಧ್ಯವೇ ಎಂದು ಬಿಜೆಪಿ ಪ್ರಶ್ನಿಸಿದೆ. ಬ್ರ್ಯಾಂಡ್ ಬೆಂಗಳೂರು ಕುರಿತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬಿಜೆಪಿ ಹಲವು ಪ್ರಶ್ನೆಗಳನ್ನು ಕೇಳಿದೆ.

ಡಿಕೆಶಿಗೆ ಬಿಜೆಪಿ ಪ್ರಶ್ನೆ

- ಐದು ಬಾರಿ ವಿದ್ಯುತ್ ದರ ಏರಿಕೆ ಆಗಿದೆ. ಇದು ಬ್ರ್ಯಾಂಡ್ ಬೆಂಗಳೂರು ಜಾರಿಗೆ ಅಡ್ಡಿಯಲ್ಲವೇ?
- ನಾಲ್ಕು ದಿನಗಳಿಗೆ ಒಮ್ಮೆ ಕುಡಿಯಲು ಕಾವೇರಿ ನೀರು ಬಿಡುವ ನಿಮ್ಮ ಸ್ಟಾಲಿನ್ ಪ್ರೇಮ ಬ್ರ್ಯಾಂಡ್ ಬೆಂಗಳೂರಿಗೆ ಅಡ್ಡಗಾಲಲ್ಲವೇ?
- ಮಂದಗತಿಯಲ್ಲಿ ಮೆಟ್ರೊ ಕಾಮಗಾರಿ ಸಾಗುತ್ತಿದ್ದು, ಇದು ಬ್ರ್ಯಾಂಡ್ ಬೆಂಗಳೂರು ಕನಸನ್ನು ಕನಸಾಗಿಯೇ ಉಳಿಸಲಾರದೇ?
- ಭೂಕಬಳಿಕೆ ಮಾಡುವವರ ಅಟ್ಟಹಾಸ ಮೇರೆ ಮೀರಿದೆ. ಇದಕ್ಕೆ ಸರ್ಕಾರದ ಕುಮ್ಮಕ್ಕೂ ಇದೆ. ಇದು ಭೂಗಳ್ಳರ ಬೆಂಗಳೂರೇ?
- ಬೆಂಗಳೂರಿನಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಮಗಾರಿಗಳು ಆಗುತ್ತಿಲ್ಲ. ಇದು ಬ್ರ್ಯಾಂಡ್ ಬೆಂಗಳೂರು ಬದಲಾಗಿ ಹೊಂಡಗಳ ನಗರ ಬೆಂಗಳೂರು ಎಂದಾಗಲಾರದೇ?
- ಬೆಂಗಳೂರಿನಲ್ಲಿ ಬಾರ್ ಲೈಸೆನ್ಸ್ ಹೆಚ್ಚಿಗೆ ಮಾಡುವುದರ ಮೂಲಕ ಬ್ರ್ಯಾಂಡ್ ಬೆಂಗಳೂರು ಬದಲಾಗಿ ಕುಡುಕರ ಬೆಂಗಳೂರು ಎಂದು ಬದಲಿಸುವ ಉದ್ದೇಶದಿಂದ ಇದ್ದೀತೆ?

ಸುದ್ದಿ 2 ನಿಮಿಷ

ಗಣಿ ಸಮಸ್ಯೆ ಇತ್ಯರ್ಥಕ್ಕೆ ಏಕಗವಾಕ್ಷಿ ವ್ಯವಸ್ಥೆ ರೂಪಿಸಲು ಸೂಚನೆ

ಬೆಂಗಳೂರು: ಅರಣ್ಯ ಇಲಾಖೆಯು ಗಣಿ ಗುತ್ತಿಗೆ ಸಮಸ್ಯೆಗಳನ್ನು ಬಗೆಹರಿಸಲು ಏಕಗವಾಕ್ಷಿ ಮಾದರಿ ವ್ಯವಸ್ಥೆ ರೂಪಿಸಲು ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ಅಲ್ಲದೇ, ಗಣಿ ಗುತ್ತಿಗೆ ಪಡೆದಿರುವ ಸಂಸ್ಥೆಗಳಿಗೆ ಅರಣ್ಯ ಇಲಾಖೆ ತೀರುವಳಿ ಮತ್ತಿತರ ಅನುಮತಿ ಪತ್ರಗಳನ್ನು ನೀಡಲು ಮತ್ತು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಗಣಿ ಮತ್ತು ಭೂವಿಜ್ಞಾನ, ಕಂದಾಯ, ಅರಣ್ಯ ಇಲಾಖೆ ಸಚಿವರು ಹಾಗೂ ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸಬೇಕು ಎಂದು ಅರಣ್ಯ ಇಲಾಖೆಯ ಪರಿಶೀಲನಾ ಸಭೆಯಲ್ಲಿ ಸಲಹೆ ನೀಡಿದರು.

ಅರಣ್ಯ ಇಲಾಖೆ ತೀರುವಳಿ ಪಡೆಯಲು ಬಹಳಷ್ಟು ಪ್ರಕರಣಗಳು ಬಾಕಿ ಇವೆ. ಇದಕ್ಕೆ ಗಣಿ ಗುತ್ತಿಗೆ ಪಡೆದ ಸಂಸ್ಥೆಗಳು ಅರಣ್ಯೀಕರಣಕ್ಕೆ ಪರ್ಯಾಯ ಭೂಮಿ ನೀಡದಿರುವುದೇ ಕಾರಣವೆಂದು ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ವನ್ಯಜೀವಿಗಳ ಉಪಟಳದಿಂದಾಗಿ ಕೃಷಿ ಭೂಮಿ ಮಾರಲು ಸಿದ್ಧರಿರುವ ರೈತರು ಹಾಸನ ಮತ್ತು ರಾಜ್ಯದ ಇತರ ಕೆಲವು ಭಾಗಗಳಲ್ಲಿದ್ದಾರೆ. ಇಂತಹ ರೈತರಿಗೆ ಸೂಕ್ತ ಬೆಲೆ ನೀಡಿ ಜಮೀನು ಖರೀದಿಸಬಹುದು ಎಂದೂ ಅಧಿಕಾರಿಗಳು ಹೇಳಿದರು.

ಟಿಕೆಟ್ ರಹಿತ ಪ್ರಯಾಣ: ₹6.49 ಲಕ್ಷ ದಂಡ ವಿಧಿಸಿದ ತಪಾಸಣಾ ತಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸುತ್ತಿದ್ದ 3,027 ಮಂದಿಯನ್ನು ತಪಾಸಣಾ ತಂಡವು ಪತ್ತೆಹಚ್ಚಿ ₹6.49 ಲಕ್ಷ ದಂಡ ವಸೂಲಿ ಮಾಡಿದೆ.

ಸೆಪ್ಟೆಂಬರ್ ತಿಂಗಳಲ್ಲಿ ಒಟ್ಟು 14,930 ಟ್ರಿಪ್‌ಗಳಲ್ಲಿ ತಪಾಸಣೆ ನಡೆಸಲಾಗಿದೆ. ಮಹಿಳಾ ಪ್ರಯಾಣಿಕರಿಗೆ ಮೀಸಲಾದ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ್ದ 387 ಪುರುಷರಿಂದ ₹38 ಸಾವಿರ ದಂಡ ವಸೂಲಿ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹಮಾಸ್ ಉಗ್ರರಿಂದ ಸಹೋದರಿ ಕುಟುಂಬ ಹತ್ಯೆ: ನಟಿ ಮಧುರಾ

ಪ್ರಜಾವಾಣಿ ವಾರ್ತೆ

ಮುಂಬೈ: 'ಇಸ್ರೇಲ್–ಹಮಾಸ್ ನಡುವೆ ನಡೆಯುತ್ತಿರುವ ಕದನದಲ್ಲಿ ನನ್ನ ಸಹೋದರಿ ಹಾಗೂ ಆಕೆಯ ಪತಿಯನ್ನು ಪ್ಯಾಲೆಸ್ಟೀನ್ ಉಗ್ರರು ಹತ್ಯೆ ಮಾಡಿದ್ದಾರೆ' ಎಂದು ಬಾಲಿವುಡ್ ನಟಿ ಹಾಗೂ ರೂಪದರ್ಶಿ ಮಧುರಾ ನಾಯ್ಕ್ ಹೇಳಿದ್ದಾರೆ.

'ಸಹೋದರಿ ಒದಾಯ, ಆಕೆಯ ಪತಿಯನ್ನು ಅವರ ಮಕ್ಕಳ ಮುಂದೆಯೇ ಹತ್ಯೆ ಮಾಡಲಾಗಿದೆ' ಎಂದು ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

PUBLIC NOTICE

PUBLIC NOTICE

Notice is hereby given to the general public that my clients are intending to purchase all that immovable property described in the Schedule hereunder from its present owners **(i) Mrs. Kamala Chandrasekhar,** wife of late Mr. M. S. Chandrasekhar Iyer, **(ii) Mr. Chandrashekar Amarnath,** son of late Mr. M. S. Chandrasekhar Iyer, both are residing at No.253, 13th Cross, Indiranagar 2nd Stage, Bangalore-560 038, who are representing that they are the absolute joint owners of the Schedule property, they having inherited the same from their ancestors and other than themselves no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/ their/objection/s with relevant documentary proof to the undersigned at the address given below within **SEVEN DAYS** from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE

All that piece and parcel of immovable property being land with building bearing No.253, PID No.82-24-253, formed by the Bangalore Development Authority, situated at 13th Cross, Binnamangala 2nd Stage, Indiranagar, in the Corporation Ward No.82, New Ward No.80, Bangalore and bounded on the: East by : Site bearing No.186; West by : Road; North by : Site bearing No.252; South by: Site bearing No.253/A; measuring East to West (80'0" + 80'06")/2 feet; North to South (46'0" + 45'0")/2 feet; in all measuring a total extent of 3651.37 square feet, together with a old building having a built up area of about 1554 square feet.

A. NAGARAJA,
Advocate & Notary
No. 6, KHB Buildings,
II Block, 13th Cross,
Indiranagar II Stage,
Bangalore-560 038.
Ph: 9448067511.

Bangalore
Dated 10.10.2023.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

M.A.J FOUNDATION
DHANWANTARI ACADEMY FOR MANAGEMENT STUDIES
#39/1, Vinayaka Nagar, Chikkasandra, Chikkabanavara, Bangalore-560090, Mob: +91 9880717006
TEACHING STAFF / DIRECTOR FOR, MBA & MCA REQUIRED
SUBJECTS: MANAGEMENT | ACCOUNTANCY | STATISTICS & MATH | COMPUTER SCIENCE | ENGLISH
Qualifications, Experience & Pay: As per UGC & AICTE Norms
NON-TEACHING STAFF REQUIREMENT
HR Manager, Graphic Designers, Video Editors, Tele Callers, Receptionists, Lady Hostel Wardens, Assistant Librarian Accountant, Office Assistant, System Admin, Maintenance Incharge, Helpers & Attenders
Interested and eligible candidates shall mail the CV to principal@damsmaj.com by 31st Oct, 2023.
*Reservation for SC/ST candidate as per rules.
Sd-Chairman
MAJ FOUNDATION

REQUIRES (1) LADY VICE PRINCIPAL M.A./ M.Sc., B.Ed/ M.Ed. 5 years administrative experience. Age 35-50 years. (2) TEACHER for English & Social for High School (3) GRADUATES to teach All Subjects for Classes 1 to 4. Contact: Secretary, CAMLIN HIGH SCHOOL 6th 'C' Main, 4th Cross Hampinagar, (Near 7th Main Bus-Stop Hampinagar), Bangalore-560104. Call: 080-23301363

FRANK PUBLIC SCHOOL, JP-Nagar 6th Phase, Requires MIDDLE SCHOOL ENGLISH TEACHERS, FRONT OFFICE STAFF. Apply rumysud@gmail.com WhatsApp7019301626

COMPUTER SCIENCE FACULTY IMMEDIATE APPOINTMENT Qualification: PG+NET Apply/Walkin MONTFORT COLLEGE, Old Madras Road, Bangalore-38 mail@montfortcollege.edu.in

General

SHARANYA TELTRONICS Kumaraswamy Layout REQUIRES SALES, SERVICE, ACCOUNTS and OFFICE EXECUTIVES. Call: 9845010634.

REPUTED SECURITY Agency Require Experienced Field Officer, Marketing Manager/ Operations Talley Clerk, Personnel Driver. Bangalore Ph:080-23437474 23437797 Mob:8892073262

URGENTLY REQUIRED Receptionist with Computer Knowledge and Marketing executives for Real Estate. M/s. SEVENRAJ'S ESTATE AGENCY No. 17 Wood Street, Casa capital, Shanthala Nagar, Near Brigade Tower, Bangalore - 560025. 9845020007 / 9845717777 sevenraj@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Manager

MANAGER ADMISSIONS with min. 8+ yrs.experience, with excellent communication and coordination skills. Ready to travel and having experience working with educational institution will be given preference. ISME, Sarjapur Road. 8880612345. jobs@isme.in

Wanted

Wipro Enterprises Pvt Limited Tumkur,
VACANCY FOR WELFARE OFFICER
(Preferably Female)
No of Vacancies : 01
Qualification : Any Degree in Social Science with specialization in Industrial Relations & Personnel Management from recognized university.
Experience : Minimum 5 years as welfare officer in manufacturing Industries
Age Limit : Not more then 30 Years
Languages Known : Shall have fluency in read, write and speak in Kannada, English and Hindi
Computer Skills :Office 2000 and internet browsing
Salary : As per Industrial Norms
After the selection, selected candidate shall be relocate to Tumkur. Interested candidates can send their updated resume along with their educational qualification certificate and experience certificate to email:
hanumantharayappa.s93@wipro.cpom within 15days from the date of advertisement.

Accounts & Finance

WANTED ACCOUNTANT Qualification B.Com Exp Minimum 10years With TDS & GST Salary Rs.45000/- Free-family accommodation If required Call:7338084555 9845053636:Mail glprojects7889 @gmail.com

Security & Detectives

A LEADING SECURITY AGENCY in Bangalore is looking for: (1) SALES CO-ORDINATOR: Experienced Female Graduate Candidates with Computer knowledge & good Communication skill Preferred. (2) FIELD OFFICER: Experienced in Security Field for Bommasandra, M.G. Road, Whitefield, Yelahanka & Horamavu Area. (3) NIGHT PATROLLING OFFICER: Experience in Security Field & willingness to work in Night Shift is preferred. (4) BUSINESS DEVELOPMENT EXECUTIVES: Graduates Fresher/ Minimum 2+ years Experienced in Security Industry. For the post Sl.No. 2, 3, 4:- 2 Wheelers is a must. Send your Resume to: info@networkda.in or Contact: 9900596738 for interview.

HRD & Admin

COORDINATOR-ADMINISTRATION WITH min. 8 yrs. experience. Excellent communication skills with knowledge of Kannada & M S Office required. Candidates staying close to campus preferred. Should have handled overall administration. ISME, Sarjapur Road. 8880612345. jobs@isme.in

ADMISSION COUNSELLOR with minimum of 3 yrs. experience, with excellent communication skills, staying within 10km from the Campus will be preferred. ISME, Sarjapur Road. 8880612345. jobs@isme.in

Drivers

FULLFILY
ಫುಲ್‌ಫಿಲಿ
ಡೆಲಿವರಿ ಡ್ರೈವರ್‌ಗಳ ಅಗತ್ಯವಿದೆ
2 ಮತ್ತು 3 ಚಕ್ರದ ಎಲೆಕ್ಟ್ರಿಕಲ್ ವಾಹನವನ್ನು ನೀಡಲಾಗುವುದು
ತಿಂಗಳಿಗೆ ಸುಮಾರು 35000/- ರೂ.ಗಳನ್ನು ಗಳಿಸಬಹುದು

ಸಂಪರ್ಕಿಸಿ
8296183341
8925829048
8925829049

Marketing & Sales

REQUIRED FOR a Leading Pharma Distributor Company Salesman Salary, Perks, incentives, Allowances. Call: 8884411429, 9513306536

PERSONAL

Change of Name

CHANGE OF NAME
I, **G. TEJASWINI** aged 30 yrs, W/o H.S. Ram Mohan R/at # 30, 11th Cross, Vivekananda Street, Opp. Over Head Tank, Ganapathipura, Bengaluru- 560062 have changed my name to **TEJASHVINI** vide affidavit dt. 05-10-2023, before Notary B.M. Chandrashekar, Bengaluru.

I, YESHAS S/o.Manjunath K.N R/o#310, 9th Cross, 1st main Road, Bapuji-Layout, behind HP Petrol-Bunk Vijayanagar, Bengaluru North, Bengaluru, Karnataka-560040. have changed my Name to YASHAS. M vide affidavit dated:10.10.2023 before Notary Deepa.M. Bengaluru

I, SOMNA K CHHABRIA W/o Rajesh Motilal Bajaj residing at No. 30, Chakravarty Layout, 2nd Main, 3rd Cross, Palace Road Cross, Bangalore, 560020 have changed my name to SOMNA RAJESH BAJAJ, vide affidavit dated 10/10/2023 before notary; N THULSAI, Bangalore 560052.

I JIBI Johnes K s/o K P Johny, B 315 Aristocrat Apartments, 1st main Kasturi Nagar Bangalore 560043 shall be known as Jibi Johnes Kallarackal vide affidavit dated 9/10/2023 Bengaluru

OTHERS

Dance/ Music Classes

HOME AND FLAT Visit Dance Class By Guru Suchithra Bharathi, Sunday classes , Bharathanatyam and kuchipudi classes Contact: 94954 17580.

RENTAL PROPERTIES

Accommodation Available

Commercial

SPACE AVAILABLE for RENT in Basavanagudi suitable for Evening Tutorial, Evening school semi furnished, Computer classes tutorial 4000 sq ft. Available immediately. Contact no 31, Kanakapura road, Basavanagudi, Bangalore. Whatsapp 9901501185.

4FLOOR COMMERCIAL Building For Rent Next to By-Pass on Hyd Main Rd Contact-9986670488/whats app

Godown

LAND AVAILABLE FOR GODOWN/ WAREHOUSE CONVERTED LAND MEASURING 02 ACRES, SUITABLE FOR GODOWN/ WAREHOUSE SITUATED AT NARAYANA GHATTA VILLAGE, BETWEEN HUSKUR AND MUTTHANALLUR CIRCLE (5 KMS TO CHANDAPURA & SARJAPURA ROAD) CONTACT: +91-7676959289/ +91-9341978732.

REAL ESTATE BUYING

Industrial & Factory

Multiple Locations

WANTED RUNNING INDUSTRY, Sick Industry, Industrial land in Bangalore. Looking 4000 to 20000sft Property Jayanagar, Basavangudi, JP Nagar and CBD surrounding areas. Verna Developers, Bangalore. 9353128035/ 9916310226

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ಪ್ಯಾಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

General

General

WE DO RESIDENTIAL, Commercial, IndustrialConversions, Change of land use,Revenue and KIADB Department work, MG Road,Bangalore. vernadevelopers.com 9353128035/ 9916310226

Sites

Banashankari

BDA SITES Wanted,Banashankari 6th Stage,Anjanapura,JPNagar 8th /9th Phase BCC Layout,Immediate Settlement: 9845444588

REAL ESTATE SELLING

Joint Development

Out-Station

NILGIRIS 7 ACRES TEA ESTATE FOR SALE/ JV CT. 9087688877

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

DH DECCAN HERALD ಪ್ರಜಾವಾಣಿ
Classifieds
More value, more impact
JOB HUNT
Get your HIRING NEEDS answered

Get the right people for your company...
Book your Ad with us now !
www.dhclassifieds.com
BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

ಕಸ ವಿಲೇವಾರಿ– ಪರ್ಯಾಯ ಜಾಗ ಗುರುತಿಸಲು ಕ್ರಮ: ಡಿಸಿಎಂ ಡಿ.ಕೆ. ಶಿವಕುಮಾರ್

‘ಜನರಹಿತ ಸ್ಥಳಕ್ಕೆ ಘಟಕ ಸ್ಥಳಾಂತರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಶವಂತಪುರ ವಿಧಾನಸಭೆ ಕ್ಷೇತ್ರದ ಐದು, ಬ್ಯಾಟರಾಯನಪುರದ ಎರಡು ಹಾಗೂ ದಾಸರಹಳ್ಳಿ, ಆನೇಕಲ್, ಮಹದೇವಪುರ ಕ್ಷೇತ್ರದಲ್ಲಿರುವ ಕಸ ವಿಲೇವಾರಿ ಘಟಕಗಳನ್ನು ನಗರದ ಹೊರಭಾಗದಲ್ಲಿರುವ ಜನರಹಿತ ಪ್ರದೇಶಕ್ಕೆ ಸ್ಥಳಾಂತರಿಸಲು ತೀರ್ಮಾನಿಸಲಾಗಿದೆ’ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಜಲಸಂಪನ್ಮೂಲ, ಅರಣ್ಯ ಇಲಾಖೆ ಮತ್ತು ಬೆಂಗಳೂರು ನಗರಾಭಿವೃದ್ಧಿ ಇಲಾಖೆಗಳ ಸಮನ್ವಯ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳ ಜತೆ ಚರ್ಚಿಸಿ, ಪರ್ಯಾಯ ಜಾಗಗಳನ್ನು ಗುರುತಿಸಲಾಗುವುದು’ ಎಂದರು.

‘ಬೆಂಗಳೂರು ಬೃಹತ್ ಪ್ರಮಾಣದಲ್ಲಿ ಬೆಳೆದ ಪರಿಣಾಮ ಕಸ ವಿಲೇವಾರಿ ಘಟಕಗಳು ನಗರದ ಹೃದಯ ಭಾಗಕ್ಕೆ ಬಂದಿವೆ. ಈ ಘಟಕಗಳ ಸುತ್ತಮುತ್ತಲಿನ 4–5 ಕಿ.ಮೀ. ವ್ಯಾಪ್ತಿಯ ನಾಗರಿಕರು ನರಕ ಯಾತನೆ ಅನುಭವಿಸುತ್ತಿದ್ದಾರೆ. ಬ್ಯಾಟರಾಯನಪುರ ಶಾಸಕರೂ ಆಗಿರುವ ಸಚಿವ ಕೃಷ್ಣ ಬೈರೇಗೌಡ, ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ಮತ್ತಿತರರು ಕಸ ವಿಲೇವಾರಿ ಘಟಕ ಸ್ಥಳಾಂತರಿಸುವಂತೆ ಮನವಿ ಸಲ್ಲಿಸಿದ್ದರು’ ಎಂದರು.

‘ಕಸ ವಿಲೇವಾರಿ ಘಟಕಕ್ಕಾಗಿ ನಗರದ ನಾಲ್ಕೂ ಮೂಲೆಗಳಲ್ಲಿ ಅರಣ್ಯ ಪ್ರದೇಶದ ಗಡಿಭಾಗಗಳಲ್ಲಿ 100 ಎಕರೆ ಜಾಗ ನೀಡುವಂತೆ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆಗೆ ಮನವಿ ಮಾಡಲಾಗಿದೆ. ಸರ್ವೆ ಮಾಡಿದ ಬಳಿಕ ಜಾಗ ಸಿಗಲಿದೆ. ಅದಕ್ಕೆ ಪ್ರತಿಯಾಗಿ ಅರಣ್ಯ ಇಲಾಖೆಗೆ ಪರ್ಯಾಯ ಜಾಗ ನೀಡಲಾಗುವುದು ಅಥವಾ ಖರೀದಿ ಮಾಡಲಾಗುವುದು’ ಎಂದರು.

ಜಲ ಮಂಡಳಿಗೆ ಸೌರ ವಿದ್ಯುತ್ ಘಟಕ: ‘ತಿಪ್ಪಗೊಂಡನಹಳ್ಳಿಯಲ್ಲಿ 300 ಎಕರೆ, ಹೆಸರಘಟ್ಟದಲ್ಲಿ 100 ಎಕರೆ ಜಮೀನಿದೆ. ಇಲ್ಲಿ ಜಲ ಮಂಡಳಿಗೆ ಸೌರ ವಿದ್ಯುತ್ ಉತ್ಪಾದನಾ ಘಟಕ ನಿರ್ಮಿಸುವ ಚಿಂತನೆಯಿದೆ’ ಎಂದು ಶಿವಕುಮಾರ್ ತಿಳಿಸಿದರು.

ಪರ್ಯಾಯ ಜಾಗ: ‘ಮೇಕೆದಾಟು ಯೋಜನೆ ಜಾರಿ ವಿಚಾರವಾಗಿ ಈ ಭಾಗದ ಜನರಿಗೆ ಪರ್ಯಾಯ ಜಾಗಗಳನ್ನು ಗುರುತಿಸಲಾಗಿದೆ. ಚಾಮರಾಜನಗರ, ಮಂಡ್ಯ, ರಾಮನಗರದಲ್ಲಿ ಜಾಗ ಗುರುತಿಸಲಾಗಿದೆ’ ಎಂದರು.

‘ಬಿಎಂಆರ್‌ಡಿ ಯೋಜನೆಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಜೊತೆಗಿನ ಸಮಸ್ಯೆಗಳನ್ನು ಚರ್ಚಿಸಿದ್ದೇವೆ. ಕಾವೇರಿ ನೀರಿನ ಪೈಪ್‌ಲೈನ್ ಸುಮಾರು 100 ಮೀಟರ್‌ನಷ್ಟು ಅರಣ್ಯ ಜಾಗದಲ್ಲಿ ಬರುತ್ತಿದೆ. ಆದರೆ, ಅರಣ್ಯ ಇಲಾಖೆ ಅವಕಾಶ ನೀಡದ ಕಾರಣ ಈ ಯೋಜನೆಯನ್ನು ತಡೆಹಿಡಿಯಲಾಗಿದೆ. ಪರ್ಯಾಯ ಜಾಗ ನೀಡುವುದಾಗಿ ತಿಳಿಸಲಾಗಿದೆ. ಬೆಂಗಳೂರಿನ ಸುತ್ತಮುತ್ತ ಆನೆ ಮತ್ತು ಚಿರತೆ ದಾಳಿಗಳು ಹೆಚ್ಚಾಗುತ್ತಿವೆ. ಈ ವಿಚಾರವನ್ನು ಸಂಬಂಧಿಸಿದ ಸಚಿವರು ಮತ್ತು ಅಧಿಕಾರಿಗಳ ಗಮನಕ್ಕೆ ತರಲಾಗಿದೆ’ ಎಂದೂ ಹೇಳಿದರು.

‘ತಿಪ್ಪಗೊಂಡನಹಳ್ಳಿ ಸಂರಕ್ಷಿತ ವಲಯ ಮರುನಿಗದಿ’

‘ತಿಪ್ಪಗೊಂಡನಹಳ್ಳಿ ಕೆರೆಯ ಸಂರಕ್ಷಿತ ವಲಯದ ಅಂತರ ಕಡಿಮೆ ಮಾಡಲು 2017 ಮತ್ತು 2021ರಲ್ಲಿ ಸರ್ಕಾರ ಆದೇಶ ಹೊರಡಿಸಿದ್ದರೂ, ಅದು ಜಾರಿ ಆಗಿಲ್ಲ. ಇದರಿಂದಾಗಿ ನಕ್ಷೆ ಮಂಜೂರಾತಿ ಆಗುತ್ತಿಲ್ಲ. ಹೀಗಾಗಿ ಇಲ್ಲಿ ಕಾನೂನುಬಾಹಿರವಾಗಿ ಮನೆ, ಕಟ್ಟಡಗಳು ನಿರ್ಮಾಣ ಆಗಿವೆ. ಈ ಭಾಗದಲ್ಲಿ ಕಾನೂನು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ನೀಡಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ನೆಲಮಂಗಲ, ದಾಬಸ್ ಪೇಟೆ, ಶಿವಗಂಗೆ ಸೇರಿದಂತೆ ಅನೇಕ ಕಡೆಗಳಲ್ಲಿ ನಕ್ಷೆಗಳಿಗೆ ಅನುಮತಿ ನೀಡುತ್ತಿಲ್ಲ ಎಂದು ಜನ ಗಲಾಟೆ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರ ತಂದಿರುವ ಕಾನೂನನ್ನೇ ಜಾರಿ ಮಾಡುವಂತೆ ಮನವಿ ಬಂದಿದ್ದು, ನಗರಾಭಿವೃದ್ಧಿ, ಅರಣ್ಯ ಮತ್ತು ಕಾನೂನು ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು’ ಎಂದೂ ತಿಳಿಸಿದರು.

ಗೋವಾ: ಅಪಹರಣ– ಬೆಂಗಳೂರಿನ ನಾಲ್ವರ ಸೆರೆ

ಅಪರಾಧ ಸುದ್ದಿ

ಪಣಜಿ(ಪಿಟಿಐ): ವ್ಯಕ್ತಿಯೊಬ್ಬನನ್ನು ಅಪಹರಣ ಮಾಡಿದ ಪ್ರಕರಣದಲ್ಲಿ ಬೆಂಗಳೂರು ಮೂಲದ ನಾಲ್ವರನ್ನು ಗೋವಾ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಯಾಸೀನ್ ಅಲಿ ಬೇಗ್ (21), ಅಹ್ಮದ್ ಷರೀಫ್ (30), ನವಾಜ್ ಎಂ.ಡಿ (36) ಹಾಗೂ ನೌಶಾದ್ ಅಹ್ಮದ್ (45) ಬಂಧಿತರು. 25 ವರ್ಷದ ಜುನೇದ್ ಜಫೀರ್ ಎಂಬುವವರನ್ನು ಈ ನಾಲ್ವರು ಅಪಹರಿಸಿದ್ದರು ಎಂದು ಡಿಎಸ್‌ಪಿ ಜೀವ್ಬಾ ದಲ್ವಿ ಹೇಳಿದ್ದಾರೆ.

ಅಪಹೃತ ಜಫೀರ್, ಮಾಪುಸಾ ಬಳಿಯ ಮೊಯಿರಾ ಗ್ರಾಮದಲ್ಲಿ ಸಲೂನ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಎಂದು ತಿಳಿಸಿದ್ದಾರೆ.

‘ನಮ್ಮ ಸಂಬಂಧಿಯಾದ ಯುವತಿಯೊಂದಿಗೆ ವ್ಯಕ್ತಿಯೊಬ್ಬ ಓಡಿಹೋಗಿದ್ದ. ಆ ವ್ಯಕ್ತಿಯೇ ಜುನೇದ್ ಎಂದು ತಪ್ಪಾಗಿ ತಿಳಿದು, ಅಪಹರಿಸಿದ್ದಾಗಿ ಬಂಧಿತರು ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ. ತನಿಖೆ ನಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಹವ್ಯಕ ಮಹಾಸಭೆ: ಡಾ.ಕಜೆ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಡಾ.ಗಿರಿಧರ ಕಜೆ

ಬೆಂಗಳೂರು: ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷರಾಗಿ ಸರ್ವಾನುಮತದಿಂದ 9ನೇ ಬಾರಿ ಡಾ.ಗಿರಿಧರ ಕಜೆ ಆಯ್ಕೆಯಾಗಿದ್ದಾರೆ.

ನಗರದಲ್ಲಿ ನಡೆದ ಮಹಾಸಭಾದ 80ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಈ ಆಯ್ಕೆ ನಡೆಯಿತು. ಉಪಾಧ್ಯಕ್ಷರಾಗಿ ಆರ್.ಎಂ. ಹೆಗಡೆ, ಶ್ರೀಧರ ಜೆ. ಭಟ್ಟ ಕೆಕ್ಕಾರು, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಎ. ವೇಣುವಿಘ್ನೇಶ ಸಂಪ, ಕಾರ್ಯದರ್ಶಿಯಾಗಿ ಪ್ರಶಾಂತ ಕುಮಾರ ಜಿ. ಭಟ್ಟ ಮಲವಳ್ಳಿ, ಆದಿತ್ಯ ಹೆಗಡೆ ಕಲಗಾರು, ಕೋಶಾಧಿಕಾರಿಯಾಗಿ ಕೃಷ್ಣಮೂರ್ತಿ ಎಸ್. ಭಟ್ ಯಲಹಂಕ ಆಯ್ಕೆಯಾಗಿದ್ದಾರೆ.

ಬಳಿಕ ಮಾತನಾಡಿದ ಡಾ. ಗಿರಿಧರ ಕಜೆ, ‘ವಿಶ್ವ ಹವ್ಯಕ ಸಮ್ಮೇಳನವನ್ನು 2024ರ ಡಿ.27ರಿಂದ ಮೂರು ದಿನ ಅರಮನೆ ಮೈದಾನದಲ್ಲಿ ನಡೆಸಲಾಗುವುದು. ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಅಮೆರಿಕ, ಸಿಂಗಪುರ ಮತ್ತು ಇಂಗ್ಲೆಂಡಿನಲ್ಲಿ ಕೂಡ ಹವ್ಯಕ ಸಮಾವೇಶ ನಡೆಸಲಾಗುತ್ತದೆ. ಮುಂದಿನ 14 ತಿಂಗಳಲ್ಲಿ ಹವ್ಯಕ ನ್ಯಾಯವಾದಿಗಳ ಸಮಾವೇಶ, ಹವ್ಯಕ ಮಹಿಳಾ ಸಮಾವೇಶ, ಹವ್ಯಕ ಶಿಕ್ಷಕರ ಸಮಾವೇಶ, ಹವ್ಯಕ ಉದ್ಯಮಿಗಳ ಸಮಾವೇಶ, ಹವ್ಯಕ ಕಲಾ ಉತ್ಸವ, ಹವ್ಯಕ ಸಂಗೀತ ಉತ್ಸವ, ಯಕ್ಷಗಾನ ಉತ್ಸವ, ವೈದಿಕ ಉತ್ಸವ, ಗಾಯತ್ರಿ ಮಹೋತ್ಸವ, ಶಂಕರ ಸ್ಮರಣ, ಸಂಸ್ಕಾರೋತ್ಸವ, ಹವ್ಯಕ ವಾಣಿಜ್ಯ ಸಮಾವೇಶ ಸೇರಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ’ ಎಂದು ಹೇಳಿದರು.

‘ಭಟ್ಕಳ ತಾಲ್ಲೂಕಿನ ಬೆಳಕೆ ಗ್ರಾಮದಲ್ಲಿ ಶಿರೂರಿನ ಮಂಜುನಾಥ ಬಿಲ್ಲವ ಮತ್ತು ಕುಟುಂಬದವರು ಸೇವಾರೂಪದಲ್ಲಿ ನೀಡಿರುವ ಒಂದು ಎಕರೆ ಜಾಗದಲ್ಲಿ ಸಭಾಂಗಣ ನಿರ್ಮಿಸಲಾಗುವುದು. ಬೆಂಗಳೂರಿನ ಚಿಕ್ಕಪೇಟೆ ಮತ್ತು ಕಾಮರಾಜ್ ರಸ್ತೆಯಲ್ಲಿ ಮಹಾಸಭಾ ಅಧೀನಕ್ಕೆ ಬರಲಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಿ, ಹವ್ಯಕ ಸಮುದಾಯಕ್ಕೆ ಅನುಕೂಲ ಮಾಡಿಕೊಡಲಾಗುವುದು’ ಎಂದರು.

ನಗರದಲ್ಲಿ ನೀರಿನ ಅದಾಲತ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವಿವಿಧ ಉಪವಿಭಾಗಗಳಲ್ಲಿ ಅ. 12ರಂದು ಬೆಳಿಗ್ಗೆ 9.30ರಿಂದ 11 ಗಂಟೆ ವರೆಗೆ ನೀರಿನ ಅದಾಲತ್ ನಡೆಸಲಿದೆ.

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಕ್ಕೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 87622 28888ಗೆ ಸಂದೇಶ ಕಳುಹಿಸಿ ದೂರು ದಾಖಲಿಸಬಹುದು ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.



ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನಂ. 14/3, ಸಿ.ಎಫ್.ಸಿ ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560 001.

ಸಂಖ್ಯೆ : ಕೆಐಎಡಿಬಿ/ಎಲ್ಎಕ್ಯೂ/3714/2023–24 ದಿನಾಂಕ: 06.10.2023

ಸಾರ್ವಜನಿಕ ನೋಟೀಸ್

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟ ಜಮೀನಿನ ಖಾತೆದಾರರು/ಅನುಭವದಾರರು/ಹಿತಾಸಕ್ತದಾರರಿಗೆ ತಿಳಿಸುವುದೇನೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ರಬ್ಬನಹಳ್ಳಿ, ರಾಮನಾಥಪುರ, ಅರವನಹಳ್ಳಿ, ದೊಡ್ಡಗೊಲ್ಲರಹಳ್ಳಿ, ಚಪ್ಪರದಹಳ್ಳಿ, ಬೈರದೇನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಲಿಂಗನಹಳ್ಳಿ ಗ್ರಾಮಗಳಲ್ಲಿ ಒಟ್ಟು 2072–24 1/2 ಖರಾಬು 166–02 1/2 ಉಳಿಕೆ 1906–22 ಎಕರೆ ವಿಸ್ತೀರ್ಣದ ಜಮೀನುಗಳ ಸರ್ವೆ ನಂಬರ್‌ಗಳನ್ನು ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ: ಸಿಐ 443 ಎಸ್‌ಪಿಕ್ಯೂ 2009 ದಿನಾಂಕ 09.06.2010 ರಾಜ್ಯಪತ್ರ ಪ್ರಕಟಿತ ದಿನಾಂಕ 09.06.2010ರಂತೆ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆ ಭಾಗ–3 ಪುಟ ಸಂಖ್ಯೆ: 1 ರಿಂದ 143ರಲ್ಲಿ ಪ್ರಚುರ ಪಡಿಸಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಗ್ರಾಮಗಳ ಪೈಕಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಅರವನಹಳ್ಳಿ, ದೊಡ್ಡಗೊಲ್ಲಹಳ್ಳಿ, ಚಪ್ಪರದಹಳ್ಳಿ ಮತ್ತು ಬೈರದೇನಹಳ್ಳಿ ಗ್ರಾಮಗಳಲ್ಲಿ ಒಟ್ಟು 867–37 ಎಕರೆ ವಿಸ್ತೀರ್ಣದ ಜಮೀನುಗಳಿಗೆ ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 116 ಎಸ್‌ಪಿಕ್ಯೂ (ಇ) 2022 ದಿನಾಂಕ 25.05.2022 ರಾಜ್ಯಪತ್ರ ಪ್ರಕಟಿತ ದಿನಾಂಕ 26.05.2022ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈಗ ಉಳಿಕೆ ಗ್ರಾಮವಾದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಲಿಂಗನಹಳ್ಳಿ ಗ್ರಾಮದಲ್ಲಿನ ಜಮೀನಿಗೆ ಸಂಬಂಧಿಸಿದಂತೆ ಕಲಂ 28(2)ರಡಿ ನೋಟೀಸ್ ಜಾರಿ ಮಾಡಿ ವಿಚಾರಣೆಯನ್ನು ನಡೆಸಲಾಗಿರುತ್ತದೆ. ಆದರೆ ವಿಚಾರಣೆ ಪೂರ್ಣಗೊಂಡಿರುವುದಿಲ್ಲ ಮತ್ತು ಕಲಂ 28(3)ರಡಿ ಆದೇಶ ಹೊರಡಿಸಿರುವುದಿಲ್ಲ. ಆದ್ದರಿಂದ ಮೇಲ್ಕಂಡ ಗ್ರಾಮಕ್ಕೆ ಸಂಬಂಧಪಟ್ಟಂತೆ **30 ದಿನಗಳ ಒಳಗಾಗಿ** ಈ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001 ಇವರ ಕಛೇರಿಗೆ ಆಕ್ಷೇಪಣೆಯನ್ನು ಲಿಖಿತ ಮೂಲಕ ಖುದ್ದು ಅಥವಾ ಅಧಿಕಾರ ಪಡೆದವರ ಮುಖೇನ ಸಲ್ಲಿಸಬಹುದಾಗಿರುತ್ತದೆ ಎಂದು ತಿಳಿಯಪಡಿಸಲಾಗಿತ್ತು. ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಖಾತೆದಾರರ /ಅನುಭವದಾರರ ಹೆಸರು	ಸರ್ವೆ ನಂ.	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ		
			ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
	ಗ್ರಾಮ:– ಲಿಂಗನಹಳ್ಳಿ ಹೋಬಳಿ:– ಕಸಬಾ ತಾಲ್ಲೂಕು:– ದೊಡ್ಡಬಳ್ಳಾಪುರ ಜಿಲ್ಲೆ:– ಬೆಂಗಳೂರು ಗ್ರಾಮಾಂತರ ಜಿಲ್ಲೆ				
1	ಚಿಕ್ಕಸಿದ್ದಪ್ಪ ಬಿನ್ ವೀರಪ್ಪ	10/1	1–39	0–07	1–32
2	ಹೆಚ್.ಬಿ.ಶಿವಣ್ಣ ಬಿನ್ ಹೆಚ್.ಎನ್.ಬಸಪ್ಪ, ಹೆಚ್.ಬಿ.ರುದ್ರಾಂಬಿಕ ಕೋಂ ರೇವಣ್ಣ, ಶಾರದಮ್ಮ ಕೋಂ ಲೇಟ್ ಚಂದ್ರಶೇಖರ್	10/2ಪಿ	4–23	0–07	4–16
3	ಮುನಿಸೊಣ್ಣೇಗೌಡ ಬಿನ್ ಲೇಟ್ ತಮ್ಮೇಗೌಡ	10/3ಪಿ	1–34	0–09	1–25
4	ಬಿ.ಪಾಲಾಕ್ಷಯ್ಯ ಬಿನ್ ಲೇಟ್ ಎಸ್.ಎಂ.ಬಸವರಾಜಪ್ಪ, ಶಾರದಮ್ಮ ಕೋಂ ಲೇಟ್ ಚಂದ್ರಶೇಖರ್, ಬಿ.ಶ್ರೀರಾಮೇಗೌಡ ಬಿನ್ ಬೈರೇಗೌಡ, ಬಿ.ನಾಗರಾಜ್ ಬಿನ್ ಬೈರೇಗೌಡ	10/4ಪಿ	2–21	–	2–21
5	ಶಿವಶಂಕರ ಬಿನ್ ಪಿ.ಮುನಿಕೃಷ್ಣಪ್ಪ	11/1	1–23	–	1–23
6	ಶಾರದಮ್ಮ ಕೋಂ ಲೇಟ್ ಚಂದ್ರಶೇಖರ್	11/2	1–07	–	1–07
7	ಶ್ರೀರಾಮೇಗೌಡ, ಬಿ.ನಾಗರಾಜು ಬಿನ್ ಬೈರೇಗೌಡ	11/3	3–00	0–07	2–33
8	ಶ್ರೀರಾಮೇಗೌಡ, ಸಿ.ನಾಗರಾಜು ಬಿನ್ ಬೈರೇಗೌಡ	12ಪಿ	4–02	0–10	3–32
9	ಬಿ.ಎನ್.ಸತ್ಯನಾರಾಯಣ ಮೂರ್ತಿ, ನರಸಿಂಹರಾಜು, ಜಿ.ನಿರ್ಮಲಮೇರಿ ಬಿನ್ ಗ್ರಾಬ್ರಿಯರ್	13	4–19	0–03	4–16
10	ಫಹಣಿ ಲಭ್ಯವಿಲ್ಲ	14	0–24	–	0–24
11	ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ	15ಪಿ	2–25	–	2–25
12	ಮುನಿನಂಜಪ್ಪ ಬಿನ್ ಮುನಿಗ	16ಪಿ	1–09	0–07	1–02
13	ಚನ್ನಮ್ಮ ಕೋಂ ಲೇಟ್ ರುದ್ರಪ್ಪ	17	0–17	–	0–17
14	ಆರ್.ನಂಜುಂಡಪ್ಪ ಬಿನ್ ಲೇಟ್ ರುದ್ರಪ್ಪ	18ಪಿ	1–38	0–03	1–35
15	ಮುನಿಸೊಣ್ಣೇಗೌಡ ಬಿನ್ ಲೇಟ್ ತಮ್ಮೇಗೌಡ	22ಪಿ	0–25	0–02	0–23
16	ಪಾಪಯ್ಯ ಬಿನ್ ವೆಂಕಟರಮಣಪ್ಪ, ಮುನಿಸೊಣ್ಣೇಗೌಡ ಬಿನ್ ತಮ್ಮೇಗೌಡ	24	1–06	–	1–06
17	ಶಿವರುದ್ರಮ್ಮ ಕೋಂ ಲೇಟ್ ಸಿ.ಪರಮಶಿವಯ್ಯ, ಪಿ.ಮಂಜುನಾಥ ಬಿನ್ ಲೇಟ್ ಸಿ.ಪರಮಶಿವಯ್ಯ	25	2–39	0–01	2–38
18	ಚಿಕ್ಕಪುಟ್ಟಪ್ಪ ಬಿನ್ ನಂಜುಂಡಪ್ಪ	38/3	1–34	0–03	1–31
19	ಮುನಿಶಾಮಪ್ಪ ಬಿನ್ ಹನುಮಂತರಾಯಪ್ಪ, ಮುನಿಶಾಮಪ್ಪ ಬಿನ್ ಆಂಜಿನಪ್ಪ	39/1ಪಿ	1–05	0–02	1–03
20	ಮುನಿಶಾಮಪ್ಪ ಬಿನ್ ಆಂಜಿನಪ್ಪ, ಶಾರದಮ್ಮ ಕೋಂ ಕುಂಬೇಗೌಡ, ಭಾಗ್ಯಮ್ಮ ಕೋಂ ಮಹದೇವಯ್ಯ	39/2ಪಿ	0–20	0–02	0–18
21	ಅಕ್ಕಲಮ್ಮ ಕೋಂ ಮುನಿಶಾಮಪ್ಪ, ಚಂದ್ರಪ್ಪ ಬಿನ್ ಪಿಳ್ಳಪ್ಪ, ಸಂಜೀವಪ್ಪ ಬಿನ್ ಚಿಕ್ಕಮುನಿಶಾಮಪ್ಪ, ಆರ್.ಮಂಜುಳ ಕೋಂ ಡಿ.ಎಂ.ಆನಂದಕುಮಾರ್, ಡಿ.ಎಂ.ಆನಮದಕುಮಾರ್ ಬಿನ್ ಲೇಟ್ ಮುನಿಶಾಮಪ್ಪ, ಎ.ರಾಮಕೃಷ್ಣಪ್ಪ ಬಿನ್ ಹೆಚ್.ಆಂಜಿನಪ್ಪ	45/1ಪಿ	1–04	0–02	1–02
22	ತಿಮ್ಮಯ್ಯ ಬಿನ್ ವೆಂಕಟಪ್ಪ, ಮಾದಮ್ಮ ಕೋಂ ಚಿಕ್ಕಮುನಿಶಾಮಪ್ಪ, ಆಂಜಿನಮ್ಮ ಕೋಂ ಆಂಜಿನಪ್ಪ	60/1	0–35	0–01	0–34
23	ಮುನಿನಂಜಪ್ಪ ಬಿನ್ ಹನುಮಂತರಾಯಪ್ಪ, ನಂಜಮ್ಮ ಕೋಂ ಬಸಪ್ಪ	69/2ಪಿ	0–20	0–06	0–14
24	ಕೆಂಪಣ್ಣ ಬಿನ್ ಪೆಯ್ಯಣ್ಣ, ಮುನಿಕೃಷ್ಣಪ್ಪ ಬಿನ್ ಕಾಳಪ್ಪ, ಆರ್.ಶ್ರೀನಿವಾಸಮೂರ್ತಿ ಬಿನ್ ಕೆ.ಆರ್. ರಾಮಚಂದ್ರಪ್ಪ, ಹೆಚ್.ಬಿ.ರುದ್ರಾಂಭಿಕ ಕೋಂ ರೇವಣ್ಣ	70/1ಪಿ	3–10	0–33	2–17
25	ಪಿಳ್ಳಬೈರಪ್ಪ ಬಿನ್ ನಂಜುಂಡಪ್ಪ	70/2	1–00	0–08	0–32
26	ಅವಲಕೊಂಡಪ್ಪ ತೋಟಿ ನೌಕರಿ ಇನಾಂತಿ ಬಿನ್ ಚೆನ್ನಪ್ಪ	91ಪಿ	0–27	0–01	0–26
27	ಎಲ್.ಆರ್.ವೆಂಕಟೇಶ ಮೂರ್ತಿ ಬಿನ್ ಮುನಿಬೈರಪ್ಪ, ಮರಿಯಪ್ಪ ಬಿನ್ ಮುನಿಯಪ್ಪ, ಬಿ.ರಾಮಣ್ಣ ಬಿನ್ ಲೇಟ್ ಬಚ್ಚಪ್ಪ	92/1ಪಿ	1–38	0–05	1–33
28	ನರಸಿಂಹಯ್ಯ ಬಿನ್ ಪೆದ್ದಗಯ್ಯ	176	2–33	–	2–33
29	ದೇವರಾಜು, ರಾಜಣ್ಣ ಬಿನ್ ಸಿದ್ದಪ್ಪ, ಎಂ.ಶಿವಲಿಂಗಯ್ಯ ಬಿನ್ ಎಸ್.ಮರಿಯಪ್ಪ, ಹರ್ಷ ಬಿನ್ ಲೇಟ್ ಉಮಾಪತಿ	177	10–25	0–22	10–03
30	ಮಾರಪ್ಪ ಬಿನ್ ನರಸಪ್ಪ, ಎಂ.ಶಿವಲಿಂಗಯ್ಯ ಬಿನ್ ಲೇಟ್ ಬಿ.ಎಸ್.ಮರಿಯಪ್ಪ	178	1–08	0–02	1–06
31	ಚನ್ನರಾಯಪ್ಪ ಬಿನ್ ಆಂಜಿನಪ್ಪ, ಸರ್ಕಾರಿ ಖರಾಬು	179	7–02	6–36	0–06
32	ಗೋಮಾಳ, ಮುನಿವೆಂಕಟಪ್ಪ ಬಿನ್ ಚಿಕ್ಕಹನುಮಯ್ಯ, ಮುನಿತಿಮ್ಮಯ್ಯ ಬಿನ್ ದೊಡ್ಡತಿಮ್ಮಯ್ಯ, ಗಂಗಾಧರಯ್ಯ ಬಿನ್ ಕೊಮಡಪ್ಪ, ಗಂಗಪ್ಪ ಬಿನ್ ಸನ್ನೋನು, ಮುನಿಕೃಷ್ಣಪ್ಪ ಬಿನ್ ನಂಜುಂಡಪ್ಪ, ಕಾಂತಮ್ಮ ಕೋಂ ಲೇಟ್ ಬಿ.ವೆಂಕಟೇಶಯ್ಯ, ಮುನಿಯಪ್ಪ ಬಿನ್ ಬಕ್ಲ ಆಂಜಿನಪ್ಪ, ಚಿ.ನಾರಾಯಣಸ್ವಾಮಿ ಬಿನ್ ಲೇಟ್ ದೊಡ್ಡತಿರುಮಳಪ್ಪ ಉ॥ ತಿರುಮಳಪ್ಪ, ಚಿಕ್ಕಮುನಿಯಪ್ಪ ಬಿನ್ ಬಚ್ಚಪ್ಪ	180ಪಿ 180/ಪಿ1 180/ಪಿ2 180/3 180/ಪಿ4 180/ಪಿ5 180/ಪಿ6	25–01	14–02	10–39
33	ಸರ್ಕಾರಿ ಗೋಮಾಳ, ವೆಂಕಟರಮಣಪ್ಪ ಬಿನ್ ಚಿಕ್ಕಗಿಡ್ಡಪ್ಪ, ಮುನಿತಿಮ್ಮಯ್ಯ ಬಿನ್ ದೊಡ್ಡತಿಮ್ಮಯ್ಯ	181 181/ಪಿ1	6–16	3–31	2–25
34	ಎಸ್.ಗೋಪಾಲಯ್ಯ ಬಿನ್ ಸುಬ್ಬಣ್ಣ	182/1	0–27	–	0–27
35	ಆರ್.ನಾಗೇಶ್ ಬಿನ್ ರಾಮಣ್ಣ	182/2	0–16	0–01	0–15
36	ಎಲ್.ವಿ.ನಾರಾಯಣ ಸ್ವಾಮಿ ಬಿನ್ ಲೇಟ್ ಬಚ್ಚಪ್ಪ, ಆರ್.ನಾಗೇಶ್ ಬಿನ್ ರಾಮಣ್ಣ	182/3	1–04	0–01	1–03
37	ಎಲ್.ಬಿ.ನಾರಾಯಣಸ್ವಾಮಿ, ಆರ್.ನಾಗೇಶ್ ಬಿನ್ ರಾಮಣ್ಣ	182/4ಎ	1–10	–	1–10
38	ಪಹಣಿ ಲಭ್ಯವಿಲ್ಲ	182/4ಬಿ	1–00	–	1–00
39	ಆರ್.ನಾಗೇಶ್ ಬಿನ್ ರಾಮಣ್ಣ	182/5	0–36	–	0–36
40	ಮುನಿಶಾಮಪ್ಪ ಬಿನ್ ಹನುಮಣ್ಣ	182/6	0–18	–	0–18
41	ಮುನಿಶಾಮಪ್ಪ ಬಿನ್ ಹನುಮಣ್ಣ	182/7	1–02	–	1–02
42	ಎ.ಮುನಿಆಂಜಿನಪ್ಪ ಬಿನ್ ಆಂಜಿನಪ್ಪ, ಮಾರಪ್ಪ, ಗುಂಡಪ್ಪ, ಎ.ತಿರುಮಳಪ್ಪ, ಚಿಕ್ಕಮುನಿಯಪ್ಪ, ಮುನಿತಿರುಮಳಪ್ಪ, ಮುನಿಆಂಜಿನಪ್ಪ, ಪಾಪಯ್ಯ ಬಿನ್ ವೆಂಕಟರಮಣಪ್ಪ, ಗಂಟಪ್ಪ ಬಿನ್ ವೆಂಕಟರಮಣಪ್ಪ, ಕೆ.ಎಸ್.ಮೂರ್ತಿ ಬಿನ್ ನರಸಿಂಹಯ್ಯ	183/1	5–30½	0–02½	5–28
43	ಎಸ್.ರಾಜಣ್ಣ ಬಿನ್ ಬಿ.ಎಸ್.ಸಿದ್ದಪ್ಪ	183/2	0–22	–	0–22
44	ಎಸ್.ರಾಜಣ್ಣ ಬಿನ್ ಬಿ.ಎಸ್.ಸಿದ್ದಪ್ಪ	183/3	0–18½	0–00½	0–18
45	ಲಲಿತಮ್ಮ ಕೋಂ ಎಸ್.ರಾಜಣ್ಣ	184/1	2–31	0–22	2–09
46	ಪಹಣಿ ಲಭ್ಯವಿಲ್ಲ	184/2ಪಿ	2–10	0–10	2–00
47	ಜಿ.ವೆಂಕಟಪ್ಪ ಬಿನ್ ಕೆಂಚಪ್ಪ, ಕೆ.ಮುನಿಕೃಷ್ಣಪ್ಪ ಬಿನ್ ಕೆಂಚಪ್ಪ	201/1	2–16	0–01	2–15
48	ಜಿ.ವೆಂಕಟಪ್ಪ ಬಿನ್ ಕೆಂಚಪ್ಪ, ಕೆ.ಮುನಿಕೃಷ್ಣಪ್ಪ ಬಿನ್ ಕೆಂಚಪ್ಪ	201/2	1–25	–	1–25
49	ಜಿ.ವೆಂಕಟಪ್ಪ ಬಿನ್ ಕೆಂಚಪ್ಪ, ಕೆ.ಮುನಿಕೃಷ್ಣಪ್ಪ ಬಿನ್ ಕೆಂಚಪ್ಪ	201/3	1–04	–	1–04
50	ಜಿ.ವೆಂಕಟಪ್ಪ ಬಿನ್ ಕೆಂಚಪ್ಪ, ಕೆ.ಮುನಿಕೃಷ್ಣಪ್ಪ ಬಿನ್ ಕೆಂಚಪ್ಪ	201/4	0–32	0–01	0–31
51	ಜಿ.ವೆಂಕಟಪ್ಪ ಬಿನ್ ಕೆಂಚಪ್ಪ, ಕೆ.ಮುನಿಕೃಷ್ಣಪ್ಪ ಬಿನ್ ಕೆಂಚಪ್ಪ	201/5	0–29	–	0–29
52	ಜಿ.ವೆಂಕಟಪ್ಪ ಬಿನ್ ಕೆಂಚಪ್ಪ, ಕೆ.ಮುನಿಕೃಷ್ಣಪ್ಪ ಬಿನ್ ಕೆಂಚಪ್ಪ	201/6	0–18	–	0–18
53	ಹೆಚ್.ಬಿ.ನಾರಾಯಣ ಸ್ವಾಮಿ ಬಿನ್ ಬಚ್ಚಪ್ಪ, ಆರ್.ನಾಗೇಶ್ ಬಿನ್ ರಾಮಣ್ಣ	203/1ಪಿ	0–06	–	0–06
54	ಆರ್.ನಾಗೇಶ್ ಬಿನ್ ರಾಮಣ್ಣ	203/2ಪಿ	0–05	–	0–05
55	ಎಂ.ಚನ್ನಕೇಶವಮೂರ್ತಿ ಬಿನ್ ಹೆಚ್.ಮುನಿಕೃಷ್ಣಪ್ಪ	204	0–07	–	0–07
56	ಎಂ.ಗೋವಿಂದಸ್ವಾಮಿ ಬಿನ್ ಲೇಟ್ ಮುನಿಕೃಷ್ಣಪ್ಪ	205	1–32	0–02	1–30
57	ಚನ್ನಕೇಶವಮೂರ್ತಿ ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	206/1	2–01	–	2–01
58	ಎಲ್.ಎನ್.ರಾಮಾಂಜಿನಪ್ಪ ಬಿನ್ ನಂಜುಂಡಪ್ಪ, ಎಂ.ಗೋವಿಂದಸ್ವಾಮಿ ಬಿನ್ ಲೇಟ್ ಮುನಿಕೃಷ್ಣಪ್ಪ	206/2	3–15	0–06	3–09
59	ಪಾಪೇಗೌಡ ಬಿನ್ ಲೇಟ್ ತಮ್ಮಣ್ಣಪ್ಪ	207/1	0–31	0–01	0–30
60	ಎಲ್.ಯು.ಹನುಮಂತ ಗೌಡ ಬಿನ್ ಅಶ್ವಥಮ್ಮ	207/2	0–09	0–02	0–07
61	ಮುನಿರಾಜು ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	208/1	1–10	0–04	1–06
62	ಮುನಿರಾಜು ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	208/2ಪಿ	0–09	–	0–09
63	ಚನ್ನಕೇಶವಮೂರ್ತಿ ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	208/4ಪಿ	0–37	–	0–37
64	ಚನ್ನಕೇಶವಮೂರ್ತಿ ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	208/5	1–01	–	1–01
65	ಚನ್ನಕೇಶವಮೂರ್ತಿ ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	208/7	0–13	–	0–13
66	ಮುನಿಸಂಜೀವಪ್ಪ ಮತ್ತು ನರಸಿಂಹಮ್ಮ, ಸಂಜೀವಪ್ಪ ಬಿನ್ ಮದ್ದೂರಪ್ಪ, ನರಸಿಂಹಯ ಬಿನ್ ಮದ್ದೂರಪ್ಪ, ಓಬಳಪ್ಪ ಬಿನ್ ದೊಡ್ಡದಾಸಪ್ಪ, ಮುನಿಶಾಮಪ್ಪ ಬಿನ್ ಆಂಜಿನಪ್ಪ, ಡಿ.ಸಂಜೀವಪ್ಪ ಬಿನ್ ಲೇಟ್ ದೊಡ್ಡಆಂಜಿನಪ್ಪ	209	3–16	0–01	3–15
67	ಎಲ್.ಎನ್.ರಾಮಾಂಜಿನಪ್ಪ ಬಿನ್ ನಂಜುಂಡಪ್ಪ	210	1–17	0–02	1–15
68	ಎಂ.ಆಂಜಿನಪ್ಪ ಬಿನ್ ದೊಡ್ಡಮುನಿಶಾಮಪ್ಪ	211/1	1–10	0–02	1–08
69	ನಾರಾಯಣಸ್ವಾಮಿ ಬಿನ್ ಸುಬ್ಬರಾಯಪ್ಪ	211/2	2–05	0–02	2–03
70	ರುದ್ರಪ್ಪ ಬಿನ್ ರುದ್ರಪ್ಪ, ಎಸ್.ರಾಜಣ್ಣ ಬಿನ್ ಲೇಟ್ ಸಿದ್ದಪ್ಪ, ಎಂ.ಶಿವಲಿಂಗಯ್ಯ ಬಿನ್ ಬಿ.ಎಸ್.ಮರಿಯಪ್ಪ, ಎಲ್.ವಿ.ದೇವರಾಜ್ ಬಿನ್ ವೀರಭದ್ರಪ್ಪ, ಟಿ.ಹನುಮಂತೇಗೌಡ ಬಿನ್ ಎನ್.ಸಿ.ತಮ್ಮಣ್ಣಪ್ಪ	212	2–21	0–03	2–18
71	ಚಿಕ್ಕಮಾದೇವಯ್ಯ ಬಿನ್ ಸುಬ್ಬರಾಯಪ್ಪ, ದೊಡ್ಡಮಹಾದೇವಯ್ಯ ಬಿನ್ ಸುಬ್ಬರಾಯಪ್ಪ	213	8–04	–	8–04
72	ಡಿ.ಸಂಜೀವಪ್ಪ ಬಿನ್ ದೊಡ್ಡಆಂಜಿನಪ್ಪ, ಚನ್ನೇಗೌಡ ಬಿನ್ ದೊಡ್ಡಆಂಜಿನಪ್ಪ	214	3–15	0–03	3–12
73	ಪಿಳ್ಳಣ್ಣ ಬಿನ್ ಚನ್ನರಾಯಪ್ಪ	215	1–10	0–04	1–06
74	ಪಿಳ್ಳಣ್ಣ ಬಿನ್ ಚನ್ನರಾಯಪ್ಪ	216/1	1–22	0–02	1–20
75	ಮುನಿರಾಜು ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	216/2	1–13	0–03	1–10
76	ಎ.ಮುನಿಆಂಜಿನಪ್ಪ ಬಿನ್ ಆಂಜಿನಪ್ಪ, ಕಾಮಾಕ್ಷಿ ಬಿನ್ ಲೇಟ್ ಜಯಮ್ಮ, ಅನಿತ ಕೋಂ ಸತ್ಯನಾರಾಯಣ	217	3–07	0–01	3–06
77	ಹನುಮಂತಪ್ಪ ಬಿನ್ ಹನುಮಂತರಾಯಪ್ಪ, ನಾಗಮ್ಮ ಕೋಂ ಚಿನ್ನಪ್ಪಯ್ಯ	219/1	1–24	0–01	1–23
78	ಹನುಮಂತಪ್ಪ ಬಿನ್ ಹನುಮಂತರಾಯಪ್ಪ	219/2	1–06	–	1–06
79	ಎನ್.ಮೋಹನ್ ಬಿನ್ ಎನ್.ನಾಗಪ್ಪ	219/3	1–32	–	1–32
80	ಪೆದ್ದಯ್ಯ ಬಿನ್ ಕಾಶಿಮುನಿಯಪ್ಪ, ಶಿವಶಂಕರ ಬಿನ್ ಪಿ.ಮುನಿಕೃಷ್ಣಪ್ಪ	219/4	0–24	–	0–24
81	ರವಿಕಲಾ ಕೋಂ ಲೇಟ್ ಹನುಮಂತರಾಯಪ್ಪ	220/1	1–17	–	1–17
82	ನಾಗಮ್ಮ ಕೋಂ ಲೇಟ್ ಚಿನ್ನಪ್ಪಯ್ಯ	220/2	0–32	–	0–32
83	ರವಿಕಲಾ ಕೋಂ ಲೇಟ್ ಹನುಮಂತರಾಯಪ್ಪ	220/3	0–28	–	0–28
84	ಭ.ಹನುಮಂತರಾಯಪ್ಪ	221/1	0–39	0–01	0–38
85	ಎಂ.ರಮೇಶ್ ಬಿನ್ ಲೇಟ್ ಮುನಿಯಪ್ಪ	221/2ಎ	0–15	–	0–15
86	ದೊಡ್ಡಹನುಮಪ್ಪ ಬಿನ್ ಸೊಣ್ಣಪ್ಪ	221/2ಬಿ	0–05	–	0–05
87	ಎಂ.ರಮೇಶ್ ಬಿನ್ ಲೇಟ್ ಮುನಿಯಪ್ಪ	221/3	0–23	–	0–23
88	ಎಂ.ರಮೇಶ್ ಬಿನ್ ಲೇಟ್ ಮುನಿಯಪ್ಪ	221/4	0–08	–	0–08
89	ಹನುಮಂತರಾಯಪ್ಪ ಭಜಂತ್ರಿ	221/5	2–25	–	2–25
90	ಶಾಮಣ್ಣ ಬಿನ್ ಚನ್ನರಾಯಪ್ಪ, ಸುಬ್ಬಣ್ಣ ಬಿನ್ ಚನ್ನರಾಯಪ್ಪ, ಎನ್.ಎ.ಮಂಜುನಾಥ ಬಿನ್ ಅಪ್ಪಯ್ಯಣ್ಣ	222	7–11	0–14	6–37
91	ಸಿ.ಸುಬ್ಬಣ್ಣ ಬಿನ್ ಚನ್ನರಾಯಪ್ಪ	223/1	2–07	0–03	2–04
92	ಸುಬ್ಬಣ್ಣ ಬಿನ್ ಲೇಟ್ ಚನ್ನರಾಯಪ್ಪ	223/2	1–07	0–02	1–05
93	ಸುಬ್ಬಣ್ಣ ಬಿನ್ ಲೇಟ್ ಚನ್ನರಾಯಪ್ಪ	223/3	1–15	0–02	1–13
94	ಡಿ.ಆಂಜಿನಪ್ಪ ಬಿನ್ ದೊಡ್ಡಆಂಜಿನಪ್ಪ, ಚನ್ನೇಗೌಡ ಬಿನ್ ದೊಡ್ಡಆಂಜಿನಪ್ಪ, ಗೌರಮ್ಮ ಕೋಂ ಸಂಜೀವಪ್ಪ	225	1–37	0–05	1–32
95	ಬಿ.ಆಂಜಿನಪ್ಪ ಬಿನ್ ಬಸಪ್ಪ	226	2–09	0–03	2–06
96	ಎಸ್.ಶಾಮಣ್ಣ ಬಿನ್ ಲೇಟ್ ಸಂಜೀವಪ್ಪ	227/1ಎಪಿ	2–39	0–03	2–36
97	ಎನ್.ವೀಣಾ ಕೋಂ ನಾಗಭೂಷಣ್	227/1ಬಿಪಿ	1–18	0–02	1–16
98	ಮಲ್ಲೇಶಯ್ಯ, ಎನ್.ವೀಣಾ ಕೋಂ ನಾಗಭೂಷಣ್	227/2ಪಿ	0–34	0–01	0–33
99	ಆರ್.ನಾಗೇಶ್ ಬಿನ್ ರಾಮಣ್ಣ	228/1	2–09	0–01	2–08
100	ಆರ್.ನಾಗೇಶ್ ಬಿನ್ ರಾಮಣ್ಣ, ಬಿ.ರಾಮಣ್ಣ ಬಿನ್ ಲೇಟ್ ಬಚ್ಚಪ್ಪ	228/2	2–14	–	2–14
101	ಉತ್ತನಹಳ್ಳಿ ಮುನೆಪ್ಪ ಬಿನ್ ಹನುಮಪ್ಪ	229/1	0–35	–	0–35
102	ದೊಡ್ಡಹನುಮಯ್ಯ ಬಿನ್ ದೊಡ್ಡಮುನಿಯಪ್ಪ	229/2	4–21	0–02	4–19
103	ಪಹಣಿ ಲಭ್ಯವಿಲ್ಲ	230/1 230/2 230/3	7–09	0–03	7–06
104	ಮುನಿಮದ್ದೂರಿಗ, ಮುನಿಯಪ್ಪ, ವೆಂಕಟಶಾಮಪ್ಪ ಬಿನ್ ದೊಡ್ಡಆಂಜಿನಪ್ಪ, ಎನ್.ನಂಜುಂಡಪ್ಪ ಬಿನ್ ಲೇಟ್ ನಾಗಪ್ಪ, ಎನ್.ಆನಂದಮೂರ್ತಿ ಬಿನ್ ಲೇಟ್ ನಾಗಪ್ಪ	231/–ಪಿ1	3–23	0–23	3–00
105	ಓಬಳಪ್ಪ ಬಿನ್ ಗಾರೆ ಆಂಜಿನಪ್ಪ, ನಾರಾಯಣಸ್ವಾಮಿ, ಮದೂರಪ್ಪ, ಎಲ್.ವೆಂಕಟೇಶಯ್ಯ ಬಿನ್ ಲೇಟ್ ಉತ್ತನಳ್ಳಪ್ಪ ಉ॥ ಚಿಕ್ಕಮುನಿಯಪ್ಪ	231/–ಪಿ2	3–00	–	3–00
106	ಲಕ್ಷ್ಮೀನಾರಾಯಣ ಬಿನ್ ಕೊಂಡಪ್ಪ, ಆರ್.ಎಂ.ಕೆಂಪಣ್ಣ ಬಿನ್ ಮುನಿಶಾಮಪ್ಪ	231/–ಪಿ3	2–00	–	2–00
107	ಚಿಕ್ಕಚಿನ್ನಪ್ಪ ಬಿನ್ ಗಾರೆಮುನಿಗ, ಸೌಭಾಗ್ಯಮ್ಮ ಕೋಂ ವೆಂಕಟೇಶಪ್ಪ	232	7–16	0–05	7–11
108	ನಂಜಮ್ಮ, ಎಸ್.ಶ್ರೀನಿವಾಸಮೂರ್ತಿ ಬಿನ್ ಶ್ಯಾಮಣ್ಣ	233	2–06	0–03	2–03
109	ಮಲ್ಲಣ್ಣ ಬಿನ್ ದೊಡ್ಡಮುದ್ದಯ್ಯ,	234/1	4–03	–	4–03
110	ಟಿ.ಮುನಿಯಪ್ಪ ಬಿನ್ ಲೇಟ್ ತಪಟಪ್ಪ, ಮುನಿತಾಯಮ್ಮ ಕೋಂ ಲೇಟ್ ಆಂಜಿನಪ್ಪ, ಶ್ರೀನಿವಾಸ ಬಿನ್ ಲೇಟ್ ಆಂಜಿನಪ್ಪ	234/2	2–22	0–17	2–05
111	ಕೃಷ್ಣಪ್ಪ ಬಿನ್ ಮುನಿಶಾಮಪ್ಪ	235/1	0–39	–	0–39
112	ಬಿ.ನಾರಾಯಣಪ್ಪ ಬಿನ್ ಬೈಯ್ಯಣ್ಣ	235/2	1–02	–	1–02
113	ನರಸಿಂಹಯ್ಯ ಉ॥ ಗೊಗ್ಗಯ್ಯ	235/3	2–12	0–05	2–07
114	ಹನುಮಂತರಾಯಪ್ಪ, ಪಿಳ್ಳಣ್ಣ ಬಿನ್ ಲೇಟ್ ಚನ್ನರಾಯಪ್ಪ	236/1	4–02	0–15	3–27
115	ಚನ್ನರಾಯಪ್ಪ ಬಿನ್ ಹನುಮಣ್ಣ, ಸುಬ್ಬಣ್ಣ ಬಿನ್ ಲೇಟ್ ಚನ್ನರಾಯಪ್ಪ, ಪಿಳ್ಳಣ್ಣ ಬಿನ್ ಚನ್ನರಾಯಪ್ಪ	236/2	4–14	–	4–14
116	ದೊಡ್ಡಚಿನ್ನಪ್ಪ ಬಿನ್ ದೊಡ್ಡವೀರಪ್ಪ, ನಾಗರಾಜು ಬಿನ್ ಚಿಕ್ಕಥಿಪ್ಪಯ್ಯ, ಪಾಪಣ್ಣ ಬಿನ್ ದೊಡ್ಡವೀರಪ್ಪ, ಮೋಟಪ್ಪ ಬಿನ್ ದೊಡ್ಡವೀರಪ್ಪ, ಚಿಕ್ಕಬಸಪ್ಪ ಬಿನ್ ದೊಡ್ಡವೀರಪ್ಪ	237	6–36	0–05	6–31
117	ಎಸ್.ಶ್ರೀನಿವಾಸಮೂರ್ತಿ ಬಿನ್ ಶ್ಯಾಮಣ್ಣ	239/1	2–16	0–01	2–15
118	ಮುತ್ತಸ್ವಾಮಿ ಬಿನ್ ವೆಂಕಟಪ್ಪ	239/2	1–16	0–01	1–15
119	ಎಲ್.ಎನ್.ರಾಮಾಂಜಿನಪ್ಪ ಬಿನ್ ನಂಜುಂಡಪ್ಪ	239/3	0–32	0–01	0–31
120	ಹೆಚ್.ರವೀಂದ್ರ ಬಿನ್ ಲೇಟ್ ಹನುಮಂತೇಗೌಡ	239/4	0–23	0–02	0–21
121	ನಂಜಮ್ಮ ಕೋಂ ದೊಡ್ಡವೀರಣ್ಣ	239/5ಎ	1–07	0–01	1–06
122	ಹೆಚ್.ರವೀಂದ್ರ ಬಿನ್ ಲೇಟ್ ಹನುಮಂತೇಗೌಡ	239/5ಬಿ	0–39	–	0–39
123	ಎಲ್.ಎನ್.ರಾಮಾಂಜಿನಪ್ಪ ಬಿನ್ ನಂಜುಂಡಪ್ಪ	239/6	0–23	0–02	0–21
124	ನಂಜಮ್ಮ ಕೋಂ ಲೇಟ್ ದೊಡ್ಡವೀರಣ್ಣ, ಮಂಜುಳ ಬಿನ್ ಚನ್ನರಾಯಪ್ಪ	239/7	1–15	0–01	1–14
125	ಎಲ್.ಯು.ಹನುಮಂತ ಗೌಡ ಬಿನ್ ಅಶ್ವಥಮ್ಮ	240	2–31	–	2–31
126	ಲಕ್ಷ್ಮೀ ಕೋಂ ಆರ್.ನಾಗೇಶ್	241	1–36	–	1–36
127	ಪಹಣಿ ಲಭ್ಯವಿಲ್ಲ	242/1	2–20	–	2–20
128	ಕಾಳಪ್ಪ ಬಿನ್ ಮುನಿಸೊಣ್ಣಪ್ಪ	242/2ಎ	0–38	–	0–38
129	ನಾರಾಯಣಪ್ಪ ಬಿನ್ ಲೇಟ್ ಆಂಜಿನಪ್ಪ	242/2ಬಿ	1–39	–	1–39
130	ಎಂ.ರಮೇಶ್ ಬಿನ್ ಲೇಟ್ ಮುನಿಯಪ್ಪ	242/3	0–22	–	0–22
131	ಎಂ.ರಮೇಶ್ ಬಿನ್ ಲೇಟ್ ಮುನಿಯಪ್ಪ	242/4	0–23	–	0–23
132	ಆಂಜಿನಮ್ಮ ಕೋಂ ಜಗನಾಥ್	243/1	0–38	–	0–38
133	ಸುಬ್ರಮಣಿ ಬಿನ್ ಲೇಟ್ ಆಂಜಿನಪ್ಪ	243/2	1–30	–	1–30
134	ದೊಡ್ಡಮಹದೇವಪ್ಪ ಬಿನ್ ರಾಯಪ್ಪ, ಕೃಷ್ಣಪ್ಪ ಬಿನ್ ಲೇಟ್ ಮುನಿಯಪ್ಪ	243/3	1–22	–	1–22
135	ಲಕ್ಷ್ಮಮ್ಮ ಕೋಂ ಕೃಷ್ಣಪ್ಪ	243/4	1–34	–	1–34
136	ಎಲ್.ಆರ್.ಆನಂದಮೂರ್ತಿ ಬಿನ್ ಎಲ್.ಎನ್.ರಾಮಾಂಜಿನಪ್ಪ	243/5	2–15	–	2–15
137	ಎಸ್.ಗೋಪಾಲಯ್ಯ ಬಿನ್ ಸುಬ್ಬಣ್ಣ	244	2–24	–	2–24
138	ಹೆಚ್.ಬಿ.ವೀರಪ್ಪ, ಹೆಚ್.ವಿ.ಶಿವಣ್ಣ ಬಿನ್ ಬಸಪ್ಪ, ಹೆಚ್.ಬಿ.ಶಿವಲಿಂಗಯ್ಯ, ಹೆಚ್.ಬಿ.ಮರಿಯಪ್ಪ ಬಿನ್ ದೊಡ್ಡಬಸಪ್ಪ, ಹೆಚ್.ಬಿ.ಗಂಗಾಧರಯ್ಯ ಬಿನ್ ಹೆಚ್.ಎನ್.ಬಸಪ್ಪ, ಹೆಚ್.ಬಿ.ಅಂಬಿಕಾ ಕೋಂ ಶಂಕರಗೌಡ	245/1	3–38	0–02	3–36
139	ಮುನಿಯಪ್ಪ ಉ॥ ಮುನಿರಾಜು ಬಿನ್ ಓಬಳಪ್ಪ, ಮುನಿಯಪ್ಪ ಬಿನ್ ಓಬಳಪ್ಪ	245/2	1–21	0–02	1–19
140	ಎಲ್.ವೆಂಕಟೇಶಯ್ಯ ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	246/1	1–15	–	1–15
141	ಎಲ್.ವೆಂಕಟೇಶಯ್ಯ ಬಿನ್ ಲೇಟ್ ಉತ್ತನಳಪ್ಪ ಉ॥ ಚಿಕ್ಕಮುನಿಯಪ್ಪ	246/2	2–19	–	2–19
142	ಎಲ್.ವೆಂಕಟೇಶಯ್ಯ ಬಿನ್ ಲೇಟ್ ಉತ್ತನಳ್ಳಪ್ಪ ಉ॥ ಚಿಕ್ಕಮುನಿಯಪ್ಪ	246/3	1–11	0–01	1–10
143	ಪಹಣಿ ಲಭ್ಯವಿಲ್ಲ	246/4	1–10	0–02	1–08
144	ಎನ್.ನಂಜುಂಡಪ್ಪ ಬಿನ್ ಲೇಟ್ ನಾಗಪ್ಪ, ಎನ್.ಆನಂದಮೂರ್ತಿ ಬಿನ್ ಲೇಟ್ ನಾಗಪ್ಪ	246/5	1–11	0–01	1–10
145	ತಿಮ್ಮ ಬಿನ್ ದಾಸ	246/6	1–07	0–01	1–06
146	ನಂಜಪ್ಪ ಬಿನ್ ಹನುಮಂತಪ್ಪ	246/7	1–04	–	1–04
147	ಎಲ್.ವೆಂಕಟೇಶಯ್ಯ ಬಿನ್ ಲೇಟ್ ಉತ್ತನಳ್ಳಪ್ಪ ಉ॥ ಚಿಕ್ಕಮುನಿಯಪ್ಪ	247/1	3–05	–	3–05
148	ಪಹಣಿ ಲಭ್ಯವಿಲ್ಲ	247/2	2–10	–	2–10
149	ಎಲ್.ಮುನಿರಾಜು ಬಿನ್ ನಾರಾಯಣಸ್ವಾಮಪ್ಪ	247/3	4–19	–	4–19
150	ಎಸ್.ಶ್ಯಾಮಣ್ಣ ಬಿನ್ ಲೇಟ್ ಸಂಜೀವಪ್ಪ	247/4	2–01	0–09	1–32
151	ಎಲ್.ವೆಂಕಟೇಶಯ್ಯ ಬಿನ್ ಲೇಟ್ ಉತ್ತನಳ್ಳಪ್ಪ ಉ॥ ಚಿಕ್ಕಮುನಿಯಪ್ಪ	247/5	0–06	–	0–06
152	ಎನ್.ನಂಜುಂಡಪ್ಪ ಬಿನ್ ಲೇಟ್ ನಾಗಪ್ಪ, ಎನ್.ಆನಂದಮೂರ್ತಿ ಬಿನ್ ಲೇಟ್ ನಾಗಪ್ಪ	248/1	1–20	–	1–20
153	ಚಿಕ್ಕಮಹದೇವಯ್ಯ ಬಿನ್ ಸುಬ್ಬರಾಯಪ್ಪ	248/2	1–27	–	1–27
154	ನಂಜಪ್ಪ ಬಿನ್ ಹನುಮಂತಪ್ಪ, ಎಸ್.ಎಂ.ಚನ್ನಕೇಶವ ಮೂರ್ತಿ ಬಿನ್ ಮುನಿಯಪ್ಪ, ವೆಂಕಟೇಶ ಮತ್ತು ಮೂರ್ತಿ ಬಿನ್ ಲೇಟ್ ಮುನಿಅಂಜಿನಪ್ಪ	248/3	3–01	–	3–01
155	ಸುಬ್ಬರಾಯಪ್ಪ ಬಿನ್ ನಾರಾಯಣಪ್ಪ, ಚಿಕ್ಕಮಹದೇವಯ್ಯ ಬಿನ್ ಸುಬ್ಬರಾಯಪ್ಪ	248/4	2–36	–	2–36
156	ಗೋಮಾಳ	249ಪಿ	25–26 1/2	25–26 1/2	0–0
157	ನಾರಾಯಣಸ್ವಾಮಿ ಬಿನ್ ಸುಬ್ಬರಾಯಪ್ಪ	250/1	3–00	0–18	2–22
158	ವೀರಪ್ಪ ಬಿನ್ ಚಿನ್ನಪ್ಪ, ಮರಿಯಪ್ಪ ಬಿನ್ ಮುನಿಯಪ್ಪ	250/2	4–22	0–18	4–04
159	ವೆಂಕಟೇಶ ಮತ್ತು ಮೂರ್ತಿ ಬಿನ್ ಲೇಟ್ ಮುನಿಆಂಜಿನಪ್ಪ, ರಾಮಾಂಜಿನಪ್ಪ ಬಿನ್ ಸುಬ್ರಯಪ್ಪ, ನಂಜಪ್ಪ ಬಿನ್ ಹನುಮಂತರಾಯಪ್ಪ	250/3	5–36	0–07	5–29
160	ಭ.ಹನುಮಂತರಾಯಪ್ಪ	250/4	4–07	–	4–07
161	ಎನ್.ಮೋಹನ್ ಬಿನ್ ಎನ್.ನಾಗಪ್ಪ	251/1	1–28	–	1–28
162	ಎನ್.ಮೋಹನ್ ಬಿನ್ ಎನ್.ನಾಗಪ್ಪ	251/2	2–15	–	2–15
163	ಎನ್.ಮೋಹನ್ ಬಿನ್ ಎನ್.ನಾಗಪ್ಪ	251/3	1–18	–	1–18
164	ಲಕ್ಷ್ಮಮ್ಮ ಕೋಂ ಎಸ್.ಎ.ತ್ಯಾಗರಾಜು	251/4	2–19	0–02	2–17
165	ಹೆಚ್.ಬಿ.ಗಂಗಾಧರಯ್ಯ ಬಿನ್ ಬಸಪ್ಪ, ಸುವರ್ಣ ಕೋಂ ಲೇಟ್ ಹೆಚ್.ಬಿ. ಮಂಜುನಾಥ	251/5	3–38	0–02	3–36
166	ವೀರಪ್ಪ ಬಿನ್ ದೊಡ್ಡಬಸಪ್ಪ	251/6ಎ	1–00	–	1–00
167	ಸಿ.ಮುನಿಆಂಜಿನಪ್ಪ ಬಿನ್ ಹನುಮಂತಪ್ಪ	251/6ಬಿ	3–04	–	3–04
168	ಮುನೇಗೌಡ ಬಿನ್ ಆಂಜಿನಪ್ಪ, ಕೆ.ಸಿ.ವಿಜಯಕುಮಾರ್ ಬಿನ್ ಪಿ.ಚಂದ್ರಪ್ಪ	252	4–31	–	4–31
169	ಹೆಚ್.ಬಿ.ವೀರಪ್ಪ ಬಿನ್ ಬಸಪ್ಪ	253/1	1–06	–	1–06
170	ನರಸಮ್ಮ ಕೋಂ ಲೇಟ್ ಮುನಿತಿಮ್ಮಯ್ಯ, ಅಕ್ಕಯ್ಯಮ್ಮ ಕೋಂ ನಂಜುಂಡಪ್ಪ, ಹನುಮಕ್ಕ ಕೋಂ ನಂಜುಂಡಪ್ಪ	253/2	2–35	–	2–35
171	ಎಸ್.ಗೋಪಾಲಯ್ಯ ಬಿನ್ ಸುಬ್ಬಣ್ಣ	253/3	1–05	–	1–05
172	ಶೀನಪ್ಪ ಬಿನ್ ನಾರಾಯಣಪ್ಪ, ರತ್ನಮ್ಮ ಕೋಂ ಪ್ರಕಾಶ್ ಮೂರ್ತಿ	254	3–14	–	3–14
173	ಸುಬ್ಬರಾಯಪ್ಪ ಬಿನ್ ನಾರಾಯಣಪ್ಪ	255/1	1–27	–	1–27
174	ಮರಿಬಸಪ್ಪ ಬಿನ್ ಹುಂಡಿಸಿದ್ದಪ್ಪ	255/2	1–37	–	1–37
175	ಚಿಕ್ಕಪ್ಪ ಬಿನ್ ಚಿನ್ನಪ್ಪ	255/3	0–37	–	0–37
176	ಗುಂಡಪ್ಪ ಮೈ॥ಗಾ॥ ತಾಯಿ ಮುನೆಮ್ಮ	256	7–30	0–09	7–21
177	ಪಹಣಿ ಲಭ್ಯವಿಲ್ಲ	257	2–16	–	2–16
178	ಬಿ.ಎನ್.ಜಯಶಂಕರ್ ಬಿನ್ ಬಿ.ಎಂ.ನಾರಾಯಣಪ್ಪ	258	3–11	–	3–11
179	ಎಲ್.ಎನ್.ರಾಮಾಂಜಿನಪ್ಪ ಬಿನ್ ನಂಜುಂಡಪ್ಪ, ಹೆಚ್,ರವೀಂದ್ರ ಬಿನ್ ಲೇಟ್ ಹನುಮಂತೇಗೌಡ	259	3–07	0–03	3–04

ಹೆಸರಘಟ್ಟ ಜಲಾಶಯ: ಒಣಗುತ್ತಿರುವ ಬೆಳೆಗಳು, ರೈತರು ಕಂಗಾಲು

ಕಡಿಮೆಯಾದ ನೀರು ಸಂಗ್ರಹ

• ಬೈಲಮೂರ್ತಿ ಜಿ.

71 ಅಡಿ ಜಲಾಶಯದ ಎತ್ತರ | **1,620** ಹೆಕ್ಟೇರ್ ವಿಸ್ತೀರ್ಣ | **1** ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯ | **0.54** ಟಿಎಂಸಿ ಅಡಿ ಸದ್ಯ ಇರುವ ನೀರಿನ ಸಂಗ್ರಹ

ಹೆಸರಘಟ್ಟ: ಕಳೆದ ವರ್ಷ ಅಕ್ಟೋಬರ್ ಹೊತ್ತಿಗೆ ಕೋಡಿ ಬೀಳುವ ಹಂತಕ್ಕೆ ತಲುಪಿದ್ದ ಹೆಸರಘಟ್ಟ ಜಲಾಶಯದಲ್ಲಿ ಈ ವರ್ಷ ಅರ್ಧದಷ್ಟೂ ನೀರಿಲ್ಲ. ಮುಂಗಾರು ವೈಫಲ್ಯದಿಂದ ಹೀಗಾಗಿದ್ದು, ರೈತರು ಆತಂಕಕ್ಕೀಡಾಗಿದ್ದಾರೆ.

ಇದು ಅರ್ಕಾವತಿ ನದಿ ಪಾತ್ರಕ್ಕೆ ಸೇರಿದೆ. ಈ ಪ್ರದೇಶದಲ್ಲಿ ಉತ್ತಮ ಮಳೆಯಾಗಿ, ಮೇಲ್ಭಾಗದ ಕೆರೆಗಳಾದ ಚನ್ನಾಪುರ, ಮಳೆಕೋಟೆ, ಕೋಡಿಹಳ್ಳಿ, ಕೋನಘಟ್ಟ, ಶಿವಪುರ, ನಾಗರಕೆರೆ, ಮಧುರೆ, ದೊಡ್ಡತುಮಕೂರು, ಬ್ಯಾತ, ಕಾಕೋಳು ಮುಂತಾದ ಕೆರೆಗಳು ತುಂಬಿ ಕೋಡಿ ಬಿದ್ದರಷ್ಟೇ ಹೆಸರಘಟ್ಟ ಜಲಾಶಯಕ್ಕೆ ನೀರು ಹರಿದು ಬರುತ್ತದೆ. ಈ ಬಾರಿ ಅರ್ಕಾವತಿ ಪಾತ್ರದಲ್ಲಿ ಉತ್ತಮ ಮಳೆಯಾಗದೇ, ಕೆರೆಗಳೂ ತುಂಬಿಲ್ಲ.

ಹೆಸರಘಟ್ಟ ಹೋಬಳಿಯಲ್ಲಿ ಮಳೆ ಕೊರತೆಯಿಂದಾಗಿ ಬೆಳೆಗಳು ಒಣಗಿವೆ. ಜಲಾಶಯದಲ್ಲಿಯೂ ನೀರಿನ ಸಂಗ್ರಹ ಕುಸಿದರೆ ಅಂತರ್ಜಲದ ಮೇಲೂ ಪರಿಣಾಮ ಬೀರಲಿದೆ. ಬೇಸಿಗೆ ಹೊತ್ತಿಗೆ ಕೊಳವೆಬಾವಿಗಳು ಬತ್ತಿ ಹೋಗಿ ರೈತರು ಸಂಕಷ್ಟದ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಸ್ಥಳೀಯವಾಗಿ ಕುಡಿಯುವ ನೀರಿಗೂ ತೊಂದರೆ ಎದುರಾಗುತ್ತದೆ ಎಂದು ಸ್ಥಳೀಯ ರೈತ ಮುಖಂಡರು ಆತಂಕ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿಗೆ ನೀರು ಕೊಟ್ಟ ಕೆರೆ

1894ರಲ್ಲಿ ಹೆಸರಘಟ್ಟ ಜಲಾಶಯವನ್ನು ಅಂದಿನ ಮೈಸೂರು ಸಂಸ್ಥಾನದ ದಿವಾನ ಕೆ. ಶೇಷಾದ್ರಿ ಅಯ್ಯರ್ ನಿರ್ಮಿಸಿದ್ದರು. ಈ ಜಲಾಶಯದಿಂದ ಬೆಂಗಳೂರಿಗೆ ನೀರು ಪೂರೈಸಲಾಗುತ್ತಿತ್ತು. ಬೆಂಗಳೂರಿನ ಜನಸಂಖ್ಯೆ ಬೆಳೆದಂತೆಲ್ಲ ಹೆಸರಘಟ್ಟದ ನೀರು ನಗರಕ್ಕೆ ಸಾಲದಂತಾಯಿತು. 1983ರ ನಂತರ ಹೆಸರಘಟ್ಟದಿಂದ ಬೆಂಗಳೂರಿಗೆ ನೀರು ಪೂರೈಸುವುದನ್ನು ನಿಲ್ಲಿಸಲಾಯಿತು.

1994 ರಲ್ಲಿ ಜಲಾಶಯ ಕೋಡಿ ಬಿದ್ದಿತ್ತು. ಅದಾದ ನಂತರ 2022ರಲ್ಲಿ ನೀರು 70 ಅಡಿ ಸಮೀಪಕ್ಕೆ ಬಂದಿತ್ತು. ಕೋಡಿ ಬೀಳಲು 1 ಅಡಿಯಷ್ಟೇ ಕಡಿಮೆ ಇತ್ತು ಎಂದು ಸ್ಥಳೀಯರು ನೆನಪಿಸಿಕೊಂಡರು.

ಜಲಾಶಯಕ್ಕೆ 190ಕ್ಕೂ ಹೆಚ್ಚು ಕೆರೆಗಳಿಂದ ನೀರು ಹರಿದು ಬರುತ್ತದೆ. ಜಲಾಶಯದ ಗರಿಷ್ಠ ಮಟ್ಟ 71 ಅಡಿಯಾಗಿದ್ದು, ನೀರಿನ ಸಂಗ್ರಹ ಸಾಮರ್ಥ್ಯ 1.1 ಟಿಎಂಸಿ ಅಡಿ. ಸದ್ಯ ಜಲಾಶಯದಲ್ಲಿ 0.54 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ ಎಂದು ಜಲ ಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ಆದಿವಾಸಿ ಶಿಕ್ಷಕರ ನೇಮಿಸಲು ಒತ್ತಾಯ

ಬೆಂಗಳೂರು: ರಾಜ್ಯದ 115 ಆಶ್ರಮ ಶಾಲೆಗಳಿಗೂ ಬಿ.ಇಡಿ ಶಿಕ್ಷಣ ಪಡೆದ ಆದಿವಾಸಿ ಸಮುದಾಯದವರನ್ನೇ ಶಿಕ್ಷಕರಾಗಿ ನೇಮಿಸಬೇಕು ಎಂದು ಕಾಡು, ಕಾಡಂಚಿನ ಆದಿವಾಸಿ ಬುಡಕಟ್ಟುಗಳ ಒಕ್ಕೂಟದ ಮುಖಂಡರು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಅವರು, ಎಎನ್‌ಎಂ, ನರ್ಸಿಂಗ್ ಕೋರ್ಸ್ ಮಾಡಿದ ಬುಡಕಟ್ಟು ಯುವಕ-ಯುವತಿಯರಿಗೆ ಆರೋಗ್ಯ ಇಲಾಖೆಯಲ್ಲಿ ಕೆಲಸ ನೀಡ ಬೇಕು. ಅರಣ್ಯ ಹುದ್ದೆಗಳಲ್ಲಿ ಮೀಸಲು ಕಲ್ಪಿಸಲು ಆದೇಶ ಹೊರಡಿಸಬೇಕು ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪಡೆದಿರುವ ಅಮೆರಿಕದ ‘ಅಕ್ಕ’ ಬಳಗದ ಸಂಸ್ಥಾಪಕ ಡಾ. ಅಮರನಾಥ ಗೌಡ ಅವರನ್ನು ಅಮೆರಿಕದ ಆಸ್ಟಿನ್ ನಗರದಲ್ಲಿ ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಇತ್ತೀಚೆಗೆ ಸನ್ಮಾನಿಸಿದರು. ಸೌಮ್ಯನಾಥ ಸ್ವಾಮೀಜಿ, ಅಕ್ಕ ಬಳಗದ ವಿಶ್ವಾಮಿತ್ರ, ಗೋಪಿ ಹಾಗೂ ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಡಾ. ಎಚ್‌.ಎನ್‌. ಕೃಷ್ಣ ಅವರು ಈ ಸಂದರ್ಭದಲ್ಲಿ ಇದ್ದರು

ತರಬೇತಿ ಕೇಂದ್ರ ಸ್ಥಾಪನೆ

ದೇವನಹಳ್ಳಿ: ವಿಮಾನ ನಿಲ್ದಾಣದ ನಿತ್ಯ ಕಾರ್ಯಾಚರಣೆ ಉಸ್ತುವಾರಿ ಜವಾಬ್ದಾರಿ ನಿರ್ವಹಿಸುತ್ತಿರುವ ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ (ಬಿಐಎಎಲ್) 'ವಿಮಾನ ಸುಸ್ಥಿತಿ ಚೇತರಿಕೆ ತರಬೇತಿ ಕೇಂದ್ರ' ಆರಂಭಿಸಿದೆ.

ಮಿಲೇನಿಯಂ ಏರೊ ಡೈನಾಮಿಕ್ಸ್ ಸಂಸ್ಥೆ ಸಹಯೋಗದಲ್ಲಿ ದಕ್ಷಿಣ ಏಷ್ಯಾದ ಮೊದಲ ತರಬೇತಿ ಕೇಂದ್ರ ತೆರೆಯಲಾಗಿದೆ. ವೇಗವಾಗಿ ಬಂದಿಳಿಯುವ ವಿಮಾನಗಳು ರನ್‌ವೇಯಿಂದ ಜಾರಿದಾಗ ತ್ವರಿತವಾಗಿ ಸುಸ್ಥಿತಿಗೆ ತರಲು ಬೇಕಿರುವ ಕೌಶಲವನ್ನು ಪ್ರಶಿಕ್ಷಣಾರ್ಥಿಗಳಿಗೆ ನೀಡಲಾಗುತ್ತದೆ.

ನಿಧನ ವಾರ್ತೆ

ಪುಟ್ಟಸ್ವಾಮಿ

ಬೆಂಗಳೂರು: ಬಸವೇಶ್ವರ ನಗರದ ಕೆಎಚ್‌ಬಿ ಕಾಲೊನಿ ನಿವಾಸಿ ಪುಟ್ಟಸ್ವಾಮಿ(64) ಅವರು ಸೋಮವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು, ಪುತ್ರಿ ಹಾಗೂ ಪತ್ನಿ ಇದ್ದಾರೆ.

ಶಾಂತಿನಗರದ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಸಹಾಯಕರಾಗಿ ಕೆಲಸ ಮಾಡಿ ಅವರು ನಿವೃತ್ತರಾಗಿದ್ದರು. ಸಾರಿಗೆ ನಿಗಮದ ಕೇಂದ್ರ ಕಚೇರಿಯಲ್ಲಿ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು.

ಮಂಗಳವಾರ ಮಧ್ಯಾಹ್ನ ಸುಮನಹಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಜು: ಬೆಂಗಳೂರಿಗೆ ತೆರಳಿ, ಮರಳಿದ ವಿಮಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬೆಳಿಗ್ಗೆ ದಟ್ಟ ಮಂಜು ಆವರಿಸಿದ್ದರಿಂದ ರನ್‌ವೇ ಸ್ಪಷ್ಟವಾಗಿ ಗೋಚರಿಸಲಿಲ್ಲ. ಇದರಿಂದ ಇಂಡಿಗೊ ಸಂಸ್ಥೆಯ ಬೆಂಗಳೂರು-ಹುಬ್ಬಳ್ಳಿ ವಿಮಾನವು ವಾಪಸ್ ಬೆಂಗಳೂರಿಗೆ ತೆರಳಿ, ಮೂರು ಗಂಟೆ ಬಳಿಕ ವಾಪಸ್ ಬಂದಿಳಿದಿದೆ. ವಿಮಾನವು ಬೆಂಗಳೂರಿನಿಂದ ಬೆಳಿಗ್ಗೆ 6.06ಕ್ಕೆ ಹೊರಟು, ಹುಬ್ಬಳ್ಳಿ ಸಮೀಪ ಬೆಳಿಗ್ಗೆ ಸುಮಾರು 7ರ ಸುಮಾರಿಗೆ ಬಂತು. ಆದರೆ, ದಟ್ಟ ಮಂಜು ಆವರಿಸಿದ್ದರಿಂದ ಪೈಲಟ್ ಸುಮಾರು 35 ನಿಮಿಷ ಆಗಸದಲ್ಲೇ ಹಾರಾಟ ನಡೆಸಿದರು. ರನ್‌ವೇ ಸ್ಪಷ್ಟವಾಗಿ ಗೋಚರಿಸದ ಕಾರಣ ವಿಮಾನ ಬೆಂಗಳೂರಿಗೆ ಮರಳಿತು. ‘ಬೆಂಗಳೂರಿನಲ್ಲಿ ಇಂಧನ ಭರ್ತಿ ಮಾಡಿಕೊಂಡು ಹುಬ್ಬಳ್ಳಿಗೆ ವಾಪಸ್ 10.50ಕ್ಕೆ ಬಂದಿಳಿಯಿತು. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಉಪಾಹಾರ ನೀಡಲಾಯಿತು’ ಎಂದು ಇಂಡಿಗೊ ಸಿಬ್ಬಂದಿ ತಿಳಿಸಿದರು.

180	ಮುನಿಯಮ್ಮ ಕೋಂ ಲೇಟ್ ದೊಡ್ಡಮುನಿಯಪ್ಪ	260/1	2–21	0–1	2–20
181	ಎಂ.ದೇವರಾಜು ಬಿನ್ ಮುನಿಶಾಮಪ್ಪ	260/2	3–02	0–02	3–00
182	ಪಾಪೇಗೌಡ ಬಿನ್ ಲೇಟ್ ತಮ್ಮಣ್ಣಪ್ಪ, ಪಿಳ್ಳಣ್ಣ ಬಿನ್ ಚನ್ನರಾಯಪ್ಪ, ಎ.ನಾಗರಾಜು ಬಿನ್ ಆಂಜಿನಪ್ಪ	261	4–22	0–02	4–20
183	ಎಂ.ಗೋವಿಂದಸ್ವಾಮಿ ಲೇಟ್ ಮುನಿಕೃಷ್ಣಪ್ಪ	262	5–08	0–03	5–05
184	ಎಲ್.ಎಸ್.ನಾರಾಯಣಸ್ವಾಮಿ ಬಿನ್ ಲೇಟ್ ಸುಬ್ಬಯ್ಯ, ಎಸ್.ಎಸ್.ಸಿದ್ದಲಿಂಗಯ್ಯ ಬಿನ್ ಲೇಟ್ ಸುಬ್ಬಯ್ಯ, ಎಲ್.ಎಸ್.ತಿಮ್ಮೇಗೌಡ ಬಿನ್ ಲೇಟ್ ಸುಬ್ಬಯ್ಯ	263	3–10	–	3–10
185	ಎಲ್.ಎಸ್.ಸಿದ್ದಲಿಂಗಯ್ಯ ಬಿನ್ ಲೇಟ್ ಸುಬ್ಬಯ್ಯ	264/1	1–10	–	1–10
186	ಗೌರಮ್ಮ ಕೋಂ ರೇವಣ್ಣ, ಆರ್.ಕುಮಾರ, ನಾಗರಾಜು, ಕಮಲಮ್ಮ ಕೋಂ ನಾಗಪ್ಪ	264/2	3–01	–	3–01
187	ಎಲ್.ಜಿ.ಮಂಜುಳ ಕೋಂ ಬಸವರಾಜು, ಎನ್.ಎಸ್.ಮುನೇಗೌಡ ಬಿನ್ ಲೇಟ್ ಸುಬ್ಬಯ್ಯ	265	2–38	0–03	2–35
188	ಡಿ.ಜಯರಾಮಯ್ಯ ಬಿನ್ ದಾಸಪ್ಪ	266/1	0–25	–	0–25
189	ಪಟ್ಟಸ್ವಾಮಪ್ಪ ಬಿನ್ ರಾಮಾಂಜಿನಪ್ಪ	266/2	1–10	–	1–10
190	ಎಸ್.ಶ್ಯಾಮಣ್ಣ ಬಿನ್ ಲೇಟ್ ಸಂಜೀವಪ್ಪ	267/1	2–14	–	2–14
191	ಸಿ.ರಾಮಾಂಜಿನಪ್ಪ ಬಿನ್ ಚನ್ನೇಗೌಡ	267/2	5–17	0–09	5–08
192	ಸುಬ್ಬೇಗೌಡ ಬಿನ್ ಲೇಟ್ ಉತ್ತನಳ್ಳಪ್ಪ ಉ॥ ಚಿಕ್ಕಮುನಿಯಪ್ಪ	267/3	1–0	0–02	0–38
193	ಶಾಮಣ್ಣ ಬಿನ್ ಸಂಜೀವಪ್ಪ	268/1ಪಿ	2–02	0–02	2–00
194	ಪಾಪೇಗೌಡ ಬಿನ್ ತಮ್ಮಣ್ಣ	268/2	2–00	0–01	1–39
195	ಸುಬ್ಬೇಗೌಡ ಬಿನ್ ಲೇಟ್ ಉತ್ತನಳ್ಳಪ್ಪ ಉ॥ ಚಿಕ್ಕಮುನಿಯಪ್ಪ	268/3ಪಿ	1–37	0–01	1–36
196	ಸುಬ್ಬೇಗೌಡ ಬಿನ್ ಲೇಟ್ ಉತ್ತನಳ್ಳಪ್ಪ ಉ॥ ಚಿಕ್ಕಮುನಿಯಪ್ಪ	268/4ಪಿ	0–09	–	0–09
197	ವಿಜಯಕುಮಾರ್ ಬಿನ್ ಶಿವರುದ್ರಪ್ಪ, ಚಿಕ್ಕರುದ್ರಪ್ಪ ಬಿನ್ ದೊಡ್ಡಯ್ಯ, ಕೆ.ಬಸಪ್ಪ ಬಿನ್ ರುದ್ರಪ್ಪ, ಎಲ್.ಎಂ.ಮೂರ್ತಿ ಬಿನ್ ಲೇಟ್ ಮುನಿಆಂಜಿನಪ್ಪ	27/2ಪಿ	1–0	–10	0–30
198	ಮುನಿಗಂಗಯ್ಯ ಬಿನ್ ಪಾಪಯ್ಯ, ಎಲ್.ಆರ್.ವೆಂಕಟೇಶ ಮೂರ್ತಿ ಬಿನ್ ಮುನಿಬೈರಪ್ಪ	274ಪಿ	2–33	0–01	2–32
199	ದೊಡ್ಡಮಹದೇವಪ್ಪ ಬಿನ್ ಸುಬ್ಬರಾಯಪ್ಪ	275/1ಪಿ	1–19	0–02	1–17
200	ಬುಳ್ಳಪ್ಪ ಬಿನ್ ಬುಳ್ಳಪ್ಪ	275/2	0–33	0–02	0–31
201	ಚಿಕ್ಕಪ್ಪಯ್ಯ ಬಿನ್ ಚಿನ್ನಪ್ಪ	275/3ಪಿ	0–14	0–02	0–12
202	ದೇವರಾಜ್ ಬಿನ್ ಸುಬ್ಬಣ್ಣ	276ಪಿ	4–06	0–11	3–35
203	ಸರ್ವಮಂಗಳಮ್ಮ ಕೋಂ ನಂಜಮುನಿಯಪ್ಪ, ಕೃಷ್ಣಪ್ಪ ಬಿನ್ ಆಂಜಿನಪ್ಪ	277	2–27	–	2–27
204	ಆಂಜಿನಪ್ಪ ಬಿನ್ ನಾರಾಯಣಪ್ಪ, ಕೃಷ್ಣಪ್ಪ ಬಿನ್ ಆಂಜಿನಪ್ಪ, ನಾರಾಯಣಪ್ಪ ಬಿನ್ ಆಂಜಿನಪ್ಪ	278ಪಿ	7–16	0–05	7–11
205	ಶಿವಪ್ಪ ಬಿನ್ ರುದ್ರಪ್ಪ	279/1	0–09	0–01	0–08
206	ಬುಳ್ಳಪ್ಪ ಬಿನ್ ಸಂಗಪ್ಪ	279/2	0–08	0–01	0–07
207	ಚಿನ್ನಪ್ಪ ಬಿನ್ ಶಿವಪ್ಪ	279/3	1–05	0–01	1–04
208	ಎಲ್.ಎಂ.ರಾಜಣ್ಣ ಬಿನ್ ಮಲ್ಲಪ್ಪ	279/4	0–33	–	0–33
209	ಆರ್.ಮಲ್ಲೇಶಯ್ಯ ಬಿನ್ ರಾಚೂಟಪ್ಪ	279/5	0–34	–	0–34
210	ಎಂ.ಗೋವಿಂದಸ್ವಾಮಿ ಬಿನ್ ಲೇಟ್ ಮುನಿಕೃಷ್ಣಪ್ಪ	280	1–39	–	1–39
211	ಮಹದೇವಯ್ಯ ಬಿನ್ ಮುನಿಶಾಮಪ್ಪ, ಆಂಜಿನಪ್ಪ ಬಿನ್ ಹನುಮಯ್ಯ, ಆರ್.ನಾಗೇಶ್ ಬಿನ್ ರಾಮಣ್ಣ	283ಪಿ	2–19	0–02	2–17
212	ಎಸ್.ಗೋಪಾಲಯ್ಯ ಬಿನ್ ಸುಬ್ಬಣ್ಣ	284/1	1–18	–	1–18
213	ಚಿಕ್ಕಮುನಿಶಾಮಪ್ಪ ಬಿನ್ ಕೆಂಪಯ್ಯ	284/2	1–30	0–01	1–29
214	ಎಸ್.ಗೋಪಾಲಯ್ಯ ಬಿನ್ ಸುಬ್ಬಣ್ಣ	284/3	1–15	–	1–15
215	ದೇವರಾಜ್ ಬಿನ್ ಬಿ.ಸುಬ್ಬಣ್ಣ	284/4	2–21	0–01	2–20
216	ರಾಮಪ್ಪ ಬಿನ್ ಆಂಜಿನಪ್ಪ	285/1	0–37	0–01	0–36
217	ಸುರೇಶ್ ಬಿನ್ ಆಂಜಿನಪ್ಪ	285/2	0–37	–	0–37
218	ನಂಜುಂಡಪ್ಪ ಬಿನ್ ಮುನಿತಿರುಮಳಪ್ಪ	285/3	0–34	–	0–34
219	ಗಂಡಪ್ಪ, ಆಂಜಿನಪ್ಪ, ಚಿಕ್ಕಮುನೆಪ್ಪ, ತಿಮ್ಮಯ್ಯ	285/4	0–38	–	0–38
220	ಗಂಡಪ್ಪ, ಆಂಜಿನಪ್ಪ, ಚಿಕ್ಕಮುನೆಪ್ಪ, ತಿಮ್ಮಯ್ಯ	286/1	4–13	0–02	4–11
221	ಕೆ.ಮಂಜುನಾಥ ಬಿನ್ ಎಂ.ಕರಿಯಪ್ಪ	286/2	1–25	–	1–25
222	ಮೋಟಕ್ಕ ಕೋಂ ಮಾರಪ್ಪ	286/3	0–10	–	0–10
223	ಮುನಿಶಾಮಪ್ಪ ಬಿನ್ ಆಂಜಿನಪ್ಪ	287/1	1–12	0–01	1–11
224	ಶ್ರೀರಾಮಯ್ಯ, ಆನಂದಮ್ಮ ಉ॥ ಅನಿತಾ ಕೋಂ ಬಿ.ಎನ್.ನಾಗೇಶ್, ಬಿ.ಎನ್.ನಾಗೇಶ್ ಬಿನ್ ಲೇಟ್ ನಾರಾಯಣಪ್ಪ, ಆನಂದಮ್ಮ ಉ॥ ಅನಿತಾ ಕೋಂ ಬಿ.ಎನ್.ನಾಗೇಶ್, ಬಿ.ಎನ್.ನಾಗೇಶ್ ಬಿನ್ ಲೇಟ್ ನಾರಾಯಣಪ್ಪ	287/2	2–12	0–02	2–10
225	ಮುನಿಶಾಮಪ್ಪ ಬಿನ್ ಆಂಜಿನಪ್ಪ	287/3	0–36	0–02	0–34
226	ದೊಡ್ಡಗಿಡ್ಡಪ್ಪ ಬಿನ್ ಮುನಿಯಪ್ಪ, ಚಿಕ್ಕಗಿಡ್ಡಪ್ಪ ಬಿನ್ ಮುನಿಯಪ್ಪ, ಚಿಕ್ಕಮುನಿಶಾಮಪ್ಪ ಬಿನ್ ಕೆಂಪಯ್ಯ, ಆವಲಕೊಂಡಪ್ಪ ಬಿನ್ ಚಿನ್ನಪ್ಪ	288	9–04	0–04	9–00
227	ಎ.ಚಿಕ್ಕಕೇಶವಮೂರ್ತಿ ಬಿನ್ ಆವಲಕೊಂಡಪ್ಪ, ಚಿಕ್ಕಮುನಿಶಾಮಪ್ಪ ಬಿನ್ ಕೆಂಪಯ್ಯ	289	3–29	–	3–29
228	ಚಿಕ್ಕಮುನಿಶಾಮಪ್ಪ ಬಿನ್ ಕೆಂಪಯ್ಯ, ಚಿಕ್ಕಮುನಿಶಾಮಪ್ಪ ಬಿನ್ ಲೇಟ್ ಕೆಂಪಯ್ಯ	290/1	2–16	0–02	2–14
229	ಸುಮಶೇಖರಯ್ಯ ಬಿನ್ ಲೇಟ್ ನಂಜುಂಡಪ್ಪ, ಸುಶೀಲಮ್ಮ ಬಿನ್ ಲೇಟ್ ನೀಲಕಂಠಪ್ಪ	290/2	2–11	0–01	2–10
230	ಕೆಂಚಪ್ಪ ಬಿನ್ ತಾ॥ ಮುನೆಪ್ಪ	290/3	1–37	0–01	1–36
231	ಹನುಮಣ್ಣ ಬಿನ್ ಮುನಿನಂಜಪ್ಪ, ನಂಜಮ್ಮ ಕೋಂ ಬಸಪ್ಪ, ಟಿ.ಮುನಿರಾಜು ಬಿನ್ ತಿರುಮಳಪ್ಪ	291/1ಪಿ	1–02	–	1–02
232	ಬಿ.ಶಿವಲಿಂಗಯ್ಯ ಬಿನ್ ಲೇಟ್ ಎಸ್.ಎಂ.ಬಸವರಾಜಪ್ಪ, ಬಿ.ಜಗದೀಶಯ್ಯ ಬಿನ್ ಲೇಟ್ ಎಸ್.ಎಂ.ಬಸವರಾಜಪ್ಪ	291/2ಪಿ	1–32	–	1–32
233	ಚನ್ನಮ್ಮ ಕೋಂ ಲೇಟ್ ಮುನಿಶಾಮಪ್ಪ	294	2–01	–	2–01
234	ಚನ್ನರಾಯಪ್ಪ ಬಿನ್ ಆಂಜಿನಪ್ಪ	295	2–02	–	2–02
235	ಚಂದ್ರಮ್ಮ ಕೋಂ ಲೇಟ್ ಆವಲಕೊಂಡಪ್ಪ, ಚಿಕ್ಕಗಿಡ್ಡಪ್ಪ ಬಿನ್ ಲೇಟ್ ಮುನಿಯಪ್ಪ	296	2–01	–	2–01
236	ದೊಡ್ಡಗಿಡ್ಡಪ್ಪ ಬಿನ್ ಮುನಿಯಪ್ಪ, ಚಿಕ್ಕಗಿಡ್ಡಪ್ಪ ಬಿನ್ ಲೇಟ್ ಮುನಿಯಪ್ಪ	297	2–00	–	2–00
237	ಎಲ್.ಆರ್.ತನುಜಾ ಬಿನ್ ಎಸ್.ರಾಜಣ್ಣ	298	2–01	0–06	1–35
238	ಮುನಿಯಪ್ಪ ಉ॥ ಮುನಿರಾಜು ಬಿನ್ ಓಬಳಪ್ಪ	306	2–07	0–01	2–06
239	ಪಹಣಿ ಲಭ್ಯವಿಲ್ಲ	307	2–08	0–03	2–05
240	ಸುಗಂಧ ಕೋಂ ಬಾಲಸುಬ್ರಮಣ್ಯಂ, ಸಿ.ವಿ.ಜಿ.ಪ್ರಸಾದ್ ಬಿನ್ ಸಿ.ರಾಧಕೃಷ್ಣಮೂರ್ತಿ, ಕೆ.ಆರ್.ವೆಂಕಟೇಶ್ ಬಿನ್ ವಿಜಯರಾಘವನ್	308	3–20	–	3–20
241	ಜಿ.ಎಂ.ರಾಜಶೇಖರ್ ಬಿನ್ ಕೆ.ಎಸ್.ಮುನಿಸಾಮಪ್ಪ	309	5–26	0–04	5–22
242	ಲಕ್ಷ್ಮೀಪತಯ್ಯ ಬಿನ್ ಕೆ.ಎಂ.ನರಸಪ್ಪ, ಲಕ್ಷ್ಮೀನಾರಾಯಣ ಬಿನ್ ಕೊಂಡಪ್ಪ, ಲಕ್ಷ್ಮೀನಾರಾಯಣ ಬಿನ್ ಕೊಂಡಪ್ಪ	310	5–20	0–02	5–18
243	ವೆಂಕಟ್ರಮಣಪ್ಪ ಬಿನ್ ಮುನಿಸಾಮಪ್ಪ	311	0–34	0–02	0–32
244	ಕದರಪ್ಪ ಬಿನ್ ಸಂಚಲಪ್ಪ	312	0–34	0–02	0–32
245	ವೆಂಕಟರಮಣಪ್ಪ ಬಿನ್ ಚಿಕ್ಕಆಂಜಿನಪ್ಪ	313	0–35	0–02	0–33
246	ಲಕ್ಷ್ಮೀ ಕೋಂ ಆರ್.ನಾಗೇಶ್	314	1–35	0–17	1–18
247	ಕೊಂಡಪ್ಪ	315	0–09	–	0–09
248	ಚಿಕ್ಕಮುನಿತಿಮ್ಮಯ್ಯ	316	0–17	0–06	0–11
249	ದೊಡ್ಡಗಿಡ್ಡಪ್ಪ	317	0–07	–	0–07
250	ಚಿಕ್ಕಗಿಡ್ಡಪ್ಪ	318	0–23	–	0–23
251	ಕೊಂಡಯ್ಯ ಬಿನ್ ನನ್ನೋನು	319	0–05	–	0–05
252	ಆಂಜಿನಪ್ಪ ಬಿನ್ ಜುಲೋನು	320	0–06	–	0–06
253	ಮುನಿಶಾಮಿ ಬಿನ್ ರಾಮಯ್ಯ	321	0–04	–	0–04
		ಒಟ್ಟು	**578–10½**	**64–04½**	**514–06**

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭದಾರರು/ಹಿತಾಸಕ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತಿ ಅಂಚೆ ಮೂಲಕ ರವಾನಿಸಲಾಗಿತ್ತು. ಕೆಲವು ಭೂಮಾಲೀಕರ ವಿಳಾಸ ತಿಳಿದು ಬಂದಿಲ್ಲವಾದ್ದರಿಂದ ಅಂಚೆ ಲಕೋಟೆಗಳ ಮೇಲೆ ಅಂಚೆ ಇಲಾಖೆಯವರು ಷರಾ ಬರೆದು ಈ ಕಛೇರಿಗೆ ಹಿಂದಿರುಗಿಸಿರುತ್ತಾರೆ. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕುದಾರರುಗಳು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ 1966ರ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯಪತ್ರದಲ್ಲಿ ಈ ಪ್ರಕಟಣೆಗೊಂಡ **30 ದಿನಗಳೊಳಗಾಗಿ** ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಮೇಲ್ಕಂಡ ಗ್ರಾಮದ ಜಮೀನುಗಳ ವಿಚಾರಣೆಯನ್ನು ಕೆಳಕಂಡ ದಿನಾಂಕಗಳಂದು ನಿಗದಿಪಡಿಸಲಾಗಿದೆ.

ಕ್ರ. ಸಂ.	ಗ್ರಾಮದ ಹೆಸರು	ಗೆಜೆಟ್ ಕ್ರಮ ಸಂಖ್ಯೆ		ಸರ್ವೆ ನಂಬರ್		ವಿಚಾರಣಾ ದಿನಾಂಕ ಮತ್ತು ಸಮಯ
		ಇಂದ	ವರೆಗೆ	ಇಂದ	ವರೆಗೆ	
1	ಲಿಂಗನಹಳ್ಳಿ	1	60	10/1	207/2	16.10.2023 ಬೆಳಿಗ್ಗೆ 11.00 ಗಂಟೆ
		61	120	208/1	239/4	17.10.2023 ಬೆಳಿಗ್ಗೆ 11.00 ಗಂಟೆ
		121	180	239/5ಎ	259	18.10.2023 ಬೆಳಿಗ್ಗೆ 11.00 ಗಂಟೆ
		181	253	260/2	321	19.10.2023 ಬೆಳಿಗ್ಗೆ 11.00 ಗಂಟೆ

ಮೇಲ್ಕಂಡ ದಿನಾಂಕದಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.

ವಾಸಾಸಂಇ/ಉನಿ-ಸಿ.ಪಿ/1641/ಕೆಎಸ್‌ಎಂಸಿಎ/2023-24 **ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ**

ಭಾರಿ ಮಳೆಯಿಂದ ಬೆಳ್ಳಂದೂರಿನಲ್ಲಿ ಮನೆಯೊಂದಕ್ಕೆ ಕಾಲುವೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು.

ಎಚ್‌ಬಿಆರ್ ಲೇಔಟ್‌ನ 5ನೇ ಬ್ಲಾಕ್ ರಸ್ತೆಯೊಂದು ಜಲಾವೃತಗೊಂಡಿತ್ತು.

ಬೆಳ್ಳಂದೂರು ರಸ್ತೆಯಲ್ಲಿ ನೀರಿನಲ್ಲಿ ಕಂಡುಬಂದ ಹಾವು.

ಜೆ.ಸಿ ರಸ್ತೆಯಲ್ಲಿ ಮ್ಯಾನ್ ಹೋಲ್‌ನಿಂದ ನೀರು ಹೊರಬರುತ್ತಿತ್ತು.

ಕರಿಯಮ್ಮನ ಅಗ್ರಹಾರ: ನೀರಿನಲ್ಲಿ ಸಿಲುಕಿದ್ದ 50 ಮಂದಿ ರಕ್ಷಣೆ, ಎಚ್‌ಬಿಆರ್ ಲೇಔಟ್‌ನ 5ನೇ ಬ್ಲಾಕ್ ಜಲಾವೃತ

ಮನೆಗೆ ನುಗ್ಗಿದ ನೀರು: ರಸ್ತೆ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಕೆಲವು ಭಾಗಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಸಂಜೆ ಆರಂಭವಾಗಿದ್ದ ಮಳೆಯು ಮಂಗಳವಾರ ನಸುಕಿನವರೆಗೂ ನಿರಂತರವಾಗಿ ಸುರಿದಿದೆ. ಪರಿಣಾಮವಾಗಿ ಕೆಳಸೇತುವೆಗಳು ಸೇರಿದಂತೆ ಹಲವು ಜಂಕ್ಷನ್‌ಗಳು, ಪ್ರಮುಖ ರಸ್ತೆಗಳು ಜಲಾವೃತಗೊಂಡಿದ್ದವು.

ಕರಿಯಮ್ಮನ ಅಗ್ರಹಾರದಲ್ಲಿ ರಾಜಕಾಲುವೆ ನೀರು ಉಕ್ಕಿ ಅವಾಂತರ ಸೃಷ್ಟಿಯಾಗಿತ್ತು. ಕಾರು, ಬೈಕ್‌ನಲ್ಲಿ ಬಂದ 50 ಮಂದಿ ನೀರಿನಲ್ಲಿ ಸಿಲುಕಿದ್ದರು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಹಗ್ಗದ ಸಹಾಯದಿಂದ ಎಲ್ಲರನ್ನೂ ರಕ್ಷಿಸಿದರು.

ಯಮಲೂರಿನಿಂದ ಕರಿಯಮ್ಮನ ಅಗ್ರಹಾರಕ್ಕೆ ತೆರಳುವ ರಸ್ತೆ ಬಂದ್ ಆಗಿತ್ತು. ನೀರಿನಲ್ಲಿ ಕಾರು, ಬೈಕ್ ಗಳು ಸಿಲುಕಿಕೊಂಡಿದ್ದವು. ಬ್ಯಾರಿಕೇಡ್ ಹಾಕಿ ಈ ರಸ್ತೆ ಸಂಚಾರ ಬಂದ್ ಮಾಡಲಾಗಿತ್ತು. ಮಂಗಳವಾರ ಮಧ್ಯಾಹ್ನ ಬಳಿಕ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ನಗರದ ಪ್ರಮುಖ ರಸ್ತೆಗಳಲ್ಲಿ ನೀರು ಆವರಿಸಿದ್ದ ಪರಿಣಾಮ ಮಂಗಳವಾರ ಮಧ್ಯಾಹ್ನದವರೆಗೂ ವಾಹನಗಳು ಪರ್ಯಾಯ ಮಾರ್ಗದಲ್ಲೇ ಸಂಚರಿಸಬೇಕಾಯಿತು. ಗಾಳಿ, ಮಳೆಗೆ ಅಲ್ಲಲ್ಲಿ ಮರಗಳು ಹಾಗೂ ವಿದ್ಯುತ್ ಕಂಬಗಳು ಉರುಳಿದ್ದವು. ಸಂಚಾರ ಪೊಲೀಸರು ಮರಗಳನ್ನು ತೆರವುಗೊಳಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಬೆಳ್ಳಂದೂರಿನಲ್ಲಿ ಕಾಲುವೆ ನೀರು ಉಕ್ಕಿ ಹರಿದಿತ್ತು. ಸಮೀಪದಲ್ಲಿದ್ದ ಹಲವು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು.

ಬನಶಂಕರಿಯ ಮುಖ್ಯರಸ್ತೆ ಬಿಡಿಎ ಕಾಂಪ್ಲೆಕ್ಸ್ ಬಳಿ ಬೃಹತ್ ಮರವೊಂದು ರಸ್ತೆಗೆ ಉರುಳಿತ್ತು. ಜೆ.ಸಿ.ರಸ್ತೆಯಲ್ಲಿ ನೀರು ನಿಂತು ಸಮಸ್ಯೆ ಉಂಟಾಗಿತ್ತು. ಬೆಳ್ಳಂದೂರು, ಹೊರಮಾವು ಪ್ರದೇಶದ ಜಲಾವೃತ ರಸ್ತೆಗಳಲ್ಲಿ ಹಾವುಗಳು ಓಡಾಟ ನಡೆಸಿ ಸ್ಥಳೀಯರಲ್ಲಿ ಆತಂಕ ಮೂಡಿಸಿದ್ದವು.

ಬೆಳ್ಳಂದೂರಿನಲ್ಲಿ ಜಲಾವೃತ ರಸ್ತೆಯಲ್ಲಿ ಬೈಕ್ ಸವಾರರು ತೆರಳಿದರು. ಪ್ರಜಾವಾಣಿ ಚಿತ್ರಗಳು

ಕೆಂಗೇರಿ, ನಾಗಸಂದ್ರ, ದಾಬಸ್‌ಪೇಟೆ, ಎಚ್.ಗೊಲ್ಲಹಳ್ಳಿ, ಹೆಮ್ಮಿಗೆಪುರ, ಜಾಲಹಳ್ಳಿ, ಯಲಹಂಕ, ಜ್ಞಾನಭಾರತಿ, ರಾಜರಾಜೇಶ್ವರಿ ನಗರ, ಎಚ್‌ಎಎಲ್ ವಿಮಾನ ನಿಲ್ದಾಣ, ನಾಯಂಡಹಳ್ಳಿ, ಸಾರಕ್ಕಿ, ದೊರೆಸಾನಿಪಾಳ್ಯ, ರಾಜ್‌ಮಹಲ್ ಗುಟ್ಟಹಳ್ಳಿ, ನಾಗಾಪುರ, ಬೆಳ್ಳಂದೂರು, ಮಾರತಹಳ್ಳಿ, ಪೀಣ್ಯ ಕೈಗಾರಿಕಾ ಪ್ರದೇಶ, ಅರಕೆರೆ, ಬೇಗೂರು, ಹೆಗ್ಗನಹಳ್ಳಿ, ಕೋರಮಂಗಲ, ವಿದ್ಯಾಪೀಠ, ಬಸವನಗುಡಿ, ಕುಮಾರಸ್ವಾಮಿ ಲೇಔಟ್, ದಯಾನಂದನಗರ, ಸಂಪಂಗಿರಾಮನಗರ, ಕೋಣನಕುಂಟೆ, ವಿವಿ ಪುರ, ನಂದಿನಿಲೇಔಟ್, ವರ್ತೂರು, ಚಿಕ್ಕಸಂದ್ರದಲ್ಲಿ ಭಾರಿ ಮಳೆಯಾಗಿ ಅಲ್ಲಲ್ಲಿ ಸಮಸ್ಯೆ ಸೃಷ್ಟಿಯಾಗಿತ್ತು.

ಲೀ ಮೆರಿಡಿಯನ್ ಬಳಿಯ ಕೆಳಸೇತುವೆ ಜಲಾವೃತಗೊಂಡಿತ್ತು. ಶೇಷಾದ್ರಿಪುರ ರೈಲ್ವೆ ಕೆಳಸೇತುವೆಯಲ್ಲೂ ನೀರು ನಿಂತಿತ್ತು. ಎಲೆಕ್ಟ್ರಾನಿಕ್ ಸಿಟಿಯಿಂದ ಚಂದಾಪುರದ ವರೆಗೆ ವಾಹನ ದಟ್ಟಣೆ ಉಂಟಾಗಿತ್ತು. ಕಾರು, ಬಸ್ ಚಾಲಕರು ಹಾಗೂ ಬೈಕ್ ಸವಾರರು ಪರದಾಡಿದರು.

ಮೆಜೆಸ್ಟಿಕ್, ಕೆ.ಆರ್.ಮಾರುಕಟ್ಟೆ, ಸದಾಶಿವನಗರ, ಶಾಂತಿನಗರದಲ್ಲೂ ಭಾರೀ ಮಳೆಯಾಗಿದ್ದು ವ್ಯಾಪಾರಿಗಳು ಪರದಾಡಿದರು. ಹೊಸೂರು ರಸ್ತೆಯ ರೂಪೇನ ಅಗ್ರಹಾರ, ಹರಳೂರು ಜಂಕ್ಷನ್, ನಾಯಂಡಹಳ್ಳಿ, ಶೇಷಾದ್ರಿಪುರಂ, ರೈಲ್ವೆ ಕೆಳಸೇತುವೆ, ವಿಜಯನಗರದ ಧನಂಜಯ ಪ್ಯಾಲೇಸ್ ಬಳಿ ಜಲಾವೃತವಾಗಿತ್ತು.

ಎಚ್‌ಬಿಆರ್ ಲೇಔಟ್‌ನ 5ನೇ ಬ್ಲಾಕ್ ಜಲಾವೃತಗೊಂಡಿತ್ತು. ಇದರಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದರು. ರಾಜಕಾಲುವೆಯಲ್ಲಿ ನೀರು ಉಕ್ಕಿ ಹರಿದು ಹಲವು ಮನೆಗಳಿಗೆ ನುಗ್ಗಿತ್ತು. 5ನೇ ಬ್ಲಾಕ್‌ನಲ್ಲಿ ಪ್ರವಾಹದ ಸಮಸ್ಯೆ ಬಹಳ ವರ್ಷಗಳಿಂದ ಇದೆ. ಗೆದ್ದಲಹಳ್ಳಿ ರೈಲು ಮಾರ್ಗದ ಕೆಳಗಿನ ರಾಜಕಾಲವೆಯನ್ನು ವಿಸ್ತರಣೆ ಮಾಡಬೇಕಿದೆ ಎಂದು ಸ್ಥಳೀಯರು ಆಗ್ರಹಿಸಿದರು.

ಮಳೆ ಪ್ರಮಾಣ (ಮಿ.ಮೀಗಳಲ್ಲಿ)	
ಕೆಂಗೇರಿ	94.5
ಎಚ್.ಗೊಲ್ಲಹಳ್ಳಿ, ಹೆಮ್ಮಿಗೆಪುರ	86.5
ಜ್ಞಾನಭಾರತಿ, ರಾಜರಾಜೇಶ್ವರಿ ನಗರ	76.5
ಎಚ್‌ಎಎಲ್ ವಿಮಾನ ನಿಲ್ದಾಣ	75
ನಾಯಂಡಹಳ್ಳಿ	70.5
ಸಾರಕ್ಕಿ, ದೊರೆಸಾನಿಪಾಳ್ಯ	70
ರಾಜ್‌ಮಹಲ್ ಗುಟ್ಟಹಳ್ಳಿ	66
ನಾಗಾಪುರ	65
ಬೆಳ್ಳಂದೂರು, ಮಾರತಹಳ್ಳಿ	64
ಪೀಣ್ಯ ಕೈಗಾರಿಕಾ ಪ್ರದೇಶ	63
ಅರಕೆರೆ, ಬೇಗೂರು	62
ಹೆಗ್ಗನಹಳ್ಳಿ, ಕೋರಮಂಗಲ	61
ವಿದ್ಯಾಪೀಠ, ಬಸವನಗುಡಿ, ಕುಮಾರಸ್ವಾಮಿ ಲೇಔಟ್, ಯಾನಂದನಗರ	60.5
ಸಂಪಂಗಿರಾಮನಗರ	56

ಸುದ್ದಿ 2 ನಿಮಿಷ

ಲಿವರ್ ಡಾಕ್ ಎಕ್ಸ್ ಕಾರ್ಪ್ ಖಾತೆ ಮರುಸ್ಥಾಪನೆಗೆ ಹೈಕೋರ್ಟ್ ಅಸ್ತು

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ‘ದಿ ಲಿವರ್ ಡಾಕ್‘ ಎಂದು ಪ್ರಸಿದ್ಧಿಯಾಗಿರುವ ಭಾರತೀಯ ಡಾ. ಸಿರಿಯಾಕ್ ಅಬ್ಬಿ ಫಿಲಿಪ್ಸ್ ಅವರ ಎಕ್ಸ್ ಕಾರ್ಪ್ (ಹಿಂದಿನ ಟ್ವಿಟರ್) ಖಾತೆ ಪುನರ್ ಸ್ಥಾಪನೆಗೆ ಹೈಕೋರ್ಟ್ ಅಸ್ತು ಎಂದಿದೆ.

‘ಹಿಮಾಲಯ ವೆಲ್‌ನೆಸ್ ಕಂಪನಿ‘ ದಾಖಲಿಸಿರುವ ಮಾನಹಾನಿ ದಾವೆ ಪರಿಗಣಿಸಿ ನಗರದ ಸಿವಿಲ್ ನ್ಯಾಯಾಲಯ ಡಾ.ಫಿಲಿಪ್ಸ್ ಅವರ ಖಾತೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸುವಂತೆ ಮಧ್ಯಂತರ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಫಿಲಿಪ್ಸ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸಿವಿಲ್ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಮಾರ್ಪಾಡು ಮಾಡಿ ಆದೇಶಿಸಿದೆ.

‘ಅರ್ಜಿದಾರರು ಹಿಮಾಲಯ ವೆಲ್‌ನೆಸ್ ಕಂಪನಿ ಮತ್ತು ಅದರ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಮಾಡಿರುವ ಅವಹೇಳನಕಾರಿ ಟ್ವೀಟ್‌ಗಳನ್ನು ಮರೆಮಾಚಲು ಡಾ.ಫಿಲಿಪ್ಸ್ ಪರ ವಕೀಲರು ಒಪ್ಪಿರುವ ಕಾರಣ ಅವರ ಎಕ್ಸ್ ಕಾರ್ಪ್ ಖಾತೆ ಪುನರ್ ಸ್ಥಾಪನೆಗೆ ಅನುಮತಿಸಲಾಗಿದೆ‘ ಎಂದು ನ್ಯಾಯಪೀಠ ತಿಳಿಸಿದೆ. ವಿಚಾರಣೆಯನ್ನು ನವೆಂಬರ್ 2ನೇ ವಾರಕ್ಕೆ ಮುಂದೂಡಲಾಗಿದೆ.

ಸುಳ್ಳು ಜಾತಿ ಪ್ರಮಾಣ ಪತ್ರ: ನಿರೀಕ್ಷಣಾ ಜಾಮೀನು ನಿರಾಕರಣೆ

ಬೆಂಗಳೂರು: ಪರಿಶಿಷ್ಟ ಜಾತಿಗೆ ಸೇರಿರುವುದಾಗಿ ಪ್ರಮಾಣ ಪತ್ರ ಪಡೆದು ಮೀಸಲಾತಿ ಅಡಿಯಲ್ಲಿ ಸಹಾಯಕ ಕನ್ನಡ ಶಿಕ್ಷಕಿ ಹುದ್ದೆ ಪಡೆಯಲು ಮುಂದಾದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಹಿಂದುಳಿದ ವರ್ಗಗಳ ಮೊಗೇರ ಜಾತಿಗೆ ಸೇರಿದ ಶಿಕ್ಷಕಿಯೊಬ್ಬರಿಗೆ ನಿರೀಕ್ಷಣಾ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಬಂಗೆರೆ ನಿವಾಸಿ ಸರಸ್ವತಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರು ಹಿಂದುಳಿದ ವರ್ಗಕ್ಕೆ ಸೇರಿದ್ದು, ಪರಿಶಿಷ್ಟ ಜಾತಿಯ ಪ್ರಮಾಣ ಪತ್ರ ಸಲ್ಲಿಸುವ ಮೂಲಕ ತಪ್ಪೆಸಗಿರುವ ಅಂಶ ಮೇಲ್ನೋಟಕ್ಕೆ ಸಾಬೀತಾಗಿದೆ. ಹೀಗಾಗಿ, ನಿರೀಕ್ಷಣಾ ಜಾಮೀನು ನೀಡಲಾಗದು‘ ಎಂದು ನ್ಯಾಯಪೀಠ ಅರ್ಜಿ ವಜಾಗೊಳಿಸಿದೆ.

ಪ್ರಕರಣವೇನು?: ಪರಿಶಿಷ್ಟ ಜಾತಿಗೆ ಸೇರಿರುವುದಾಗಿ ಸರಸ್ವತಿ ಪ್ರಮಾಣ ಪತ್ರ ಸಲ್ಲಿಸಿದ್ದರು. ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ನಡೆಸಿದ ಪರಿಶೀಲನೆ ವೇಳೆ ಅವರು, ತಹಶೀಲ್ದಾರ್ ಕಚೇರಿಗೆ ಸುಳ್ಳು ಮಾಹಿತಿ ನೀಡಿ ಜಾತಿ ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ ಎಂಬ ಆರೋಪ ಬಂದಿತ್ತು. ಈ ಕಾರಣಕ್ಕಾಗಿ ತಹಶೀಲ್ದಾರ್ ಅವರ ಜಾತಿ ಪ್ರಮಾಣ ಪತ್ರ ರದ್ದುಗೊಳಿಸಿದ್ದರು.

ಈ ಸಂಬಂಧ ಜಿಲ್ಲಾ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ದಾಖಲಿಸಿದ್ದರು. ತನಿಖೆ ನಡೆಸಿದ್ದ ಪೊಲೀಸರು ಕಾರವಾರದ 2ನೇ ಜಿಲ್ಲಾ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯ ನಿರೀಕ್ಷಣಾ ಜಾಮೀನು ನಿರಾಕರಿಸಿತ್ತು.

ಬಿಬಿಎಂಪಿ ಮಾರ್ಷಲ್ ಹುದ್ದೆ 200 ಮಂದಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮಾರ್ಷಲ್ ಹುದ್ದೆ ಕೊಡಿಸುವುದಾಗಿ ಆಮಿಷವೊಡ್ಡಿ ಸುಮಾರು 200 ಯುವಕರಿಂದ ಹಣ ಪಡೆದು ವಂಚಿಸಲಾಗಿದ್ದು, ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೊಸಕೋಟೆ ತಾಲ್ಲೂಕಿನ ನಿವಾಸಿಯಾಗಿರುವ ಬಿ.ಕಾಂ ವಿದ್ಯಾರ್ಥಿಯೊಬ್ಬರು ವಂಚನೆ ಸಂಬಂಧ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಹರ್ಷ ಮತ್ತು ಅರುಂಧತಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಿಬಿಎಂಪಿಯಲ್ಲಿ ಡಾಟಾ ಎಂಟ್ರಿ ಆಪರೇಟರ್ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದ ಹರ್ಷ, ದೂರುದಾರರನ್ನು ಪರಿಚಯಿಸಿಕೊಂಡಿದ್ದ. ಬಿಬಿಎಂಪಿಯಲ್ಲಿ ಮಾರ್ಷಲ್ ಹುದ್ದೆಗಳು ಖಾಲಿ ಇದ್ದು, ₹ 3 ಸಾವಿರ ನೀಡಿದರೆ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದ. ಅದನ್ನು ನಂಬಿದ್ದ ದೂರುದಾರ, ₹ 3 ಸಾವಿರ ನೀಡಿದ್ದರು. ಹಣ ಪಡೆದಿದ್ದ ಹರ್ಷ, ಬೇರೆ ಯಾರಿಗಾದರೂ ಕೆಲಸ ಬೇಕಿದ್ದರೆ ತಿಳಿಸುವಂತೆ ಹೇಳಿದ್ದ.’

‘ದೂರುದಾರ, ಮಾರ್ಷಲ್ ಹುದ್ದೆ ಖಾಲಿ ಇರುವ ಬಗ್ಗೆ ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ನಂತರ, 53 ಯುವಕರು ಆರೋಪಿಗೆ ಒಟ್ಟು ₹ 1.53 ಲಕ್ಷ ನೀಡಿದ್ದರು. ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಸಹ ಕೊಟ್ಟಿದ್ದರು. ಇದಾದ ನಂತರ, ಆರೋಪಿ ನಕಲಿ ನೇಮಕಾತಿ ಆದೇಶ ಪತ್ರ ನೀಡಿದ್ದ. ಯುವಕರು, ಕೆಲಸಕ್ಕೆ ಸೇರಲು ಬಿಬಿಎಂಪಿಗೆ ಹೋದಾಗ ಆದೇಶ ಪ್ರತಿ ನಕಲಿ ಎಂಬುದು ಗೊತ್ತಾಗಿತ್ತು. ಇದುವರೆಗೂ ಸುಮಾರು 200 ಯುವಕರಿಂದ ಹಣ ಪಡೆದು ವಂಚಿಸಿರುವ ಮಾಹಿತಿ ಇರುವುದಾಗಿ ದೂರುದಾರರು ಆರೋಪಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಲೈಂಗಿಕ ದೌರ್ಜನ್ಯ: ಬಂಧನ

ಬೆಂಗಳೂರು: ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ ಯುವತಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಈ ಸಂಬಂಧ ಗುತ್ತಿಗೆದಾರರೊಬ್ಬರನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಅ. 7ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ 23 ವರ್ಷದ ಯುವತಿ ದೂರು ನೀಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಯಾಗಿರುವ ಗುತ್ತಿಗೆದಾರನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಯುವತಿ ಹಾಗೂ ಸ್ನೇಹಿತೆಯರು ಊಟಕ್ಕಾಗಿ ಚರ್ಚ್‌ಸ್ಟ್ರೀಟ್‌ಗೆ ಬಂದಿದ್ದರು. ಊಟ ಮುಗಿಸಿ ಮನೆಗೆ ಹೋಗಲು ಕ್ಯಾಬ್‌ಗಾಗಿ ಕಾಯುತ್ತಿದ್ದರು. ಅದೇ ಸಂದರ್ಭದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿ, ಯುವತಿಯನ್ನು ತಬ್ಬಿಕೊಂಡು ಲೈಂಗಿಕ ದೌರ್ಜನ್ಯ ಎಸಗಿದ್ದ. ಅಂಗಾಂಗಗಳನ್ನು ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ’ ಎಂದು ತಿಳಿಸಿವೆ.

₹470 ಕೋಟಿ ವಂಚನೆ, ₹201 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ಅಪರಾಧಕ್ಕೆ ಸಂಬಂಧಪಟ್ಟಂತೆ ಈ ವರ್ಷದ ಜನವರಿಯಿಂದ ಸೆಪ್ಟೆಂಬರ್‌ವರೆಗೆ 12,615 ಪ್ರಕರಣಗಳು ದಾಖಲಾಗಿದ್ದು, ವಂಚಕರು ದೋಚಿದ್ದ ₹ 201 ಕೋಟಿಯನ್ನು ಪೊಲೀಸರು ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ಕಮಿಷನರ್ ಬಿ. ದಯಾನಂದ್, ‘ಬೆಂಗಳೂರಿನಲ್ಲಿ 9 ತಿಂಗಳಿನಲ್ಲಿ ₹ 470 ಕೋಟಿಯಷ್ಟು ವಂಚನೆಯಾಗಿದೆ. ಈ ಪೈಕಿ ತ್ವರಿತ ಕಾರ್ಯಾಚರಣೆ ಕೈಗೊಂಡು ಆರೋಪಿಗಳ ಖಾತೆಗಳಲ್ಲಿದ್ದ ₹ 201 ಕೋಟಿಯನ್ನು ಜಪ್ತಿ ಮಾಡಲಾಗಿದೆ’ ಎಂದರು.

‘ಕೆಲಸ–ಉದ್ಯಮ ಆರಂಭಿಸುವ ಆಮಿಷ, ಡೆಬಿಟ್–ಕ್ರೆಡಿಟ್ ಕಾರ್ಡ್, ಸಾಲದ ಆ್ಯಪ್, ಸಾಮಾಜಿಕ ಮಾಧ್ಯಮಗಳ ಮೂಲಕ ಸಂಪರ್ಕಿಸಿ ವಂಚನೆ, ಮದುವೆ ಆಮಿಷ, ಕ್ರಿಪ್ಟೊ ಕರೆನ್ಸಿ ಹೂಡಿಕೆ... ಹೀಗೆ ನಾನಾ ಹೆಸರಿನಲ್ಲಿ ಸೈಬರ್ ವಂಚಕರು ಜನರಿಂದ ಹಣ ಪಡೆದು ಮೋಸ ಮಾಡುತ್ತಿದ್ದಾರೆ’ ಎಂದು ಅವರು ಹೇಳಿದರು.

‘ಸೈಬರ್ ಅಪರಾಧಗಳ ತಡೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಜನರಲ್ಲೂ ಜಾಗೃತಿ ಮೂಡಿಸಲಾಗುತ್ತಿದೆ. ಜನರು ಅಪರಿಚಿತರ ಜೊತೆ ವ್ಯವಹರಿಸುವಾಗ ಎಚ್ಚರಿಕೆ ವಹಿಸಬೇಕು’ ಎಂದು ಹೇಳಿದರು.

₹ 27.68 ಕೋಟಿ ಹಸ್ತಾಂತರ: ‘ವಂಚಕರಿಂದ ಜಪ್ತಿ ಮಾಡಿರುವ ಹಣದ ಪೈಕಿ ₹ 27.68 ಕೋಟಿಯನ್ನು ಸಂತ್ರಸ್ತರಿಗೆ ಹಸ್ತಾಂತರ ಮಾಡಲಾಗಿದೆ’ ಎಂದು ಬಿ. ದಯಾನಂದ್ ತಿಳಿಸಿದರು.

ಪ್ರಮುಖ ಸೈಬರ್ ಪ್ರಕರಣಗಳ ವಿವರ

ವಂಚನೆ ವಿಧ	ದಾಖಲಾದ ಪ್ರಕರಣ	ವಂಚನೆಯಾಗಿದ್ದ ಹಣ	ಜಪ್ತಿ ಮಾಡಿರುವ ಹಣ
ಆನ್‌ಲೈನ್ ಕೆಲಸ	3,346	₹204 ಕೋಟಿ	₹73.49 ಕೋಟಿ
ಡೆಬಿಟ್–ಕ್ರೆಡಿಟ್ ಕಾರ್ಡ್	3,102	₹60.86 ಕೋಟಿ	₹3.38 ಕೋಟಿ
ಉದ್ಯಮ ಅವಕಾಶ	1,133	₹60.53 ಕೋಟಿ	₹ 13.37 ಕೋಟಿ
ಉಡುಗೊರೆ	1,132	₹22.40 ಕೋಟಿ	₹1.09 ಕೋಟಿ
ಸಾಮಾಜಿಕ ಮಾಧ್ಯಮ	511	₹ 3.12 ಕೋಟಿ	₹ 18.29 ಲಕ್ಷ
ಸಾಲ ಆ್ಯಪ್	277	₹ 3.40 ಕೋಟಿ	₹ 1.02 ಲಕ್ಷ
ಬಿಟ್‌ಕಾಯಿನ್ ಹೂಡಿಕೆ	195	₹ 20.24 ಕೋಟಿ	₹ 72.52 ಲಕ್ಷ
ಇತರೆ	2,351	₹54.79 ಕೋಟಿ	₹ 1.65 ಕೋಟಿ

ಇನ್ಫೊಸಿಸ್ ಕೆಲಸದ ಆಮಿಷ: ವಂಚನೆ

ಅಪರಾಧ ಸುದ್ದಿ

ಬೆಂಗಳೂರು: ಇನ್ಫೊಸಿಸ್ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ನಗರದ ವ್ಯಕ್ತಿಯೊಬ್ಬರಿಂದ ಹಣ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಠಾಣೆ ವ್ಯಾಪ್ತಿಯ ನಿವಾಸಿಯಾಗಿರುವ ಸಂತ್ರಸ್ತ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾಮಾಜಿಕ ಮಾಧ್ಯಮ ಇನ್‌ಸ್ಟಾಗ್ರಾಮ್‌ನಲ್ಲಿ ದೂರುದಾರ ಖಾತೆ ಹೊಂದಿದ್ದಾರೆ. ಅವರಿಗೆ ಸಂದೇಶ ಕಳುಹಿಸಿದ್ದ ಆರೋಪಿ, ‘ಇನ್ಫೊಸಿಸ್ ಕಂಪನಿಯಲ್ಲಿ ಅರೆಕಾಲಿಕ ಕೆಲಸ ಇದೆ’ ಎಂದಿದ್ದರು. ದೂರುದಾರ, ಆರೋಪಿಯನ್ನು ಸಂಪರ್ಕಿಸಿದ್ದರು.’

‘ನೋಂದಣಿ ಹಾಗೂ ಇತರೆ ಶುಲ್ಕ ಪಾವತಿಸುವಂತೆ ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 16,400 ವರ್ಗಾಯಿಸಿದ್ದಾರೆ. ಇದಾದ ನಂತರ ಆರೋಪಿ, ಯಾವುದೇ ಕೆಲಸ ಕೊಡಿಸಿಲ್ಲ. ಹಣವನ್ನೂ ವಾಪಸು ನೀಡಿಲ್ಲವೆಂದು ದೂರುದಾರರು ಮಾಹಿತಿ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಇಪಿಎಸ್ ವ್ಯವಸ್ಥೆಯಲ್ಲಿ ಲೋಪ

ಬಯೋಮೆಟ್ರಿಕ್ ಸೋರಿಕೆ: ಹಣ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಹಾಗೂ ಎಟಿಎಂ ಕೇಂದ್ರಗಳಿಗೆ ಹೋಗದೇ ಕೇವಲ ಆಧಾರ್ ಬಳಸಿಕೊಂಡು ಹಣ ಪಡೆಯಲು ದೇಶದಲ್ಲಿ ಎಇಪಿಎಸ್ (ಆಧಾರ್ ಆಧಾರಿತ ಹಣ ಪಾವತಿ ವ್ಯವಸ್ಥೆ) ಜಾರಿಗೆ ತರಲಾಗಿದ್ದು, ಈ ವ್ಯವಸ್ಥೆ ದುರ್ಬಳಕೆ ಮಾಡಿಕೊಂಡಿರುವ ಸೈಬರ್ ವಂಚಕರು ಜನರ ಖಾತೆಗಳಲ್ಲಿರುವ ಹಣ ದೋಚುತ್ತಿದ್ದಾರೆ.

ಉಪ ನೋಂದಣಾಧಿಕಾರಿ ಕಚೇರಿ ಸೇರಿದಂತೆ ಹಲವು ಕಡೆಯ ಕೆಲಸಗಳಿಗಾಗಿ ಆಧಾರ್ ಬಯೋಮೆಟ್ರಿಕ್ (ಬೆರಳಚ್ಚು) ಮಾಹಿತಿ ಹಂಚಿಕೊಳ್ಳುತ್ತಿರುವ ಜನರ ಖಾತೆಯಲ್ಲಿರುವ ಹಣ ಇವರ ಅರಿವಿಗೆ ಬಾರದಂತೆ ಕಡಿತವಾಗುತ್ತಿದೆ. ಇದರಿಂದ ಆತಂಕಗೊಳ್ಳುತ್ತಿರುವ ಜನ, ಪೊಲೀಸ್ ಠಾಣೆಗೆ ದೂರು ನೀಡುತ್ತಿದ್ದಾರೆ.

‘ಪ್ರತಿಯೊಬ್ಬರು ಬ್ಯಾಂಕ್ ಖಾತೆಗೆ ಆಧಾರ್ ಜೋಡಿಸುವುದನ್ನು ಕಡ್ಡಾಯ ಮಾಡಲಾಗಿದೆ. ಇದರ ಜೊತೆಯಲ್ಲೇ ದೇಶವ್ಯಾಪಿ ಎಇಪಿಎಸ್ ಜಾರಿಗೊಳಿಸಲಾಗಿದೆ. ಬ್ಯಾಂಕ್ ಖಾತೆಗೆ ಜೋಡಣೆ ಆಗಿರುವ ಆಧಾರ್ ಬಯೋಮೆಟ್ರಿಕ್ ಬಳಸಿಕೊಂಡು, ದೇಶದ ಯಾವುದೇ ಭಾಗದಲ್ಲಾದರೂ ಅಂಚೆ ಕಚೇರಿ ಸಿಬ್ಬಂದಿ ಮೂಲಕ ಹಣ ಪಡೆಯಲು ಅವಕಾಶ ಕಲ್ಪಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕನಿಷ್ಠ ₹ 100 – ಗರಿಷ್ಠ ₹ 10 ಸಾವಿರದವರೆಗೂ ಹಣ ಪಡೆಯಲು ಅವಕಾಶವಿರುವ ಈ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶಗಳ ಜನರ ಅನುಕೂಲಕ್ಕಾಗಿ ರೂಪಿಸಲಾಗಿದೆ. ಈ ವ್ಯವಸ್ಥೆಯಲ್ಲಿ ಲೋಪಗಳಿದ್ದು, ಅದನ್ನು ಬಳಸಿಕೊಂಡು ಸೈಬರ್ ವಂಚಕರು ಹಣ ದೋಚುತ್ತಿದ್ದಾರೆ’ ಎಂದು ಅನುಮಾನ ವ್ಯಕ್ತಪಡಿಸಿದರು.

ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಸೋರಿಕೆ: ‘ರಾಜ್ಯದ ಹಲವು ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಜನರ ವೈಯಕ್ತಿಕ ದತ್ತಾಂಶ ಸೋರಿಕೆಯಾಗುತ್ತಿದ್ದು, ಇದರಿಂದ ಖಾತೆಯಲ್ಲಿರುವ ಹಣ ಕಳೆದುಕೊಳ್ಳುತ್ತಿದ್ದೇವೆ’ ಎಂದು ಆರೋಪಿಸಿ ಹಲವರು ಪೊಲೀಸ್ ಠಾಣೆಗಳಿಗೆ ದೂರು ನೀಡಿದ್ದಾರೆ.

ಅಶೋಕನಗರ ಠಾಣೆಗೆ ದೂರು ನೀಡಿರುವ ಸಾಫ್ಟ್‌ವೇರ್ ಎಂಜಿನಿಯರ್‌ರೊಬ್ಬರು, ‘ಆಸ್ತಿ ವರ್ಗಾವಣೆಗೆ ಸಂಬಂಧಪಟ್ಟಂತೆ ಸೆ. 30ರಂದು ಕೋರಮಂಗಲ ಸಬ್ ರಜಿಸ್ಟ್ರಾರ್ ಕಚೇರಿಗೆ ಹೋಗಿ ಬಯೋಮೆಟ್ರಿಕ್ ಹಾಗೂ ಆಧಾರ್ ನೀಡಿದ್ದೆ. ಇದಾದ ಕೆಲವೇ ದಿನಗಳಲ್ಲಿ ನನ್ನ ಖಾತೆಯಿಂದ ಹಂತ ಹಂತವಾಗಿ ₹22 ಸಾವಿರ ಕಡಿತವಾಗಿದೆ. ಯಾವುದೇ ಒಟಿಪಿ ಸಹ ನೀಡಿರಲಿಲ್ಲ’ ಎಂದು ತಿಳಿಸಿದ್ದಾರೆ.

‘ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ನೀಡಿದ್ದ ಬಯೋಮೆಟ್ರಿಕ್ ಹಾಗೂ ಆಧಾರ್ ಮಾಹಿತಿ ದುರುಪಯೋಗಪಡಿಸಿಕೊಂಡು, ಹಣ ದೋಚಿರುವ ಅನುಮಾನವಿದೆ’ ಎಂದು ಅವರು ತಿಳಿಸಿದ್ದಾರೆ.

‘ತನಿಖೆಗೆ ಪೊಲೀಸರ ನಿರ್ಲಕ್ಷ್ಯ’

‘ಎಇಪಿಎಸ್ ಮೂಲಕ ಆಗುತ್ತಿರುವ ವಂಚನೆ ಬಗ್ಗೆ ದೂರು ನೀಡಿದರೂ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲು ಪೊಲೀಸರು ನಿರ್ಲಕ್ಷ್ಯ ತೋರುತ್ತಿದ್ದಾರೆ’ ಎಂದು ಸಂತ್ರಸ್ತರು ಆರೋಪಿಸುತ್ತಿದ್ದಾರೆ.

‘ವ್ಯವಸ್ಥಿತ ಜಾಲವೊಂದು ಎಇಪಿಎಸ್ ಮೂಲಕ ಹಣ ದೋಚುತ್ತಿರುವ ಅನುಮಾನವಿದೆ. ರಾಜ್ಯದ ಹಲವರು ಈಗಾಗಲೇ ಹಣ ಕಳೆದುಕೊಂಡಿದ್ದಾರೆ. ಪೊಲೀಸರು ಸಮರ್ಪಕ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಬಯೋಮೆಟ್ರಿಕ್ ದುರುಪಯೋಗದ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಜನರು ಆಧಾರ್ ಬಯೋಮೆಟ್ರಿಕ್ ಬಳಕೆಯ ಪಾವತಿ ವ್ಯವಸ್ಥೆ ಲಾಕ್ ಮಾಡಿಟ್ಟುಕೊಳ್ಳಬೇಕು

ಬಿ. ದಯಾನಂದ್, ಬೆಂಗಳೂರು ಪೊಲೀಸ್ ಕಮಿಷನರ್

ಕಳ್ಳತನ: ನಾಲ್ವರು ಟೈಲ್ಸ್ ಕೆಲಸಗಾರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತಿನಗರದಲ್ಲಿರುವ ಜೈನ ಮಂದಿರದಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪ್ರವೀಣ್ ಕುಮಾರ್ ಅಲಿಯಾಸ್ ಪಿಂಟು (29), ಜೋಶಿ ರಾಮ್ (24), ಗೋವಿಂದ್‌ಕುಮಾರ್ ಹಾಗೂ ರಾಜೇಂದ್ರಕುಮಾರ್ ಬಂಧಿತರು. ₹ 9.75 ಲಕ್ಷ ಮೌಲ್ಯದ 14 ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರಾಜಸ್ಥಾನ ಮೂಲದ ಆರೋಪಿಗಳು, ಟೈಲ್ಸ್ ಜೋಡಣೆ ಕೆಲಸಕ್ಕೆಂದು ಜೈನ ಮಂದಿರಕ್ಕೆ ಬಂದಿದ್ದರು. ಮಂದಿರದಲ್ಲಿ ಹಲವು ದಿನ ಕೆಲಸ ಮಾಡಿದ್ದರು. ಇದೇ ಸಂದರ್ಭದಲ್ಲಿ, ಮಂದಿರದಲ್ಲಿದ್ದ ಬೆಳ್ಳಿ ಸಾಮಗ್ರಿಗಳನ್ನು ಗಮನಿಸಿದ್ದರು. ಸೆ. 9ರಂದು ರಾತ್ರಿ ಬೆಳ್ಳಿ ಸಾಮಗ್ರಿ ಕದ್ದುಕೊಂಡು ರಾಜಸ್ಥಾನಕ್ಕೆ ಹೋಗಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕಳ್ಳತನದ ಬಗ್ಗೆ ದೂರು ದಾಖಲಾಗುತ್ತಿದ್ದಂತೆ, ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಹಾಗೂ ಇತರೆ ಸುಳಿವು ಆಧರಿಸಿ ಆರೋಪಿಗಳನ್ನು ರಾಜಸ್ಥಾನದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಯಿತು’ ಎಂದು ಹೇಳಿದರು.

ಮಣ್ಣಿನಲ್ಲಿ ಹೂತಿಟ್ಟಿದ್ದರು: ‘ಕದ್ದೊಯ್ದಿದ್ದ ಬೆಳ್ಳಿ ಸಾಮಗ್ರಿಗಳನ್ನು ಆರೋಪಿಗಳು, ತಮ್ಮೂರಿನಲ್ಲಿ ಮಣ್ಣಿನಲ್ಲಿ ಹೂತಿಟ್ಟಿದ್ದರು. ಅದನ್ನು ಹೊರಗೆ ತೆಗೆದು ಜಪ್ತಿ ಮಾಡಿ ನಗರಕ್ಕೆ ತರಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಿರುವ ಬೆಳ್ಳಿ ಸಾಮಗ್ರಿಗಳನ್ನು ಕಮಿಷನರ್ ವೀಕ್ಷಣೆಗಾಗಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ರೊಬ್ಬರು ಜೋಡಿಸಿಟ್ಟರು – ಪ್ರಜಾವಾಣಿ ಚಿತ್ರ

ಉಗ್ರ ಸಂಘಟನೆಗೆ ಹಣ ಸಂಗ್ರಹ: ಇಬ್ಬರ ವಿರುದ್ಧ ದೋಷಾರೋಪ ಪಟ್ಟಿ

ಬೆಂಗಳೂರು: ತೆಹ್ರೀಕ್‌-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ನಿಷೇಧಿತ ಉಗ್ರ ಸಂಘಟನೆಗೆ ಹಣ ಸಂಗ್ರಹಿಸುತ್ತಿದ್ದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಇಬ್ಬರು ಶಂಕಿತ ಉಗ್ರರ ವಿರುದ್ಧ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ನಗರದ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ (ದೋಷಾರೋಪ ಪಟ್ಟಿ) ಸಲ್ಲಿಸಿದ್ದಾರೆ.

‘ಉತ್ತರ ಪ್ರದೇಶದ ಅಲಿಗಢ ನಿವಾಸಿ ಮೊಹಮ್ಮದ್ ಆರೀಫ್ (42) ಮತ್ತು ಮಹಾರಾಷ್ಟ್ರದ ಹಮ್‌ರಾಜ್ ವರ್ಷಿದ್ ಶೇಖ್‌ನನ್ನು (27) ಕೆಲ ತಿಂಗಳ ಹಿಂದೆಯಷ್ಟೇ ಬಂಧಿಸಲಾಗಿತ್ತು. ಇದೀಗ, ಅವರಿಬ್ಬರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಎನ್‌ಐಎ ಮೂಲಗಳು ಹೇಳಿವೆ.

ಮುಸ್ಲಿಂ ಯುವಕರಿಗೆ ಪ್ರಚೋದನೆ: ‘ಬೆಂಗಳೂರಿನ ಕಂಪನಿಯೊಂದರಲ್ಲಿ ಫ್ರೆಂಚ್ ಭಾಷಾ ಅನುವಾದಕನಾಗಿ ಕೆಲಸ ಮಾಡುತ್ತಿದ್ದ ಮೊಹಮ್ಮದ್ ಆರೀಫ್, ಕರ್ನಾಟಕದಲ್ಲಿರುವ ಮುಸ್ಲಿಂ ಯುವಕರನ್ನು ಸಂಪರ್ಕಿಸಿ ಭಯೋತ್ಪಾದನಾ ಸಂಘಟನೆ ಸೇರಿ ವಿಧ್ವಂಸಕ ಕೃತ್ಯವೆಸಗಲು ಪ್ರಚೋದಿಸುತ್ತಿದ್ದ. ಇದಕ್ಕೆ ಸಂಬಂಧಪಟ್ಟ ಪುರಾವೆಗಳು ಆರೋಪ ಪಟ್ಟಿಯಲ್ಲಿವೆ’ ಎಂದು ಮೂಲಗಳು ತಿಳಿಸಿವೆ.

‘ಹಮ್‌ರಾಜ್ ವರ್ಷಿದ್ ಶೇಖ್, ಪಾಕಿಸ್ತಾನದಲ್ಲಿದ್ದ ಟಿಟಿಪಿ ಸಂಘಟನೆಗೆ ಹಣ ಕಳುಹಿಸುತ್ತಿದ್ದ. ಭಾರತವನ್ನು ಮುಸ್ಲಿಂ ರಾಷ್ಟ್ರವನ್ನಾಗಿ ಮಾಡಲು, ಸ್ಥಳೀಯ ಯುವಕರನ್ನು ಪ್ರಚೋದಿಸಬೇಕು ಎಂಬುದು ಈತನ ಉದ್ದೇಶವಾಗಿತ್ತು’ ಎಂದು ಮೂಲಗಳು ಹೇಳಿವೆ.

ಸಿಲಿಂಡರ್ ಕದಿಯುತ್ತಿದ್ದವರ ಬಂಧನ

ಬೆಂಗಳೂರು: ದ್ವಿಚಕ್ರ ವಾಹನಗಳು ಹಾಗೂ ಸಿಲಿಂಡರ್‌ಗಳನ್ನು ಕಳ್ಳತನ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕುಮಾರಸ್ವಾಮಿ ಲೇಔಟ್‌ನ ಇಲಿಯಾಸ್ ನಗರದ ಇಮ್ರಾನ್ ಪಾಷಾ (27), ಬೊಮ್ಮನಹಳ್ಳಿ ಮಂಗಮ್ಮನಪಾಳ್ಯದ ಹಿದಾಯತ್ (25), ಜೆ.ಪಿ.ನಗರದ ನಾಸಿರ್ (28) ಹಾಗೂ ಸೈಯದ್ ಜುಬೇರ್ ಅಲಿಯಾಸ್ ಸುಬ್ಬಿ (21) ಬಂಧಿತರು.

‘ಕೆಂಗೇರಿ ಮೈಲಸಂದ್ರ ಬಳಿಯ ಮೂಕಾಂಬಿಕಾ ಲೇಔಟ್‌ನಲ್ಲಿರುವ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಇತ್ತೀಚೆಗೆ ಕಳ್ಳತನ ಆಗಿತ್ತು. ಕೆಲ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಹೇಳಿದರು.

‘₹1.91 ಲಕ್ಷ ಮೌಲ್ಯದ 3 ದ್ವಿಚಕ್ರ ವಾಹನ, 2 ಆಟೊ, 2 ಅಡುಗೆ ಅನಿಲ ಸಿಲಿಂಡರ್ ಹಾಗೂ ₹13 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದರು.

ಆತ್ಮಹತ್ಯೆಗೆ ಯತ್ನ: ಯುವಕನ ರಕ್ಷಣೆ

ಬೆಂಗಳೂರು: ನಗರದ ಲಾಡ್ಜ್‌ವೊಂದರ ಕೊಠಡಿಯಲ್ಲಿ ಆತ್ಮಹತ್ಯೆಗೆ ಯತ್ನಿಸುತ್ತಿದ್ದ ಯುವಕರೊಬ್ಬರನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ರಕ್ಷಿಸಿದ್ದಾರೆ.

‘ಬಳ್ಳಾರಿಯ 25 ವರ್ಷ ವಯಸ್ಸಿನ ಯುವಕ, ನಗರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸೋಮವಾರ ಸಂಜೆ ಸ್ನೇಹಿತನಿಗೆ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಸಂದೇಶ ಕಳುಹಿಸಿದ್ದರು. ಆತಂಕಗೊಂಡಿದ್ದ ಸ್ನೇಹಿತ, ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹೊಯ್ಸಳ ಗಸ್ತು ವಾಹನದಲ್ಲಿದ್ದ ಎಎಸ್‌ಐ ವಿ. ಗೋವಿಂದರಾಜ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಮಂಜುನಾಥ್ ನಾಯ್ಕರ್, ಯುವಕನಿಗಾಗಿ ಹುಡುಕಾಟ ಆರಂಭಿಸಿದ್ದರು. ಲಾಡ್ಜ್‌ವೊಂದರಲ್ಲಿ ಯುವಕ ಉಳಿದುಕೊಂಡಿದ್ದಾನೆಂಬುದು ಸ್ನೇಹಿತನಿಂದ ಗೊತ್ತಾಗಿತ್ತು. ಐದಾರು ಗಂಟೆ ಹುಡುಕಾಟದ ನಂತರ ಮೊಬೈಲ್ ನೆಟ್‌ವರ್ಕ್ ಮೂಲಕ ಸುಳಿವು ಸಿಕ್ಕಿತ್ತು. ಲಾಡ್ಜ್‌ಗೆ ತೆರಳಿ, ಕೊಠಡಿಯ ಬಾಗಿಲು ಮುರಿದು ಯುವಕನನ್ನು ರಕ್ಷಿಸಲಾಯಿತು.’ ‘ಫ್ಯಾನ್‌ಗೆ ಹಗ್ಗ ಕಟ್ಟಿದ್ದ ಯುವಕ, ನೇಣು ಹಾಕಿಕೊಳ್ಳಲು ಕಾಯುತ್ತಿದ್ದ. ಪೊಲೀಸರು ಸ್ಥಳಕ್ಕೆ ಹೋಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಅವರನ್ನು ಠಾಣೆಗೆ ಕರೆತಂದು ಆಪ್ತ ಸಮಾಲೋಚನೆ ನಡೆಸಲಾಯಿತು’ ಎಂದು ಪೊಲೀಸ್ ತಿಳಿಸಿದರು.

ಬಳ್ಳಾರಿ ರಸ್ತೆ ವಿಸ್ತರಣೆ: ಪುನಃ 8 ವಾರಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿತ್ಯವೂ ಉಂಟಾಗುತ್ತಿರುವ ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಕೆಲಸದ ಅವಧಿ ಬದಲಾವಣೆ ಮಾಡುವ ಸಾಧ್ಯತೆಯ ಬಗ್ಗೆ ಶಿಕ್ಷಣ, ಶಾಲಾ ಮಕ್ಕಳ ಪೋಷಕರ ಸಂಘಗಳು, ಕಾರ್ಮಿಕ ಮತ್ತು ವಾಣಿಜ್ಯ ಕಂಪನಿಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಸಮಗ್ರ ವರದಿ ಸಲ್ಲಿಸಲು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮತ್ತಷ್ಟು ಗಡುವು ನೀಡಿದೆ.

'ಬಳ್ಳಾರಿ ರಸ್ತೆಯಲ್ಲಿ ಸಂಚಾರ ದಟ್ಟಣೆ ತಪ್ಪಿಸಲು ಬಸವೇಶ್ವರ ವೃತ್ತದಿಂದ ಹೆಬ್ಬಾಳದ ಎಸ್ಟೀಮ್ ಮಾಲ್‌ವರೆಗೆ ರಸ್ತೆ ವಿಸ್ತರಣೆ ಮಾಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ 'ಸಮರ್ಪಣಾ' ಸಂಘಟನೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, 'ಹೈಕೋರ್ಟ್ ನಿರ್ದೇಶನದಂತೆ ಸರ್ಕಾರ ಇದೇ 5ರಂದು ಕಾರ್ಮಿಕ ಇಲಾಖೆ, ಎಫ್‌ಕೆಸಿಸಿಐ, ವಾಣಿಜ್ಯೋದ್ಯಮಿಗಳು ಹಾಗೂ ಕಾರ್ಮಿಕರ ಒಕ್ಕೂಟದ ಪ್ರತಿನಿಧಿಗಳ ಜೊತೆಗೆ ಸಮಾಲೋಚನೆ ನಡೆಸಿದೆ. ಅಂತೆಯೇ, ಇದೇ 9ರಂದು ಶಾಲಾ ಆಡಳಿತ ಮಂಡಳಿ, ಪೋಷಕರ ಒಕ್ಕೂಟದೊಂದಿಗೆ ಸಭೆ ನಡೆಸಿದೆ. ಸಾರಿಗೆ ಮತ್ತು ಸಂಚಾರ ವಿಭಾಗದ ಪೊಲೀಸ್ ಇಲಾಖೆ ಅಧಿಕಾರಿಗಳ ಜೊತೆಗೂ ಚರ್ಚಿಸಲಾಗಿದೆ' ಎಂದರು.

'ಸಂಚಾರ ದಟ್ಟಣೆಗೆ ಪರಿಹಾರ ಕಂಡುಹಿಡಿಯುವ ಸಮಾಲೋಚನೆ ಪ್ರಕ್ರಿಯೆ ಮುಂದುವರಿಯಲಿದ್ದು, ಅಂತಿಮ ಅಭಿಪ್ರಾಯ ಕುರಿತಂತೆ ವರದಿ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಸರ್ಕಾರ ವಿವಿಧ ಇಲಾಖೆ ಮತ್ತು ಪ್ರತಿನಿಧಿಗಳ ಜೊತೆ ನಡೆಸಲಿರುವ ಸಭೆಯ ತೀರ್ಮಾನ ಏನೆಂಬುದನ್ನು ಪರಿಶೀಲಿಸಿ ಅಂತಿಮ ತೀರ್ಮಾನದ ಬಗ್ಗೆ ಪರಿಶೀಲಿಸಲಾಗುವುದು. ಈ ಕಾರಣಕ್ಕಾಗಿ ಸರ್ಕಾರಕ್ಕೆ ಸಭೆ ನಡೆಸಿ ಸಮಗ್ರ ವರದಿ ಸಲ್ಲಿಸಲು ಎಂಟು ವಾರಗಳ ಕಾಲಾವಕಾಶ ನೀಡಲಾಗುತ್ತಿದೆ' ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಕಳೆದ ತಿಂಗಳ 12ರಂದು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠ, 'ನಗರದಲ್ಲಿನ ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಶಾಲೆಗಳ ಕೆಲಸದ ಅವಧಿ ಬದಲಾವಣೆ ಮಾಡುವ ಕುರಿತಂತೆ ಶಾಲಾ ಮತ್ತು ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಖಾಸಗಿ ಹಾಗೂ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು, ಶಾಲಾ ಬಸ್ ಆಪರೇಟರ್‌ಗಳು, ಪೋಷಕರ ಸಂಘಗಳ ಪ್ರತಿನಿಧಿಗಳ ಸಭೆ ಕರೆದು ಸಮಾಲೋಚಿಸಿ. ಈ ಕುರಿತಂತೆ ಆರು ವಾರಗಳಲ್ಲಿ ವರದಿ ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು.

ಸಂಚಾರ ನಿಯಮ ಉಲ್ಲಂಘಿಸಿ ರಸ್ತೆಯಲ್ಲಿಯೇ ವಾಹನಗಳ ಪಾರ್ಕಿಂಗ್ • ಸಾರ್ವಜನಿಕರಿಗೆ ಕಿರಿಕಿರಿ

ರೆಸಿಡೆನ್ಸಿ ರಸ್ತೆ: ದಿನವಿಡೀ ಸಂಚಾರ ದುಸ್ತರ

• ವರುಣ ಹೆಗಡೆ

ನಗರದ ರೆಸಿಡೆನ್ಸಿ ರಸ್ತೆಯಲ್ಲಿ ಮಂಗಳವಾರ ಉಂಟಾದ ಸಂಚಾರ ದಟ್ಟಣೆಯಿಂದ ವಾಹನ ಸವಾರರು ಪರದಾಟ ನಡೆಸಿದರು

ಪ್ರಜಾವಾಣಿ ಚಿತ್ರ: ರಂಜು ಪಿ

ಸಂಚಾರ ತ್ರಾಸ ಜನರ ಪ್ರಯಾಸ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳಲ್ಲಿ ಸಾಮಾನ್ಯವಾಗಿ ಬೆಳಿಗ್ಗೆ 8 ರಿಂದ 10 ಗಂಟೆವರೆಗೆ ಹಾಗೂ ಸಂಜೆ 5ರ ಬಳಿಕ ಸಂಚಾರ ದಟ್ಟಣೆ ಉಂಟಾದರೆ, ರೆಸಿಡೆನ್ಸಿ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ಮಧ್ಯಾಹ್ನದ ಅವಧಿಯಲ್ಲೂ ದಟ್ಟಣೆಯ ಬಿಸಿ ತಟ್ಟುತ್ತಿದೆ. ಬಿಸಿಲಿನ ಝಳದ ಜತೆಗೆ, ಪ್ರಯಾಣವೂ ಪ್ರಯಾಸಕರವಾಗುತ್ತಿದೆ...!

'ಪ್ರಯಾಣಿಕರ ಪ್ರಯಾಸ'ಕ್ಕೆ ಹೆಚ್ಚು ಕೊಡುಗೆ ನೀಡುತ್ತಿರುವುದು, ಸುಗಮ ಸಂಚಾರಕ್ಕೆ ಅಡ್ಡಿಪಡಿಸುತ್ತಿರುವುದು ಈ ರಸ್ತೆಯಲ್ಲಿರುವ ವಿವಿಧ ಶಾಲೆಗಳ ಹಾಗೂ ಪೋಷಕರ ವಾಹನಗಳೇ.

ರೆಸಿಡೆನ್ಸಿ ರಸ್ತೆಯ ಸುತ್ತಮುತ್ತ ಬಿಷಪ್ ಕಾಟನ್ ಬಾಲಕರ ಹಾಗೂ ಬಾಲಕಿಯರ ಶಾಲೆ, ನ್ಯಾಷನಲ್ ಪಬ್ಲಿಕ್ ಶಾಲೆ, ಸೇಂಟ್ ಜೋಸೆಫ್ ಇಂಡಿಯನ್ ಪ್ರೌಢಶಾಲೆ, ಬಾಲ್ಡ್‌ವಿನ್ ಇಂಟರ್‌ನ್ಯಾಷನಲ್ ಸೇರಿ ಸುಮಾರು 50 ಶಾಲಾ ಕಾಲೇಜುಗಳಿವೆ. ಶಾಲಾ–ಕಾಲೇಜುಗಳ ಆರಂಭವಾಗುವ ಹಾಗೂ ಮುಗಿಯುವ ವೇಳೆಯಲ್ಲಿ ಅಂದರೆ, ಬೆಳಿಗ್ಗೆ 7.30ರಿಂದ 11 ಗಂಟೆವರೆಗೆ, ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಹಾಗೂ ಸಂಜೆ 6 ಗಂಟೆಯ ಬಳಿಕ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಈ ವೇಳೆಯಲ್ಲಿ ವಾಹನಗಳು ಆಮೆ ವೇಗದಲ್ಲಿ ಸಂಚರಿಸುತ್ತವೆ. ವಾರದಲ್ಲಿ ಕೆಲವು ದಿನಗಳು ಮಾತ್ರ ಕಿ.ಮೀ. ಗಟ್ಟಲೆ ವಾಹನಗಳು ನಿಂತಲ್ಲೇ ನಿಂತಿರುತ್ತವೆ. ಈಗ ಪರೀಕ್ಷೆಗಳು ನಡೆಯುತ್ತಿರುವುದರಿಂದ ಬೆಳಿಗ್ಗೆ 7.30ರಿಂದ 11.30ರ ಅವಧಿಯಲ್ಲಿ ಹೆಚ್ಚಿನ ದಟ್ಟಣೆ ಉಂಟಾಗುತ್ತಿದ್ದು, ಈ ರಸ್ತೆಯಲ್ಲಿ ಪ್ರಯಾಣ ದುಸ್ತರವಾಗಿದೆ.

ಮಿಷನ್ ರಸ್ತೆ, ಕೆಂಗಲ್ ಹನುಮಂತಯ್ಯ ರಸ್ತೆ (ಡಬಲ್ ರೋಡ್) ಹಾಗೂ ರಾಜಾರಾಮ್ ಮೋಹನ್ ರಾಯ್ ರಸ್ತೆಯಲ್ಲಿ ಬರುವ ವಾಹನಗಳು ರೆಸಿಡೆನ್ಸಿ ರಸ್ತೆಯನ್ನು ಕೂಡಿಕೊಳ್ಳಲಿವೆ. ಇದರಿಂದ ಪ್ರತಿನಿತ್ಯ ಲಕ್ಷಾಂತರ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ. ಹೀಗಾಗಿ ಶಾಲಾ–ಕಾಲೇಜುಗಳಿಗೆ ರಜೆ ಇರುವ ದಿನಗಳಲ್ಲಿಯೂ ಬೆಳಿಗ್ಗೆ ಮತ್ತು ಸಂಜೆ ಅವಧಿಯಲ್ಲಿ ದಟ್ಟಣೆ ಉಂಟಾಗುತ್ತಿದೆ. ಜನಾರ್ದನ್ ಟವರ್ ಬಹುಮಹಡಿ ಕಟ್ಟಡ, ದಿ ಚಾನ್ಸಲರಿ ಪೆವಿಲಿಯನ್, ದಿ ರಿಟ್ಜ್ ಕಾರ್ಲ್‌ಟನ್ ಹೋಟೆಲ್, ಪ್ರೆಸ್ಟೀಜ್ ಡಾಟ್ ಕಾಮ್ ಬಹುಮಹಡಿ ಕಟ್ಟಡ ಸೇರಿ ಹಲವು ಪ್ರಮುಖ ಕಟ್ಟಡಗಳು ಈ ರಸ್ತೆಯಲ್ಲಿವೆ.

ಈ ರಸ್ತೆಯಲ್ಲಿ ಶಾಲೆ ಆರಂಭ ಹಾಗೂ ಬಿಡುವ ಸಂದರ್ಭದಲ್ಲಿ ಸುಮಾರು 20 ಸಂಚಾರ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮೊದಲ ಸಿಗ್ನಲ್‌ನಲ್ಲಿ ಹಾದು ಬರುವ ವಾಹನಗಳನ್ನು ಶಾಲೆ ಎದುರೇ ತಡೆದು ನಿಲ್ಲಿಸುವ ಪೊಲೀಸರು, ಮಕ್ಕಳ ಸಂಚಾರಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಇದರಿಂದಲೂ ದಟ್ಟಣೆ ಹೆಚ್ಚುತ್ತಿದೆ. ಮಕ್ಕಳು ಕೂಡ ಭಯದಲ್ಲಿ ಹೆಜ್ಜೆ ಹಾಕುವ ವಾತಾವರಣ ಸೃಷ್ಟಿಯಾಗಿದೆ. ಸಂಚಾರ ದಟ್ಟಣೆ ಕಾರಣ ಕೆಲ ದ್ವಿಚಕ್ರ ವಾಹನ ಸವಾರರು ಪಾದಚಾರಿ ಮಾರ್ಗಗಳ ಮೇಲೆಯೂ ವಾಹನ ಓಡಿಸುತ್ತಾರೆ.

ಸಮಸ್ಯೆಗಿಲ್ಲ ಪರಿಹಾರ: 'ರೆಸಿಡೆನ್ಸಿ ರಸ್ತೆಯಲ್ಲಿ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗೆ ಶಾಶ್ವತ ಪರಿಹಾರವೇ ಇಲ್ಲದಂತಾಗಿದೆ. ವಾಹನಗಳು ಶಾಲೆ ಆವರಣಕ್ಕೆ ತೆರಳುವ ಮೊದಲು ರಸ್ತೆಯಲ್ಲಿ ಒಂದೂವರೆ ಗಂಟೆ ಸಂಪೂರ್ಣ ದಟ್ಟಣೆ ಆಗುತ್ತಿತ್ತು. ಈಗ 40 ನಿಮಿಷಕ್ಕೆ ಇಳಿದಿದೆ. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಪ್ರವೇಶ ದ್ವಾರದ ಬಳಿ ವಾಹನಗಳನ್ನು ತಡೆದು, ಮಕ್ಕಳ ಓಡಾಟಕ್ಕೆ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ. ಹಳೆ ವಿಮಾನ ನಿಲ್ದಾಣ ರಸ್ತೆ, ವೈಟ್‌ಫೀಲ್ಡ್ ಸೇರಿ ವಿವಿಧೆಡೆ ತೆರಳಲು ಇದೇ ಮಾರ್ಗ ಬಳಸಲಾಗುತ್ತದೆ. ಇದರಿಂದಾಗಿ ಸಹಜವಾಗಿ ದಟ್ಟಣೆ ಹೆಚ್ಚಿರುತ್ತದೆ. ವಾಹನ ಸವಾರರು ಸೂಕ್ತವಾಗಿ ನಮಗೆ ಸ್ಪಂದಿಸಿದಲ್ಲಿ ತಕ್ಕಮಟ್ಟಿಗೆ ದಟ್ಟಣೆ ನಿವಾರಣೆ ಸಾಧ್ಯ' ಎಂದು ಸಂಚಾರ ಪೊಲೀಸರು ತಿಳಿಸಿದರು.

'ಶಾಲೆ ಆರಂಭ ಹಾಗೂ ಮುಗಿಯುವ ಸಮಯದಲ್ಲಿ ಸಾಕಷ್ಟು ದಟ್ಟಣೆ ಉಂಟಾಗುತ್ತಿದೆ. ಈ ಸಮಸ್ಯೆ ಹಲವು ವರ್ಷಗಳಿಂದ ಇದೆ. ಇದು ಬಗೆಹರಿಯದ ಸಮಸ್ಯೆಯಾಗಿದ್ದು, ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಖಾಸಗಿ ಕಂಪನಿಯೊಂದರ ಉದ್ಯೋಗಿ ರೋಹಿತ್ ತಿಳಿಸಿದರು.

ರೆಸಿಡೆನ್ಸಿ ರಸ್ತೆಯಲ್ಲಿ ದಟ್ಟಣೆ ಹೆಚ್ಚಲು ಶಾಲಾ ವಾಹನಗಳೇ ಪ್ರಮುಖ ಕಾರಣ. ವಾಹನಗಳನ್ನು ಶಾಲೆಯ ಮೈದಾನದೊಳಗೆ ನಿಲ್ಲಿಸಿದರೆ ಮಾತ್ರ ದಟ್ಟಣೆ ಸ್ವಲ್ಪ ಕಡಿಮೆಯಾಗುತ್ತದೆ
ಜ್ಯೋತಿ, ವಿಜಯನಗರ

ಸಂಚಾರಿ ಪೊಲೀಸರು ಕೈಗೊಂಡ ಕ್ರಮಗಳಿಂದ ಇತ್ತೀಚೆಗೆ ದಟ್ಟಣೆ ಸ್ವಲ್ಪ ಕಡಿಮೆಯಾಗಿದೆ. ಪೂರ್ಣ ಪ್ರಮಾಣದಲ್ಲಿ ದಟ್ಟಣೆ ನಿವಾರಣೆಗೆ ತಂತ್ರಜ್ಞಾನದ ನೆರವಿನಿಂದ ಮಾರ್ಗೋಪಾಯ ಕಂಡುಕೊಳ್ಳಬೇಕು
ಪ್ರೀತಿ, ಹೊರಮಾವು

ದಟ್ಟಣೆ ನಿವಾರಣೆಗೆ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ರಸ್ತೆಯ ಅಕ್ಕಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವವರಿಗೆ ಸೂಕ್ತ ಎಚ್ಚರಿಕೆ ನೀಡಿ, ದಂಡ ಹಾಕಬೇಕು
ಪಲ್ಲವಿ, ಖಾಸಗಿ ಕಂಪನಿ ಉದ್ಯೋಗಿ



ವಾಹನಗಳು ಹೆಚ್ಚಿದ್ದರಿಂದ ದಟ್ಟಣೆಯೂ ಹೆಚ್ಚಾಗುತ್ತಿದೆ. ಶಾಲೆ ಪ್ರಾರಂಭದ ಹಾಗೂ ಬಿಡುವ ಅವಧಿಯಲ್ಲಿ ಈ ರಸ್ತೆಯಲ್ಲಿ ಪ್ರಯಾಣ ದುಸ್ತರವಾಗಿದೆ. ಇನ್ನಷ್ಟು ಸಂಚಾರ ಪೊಲೀಸರನ್ನು ನಿಯೋಜಿಸಬೇಕು
ಬದ್ರಿ, ಆಟೋ ರಿಕ್ಷಾ ಚಾಲಕ

ಪೋಷಕರ ವಾಹನ ಸಂಚಾರಕ್ಕೆ ಅಡ್ಡಿ

ಸಂಚಾರ ಪೊಲೀಸರ ಪ್ರಕಾರ ರೆಸಿಡೆನ್ಸಿ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಲು ಶಾಲೆಗಳು ಹಾಗೂ ಪೋಷಕರ ವಾಹನವೇ ಪ್ರಮುಖ ಕಾರಣ. ಈ ಹಿಂದೆ ಬಿಷಪ್ ಕಾಟನ್ ಬಾಲಕರ–ಬಾಲಕಿಯರ ಶಾಲೆ, ಸೆಕ್ರೇಡ್ ಹಾರ್ಟ್ ಶಾಲೆಯ ಬಳಿ ವಿದ್ಯಾರ್ಥಿಗಳನ್ನು ಬಿಡಲು ಬರುವ ಶಾಲಾ ಬಸ್‌ಗಳು ಸಂಜೆವರೆಗೂ ರಸ್ತೆಯ ಬದಿಯಲ್ಲೇ ನಿಲ್ಲುತ್ತಿದ್ದವು. ಇದರಿಂದ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದರು. ಸಂಚಾರ ಪೊಲೀಸರು ಶಾಲಾ ಆಡಳಿತ ಮಂಡಳಿಯ ಜತೆಗೆ ಮಾತುಕತೆ ನಡೆಸಿ, ವಾಹನಗಳನ್ನು ಆವರಣಕ್ಕೆ ಬಿಡುವಂತೆ ಸೂಚಿಸಿದ್ದರು. ಈಗ ಪೋಷಕರ ವಾಹನಗಳನ್ನು ಶಾಲಾ ಆವರಣಕ್ಕೆ ಬಿಡಲು ಅವಕಾಶ ಮಾಡಿಕೊಡಲಾಗಿದೆ. ಆದರೆ, ಶಾಲಾ ಆಡಳಿತ ಮಂಡಳಿ ಒಳಗಡೆ ಪ್ರವೇಶಕ್ಕೆ ಮಾಸಿಕ ₹ 3 ಸಾವಿರ ದಿಂದ ₹ 5 ಸಾವಿರ ಶುಲ್ಕ ನಿಗದಿಪಡಿಸಿದ್ದರಿಂದ ಹಲವು ವಾಹನಗಳು ಈಗಲೂ ರಸ್ತೆಯ ಪಕ್ಕದಲ್ಲಿಯೇ ನಿಲ್ಲುತ್ತಿವೆ. ಕೆಲವರು ಶಾಲೆ ಬಿಡಲು ಒಂದು ಗಂಟೆ ಮೊದಲೇ ಬಂದು, ರಸ್ತೆಯಲ್ಲಿ ವಾಹನ ನಿಲ್ಲಿಸುತ್ತಿದ್ದಾರೆ.

ಸಂಚಾರ ಪೊಲೀಸರು ನೀಡಿದ ಸಲಹೆಗಳು

- ಶಾಲಾ ವಾಹನ ಹಾಗೂ ಪೋಷಕರ ವಾಹನಗಳು ಶಾಲೆಗಳ ಆವರಣಕ್ಕೆ ತೆರಳಬೇಕು
- ಖಾಸಗಿ ವಾಹನಗಳ ಬದಲು ಶಾಲಾ ಬಸ್‌ಗಳಲ್ಲಿ ಮಕ್ಕಳನ್ನು ಕಳುಹಿಸಬೇಕು
- ರಸ್ತೆಯ ಅಕ್ಕಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸಬಾರದು
- ವಾಹನ ಸವಾರರು ಸಂಚಾರ ನಿಯಮವನ್ನು ಪಾಲಿಸಬೇಕು
- ಪೋಷಕರು ಮಕ್ಕಳನ್ನು ಕರೆದೊಯ್ಯಲು ಕಾರಿನ ಬದಲು ದ್ವಿಚಕ್ರ ವಾಹನ ಬಳಸಬೇಕು
- ಶಾಲಾ ಬಿಡುವ ಸಮಯಕ್ಕಿಂತ ಮುಂಚಿತವಾಗಿ ಬಂದು, ಕಾಯುತ್ತಾ ನಿಲ್ಲಬಾರದು
- ಮೆಯೋಹಾಲ್‌ವರೆಗೂ ಮೇಲ್ಸೇತುವೆ ನಿರ್ಮಿಸಿದಲ್ಲಿ ದಟ್ಟಣೆ ನಿವಾರಣೆ ಸಾಧ್ಯ
- ಶಾಲೆಗಳನ್ನು ಬೇರೆ ಬೇರೆ ಸಮಯದಲ್ಲಿ ಪ್ರಾರಂಭಿಸಲು ಹಾಗೂ ಬಿಡಲು ಕ್ರಮವಹಿಸಬೇಕು

ದಟ್ಟಣೆ: ನಿಮ್ಮ ಸಂಕಷ್ಟ ಹೇಳಿ

ನಗರದ ರಸ್ತೆಗಳಲ್ಲಿನ ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ 'ಸಂಚಾರ ತ್ರಾಸ, ಜನರ ಪ್ರಯಾಸ' ಸರಣಿ ವರದಿಯನ್ನು 'ಪ್ರಜಾವಾಣಿ' ಪ್ರಕಟಿಸುತ್ತಿದೆ. ದಟ್ಟಣೆಯಿಂದಾಗಿರುವ ಸಮಸ್ಯೆ, ಪ್ರಯಾಸವನ್ನು 50 ಪದಗಳಲ್ಲಿ ಬರೆದು ಕಳುಹಿಸಿ. ಜೊತೆಗೆ ನಿಮ್ಮ ಭಾವಚಿತ್ರ, ವಿಳಾಸ ಇರಲಿ.

ವಾಟ್ಸ್ ಆ್ಯಪ್:
96060 38256

ಚಿತ್ರಾವಳಿ

ನಗರದಲ್ಲಿ ಸೋಮವಾರ ಮೂರ್ತಿ ನಾಯಕ್ ಸ್ನೇಹ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಎಂ.ಎಚ್. ನಾಗರಾಜು ಅವರು ಬರೆದಿರುವ 'ಸಾಧನೆಯ ಶಿಖರ ಮೂರ್ತಿನಾಯಕ್' ಪುಸ್ತಕವನ್ನು ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಎಂ. ಲಮಾಣಿ ಬಿಡುಗಡೆಗೊಳಿಸಿದರು. (ಎಡದಿಂದ) ಕವಿ ಎಲ್.ಎನ್. ಮುಕುಂದರಾಜ್, ಉದ್ಯಮಿ ಎಂ.ಎನ್. ನರಸಿಂಹಮೂರ್ತಿ ನಾಯಕ್, ಕಲಾವಿದ ಎ.ಆರ್. ಗೋವಿಂದಸ್ವಾಮಿ, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಸೇವಾಲಾಲ್ ಸ್ವಾಮೀಜಿ, ಲೇಖಕಿ ಬಿ.ಟಿ. ಲಲಿತಾ ನಾಯಕ್, ಶಾಸಕ ಎಂ. ಚಂದ್ರಪ್ಪ, ಮಾಜಿ ಶಾಸಕರಾದ ಎಚ್. ನಿಂಗಪ್ಪ, ಮನೋಹರ್ ಐನಾಪುರ್, ಆಡಿಟ್ ನಾಗರಾಜ್ ಇದ್ದರು.

ಪ್ರಧಾನ ಮಂತ್ರಿ ಸ್ವನಿಧಿ ರಾಜ್ಯ ಸಂಚಾಲಕರಾದ ಎಸ್.ಎ. ರಾಮದಾಸ್ ಅವರ ಇತ್ತೀಚೆಗೆ ವಿಜಯನಗರದ ದಿನಪತ್ರಿಕಾ ವಿತರಕರ ಕೇಂದ್ರಗಳಿಗೆ ಭೇಟಿ ನೀಡಿದ್ದರು. ದಿನಪತ್ರಿಕೆ ವಿತರಕರ ಅಹವಾಲು ಸ್ವೀಕರಿಸಿ, ವಿತರಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ನೀಡುವ ಭರವಸೆ ನೀಡಿದರು.

ಬಗರ್‌ಹುಕುಂ: 6 ತಿಂಗಳಲ್ಲಿ ವಿಲೇವಾರಿ

ಬೆಂಗಳೂರು: ಅಕ್ರಮ– ಸಕ್ರಮ ಯೋಜನೆಯಡಿ ನಮೂನೆ 50, 53 ಮತ್ತು 57ರ ಅಡಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಆರು ತಿಂಗಳೊಳಗೆ ಸಂಪೂರ್ಣ ವಿಲೇವಾರಿ ಮಾಡಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಕಾಸಸೌಧದಲ್ಲಿ ಸೋಮವಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿ, 'ಯಾವುದೇ ಅರ್ಜಿ ಇತ್ಯರ್ಥವಾಗದೇ ಬಾಕಿ ಉಳಿಯಬಾರದು ಮತ್ತು ಅರ್ಹ ಫಲಾನುಭವಿಗಳಿಗೆ ಸಾಗುವಳಿ ಚೀಟಿ ನೀಡಬೇಕು' ಎಂದು ಕಟ್ಟುನಿಟ್ಟಾಗಿ ಹೇಳಿದರು.

ಬಗರ್‌ಹುಕುಂ ಅರ್ಜಿಗಳು ವಿಲೇವಾರಿಯಾಗದ ವಿಚಾರವನ್ನು ಪ್ರಸ್ತಾಪಿಸಿದ ಸಚಿವರು, ಅರ್ಜಿ ನಮೂನೆ 50, 53, 57ಕ್ಕೆ ಸಂಬಂಧಿಸಿ ಸಕ್ರಮಕ್ಕೆ ಕೋರಿ ಸಾವಿರಾರು ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಈ ಅರ್ಜಿಗಳು ವಿಲೇವಾರಿ ಆಗದ ಕಾರಣ ರೈತರು ದಿನವೂ ಸರ್ಕಾರಿ ಕಚೇರಿಗಳಿಗೆ ಅಲೆಯುವಂತಾಗಿದೆ. ಆದ್ದರಿಂದ ಎಲ್ಲಾ ಅರ್ಜಿಗಳನ್ನು ಆರು ತಿಂಗಳೊಳಗೆ ವಿಲೇವಾರಿ ಮಾಡಬೇಕು ಎಂದು ತಾಕೀತು ಮಾಡಿದರು.

'ಪುಸ್ತಕ ಪ್ರಕಟವಾದ ವರ್ಷವೇ ಖರೀದಿಸಲಿ'

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ಕರೀಗೌಡ ಬೀಚನಹಳ್ಳಿ ಆಶಯ

ಪ್ರಜಾವಾಣಿ ವಾರ್ತೆ

ಕರ್ನಾಟಕ ಪ್ರಕಾಶಕರ ಸಂಘದ ವತಿಯಿಂದ ಕರೀಗೌಡ ಬೀಚನಹಳ್ಳಿ ಅವರನ್ನು ಸನ್ಮಾನಿಸಲಾಯಿತು. ಲೇಖಕಿ ಡಾ. ವಸುಂಧರಾ ಭೂಪತಿ, ಅಭಿನವ ರವಿಕುಮಾರ್, ರವೀಂದ್ರನಾಥ್ ಸಿರಿವರ, ಸೃಷ್ಟಿ ನಾಗೇಶ್, ಪ್ರಕಾಶಕ ರಮೇಶ ಉಡುಪ, ವಸುಧೇಂದ್ರ, ಪ್ರಕಾಶ್ ಕಂಬತ್ತಳ್ಳಿ ಹಾಗೂ ಪತ್ರಕರ್ತ ಜಿ.ಎನ್. ಮೋಹನ್ ಇದ್ದಾರೆ

ಬೆಂಗಳೂರು: 'ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳನ್ನು ಪ್ರಕಟಗೊಂಡ ವರ್ಷವೇ ಖರೀದಿ ನಡೆಸಬೇಕಾದದ್ದು ಸರ್ಕಾರದ ಕರ್ತವ್ಯ' ಎಂದು ಇಲಾಖೆಯ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷ ಕರೀಗೌಡ ಬೀಚನಹಳ್ಳಿ ತಿಳಿಸಿದರು.

ಕರ್ನಾಟಕ ಪ್ರಕಾಶಕರ ಸಂಘ ನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ಅಭಿನಂದನಾ ಸಭೆಯಲ್ಲಿ ಮಾತನಾಡಿದ ಅವರು, 'ಸಂಕಷ್ಟದಲ್ಲಿರುವ ಪುಸ್ತಕೋದ್ಯಮಕ್ಕೆ ನೆರವಾಗಲು ನಾನು ಶಕ್ತಿಮೀರಿ ಪ್ರಯತ್ನಿಸುತ್ತೇನೆ. ಗುಣಮಟ್ಟದ, ಓದುಗರಿಗೆ ಅಗತ್ಯವಿರುವ ಪುಸ್ತಕಗಳ ಆಯ್ಕೆ ಹಾಗೂ ಖರೀದಿ ಪಾರದರ್ಶಕವಾಗಿ ನಡೆಯಬೇಕು. ಇದನ್ನು ಎಲ್ಲರೂ ಕನ್ನಡ ಕಟ್ಟುವ ಕೆಲಸವೆಂದು ಭಾವಿಸಬೇಕು' ಎಂದು ಹೇಳಿದರು.

ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ, 'ಪ್ರಸಾರಾಂಗದ ನಿರ್ದೇಶಕರಾಗಿದ್ದ ಕರೀಗೌಡ ಬೀಚನಹಳ್ಳಿ, ಸರ್ಕಾರದ ವಿವಿಧ ಸಮಿತಿಗಳಲ್ಲಿ ನೇರ ನಿಷ್ಠುರ ನಡವಳಿಕೆಗೆ ಹೆಸರಾದವರಾಗಿದ್ದಾರೆ. ಅವರು ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರಾಗಿರುವುದು ನಮಗೆಲ್ಲ ಸಂತೋಷವಾಗಿದೆ' ಎಂದರು.

ಪ್ರಧಾನ ಕಾರ್ಯದರ್ಶಿ ಅಭಿನವ ರವಿಕುಮಾರ್, 'ಗ್ರಂಥಾಲಯ ಇಲಾಖೆಯಲ್ಲಿ ವರ್ಷದಲ್ಲಿ ನಾಲ್ಕು ಬಾರಿ ಪುಸ್ತಕಗಳನ್ನು ಆಹ್ವಾನಿಸಿ, ಪಟ್ಟಿ ಬಿಡುಗಡೆ ಮಾಡಬೇಕು. ಜಿ.ಎಚ್. ನಾಯಕ್ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಹಾಗೆ ಮಾಡಿದ್ದರು' ಎಂದು ಹೇಳಿದರು.

ಸಂಘಟನಾ ಕಾರ್ಯದರ್ಶಿ ಸೃಷ್ಟಿ ನಾಗೇಶ್, 'ರಾಜ್ಯ ಮಟ್ಟದ ಆಯ್ಕೆ ಸಮಿತಿಯು ಅಂತಿಮಗೊಳಿಸಿದ ಪಟ್ಟಿಯನ್ನು ಸರ್ಕಾರಕ್ಕೆ ಕಳಿಸಬೇಕಾದ ಅಗತ್ಯತೆ ಇರುವುದಿಲ್ಲ. ಹಾಗೆಯೇ, ಆಯವ್ಯಯವನ್ನು ಆಯಾ ಜಿಲ್ಲಾಧಿಕಾರಿಗಳು ಅನುಮೋದಿಸಿದರೆ ಸಾಕಾಗುತ್ತದೆ. ಆದರೆ, ಗ್ರಂಥಾಲಯ ಇಲಾಖೆಯಲ್ಲಿ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ನಿಧಾನಗೊಳಿಸಲು ಅವಶ್ಯಕವಿಲ್ಲದ ಕ್ರಮಗಳನ್ನು ಅನುಸರಿಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಛಂದ ಪುಸ್ತಕದ ವಸುಧೇಂದ್ರ, 'ಪುಸ್ತಕಗಳನ್ನು ಆಯಾ ವರ್ಷದಲ್ಲಿ ಖರೀದಿಸದೆ, ನಾಲ್ಕು ವರ್ಷದ ನಂತರ ಮೊದಲ ಮುದ್ರಣದ ಪುಸ್ತಕಗಳನ್ನು ಸರಬರಾಜು ಮಾಡಲು ಸೂಚಿಸಲಾಗುತ್ತಿದೆ. ನಮ್ಮ ಪುಸ್ತಕಗಳು ಆರು ತಿಂಗಳಿನಲ್ಲಿ ಮರುಮುದ್ರಣ ಆಗಿರುತ್ತವೆ. ಆದ್ದರಿಂದ ಇಂಥ ನಿಯಮಗಳನ್ನು ಬದಲಿಸಬೇಕು' ಎಂದರು.

'ಪೃಷ್ಠದ ಮೇಲೆ ಹೊಡೆತ ಚಿತ್ರಹಿಂಸೆ ಆಗದು'

ಪ್ರಜಾವಾಣಿ ವಾರ್ತೆ



ಅಹಮದಾಬಾದ್: 'ವ್ಯಕ್ತಿಯ ಪೃಷ್ಠಕ್ಕೆ ಬಡಿಗೆಯಿಂದ 3 ರಿಂದ 6 ಏಟುಗಳನ್ನು ನೀಡುವುದು ಕಸ್ಟಡಿಯಲ್ಲಿ ನೀಡುವ ಚಿತ್ರಹಿಂಸೆಯಾಗದು. ಅಲ್ಲದೇ, ಇಂಥ ಕ್ರಮವನ್ನು ಪೊಲೀಸ್ ಕಸ್ಟಡಿಯಲ್ಲಿನ ಚಿತ್ರಹಿಂಸೆ ಜೊತೆ ಹೋಲಿಸಲಾಗದು' ಎಂದು ನಾಲ್ವರು ಪೊಲೀಸರು ಗುಜರಾತ್ ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಗುಜರಾತ್‌ನ ಖೇಡಾ ಜಿಲ್ಲೆಯ ಉಂಡೇಲಾ ಗ್ರಾಮದಲ್ಲಿ 2022ರ ಅಕ್ಟೋಬರ್ 4ರಂದು ಮೂವರು ಮುಸ್ಲಿಂ ವ್ಯಕ್ತಿಗಳನ್ನು ಕಂಬಕ್ಕೆ ಕಟ್ಟಿ ಥಳಿಸಿದ ಕೃತ್ಯದಲ್ಲಿ ನ್ಯಾಯಾಂಗ ನಿಂದನೆ ಆರೋಪ ಎದುರಿಸುತ್ತಿರುವ ನಾಲ್ವರು ಪೊಲೀಸರು ಈ ಪ್ರಮಾಣಪತ್ರ ಸಲ್ಲಿಸಿದ್ದಾರೆ.

'ಅರ್ಜಿದಾರರ ಪೃಷ್ಠದ ಮೇಲೆ ಬಡಿಗೆಗಳಿಂದ ಹೊಡೆಯುವುದನ್ನು ಒಪ್ಪಲಾಗದಿದ್ದರೂ ಇದನ್ನು ಕಸ್ಟಡಿಯಲ್ಲಿ ನೀಡಿದ ಚಿತ್ರಹಿಂಸೆ ಎನ್ನಲಾಗದು' ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

ಪೊಲೀಸ್ ಕಸ್ಟಡಿಯಲ್ಲಿ ಚಿತ್ರಹಿಂಸೆ ನೀಡಕೂಡದು ಎಂಬ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಆರೋಪದಡಿ, ಇನ್‌ಸ್ಪೆಕ್ಟರ್ ಎ.ವಿ. ಪಾರ್ಮಾರ್, ಸಬ್‌ಇನ್‌ಸ್ಪೆಕ್ಟರ್ ಡಿ.ಬಿ. ಕುಮಾವತ್, ಇಬ್ಬರು ಕಾನ್‌ಸ್ಟೆಬಲ್‌ಗಳಾದ ಕೆ.ಎಲ್. ದಾಭಿ ಮತ್ತು ಆರ್.ಆರ್. ದಾಭಿ ವಿರುದ್ಧ ನ್ಯಾಯಧೀಶರಾದ ಎ.ಎಸ್. ಸುಪೆಹಿಯ ಮತ್ತು ಎಂ.ಆರ್ ಮೆಂಗ್ಡೆ ಅವರಿದ್ದ ವಿಭಾಗೀಯ ಪೀಠವು ನ್ಯಾಯಾಂಗ ನಿಂದನೆ ಕಾಯ್ದೆ ಅಡಿ ದೋಷಾರೋಪ ನಿಗದಿಪಡಿಸಿದೆ. .

ಈ ಪ್ರಕರಣವು ಹೈಕೋರ್ಟ್‌ನಲ್ಲಿ ಬುಧವಾರ ವಿಚಾರಣೆಗೆ ಬರಲಿದೆ.

ನ್ಯೂ ಜೆರ್ಸಿ ಉನ್ನತ ನ್ಯಾಯಾಲಯದ ನ್ಯಾಯಾಧೀಶ ಅರವಿಂದ ಐತಾಳ

'ಕಿರಿಯ ವಕೀಲರಿಗೆ ಉತ್ತೇಜನ ಅವಶ್ಯ'

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ನ್ಯಾಯಾಧೀಶ ಅರವಿಂದ ಐತಾಳ (ಮಧ್ಯದಲ್ಲಿ ಪೇಟ ಧರಿಸಿದವರು) ಅವರನ್ನು ಬೆಂಗಳೂರು ವಕೀಲರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಘದ ಹೈಕೋರ್ಟ್ ಘಟದ ಉಪಾಧ್ಯಕ್ಷ ಬಿ.ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಅಧ್ಯಕ್ಷರಾದ ವಿವೇಕ್ ಸುಬ್ಬಾರೆಡ್ಡಿ, ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮತ್ತು ಸಂಘದ ಹೈಕೋರ್ಟ್ ಘಟಕದ ಜಂಟಿ ಕಾರ್ಯದರ್ಶಿ ಎಂ.ಚಾಮರಾಜ ಇದ್ದರು.

ಬೆಂಗಳೂರು: 'ಹಿರಿಯ ವಕೀಲರು ಕಿರಿಯ ವಕೀಲರನ್ನು ಉತ್ತೇಜಿಸಬೇಕು ಮತ್ತು ಅವರಿಗೆ ಆಗಾಗ್ಗೆ ತಮ್ಮ ಅನುಭವಗಳ ಪ್ರಬುದ್ಧತೆಯನ್ನು ಧಾರೆಯೆರೆದು ಮುಖ್ಯವಾಹಿನಿಯಲ್ಲಿ ಸಶಕ್ತರಾಗುವಂತಹ ಅವಕಾಶಗಳನ್ನು ಕಲ್ಪಿಸಬೇಕು' ಎಂದು ನ್ಯೂ ಜೆರ್ಸಿ ಉನ್ನತ ನ್ಯಾಯಾಲಯದ ನ್ಯಾಯಾಧೀಶ ಅರವಿಂದ ಐತಾಳ ಅಭಿಪ್ರಾಯಪಟ್ಟರು.

'ಬೆಂಗಳೂರು ವಕೀಲರ ಸಂಘ'ದ ವತಿಯಿಂದ ಹೈಕೋರ್ಟ್‌ನ ವಕೀಲರ ಸಭಾಂಗಣ ಮತ್ತು ಸಿಟಿ ಸಿವಿಲ್ ಕೋರ್ಟ್‌ನ ವಕೀಲರ ಭವನದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ಎರಡು ಪ್ರತ್ಯೇಕ ಕಾರ್ಯಕ್ರಮಗಳಲ್ಲಿ, 'ಕಾನೂನಿನಲ್ಲಿ ವೃತ್ತಿ ನೈಪುಣ್ಯ ವೃದ್ಧಿ ಮತ್ತು ವಿಚಾರಣಾ ನ್ಯಾಯಾಲಯದಲ್ಲಿ ವಕೀಲಿಕೆ' ಕುರಿತಂತೆ ಕ್ಲುಪ್ತ ಉಪನ್ಯಾಸ ನೀಡಿದರು.

ಅಮೆರಿಕದ ನ್ಯಾಯಾಂಗ ವ್ಯವಸ್ಥೆಯ ಕುರಿತಂತೆ ಪ್ರಸ್ತಾಪಿಸಿದ ಅವರು, 'ಅಮೆರಿಕದ ಸೇನಾ ಅಧಿಕಾರಿಗಳು ಮತ್ತು ನ್ಯಾಯಾಂಗ ಅಧಿಕಾರಿಗಳು ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ಸ್ಥಳೀಯ ಕಾನೂನುಗಳ ಅರಿವನ್ನು ಹೊಂದಿರಬೇಕಾಗುತ್ತದೆ. ಅಂತೆಯೇ ಅವುಗಳಿಗೆ ಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಆದರೆ, ಎರಡೂ ಅಂಗಗಳ ಕಾರ್ಯವೈಖರಿ ತುಂಬಾ ಭಿನ್ನವಾಗಿರುತ್ತದೆ' ಎಂದರು.

ಮುಖ್ಯ ಅತಿಥಿಯಾಗಿದ್ದ ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಮಾತನಾಡಿ, 'ಇಂದಿನ ದಿನಗಳಲ್ಲಿ ಯುವ ವಕೀಲರು ಎದುರಾಳಿ ವಕೀಲರ ಜೊತೆ ಸೆಣಸಾಡಲು ದಿನದ 24 ಗಂಟೆಗಳಲ್ಲೂ ಕಾರ್ಯತತ್ಪರ ಆಗಿರಬೇಕಾದಂತಹ ಸನ್ನಿವೇಶ ಇದೆ' ಎಂದರು. ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ ಮಾತನಾಡಿ, ಅರವಿಂದ ಐತಾಳರ ಸಾಧನೆಯ ಬಗ್ಗೆ ಪ್ರಶಂಸಿಸಿದರು.

ಹೈಕೋರ್ಟ್ ಸಭಾಂಗಣದಲ್ಲಿ ಹಿರಿ ಕಿರಿಯ ವಕೀಲರು ಮತ್ತು ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ಗಳ ಪ್ರಧಾನ ನ್ಯಾಯಾಧೀಶ ಮುರಳೀಧರ ಪೈ, ನ್ಯಾಯಾಧೀಶ ರಘುನಾಥ್ ಹಾಗೂ ವಕೀಲ ವೃಂದದವರು ಇದ್ದರು.

ಪರಿಚಯ: ಅರವಿಂದ ಐತಾಳರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯವರು. ಇವರ ತಂದೆ ನಾಗಪ್ಪಯ್ಯ ಐತಾಳರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸೇವೆ ಸಲ್ಲಿಸಿದವರು. ಕನ್ನಡದಲ್ಲಿ ಅನೇಕ ನಾಟಕಗಳನ್ನು ರಚಿಸಿದ್ದಾರೆ. ಅರವಿಂದ ಐತಾಳರು 1969ರಲ್ಲಿ ತಮ್ಮ 5 ನೇ ವಯಸ್ಸಿನಲ್ಲಿ ಅಮೆರಿಕಕ್ಕೆ ತೆರಳಿದರು. ಅರ್ಥಶಾಸ್ತ್ರ ಮತ್ತು ರಾಜಕೀಯ ವಿಜ್ಞಾನದಲ್ಲಿ ಪದವಿ ಪೂರ್ವ ವಿದ್ಯಾಭ್ಯಾಸ ಪೂರೈಸಿದ ಅವರು ವಾಯವ್ಯ ವಿಶ್ವವಿದ್ಯಾಲಯದಿಂದ ಪದವಿ ಮತ್ತು ರುತ್ಗರ್ಸ್ ವಿಶ್ವವಿದ್ಯಾಲಯದಲ್ಲಿ ಸ್ಕೂಲ್ ಆಫ್ ಲಾದಿಂದ ಕಾನೂನು ಪದವಿ ಪಡೆದರು. ಅಮೆರಿಕ ಸೇನೆಯಲ್ಲಿ ಅಧಿಕಾರಿಯಾಗಿ ನೇಮಕಗೊಂಡರು. ನಂತರ ವಿವಿಧೆಡೆ ಕ್ರಿಮಿನಲ್ ಪ್ರಾಸಿಕ್ಯೂಟರ್ ಆಗಿ ಸೇವೆ ಸಲ್ಲಿಸಿ 2022ರ ಮಾರ್ಚ್‌ನಲ್ಲಿ ನ್ಯೂಜೆರ್ಸಿಯ ಉನ್ನತ ಕೋರ್ಟ್‌ಗೆ ನ್ಯಾಯಾಧೀಶರಾಗಿ ನೇಮಕಗೊಂಡರು.

ಪುನರ್ವಸತಿಗೆ ಆಗ್ರಹಿಸಿ ಪ್ರತಿಭಟನೆ

ಯಲಹಂಕ: ಜಾಲಾ ಹೋಬಳಿ ಕಟ್ಟಿಗೇನಹಳ್ಳಿಯ ಸರ್ಕಾರಿ ಜಾಗದಲ್ಲಿ ವಾಸಿಸುತ್ತಿದ್ದ ಬಡಕುಟುಂಬಗಳ ಮನೆಗಳನ್ನು ತೆರವುಗೊಳಿಸಿರುವುದನ್ನು ಖಂಡಿಸಿ, ಅವರಿಗೆ ಕೂಡಲೇ ಪುನರ್ವಸತಿ ಕಲ್ಪಿಸಿಕೊಡುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ (ಕೆಂಪುಸೇನೆ)ಕಾರ್ಯಕರ್ತರು, ಸಂತ್ರಸ್ಥರು ಸೋಮವಾರ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಮಿನಿ ವಿಧಾನಸೌಧದ ಎದುರು ಜಮಾಯಿಸಿದ ನೂರಾರು ಪ್ರತಿಭಟನಕಾರರು, ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಸಮಿತಿಯ ರಾಜ್ಯಪ್ರಧಾನ ಕಾರ್ಯದರ್ಶಿ ಬಿ.ಶ್ರೀನಿವಾಸ್, 'ಏಳೆಂಟು ವರ್ಷಗಳ ಹಿಂದೆ ಯಲಹಂಕ ರೈಲ್ವೆ ನಿಲ್ದಾಣದ ಬಳಿ ವಾಸಿಸುತ್ತಿದ್ದ ಈ 17 ಕುಟುಂಬಗಳಿಗೆ ಬದಲಿ ಜಾಗ ನೀಡಿ ಕಟ್ಟಿಗೇನಹಳ್ಳಿ ಗ್ರಾಮದ ಸರ್ವೆ ನಂ.28ರ ಜಾಗಕ್ಕೆ ಸ್ಥಳಾಂತರ ಮಾಡಲಾಗಿತ್ತು. ಈ ಮನೆಗಳನ್ನು ಅಕ್ರಮ-ಸಕ್ರಮಗೊಳಿಸುವ ಸಂಬಂಧ 94ಸಿಸಿ ಅಡಿಯಲ್ಲಿ ಸರ್ಕಾರಕ್ಕೆ ಅರ್ಜಿಯನ್ನೂ ಸಲ್ಲಿಸಿದ್ದಾರೆ. ಆದರೆ ಕಂದಾಯ ಅಧಿಕಾರಿಗಳು ಏಕಾಏಕಿ ಪೊಲೀಸರ ಭದ್ರತೆಯೊಂದಿಗೆ ಜೆಸಿಬಿ ಯಂತ್ರಗಳ ಮೂಲಕ ಮನೆಗಳನ್ನು ತೆರವುಗೊಳಿಸಿದ್ದಾರೆ. ಇದರಿಂದ ಈ ಕುಟುಂಬಗಳು ಬೀದಿಪಾಲಾಗಿವೆ' ಎಂದು ದೂರಿದರು.

ನಗರದಲ್ಲಿ ಇಂದು

ಶಕುಂತಲಾ ಜೈನ್ ಅವರ ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ: ಹರಿಕೃಷ್ಣ ಮರಮ್, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ವಿವಿಧ ಕೃತಿಗಳ ಬಿಡುಗಡೆ, ಉಚಿತ ಪುಸ್ತಕ ವಿತರಣಾ ಸಮಾರಂಭ: ಉದ್ಘಾಟನೆ: ಶಿವರಾಜ ಎಸ್. ತಂಗಡಗಿ, ಪುಸ್ತಕ ವಿತರಣೆ: ಚಂದ್ರಶೇಖರ ಕಂಬಾರ, ಅತಿಥಿಗಳು: ಎನ್. ಮಂಜುಳ, ಕೆ. ಧರಣಿದೇವಿ ಮಾಲಗತ್ತಿ, ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಜಿ, ಶಾ.ಮಂ. ಕೃಷ್ಣರಾಯ, ಬಸವರಾಜ ಕಲ್ಗುಡಿ, ಲಕ್ಷ್ಮಣ ಕೊಡಸೆ, ಎಂ.ಜಿ. ಹೆಗಡೆ, ಎ.ಕೆ. ಗೌತಮ್, ಜಯಂತ್ ಕಾಯ್ಕಿಣಿ, ಕೆ.ಸಿ. ಮಂಜುಳ, ಲಲಿತಾ ಭಟ್, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 11



ಚಂದ್ರಶೇಖರ ಕಂಬಾರ

ಜಯಪ್ರಕಾಶ್ ನಾರಾಯಣ ಜಯಂತಿ ಹಾಗೂ ಜೆ.ಪಿ. ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಪ್ರಶಸ್ತಿ ಪುರಸ್ಕೃತರು: ಬಿ.ಆರ್. ಪಾಟೀಲ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಅತಿಥಿಗಳು: ನಟರಾಜ್ ಹುಳಿಯಾರ್, ಟಿ.ಎನ್. ಸೀತಾರಾಂ, ಉಪಸ್ಥಿತಿ: ಎಂ.ಪಿ. ನಾಡಗೌಡ, ಮೋಹನ್ ಕೊಂಡಜ್ಜಿ, ವಸುಂಧರ ಭೂಪತಿ, ಆಯೋಜನೆ: ಭಾರತ ಯಾತ್ರ ಕೇಂದ್ರ, ಲೋಕನಾಯಕ ಜೆ.ಪಿ. ವಿಚಾರ ವೇದಿಕೆ, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಮನು ಬಳಿಗಾರ್, ಪ್ರಶಸ್ತಿ ಪುರಸ್ಕೃತರು: ವಸುಮತಿ ಉಡುಪ, ಮಲ್ಲಿಕಾರ್ಜುನ ಹಿರೇಮಠ, ಬಿ.ಟಿ. ಲಲಿತಾ ನಾಯಕ್, ಅಮರೇಶ ನುಗಡೋಣಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

'ವೀರಭದ್ರೇಶ್ವರ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ಸದಾಶಿವ ಸ್ವಾಮೀಜಿ, ಉಪಸ್ಥಿತಿ: ವಿನಯ್ ಗುರೂಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಪ್ರಶಸ್ತಿ ಪ್ರದಾನ: ಲಕ್ಷ್ಮಿ ಹೆಬ್ಬಾಳ್ಕರ್, ಪ್ರಶಸ್ತಿ ಪುರಸ್ಕೃತರು: ಎಸ್. ಸೋಮನಾಥ್, ಅತಿಥಿ: ಎ.ಎಸ್. ಕಿರಣಕುಮಾರ್, ಅಧ್ಯಕ್ಷತೆ: ಪ್ರದೀಪ ಕಂಕಣವಾಡಿ, ಆಯೋಜನೆ: ವೀರಶೈವ ಲಿಂಗಾಯತ ಸಂಘಟನಾ ವೇದಿಕೆ, ಸ್ಥಳ: ಪುರಭವನ, ಸಂಜೆ 6

'ಕಾವ್ಯೇಷು ರಮ್ಯಂ ನಾಟಕಂ' ನಾಟಕ ಸ್ಪರ್ಧೆ: ಉದ್ಘಾಟನೆ: ಸುಂದರ್ ರಾಜ್, ಅತಿಥಿ: ನಂದಕುಮಾರ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಪ್ರವಚನ ವಾಹಿನಿ: 'ಪಿತೃ ಕಲ್ಪ' ಕುರಿತು ಉಪನ್ಯಾಸ: ಕೃಷ್ಣರಾಜಭಟ್ ಕುಟ್ಪಾಡಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಪಾರಿಜಾತ' ನಾಟಕ ಪ್ರದರ್ಶನ: ರಚನೆ: ಕೆ.ವೈ. ನಾರಾಯಣಸ್ವಾಮಿ, ನಿರ್ದೇಶನ: ಬಿ. ಜಯಶ್ರೀ, ಸಂಗೀತ: ಪ್ರವೀಣ್ ಡಿ. ರಾವ್, ಸುಶೀಲ್ ಶರ್ಮಾ, ರಂಗ ಸಜ್ಜಿಕೆ: ಶಶಿಧರ್ ಅಡಪ, ಅರುಣ್ ಸಾಗರ್, ಬೆಳಕು ವಿನ್ಯಾಸ: ಅರುಣ್ ಡಿ.ಟಿ., ಆಯೋಜನೆ: ಸ್ಪಂದನಾ, ಸ್ಥಳ: ರಂಗಶಂಕರ, ಸಂಜೆ 7.30

ಬಿ. ಜಯಶ್ರೀ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ತಂತ್ರಜ್ಞಾನ



ಬಾಯಿಯೊಳಗೆ ಆಕ್ಟೋಪಸ್ ಗುಳಿಗೆ

ಕೊಳ್ಳೇಗಾಲ ಶರ್ಮ

ಆಕ್ಟೋಪಸ್ ಗೊತ್ತಲ್ಲ? ಅಷ್ಟಪಾದಿ. ಎಂಟು ಬಾಹುಗಳಿರುವ ಸಮುದ್ರಜೀವಿ. ಅಂಗೈಯಗಲದಿಂದ ದೊಡ್ಡ ತೊಟ್ಟಿಯನ್ನು ತುಂಬುವಷ್ಟು ದೊಡ್ಡ ಆಕ್ಟೋಪಸ್‌ಗಳಿವೆ. ಇವೆಲ್ಲವುಗಳ ವಿಶೇಷ ಎಂದರೆ ಅವುಗಳ ಬಾಹುಗಳು. ಬಾಹುಗಳ ಒಳಮೈಯಲ್ಲಿ ಇರುವ ಪುಟ್ಟ ಪುಟ್ಟ ಸಕರುಗಳೆನ್ನುವ ಹೀರುಕಗಳು ಬೇಟೆಯ ದೇಹಕ್ಕೆ ಭದ್ರವಾಗಿ ಅಂಟಿಕೊಳ್ಳುತ್ತವೆ. ಅನಂತರ ಆ ಜೀವಿಗಳ ಮೈ ಸೀಳಿ, ಒಳಗಿರುವ ರಸವನ್ನೆಲ್ಲ ಹೀರಿಕೊಳ್ಳುತ್ತವೆ. ಎಷ್ಟು ಭದ್ರವಾಗಿ ಅಂಟಿಕೊಳ್ಳುತ್ತವೆ ಎಂದರೆ, ಸಾಮಾನ್ಯವಾಗಿ ಎಳೆದು ಬಿಡಿಸಲಾಗದಷ್ಟು ಭದ್ರವಾಗಿ ಮುಚ್ಚಿಕೊಂಡಿರುವ ಕಪ್ಪೆಚಿಪ್ಪಿನ ಪಕಳೆಗಳನ್ನು ಸಲೀಸಾಗಿ ಬಿಡಿಸಬಲ್ಲುವು. ಇಂತಹ ಸಕರುಗಳನ್ನು ನಮ್ಮ ಬಾಯಿಯಲ್ಲಿ ಇಟ್ಟರೆ ಹೇಗೆ? ಆಗ ಅವು ನಾವು ಸುಲಭವಾಗಿ ಅರಗಿಸಿಕೊಳ್ಳಲಾಗದ ಔಷಧಗಳನ್ನು ದೇಹಕ್ಕೆ ಕೂಡಿಸುತ್ತವಂತೆ. ಆಕ್ಟೋಪಸ್‌ನ ಹೀರುಕಗಳನ್ನೇ ಹೋಲುವ ಪಾಲಿಮರ್ ಗುಳಿಗೆಗಳನ್ನು ಬಾಯಿಯೊಳಗಿಟ್ಟು ಇನ್ಸುಲಿನ್‌ನಂತಹ ಔಷಧಗಳನ್ನು ನೋಯಿಸದೆಯೇ ದೇಹಕ್ಕೆ ನೀಡುವ ಉಪಾಯದ ಬಗ್ಗೆ ಸೈನ್ಸ್ ಟ್ರಾನ್ಸ್‌ಲೇಶನಲ್ ಮೆಡಿಸಿನ್ ಪತ್ರಿಕೆ ಮೊನ್ನೆ ವರದಿ ಮಾಡಿದೆ. ಸ್ವಿಟ್ಜರ್ಲೆಂಡಿನ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸಸ್ ಸಂಸ್ಥೆಯ ವಿಜ್ಞಾನಿ ಜೀನ್-ಕ್ರಿಸ್ಟೋಫೀ ಲೆರೂ ಮತ್ತು ಚೀನಾದ ಗುವಡಾಂಗ್ ಪ್ರಾದೇಶಿಕ ಉನ್ನತ ವಸ್ತು ಸಂಶೋಧನಾಲಯದ ವಿಜ್ಞಾನಿ ಶೀ ಲುವೋ ಮತ್ತು ಸಂಗಡಿಗರು ಹೀಗೊಂದು ಔಷಧವನ್ನು ನೀಡುವ ವಿಶಿಷ್ಟ ಸಾಧನವನ್ನು ಸೃಷ್ಟಿಸಿದ್ದಾರೆ.

ವೈದ್ಯಕೀಯದಲ್ಲಿ ಕೆಲವೊಮ್ಮೆ ರೋಗಕ್ಕಿಂತಲೂ ಮದ್ದೇ ನೋವನ್ನು ತರುವುದುಂಟು. ಮದ್ದಿನಿಂದಾಗಿಯೇ ಆಗುವ ಸಂಕಟಗಳು ಒಂದು ಕಡೆ. ಇನ್ನೊಂದು ಕಡೆ, ಕೆಲವು ಔಷಧಗಳನ್ನು ದೇಹದೊಳಗೆ ಹೊಗಿಸುವುದೇ ಕಷ್ಟ. ಉದಾಹರಣೆಗೆ, ಮಧುಮೇಹಿಗಳಿಗೆ ನೀಡುವ ಇನ್ಸುಲಿನನ್ನು ಗುಳಿಗೆಯಾಗಿ ಕೊಡಲು ಸಾಧ್ಯವಿಲ್ಲ. ಏಕೆಂದರೆ ಬಾಯಿಯಲ್ಲಿರುವ ಜೊಲ್ಲು, ಜಠರದಲ್ಲಿರುವ ಆಮ್ಲಗಳು ಅದನ್ನು ನಿಶ್ಯಕ್ತವಾಗಿಸಿಬಿಡುತ್ತವೆ. ಜೊತೆಗೆ ಇನ್ಸುಲಿನಿನಂತಹ ಪ್ರೊಟೀನುಗಳು ಸ್ವಲ್ಪ ದೊಡ್ಡ ಗಾತ್ರದ ಅಣುಗಳು. ಇವು ನೀರು, ಸಕ್ಕರೆಯಂತಹ ರಾಸಾಯನಿಕಗಳಂತೆ ರಕ್ತನಾಳಗಳೊಳಗೆ ನುಗ್ಗುವುದು ಕಷ್ಟ. ಹೀಗಾಗಿ ಅವನ್ನು ನೇರವಾಗಿ ರಕ್ತನಾಳದೊಳಗೇ ಚುಚ್ಚುಮದ್ದಿನ ಮೂಲಕ ಚುಚ್ಚಬೇಕಾಗುತ್ತದೆ.

ಇನ್ಸುಲಿನ್‌ನಂತಹ ದೊಡ್ಡ ಅಣುಗಳನ್ನು ಪೂರೈಸುವುದಕ್ಕಾಗಿ ಬಾಯೊಳಗೆ ಅಂಟಿಸಿಕೊಳ್ಳುವ ಗುಳಿಗೆಗಳಿವೆ. ಹಾಗೆಯೇ, ಚರ್ಮದ ಮೇಲೆ ಅಂಟಿಸುವ ಪ್ಯಾಚು ಅಥವಾ ತೇಪೆಗಳಿವೆ. ಇವು ಚರ್ಮದ ಒಳಗಿರುವ ಸೂಕ್ಷ್ಮ ರಕ್ತನಾಳಗಳೊಳಗೆ ಔಷಧಗಳನ್ನು ಕೂಡಿಸಬಲ್ಲವು. ಆದರೆ ಅಲ್ಲೂ ಒಂದು ಸಮಸ್ಯೆ ಇದೆ. ತೇಪೆ ಅಥವಾ ಗುಳಿಗೆಯಲ್ಲಿರುವ ಔಷಧದಲ್ಲಿ ಬಹಳಷ್ಟು ಹಾಗೆಯೇ ಉಳಿದು ಬಿಡುತ್ತದೆ. ದೇಹದೊಳಗೆ ಹೊಗುವುದೇ ಇಲ್ಲ. ಔಷಧ ಇನ್ನಷ್ಟು ದುಬಾರಿಯಾಗುತ್ತದೆ. ಬಾಯೊಳಗಿರುವ ಲೋಳೆಪದರವನ್ನು ತೆಳ್ಳಗಾಗಿಸಿಬಿಟ್ಟರೆ ಸಮಸ್ಯೆ ಸ್ವಲ್ಪ ಕಡಿಮೆ ಆಗಬಹುದು. ಏಕೆಂದರೆ ಈ ಲೋಳೆಯ ಪದರವನ್ನು ದಾಟಿ ಪ್ರೊಟೀನ್ ಅಥವಾ ಪೆಪ್ಟೈಡು ಔಷಧಗಳು ರಕ್ತನಾಳಗಳನ್ನು ಮುಟ್ಟಲಾರವು.

ಲೋಳೆಪದರವನ್ನು ತೆಳ್ಳಗಾಗಿಸುವುದು ಹೇಗೆ? ಈ ಸಮಸ್ಯೆಗೆ ಕ್ರಿಸ್ಟೋಫಿ ಲೆರೂ ತಂಡ ಇದಕ್ಕೆ ಪರಿಹಾರವನ್ನು ಆಕ್ಟೋಪಸ್‌ನ ಹೀರುಕಗಳಲ್ಲಿ ಕಂಡುಕೊಂಡಿದೆ. ಇವು ಪುಟ್ಟ ರಬ್ಬರಿನ ಚೊಂಬುಗಳಂತೆ. ಚೊಂಬಿನೊಳಗೆ ರಸವಿರುತ್ತದೆ. ಬೇಟೆಯ ದೇಹಕ್ಕೆ ಒತ್ತಿ ಹಿಡಿದಾಗ ಚೊಂಬಿನ ಬಾಯಿಯ ಅಂಚು ಇನ್ನಷ್ಟು ಅಗಲವಾಗುತ್ತದೆ. ಚೊಂಬು ಮತ್ತು ಬೇಟೆಯ ಚರ್ಮದ ನಡುವೆ ಇರುವ ಗಾಳಿ ಖಾಲಿಯಾಗಿ ನಿರ್ವಾತವಾಗುತ್ತದೆ. ಬಾಯಿ ಬೇಟೆಗೆ ಭದ್ರವಾಗಿ ಅಂಟಿಕೊಳ್ಳುತ್ತದೆ. ಇದೇ ರೀತಿಯ ಪುಟ್ಟ ಹೀರುಕಗಳನ್ನು ತಯಾರಿಸಿ, ಔಷಧವನ್ನು ತುಂಬಿಸಿ, ರೋಗಿಯ ಬಾಯಿಯೊಳಗೆ ಅಂಟಿಸಿದರೆ ಹೇಗೆ? ಬಾಯಿಯೊಳಗೆ ಅಂಟಿಕೊಂಡಾಗ ಅದು ಲೋಳೆಯಪದರವನ್ನು ಹಿಗ್ಗಿಸಿ, ಅಥವಾ ಕದಲಿಸಿ, ಚೊಂಬಿನೊಳಗೆ ಇರುವ ಔಷಧವನ್ನು ನೇರವಾಗಿ ಲೋಳೆಪದರದಾಚೆಗೆ ಇರುವ ರಕ್ತನಾಳಗಳಿಗೆ ನೇರವಾಗಿ ತಲುಪಿಸಬಹುದೋ ಎನ್ನುವುದು ಇವರ ಯೋಚನೆಯಾಗಿತ್ತು.

ಇದಕ್ಕಾಗಿ ಲೆರೋ ತಂಡ ಒಂದು ಸೆಂಟಿಮೀಟರು ಅಗಲದ ಬಾಯಿಯ ಅಂಚು ಹಾಗೂ ಅರ್ಧ ಸೆಂಟಿಮೀಟರು ಎತ್ತರದ ಪುಟ್ಟ ಹೀರುಕಗಳನ್ನು ತ್ರೀಡಿ ಮುದ್ರಣ ತಂತ್ರಜ್ಞಾನ ಬಳಸಿ ರಚಿಸಿತು. ಇದನ್ನು ಮುದ್ರಿಸುವುದಕ್ಕೆ 'ಪಾಲಿಬೀಟಥಯೋಎಸ್ಟರ್' ಎನ್ನುವ ಅಣುವಿನ ಪಾಲಿಮರನ್ನು ಬಳಸಿದರು. ಇದು ಬೆಳಕಿಗೆ ತೆರೆದುಕೊಂಡ ಕೂಡಲೇ ರಬ್ಬರಿನಂತಾಗುತ್ತದೆ. ಬೇಕಾದ ಆಕಾರಕ್ಕೆ ಮುದ್ರಿಸಿ, ಬೆಳಕಿಗೆ ಒಡ್ಡಿದರೆ ಹೀರುಕ ಸಿದ್ಧವಾದ ಹಾಗೆ. ಈ ಪುಟ್ಟ ಹೀರುಕಗಳೊಳಗೆ 'ಡೆಸ್ಮೊಪ್ರೆಸ್ಸಿನ್' ಎನ್ನುವ ದೊಡ್ಡ ಪ್ರೊಟೀನು ಔಷಧವನ್ನು ಇಟ್ಟು ಪರೀಕ್ಷೆಗಳನ್ನು ನಡೆಸಿದರು. ಹಂದಿಯ ಬಾಯೊಳಗಿನ ಚರ್ಮದ ತುಣುಕುಗಳ ಮೇಲೆ ಇವನ್ನು ಅಂಟಿಸಿದಾಗ, ಆ ತುಣುಕುಗಳ ಮೇಲ್ಮೈ ಮೂರು ಪಟ್ಟು ಹಿಗ್ಗಿತ್ತು. ಹಾಗೆಯೇ ಔಷಧವೂ ರಕ್ತನಾಳದೊಳಗೆ ಸೇರುವುದು ಕಂಡಿತ್ತು. ಆದರೆ ಆಕ್ಟೊಪಸ್‌ನ ಹೀರುಕಗಳಂತೆ ರಚನೆ ಇಲ್ಲದಂತವುಗಳನ್ನು ಅಂಟಿಸಿದಾಗ, ಈ ಬಗೆಯಲ್ಲಿ ಚರ್ಮ ಹಿಗ್ಗಲಿಲ್ಲ. ಔಷಧವೂ ರಕ್ತವನ್ನು ಸೇರಿರಲಿಲ್ಲ.

ಅನಂತರ ಇವನ್ನು ನಾಯಿಗಳ ಬಾಯೊಳಗೆ ಅಂಟಿಸಿ ಪರೀಕ್ಷಿಸಿದ್ದಾರೆ. ಡೆಸ್ಮೊಪ್ರೆಸಿನ್ ಗುಳಿಗೆಗಳನ್ನಷ್ಟೆ ನೀಡಿದ ನಾಯಿಗಳ ರಕ್ತದಲ್ಲಿ ನಾಲ್ಕು ಗಂಟೆಯ ಸಮಯದಲ್ಲಿ ಕಾಣುವಷ್ಟೆ ಔಷಧ ಎರಡೇ ಗಂಟೆಗಳಲ್ಲಿ ಈ ಹೀರುಕಗಳನ್ನು ಬಳಸಿದ ನಾಯಿಗಳಲ್ಲಿ ಕಂಡಿತು. ಅಂದರೆ ಔಷಧದ ಪರಿಣಾಮ ಬಲು ಶೀಘ್ರವಾಗುತ್ತದೆ ಎಂದಾಯಿತು. ಹಾಗೆಯೇ ಹೀರುಕಗಳೊಳಗೆ ಲೋಳೆಯನ್ನು ಕರಗಿಸುವ ಔಷಧವನ್ನೂ ಸೇರಿಸಿ ಡೆಸ್ಮೊಪ್ರೆಸ್ಸಿನ್ ಇಟ್ಟಾಗ ಇನ್ನೂ ಹೆಚ್ಚು ಪ್ರಮಾಣದ ಔಷಧ ರಕ್ತವನ್ನು ಸೇರಿತಂತೆ. ಮೂರು ಗಂಟೆಗಳ ನಂತರ ಹೀರುಕವನ್ನು ತೆಗೆದ ಮೇಲೆ ಅದರಲ್ಲಿ ಉಳಿದಿದ್ದ ಔಷಧದ ಪ್ರಮಾಣವೂ ಕಡಿಮೆಯಾಗಿತ್ತು. ಉರಿಯಾಗಲಿ, ಊತವಾಗಲಿ ಕಾಣಿಸಿರಲಿಲ್ಲ. ಮೂರ್ನಾಲ್ಕು ಗಂಟೆಯವರೆವಿಗೂ ಹೀರುಕ ಭದ್ರವಾಗಿ ಅಂಟಿಕೊಂಡು ಉಳಿದಿತ್ತು. ಹಾಗಿದ್ದರೆ ಇದನ್ನು ಮನುಷ್ಯರಲ್ಲಿಯೂ ಬಳಸಬಹುದೇ ಎಂದೂ ಇವರು ಪರೀಕ್ಷಿಸಿದ್ದಾರೆ. ನಲವತ್ತು ಮಂದಿಗೆ ಕೇವಲ ನೀರು ತುಂಬಿದ ಹೀರುಕ-ಗುಳಿಗೆಗಳನ್ನು ಬಾಯೊಳಗೆ ಅಂಟಿಸಿದ್ದಾರೆ. ಹಾಗೆಯೇ ಅನಂತರ ಕೆಲವರಿಗೆ ಸೂಜಿ ಅಥವಾ ಚ್ಯೂಯಿಂಗ್ ಗಮ್ಮಿನಂತಹ ಅಂಟುಗುಳಿಗೆಗಳನ್ನು ಅಂಟಿಸಿ ಪರೀಕ್ಷಿಸಿದ್ದಾರೆ. ಇವುಗಳಲ್ಲಿ ಹೀರುಕಗಳೇ ಬಹಳ ಹಿತವಾಗಿದ್ದುವಂತೆ. ಅಂದರೆ ಬಳಕೆಯಿಂದ ತೊಂದರೆ ಇಲ್ಲ ಅಂದಷ್ಟೆ. ಬಾಯಂಗುಳದಲ್ಲಿಯೂ ಉರಿಯೂತಗಳು ಕಡಿಮೆ ಇದ್ದುವು ಎಂದು ಲೆರೂ ವರದಿ ಮಾಡಿದ್ದಾರೆ.

ಕವಳ ಹಾಕುವವರಿಗೆ, ಚ್ಯೂಯಿಂಗ್ ಗಮ್ ಅಗಿಯುವವರಿಗೆ ಇಂತಹ ಹೀರುಕಗಳನ್ನು ಒತ್ತರಿಸಿ ಇಟ್ಟುಕೊಳ್ಳುವುದು ಬಹುಶಃ ಕಷ್ಟವಾಗಲಿಕ್ಕಿಲ್ಲ. ಏನಿದ್ದರೂ ಅದರಿಂದ ನೀಡುವ ಔಷಧ ನಿರೀಕ್ಷಿಸಿದ ಫಲಿತಾಂಶಗಳನ್ನು ನೀಡುತ್ತದೆ ಎನ್ನುವುದು ಖಾತ್ರಿಯಾಗಬೇಕಷ್ಟೆ. ಆಮೇಲೆ ಇನ್ಸುಲಿನ್‌ಗೂ ಬಹುಶಃ ಹೀಗೆ ಬಾಯೊಳಗೆ ಇಟ್ಟುಕೊಳ್ಳುವ ಮಾತ್ರೆಯೇ ಸಾಮಾನ್ಯವಾಗಬಹುದು. ❖

ಬ್ಯಾಂಕ್ ಖಾತೆಗೆ ಕನ್ನ ಆಧಾರ್‌ಗೆ ಬೇಕು 'ಬೀಗ'

ಅವಿನಾಶ್ ಬಿ.

'ಯಾರಿಗೂ ಒಟಿಪಿ ಕೊಟ್ಟೇ ಇಲ್ಲ; ಆದರೂ ನನ್ನ ಬ್ಯಾಂಕ್ ಖಾತೆಯಿಂದ ₹ 10 ಸಾವಿರ ಕಡಿತವಾಯಿತು!'

ಈ ರೀತಿ ಸಾಮಾಜಿಕ ಜಾಲತಾಣಗಳಲ್ಲಿ ನಾವು ತುಸು ಹೆಚ್ಚೇ ಅನ್ನಿಸುವಷ್ಟು ಪೋಸ್ಟ್‌ಗಳನ್ನು ಇತ್ತೀಚೆಗೆ ಕಾಣುತ್ತಿದ್ದೇವೆ.

ಸರ್ಕಾರ, ಬ್ಯಾಂಕುಗಳು, ಆರ್‌ಬಿಐ ಮುಂತಾದವು 'ಯಾರಿಗೂ ಒಟಿಪಿ ಅಥವಾ ಪಾಸ್‌ವರ್ಡ್ ಹಂಚಿಕೊಳ್ಳಬೇಡಿ' ಹಾಗೂ 'ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಮಾಡಿ' ಅಂತ ಪದೇ ಪದೇ ಎಸ್‌ಎಂಎಸ್ ಮೂಲಕ ಎಚ್ಚರಿಕೆ ನೀಡುತ್ತಲೇ ಇದೆ. ಆದರೆ, ಒಟಿಪಿ ಜೊತೆಗೆ ನಮಗೆ ಅತ್ಯಗತ್ಯವಾದ 'ಆಧಾರ್ ಬಯೋಮೆಟ್ರಿಕ್ ಲಾಕ್ ಮಾಡಿಕೊಳ್ಳಿ' ಎಂಬ ಸಂದೇಶವಿನ್ನೂ ಯಾರಿಗೂ ತಲುಪಿಲ್ಲ. ಬ್ಯಾಂಕ್ ಖಾತೆಗೆ ಆಧಾರ್, ಮೊಬೈಲ್ ನಂಬರ್ ಲಿಂಕ್ ಮಾಡುವುದರಿಂದ ಸರ್ಕಾರಿ ಯೋಜನೆಗಳ ಲಾಭ ಪಡೆಯಲು ನಮಗೆಷ್ಟು ಅನುಕೂಲವೋ, ವಂಚಕರೂ ಅಷ್ಟೇ ಚಾಣಾಕ್ಷರಾಗುತ್ತಿದ್ದಾರೆ.

ಬೆರಳಚ್ಚು ಸ್ಕ್ಯಾನರ್ (ಆಧಾರ್ ಬಯೋಮೆಟ್ರಿಕ್) ಮೂಲಕ ದೃಢೀಕರಣ ವ್ಯವಸ್ಥೆ...

ಒಟಿಪಿ ಇಲ್ಲದೆಯೂ ಬ್ಯಾಂಕ್ ಖಾತೆಯಿಂದ ಹಣ ಕಡಿತವಾಗಲು ಕಾರಣ, ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ಆಧಾರ್ ಎನೇಬಲ್ಡ್ ಪೇಮೆಂಟ್ ಸಿಸ್ಟಂ - AEPS). ಇತ್ತೀಚೆಗೆ, ಆಧಾರ್ ಕಾರ್ಡ್ ಇದ್ದರಾಯಿತು, ನಾವು ಗ್ರಾಮೀಣ ಪ್ರದೇಶದಲ್ಲಿ ಮನೆಮನೆಗೆ ಬರುವ ಅಂಚೆಯಣ್ಣನ ಮೂಲಕ ಬ್ಯಾಂಕ್ ಖಾತೆಯಲ್ಲಿದ್ದ ಹಣ ಪಡೆಯಬಹುದು ಎಂಬ ಕುರಿತಾದ ವಿಡಿಯೊ ಒಂದು ಹರಿದಾಡಿತ್ತು. ಈ ತಂತ್ರಜ್ಞಾನ ಒಳ್ಳೆಯದೇ. ಆದರೆ ಅದನ್ನೂ ಖೂಳರು ದುರುಪಯೋಗ ಮಾಡಿಕೊಳ್ಳಬಲ್ಲರು. ನಮ್ಮ ಬೆರಳಚ್ಚು ಎಷ್ಟು ಮುಖ್ಯ ಎಂಬುದು ಇಲ್ಲಿ ವೇದ್ಯವಾಗುತ್ತದೆ.

ವಂಚಿತರು ಸೈಬರ್ ಕ್ರೈಂ ಪೊಲೀಸರಲ್ಲಿ ದೂರು ನೀಡಲು ಹೋದಾಗ ಅವರು ಕೇಳುವ ಪ್ರಶ್ನೆ - 'ನಿಮ್ಮ ಆಧಾರ್ ಬಯೋಮೆಟ್ರಿಕ್ ಇತ್ತೀಚೆಗೆ ಯಾರಿಗಾದರೂ ಕೊಟ್ಟಿದ್ದೀರಾ?' ಅಂತ. ಹೆಚ್ಚಿನವರು ನೆನಪಿಸಿಕೊಂಡಿದ್ದು, ಇತ್ತೀಚೆಗಷ್ಟೇ ಆಸ್ತಿ ನೋಂದಣಿ ಕಚೇರಿಯಲ್ಲಿ ಅದನ್ನು ಬಳಸಿದ್ದೇವೆ ಎಂಬುದು. ಅಂದರೆ, ನೋಂದಣಿ ಕಚೇರಿಯಲ್ಲಷ್ಟೇ ಅಲ್ಲ, ಬೇರೆ ಬ್ಯಾಂಕ್, ಮೊಬೈಲ್ ಸಂಪರ್ಕ, ವಾಹನ ನೋಂದಣಿ ಮತ್ತಿತರ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಬಯೋಮೆಟ್ರಿಕ್ (ಮುಖಗುರುತು, ಬೆರಳಚ್ಚುಗುರುತು ಮತ್ತು ಕಣ್ಣುಪಾಪೆಯ ಗುರುತು) ಅಗತ್ಯವಿದ್ದಲ್ಲಿ ಅಲ್ಲಿ ಬೆರಳಚ್ಚು ಸ್ಕ್ಯಾನ್ ಮಾಡಿ ತೆಗೆದುಕೊಂಡಿರುತ್ತಾರೆ. ಇದನ್ನೇ ಅದೆಂತೋ ಎಗರಿಸುವ ವಂಚಕರು ಎಇಪಿಎಸ್ ಬಳಸಿ, ಅದಕ್ಕಿರುವ ದಿನದ ಗರಿಷ್ಠ ಮಿತಿ 10 ಸಾವಿರ ರೂ. ಎಗರಿಸಬಲ್ಲರು. ಆಧಾರ್ ಸಂಖ್ಯೆ ಪಡೆದು, ಅದಕ್ಕೆ ಯಾವುದು ಲಿಂಕ್ ಆಗಿದೆ ಎಂದು ಎಲ್ಲ ಬ್ಯಾಂಕ್ ಖಾತೆಗಳನ್ನೂ ಪ್ರಯತ್ನಿಸಿ ನೋಡುತ್ತಾರೆ. ಈ ರೀತಿ ವಂಚನೆಗೆ ಪ್ರಯತ್ನ ಮಾಡುವಾಗಲೆಲ್ಲ, ನಮ್ಮದೇ ನೋಂದಾಯಿತ ಇಮೇಲ್ ಖಾತೆಗೆ ಸಂದೇಶಗಳು ಬರುತ್ತವೆ. ಆದರೆ, ಅದನ್ನು ಬಹುತೇಕರು ನೋಡುವುದಿಲ್ಲ ಅಥವಾ ನೋಡಿದರೂ ನಿರ್ಲಕ್ಷಿಸುತ್ತಾರೆ.

ಅದರಲ್ಲೊಂದು ಪ್ರಮುಖ ಸಂದೇಶ ಇದೆ. ದಿನ, ಸಮಯ ಸಹಿತ ಬ್ಯಾಂಕ್‌ನಲ್ಲಿರುವ ಸಾಧನದಲ್ಲಿ ನಿಮ್ಮ ಬೆರಳಚ್ಚನ್ನು ಬಳಸಿ ಆಧಾರ್ ಗುರುತಿನ ಪತ್ರ ದೃಢೀಕರಣವಾಗಿದೆ. ಈ ದೃಢೀಕರಣವನ್ನು ನೀವು ಮಾಡಿಲ್ಲದಿದ್ದರೆ, ತಕ್ಷಣ 1947ಕ್ಕೆ ಕರೆ ಮಾಡಿ ಅಥವಾ ಈ ಮೇಲ್ ಅನ್ನು help@uidai.gov.inಗೆ ಫಾರ್ವರ್ಡ್ ಮಾಡಿ ಅಂತ. ಇದನ್ನು ನಾವು ನಿರ್ಲಕ್ಷಿಸಬಾರದು.

ಈ ರೀತಿಯಾಗಿ ಒಟಿಪಿ ಇಲ್ಲದೆಯೇ ಹಣ ಹೋಗುವುದನ್ನು ತಡೆಯಲು ನಮ್ಮ ಆಧಾರ್ ಬಯೋಮೆಟ್ರಿಕ್ ವ್ಯವಸ್ಥೆಗೇ ಬೀಗ ಹಾಕಿಬಿಟ್ಟರೆ ಹೇಗೆ? ಇದು ಸುಲಭ. ಆದರೆ ಈ ವಿಚಾರದ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಆಗಿಲ್ಲ. ಇಲ್ಲಿ, ವಂಚಿತರಲ್ಲಿ ಬಹುತೇಕರು ಹಿರಿಯ ನಾಗರಿಕರೇ ಆಗಿರುತ್ತಾರೆ ಎಂಬುದೂ ಗಮನಿಸಬೇಕಾದ ವಿಚಾರ. ಲಾಕ್ ಮಾಡಿಬಿಟ್ಟರೆ ಬಯೋಮೆಟ್ರಿಕ್ ಆಧಾರದಲ್ಲಿ ಯಾವುದೇ ದಾಖಲೆಗೆ ನಾವು ಆಧಾರ್ ದೃಢೀಕರಣ ಮಾಡುವಂತಿಲ್ಲ.

ಆಧಾರ್ ಬಯೋಮೆಟ್ರಿಕ್ ಲಾಕ್ ಮಾಡುವುದು ಹೀಗೆ

ಸ್ಮಾರ್ಟ್‌ಫೋನ್‌ಗಳಲ್ಲಿ ಎಂ-ಆಧಾರ್ (mAadhaar) ಎಂಬ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅಳವಡಿಸಿಕೊಳ್ಳಿ. ಅದರಲ್ಲಿ 12 ಅಂಕಿಗಳ ಆಧಾರ್ ಸಂಖ್ಯೆ, ಅದಕ್ಕೆ ಸಂಬಂಧಿಸಿದ 10 ಅಂಕಿಗಳ ಮೊಬೈಲ್ ಸಂಖ್ಯೆ ಸೇರಿಸಿಕೊಂಡು ನೋಂದಾಯಿಸಿಕೊಳ್ಳಿ. ಲಾಗಿನ್ ಆಗಿ, ಸುರಕ್ಷತೆಗಾಗಿ ಪಿನ್ ನಂಬರ್ ಹೊಂದಿಸಬೇಕಾಗುತ್ತದೆ. ಅಲ್ಲಿ ನಮ್ಮ ಆಧಾರ್ ಕಾರ್ಡ್ ಸೇರಿಸಿದ ಬಳಿಕ, 'ಮೈ ಆಧಾರ್' ಎಂದಿರುವಲ್ಲಿ ಕ್ಲಿಕ್ ಮಾಡಿದಾಗ, ಪಿನ್ ನಮೂದಿಸಬೇಕಾಗುತ್ತದೆ. ಕೆಳಗೆ ಕೆಂಪು ಬಣ್ಣದಲ್ಲಿ 'ಬಯೋಮೆಟ್ರಿಕ್ ಲಾಕ್' ಎಂದಿರುತ್ತದೆ. ಅದನ್ನು ಒತ್ತಿ. ಅಗತ್ಯವಿದ್ದಾಗ ಇದನ್ನು ಅನ್‌ಲಾಕ್ ಮಾಡಲು ಆಯ್ಕೆ ಇದೆ. ಅದರಲ್ಲಿ ಕ್ಯಾಪ್ಚಾ ಸಂಖ್ಯೆ ನಮೂದಿಸಿ, ಒಟಿಪಿ ರಚನೆಯಾಗುತ್ತದೆ. ಅದನ್ನು ಆಧಾರ್‌ಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಗೆ ಬರುವ ಎಸ್‌ಎಂಎಸ್‌ನಿಂದ ಪಡೆದು, ಅಲ್ಲಿ ಒಟಿಪಿ ನಮೂದಿಸಿದಾಗ ತಾತ್ಕಾಲಿಕವಾಗಿ ಅನ್‌ಲಾಕ್ ಆಗುತ್ತದೆ. ಈ ರೀತಿ ಬಯೋಮೆಟ್ರಿಕ್ ಆಧಾರಿತ ಆಧಾರ್ ದೃಢೀಕರಣ ವ್ಯವಸ್ಥೆಯನ್ನು ಲಾಕ್ ಮಾಡಿದರೆ, ವಂಚಕರಿಗೆ ನಿಮ್ಮ ಕಣ್ಣುಪಾಪೆ ಅಥವಾ ಬೆರಳಚ್ಚು ಬಳಸಿ ಯಾವುದೇ ದಾಖಲೆಗೆ ದೃಢೀಕರಣ ನೀಡುವುದು ಸಾಧ್ಯವಾಗುವುದಿಲ್ಲ.

ಮೈ ಆಧಾರ್ ಆ್ಯಪ್ ಮೂಲಕವಲ್ಲದೆ, ಕಂಪ್ಯೂಟರಿನಲ್ಲಿ myaadhaar.uidai.gov.in ತಾಣದಲ್ಲಿಯೂ ಲಾಗಿನ್ ಆಗಿ, ನೋಂದಾಯಿಸಿಕೊಂಡು ಬಯೋಮೆಟ್ರಿಕ್ ಲಾಕ್/ಅನ್‌ಲಾಕ್ ಮಾಡಿಕೊಳ್ಳಬಹುದು. ತಾತ್ಕಾಲಿಕವಾಗಿ ಅನ್‌ಲಾಕ್ ಮಾಡಿಕೊಳ್ಳಲು resident.uidai.gov.in/aadhaar-lockunlock ತಾಣದಲ್ಲೂ ಪ್ರಯತ್ನಿಸಬಹುದು. ಆಧಾರ್ ಸೇವಾ ಕೇಂದ್ರಗಳಲ್ಲಿಯೂ ಈ ಸೌಕರ್ಯ ಲಭ್ಯವಿದೆ. ಆದರೆ, ಆಧಾರ್‌ಗೆ ನಮ್ಮ ಮೊಬೈಲ್ ನಂಬರ್ ಲಿಂಕ್ ಆಗಿರುವುದು ಕಡ್ಡಾಯ. ಜೊತೆಗೆ, ತಾತ್ಕಾಲಿಕವಾಗಿ ಸೃಷ್ಟಿಯಾಗುವ ವರ್ಚುವಲ್ ಐಡಿ ಬಳಸಿಯೂ ಆಧಾರ್ ದೃಢೀಕರಣ ಮಾಡಬಹುದು.

ಹಣ ಹೋದರೆ ಏನು ಮಾಡಬೇಕು?

ಖಾತೆಯಿಂದ ಹಣ ಕಡಿತವಾದ ಕುರಿತು ಎಸ್‌ಎಂಎಸ್ ಅಥವಾ ಇಮೇಲ್ ಬರುತ್ತದೆ. ಬಂದ ತಕ್ಷಣ ಅದರಲ್ಲಿ ನೀಡಲಾದ ಸಂಖ್ಯೆ ಸಂಪರ್ಕಿಸಿ, ದೂರನ್ನು ದಾಖಲಿಸಬೇಕು. ಜೊತೆಗೆ, ಸೈಬರ್ ಪೊಲೀಸರಿಗೆ ಇಲ್ಲವೇ ಸ್ಥಳೀಯ ಠಾಣೆಗೆ ದೂರು ಸಲ್ಲಿಸಿ, ಅದರ ಪ್ರತಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು.

ಸರ್ಕಾರದಿಂದ ಆಗಬೇಕಾದುದು

ಆಪತ್ಕಾಲದಲ್ಲಿ ಹಣ ಪಡೆಯಲು ರೂಪಿಸಿರುವ ಎಇಪಿಎಸ್ ಅಡಿಯಲ್ಲಿಯೂ ಎರಡು ಹಂತದ ದೃಢೀಕರಣ (Two Factor Authentication) ವ್ಯವಸ್ಥೆ ಅಳವಡಿಸಿ, ಒಟಿಪಿ ಅಥವಾ ಪಾಸ್‌ವರ್ಡ್ ಒದಗಿಸುವಂತಾಗಬೇಕು. ಇದಕ್ಕೆ ಆರ್‌ಬಿಐ ಕ್ರಮ ಕೈಗೊಳ್ಳಬೇಕಿದೆ. ಮತ್ತು ಈ ಲಾಕಿಂಗ್ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕಾಗಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಜೀವ ಕ್ರಿಯೆಗಳು

ಬಹು ಆಯ್ಕೆ ಪ್ರಶ್ನೆಗಳು

1) ಬಹುತೇಕ ಆಹಾರದ ಆಕರಗಳಿಗೂ ಕಾರ್ಬನ್ ಆಧರಿತವಾಗಿವೆ.. ಈ ಕಾರ್ಬನ್ ಆಕರಗಳ ಸಂಕೀರ್ಣತೆಯ ಆಧಾರದ ಮೇಲೆ ವಿಭಿನ್ನ ಜೀವಿಗಳು, ವಿಭಿನ್ನ ರೀತಿಯ...................... ಬಳಸುತ್ತವೆ.
ಎ) ಆಹಾರ ಪ್ರಮಾಣ ಬಿ) ಪೋಷಣಾ ವಿಧಾನ
ಸಿ) ಮರಿ ಪರಿಪಾಲನಾ ವಿಧಾನ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:- ಬಿ

2) ದೇಹದ ಹೊರಭಾಗದಿಂದ ಆಕ್ಸಿಜನ್ ಅನ್ನು ಪಡೆದುಕೊಂಡು ಕೋಶೀಯ ಅಗತ್ಯಗಳಿಗಾಗಿ ಆಹಾರ ಪದಾರ್ಥಗಳನ್ನು ವಿಭಜಿಸಿ ಬಳಸಿಕೊಳ್ಳುವ ಪ್ರಕ್ರಿಯೆಗೆ ನಾವು.................................. ಎಂದು ಕರೆಯುತ್ತೇವೆ.
ಎ) ಉಸಿರಾಟ ಬಿ) ಪೋಷಣಾ ವಿಧಾನ
ಸಿ) ಲೈಂಗಿಕ ಜೀವನ ಡಿ) ಯಾವುದೂ ಅಲ್ಲ
ಉತ್ತರ:- ಎ

3) ಸಸ್ಯಗಳು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ತೆಗೆದುಕೊಂಡು ಸೌರ ಬೆಳಕು ಮತ್ತು ಕ್ಲೋರೋಫಿಲ್ ಉಪಸ್ಥಿತಿಯಲ್ಲಿ .... ಗಳಾಗಿ ಪರಿವರ್ತಿಸಲಾಗುತ್ತದೆ.
ಎ) ಕಾರ್ಬೋಹೈಡ್ರೇಟ್ ಬಿ) ಹೈಡ್ರೋಕ್ಲೋರಿಕ್ ಆಮ್ಲ
ಸಿ) ಗಂಧಕಾಮ್ಲ ಡಿ) ಆಕ್ಸಿಜನ್
ಉತ್ತರ:- ಎ

4) ಮಾನವನಲ್ಲಿ ಪಚನ ಕ್ರಿಯೆಗಳು ಜಠರ ಗೋಡೆಯಲ್ಲಿ ಕಂಡುಬರುವ ಜಠರ ಗ್ರಂಥಿಗಳಿಂದ ನಿರ್ವಹಿಸಲ್ಪಡುತ್ತವೆ. ಇವು ಏನನ್ನು ಸ್ರವಿಸುತ್ತವೆ?
ಎ) ಹೈಡ್ರೋಕ್ಲೋರಿಕ್ ಆಮ್ಲ, ಆಕ್ಸಿಜನ್, ಕ್ಲೋರಿನ್ ಮತ್ತು ಪೆಪ್ಸಿನ್
ಬಿ) ಹೈಡ್ರೋಕ್ಲೋರಿಕ್ ಆಮ್ಲ , ಪೆಪ್ಸಿನ್, ಲೋಳೆ
ಸಿ) ಕ್ಲೋರೊಫ್ಲೋರೊ ಕಾರ್ಬನ್, ರೆನಿನ್ ಮತ್ತು ಪೆಪ್ಸಿನ್
ಡಿ) ಹೈಡ್ರೋ ಕ್ಲೋರಿಕ್ ಆಮ್ಲ, ಕಾರ್ಬನ್ ಮತ್ತು ರೆನಿನ್
ಉತ್ತರ:- ಬಿ

5) ಮಾನವನ ಜೀರ್ಣಾಂಗವ್ಯೂಹದಲ್ಲಿ ಕಾರ್ಬೋಹೈಡ್ರೇಟ್, ಪ್ರೊಟೀನ್, ಮತ್ತು ಕೊಬ್ಬುಗಳು ಸಂಪೂರ್ಣವಾಗಿ ಪಚನವಾಗುವ ಸ್ಥಳ ಯಾವುದು?
ಎ) ದೊಡ್ಡ ಕರಳು ಬಿ) ಸಣ್ಣ ಕರಳು
ಸಿ) ಪಿತ್ತರಸ ನಾಳ ಡಿ) ಮೇದೋಜಿರಕಾಂಗ
ಉತ್ತರ:- ಬಿ

6) ಸಸ್ಯಗಳು ಯಾವುದರ ಮೂಲಕ ಅನಿಲಗಳ ವಿನಿಮಯ ನಡೆಸುತ್ತವೆ?
ಎ) ಪತ್ರರಂಧ್ರಗಳು ಬಿ) ಜೀವಕೋಶಗಳು
ಸಿ) ಹೂವುಗಳು ಡಿ) ಹಣ್ಣುಗಳು
ಉತ್ತರ:- ಎ

7) ಜಲಚರಗಳಲ್ಲಿ ಉಸಿರಾಟದ ದರವು ನೆಲದಲ್ಲಿ ವಾಸಿಸುವ ಜೀವಿಗಳಿಗಿಂತ ಹೆಚ್ಚು ಇರುತ್ತದೆ. ಕಾರಣವೇನು?
ಎ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಹೆಚ್ಚು ಇರುತ್ತದೆ.
ಬಿ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಸಮನಾಗಿರುತ್ತದೆ.
ಸಿ) ಗಾಳಿಯಲ್ಲಿರುವ ಆಕ್ಸಿಜನ್ ಪ್ರಮಾಣಕ್ಕೆ ಹೋಲಿಸಿದರೆ ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಕಡಿಮೆ ಇರುತ್ತದೆ.
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:- ಸಿ

8) ದೂಳು ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದು ಹಾಕುವ ಶ್ವಾಸನಾಳದ ಮೇಲ್ಭಾಗದಲ್ಲಿರುವ ಸಿಲಿಯಾ ಎಂಬ ಸಣ್ಣ ಕೂದಲಿನಂತಹ ರಚನೆಯನ್ನು ಯಾವುದು ನಾಶ ಮಾಡುತ್ತದೆ?
ಎ) ಅತಿಯಾದ ಚಲನಚಿತ್ರ ನೋಡುವುದು ಬಿ) ಅತಿಯಾದ ಕಠಿಣ ಕೆಲಸ ಮಾಡುವುದು ಸಿ) ಧೂಮಪಾನ ಮಾಡುವುದು
ಡಿ) ಅತಿಯಾದ ಮದ್ಯಪಾನ ಮಾಡುವುದು
ಉತ್ತರ:- ಸಿ

9) ನಮ್ಮ ದೇಹದಲ್ಲಿ ಯಾವುದನ್ನು ಸಾಗಾಣಿಕೆ ಮಾಡುತ್ತದೆ?
ಎ) ಆಕ್ಸಿಜನ್, ಆಹಾರ, ತ್ಯಾಜ್ಯವಸ್ತು ಬಿ) ಘನಪದಾರ್ಥ, ಕಾರ್ಬನ್, ಮತ್ತು ನೀರು
ಸಿ) ತ್ಯಾಜ್ಯ ವಸ್ತು, ಕ್ಲೋರೋಫಿಲ್, ಹೈಡ್ರೋಕ್ಲೋರಿಕ್ ಆಮ್ಲ
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:- ಎ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಪರಪೋಷಕ ಜೀವಿಗಳು ಯಾವುವು?
ಉತ್ತರ:- ಪ್ರಾಣಿಗಳು ಮತ್ತು ಶಿಲೀಂಧ್ರಗಳು ಪರಪೋಷಕ ಜೀವಿಗಳಾಗಿವೆ.

2) ಸ್ವಪೋಷಕ ಜೀವಿಗಳು ಯಾವುವು?
ಉತ್ತರ:- ಹಸಿರು ಸಸ್ಯಗಳು ಹಾಗೂ ಕೆಲವು ಬ್ಯಾಕ್ಟೀರಿಯಾಗಳು

2) ಜೀವಿಗಳು ಹೇಗೆ ತಮ್ಮ ಆಹಾರವನ್ನು ಪಡೆಯುತ್ತವೆ?
ಉತ್ತರ:- ಕೆಲವು ಜೀವಿಗಳು ನಿರವಯವ ಮೂಲಗಳಿಂದ ಸರಳವಾದ ಆಹಾರ ವಸ್ತುಗಳನ್ನು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನ ರೂಪದಲ್ಲಿ ಬಳಸಿಕೊಳ್ಳುತ್ತವೆ, ಇತರ ಜೀವಿಗಳು ಸಂಕೀರ್ಣ ವಸ್ತುಗಳನ್ನು ಬಳಸಿಕೊಳ್ಳುತ್ತವೆ. ಸಾಮಾನ್ಯವಾಗಿ ಸಂಕೀರ್ಣ ವಸ್ತುಗಳನ್ನು ದೇಹದ ಬೆಳವಣಿಗೆ ಮತ್ತು ದುರಸ್ತಿಗಾಗಿ ಬಳಸಿಕೊಳ್ಳುವ ಮುನ್ನ ಸರಳ ವಸ್ತುಗಳಾಗಿ ವಿಭಜಿಸಬೇಕಾಗುತ್ತದೆ, ಇದನ್ನು ಸಾಧಿಸಲು ಜೀವಿಗಳು ಕಿಣ್ವಗಳೆಂಬ ವೇಗವರ್ಧಕಗಳನ್ನು ಬಳಸಿಕೊಳ್ಳುತ್ತವೆ.

3) ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಯಾವೆಲ್ಲಾ ಘಟನೆಗಳು ಜರುಗುತ್ತವೆ?
ಉತ್ತರ:- ದ್ಯುತಿಸಂಶ್ಲೇಷಣೆ ಪ್ರಕ್ರಿಯೆ ನಡೆದಾಗ ಈ ಕೆಳಗಿನ ಘಟನೆಗಳು ಜರುಗುತ್ತವೆ:-
1) ಕ್ಲೋರೋಫಿಲ್‌ನಿಂದ ಶಕ್ತಿ ಹೀರುತ್ತದೆ
2) ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಯಾಗುವುದು ಮತ್ತು ನೀರಿನ ಅಣುಗಳು ಹೈಡ್ರೋಜನ್ ಮತ್ತು ಆಕ್ಸಿನ್ ಆಗಿ ವಿಭಜಿಸಲ್ಪಡುವುದು.
3) ಕಾರ್ಬನ್ ಡೈ ಆಕ್ಸೈಡ್ ಕಾರ್ಬೋಹೈಡ್ರೇಟ್ ಆಗಿ ಪರಿವರ್ತಿಸಲ್ಪಡುವುದು
ಈ ಹಂತಗಳು ಒಂದಾದ ನಂತರ ಒಂದರಂತೆ ತಕ್ಷಣವೇ ಜರುಗುವುದಿಲ್ಲ. ಉದಾಹರಣೆಗೆ ಮರಭೂಮಿಯ ಸಸ್ಯಗಳು ರಾತ್ರಿ ವೇಳೆಯಲ್ಲಿ ಕಾರ್ಬನ್ ಡೈ ಆಕ್ಸೈಡ್ ಅನ್ನು ತೆಗೆದುಕೊಂಡು ಮಧ್ಯಂತರ ವಸ್ತುವೊಂದನ್ನು ತಯಾರಿಸುತ್ತದೆ, ನಂತರ ಹಗಲಿನ ವೇಳೆಯಲ್ಲಿ ಕ್ಲೋರೋಫಿಲ್ ಹೀರಿಕೊಂಡ ಶಕ್ತಿಯು ಈ ವಸ್ತುವಿನ ಮೇಲೆ ವರ್ತಿಸುತ್ತದೆ.

II PUC MATHEMATICS

DETERMINANTS

2. To find the value of the determinant of a second order matrix

Soln :– Consider a matrix $A=\begin{pmatrix} x_1 & y_1 \\ x_2 & y_2 \end{pmatrix}$

whose order is 2 x 2.

Then $|A| = \begin{vmatrix} x_1 & y_1 \\ x_2 & y_2 \end{vmatrix} = x_1 y_2 - x_2 y_1$

3. If $A=\begin{bmatrix} a & 0 & 0 \\ 0 & b & 0 \\ 0 & 0 & c \end{bmatrix}$ and if $|A| \neq 0$; what is the value of A^{-1}?

Soln :– Given that, $A=\begin{bmatrix} a & 0 & 0 \\ 0 & b & 0 \\ 0 & 0 & c \end{bmatrix}$

and $|A| \neq 0$; then the value of

$$A^{-1} = \begin{bmatrix} 1/a & 0 & 0 \\ 0 & 1/b & 0 \\ 0 & 0 & 1/c \end{bmatrix}$$

4. How do you find the value of the determinant of a third order matrix?

Soln :– Consider matrix $A=\begin{pmatrix} x_1 & y_1 & z_1 \\ x_2 & y_2 & z_2 \\ x_3 & y_3 & z_3 \end{pmatrix}$

whose order is 3 x 3.

$$\text{Then } |A| = \begin{vmatrix} x_1 & y_1 & z_1 \\ x_2 & y_2 & z_2 \\ x_3 & y_3 & z_3 \end{vmatrix}$$

$$= x_1 \begin{vmatrix} y_2 & z_2 \\ y_3 & z_3 \end{vmatrix} - y_1 \begin{vmatrix} x_2 & z_2 \\ x_3 & z_3 \end{vmatrix} + z_1 \begin{vmatrix} x_2 & y_2 \\ x_3 & y_3 \end{vmatrix}$$

$$= x_1 (y_2 z_3 - y_3 z_2) - y_1 (x_2 z_3 - x_3 z_2) + z_1 (x_2 y_3 - x_3 y_2)$$

5. Show that if in a determinant all the elements of any row or column are zeros then the value of the determinant is zero.

Soln :– To show that – If in a determinant all the elements of any row (or column) are zeros then the value of the determinant is zero.

Proof :– Let $\Delta = \begin{bmatrix} 0 & 0 & 0 \\ b_1 & b_2 & b_3 \\ c_1 & c_2 & c_3 \end{bmatrix}$

$\Delta = 0(b_2 c_3 - c_2 b_3) - 0(b_1 c_3 - b_3 c_1) + 0(b_1 c_2 - b_2 c_1)$

$= 0$, hence proved.

6. Show that if all the elements on one side of the principal diagonal of a determinant are zeros, then the value of the determinant is the product of the elements of the principal diagonal.

Soln :– To show that – If all the elements on one side of the principal diagonal of a determinant are zeros, then the value of the determinant is the product of the elements of the principal diagonal.

Proof :– Let $\Delta = \begin{bmatrix} a_1 & a_2 & a_3 \\ 0 & b_2 & b_3 \\ 0 & 0 & c_3 \end{bmatrix}$

$\Delta = a_1 (b_2 c_3 - 0.b_3) - a_2 (0.c_3 - b_3.0) + a_3 (0 - b_2 0)$

$= a_1 b_2 c_3$

= product of the elements on the principal diagonal.

7. Prove that $\begin{bmatrix} a & b & c \\ b & c & a \\ c & a & b \end{bmatrix} = -(a^3 + b^3 + c^3 - 3abc)$

Soln :– Consider $\begin{bmatrix} a & b & c \\ b & c & a \\ c & a & b \end{bmatrix}$

$\Delta = a(bc - a^2) - b(b^2 - ca) + c(ab - c^2)$

$= abc - a^3 - b^3 + abc + abc - c^3$

$= -(a^3 + b^3 + c^3 - 3abc)$ hence proved.

8. Solve for x, $\begin{vmatrix} 2 & 3 & 4 \\ -4 & x & -8 \\ 5 & 6 & 7 \end{vmatrix} = 0$

Soln :– Consider Δ of $\begin{vmatrix} 2 & 3 & 4 \\ -4 & x & -8 \\ 5 & 6 & 7 \end{vmatrix}$

$\Rightarrow 2(7x + 48) - 3(-28 + 40) + 4(-24 - 5x) = 0$

$\Rightarrow 14x + 96 - 36 - 96 - 20x = 0$

$\Rightarrow -6x - 36 = 0$

$-6x = 36$

$x = \frac{36}{-6} = -6$

9. Write a brief note on the multiplication of the determinants.

Ans :– The multiplication of determinants is as that of multiplication of matrices itself.

Eg :– $\begin{vmatrix} a_1 & b_1 \\ a_2 & b_2 \end{vmatrix} \times \begin{vmatrix} \alpha_1 & \beta_1 \\ \alpha_2 & \beta_2 \end{vmatrix}$

$= \begin{vmatrix} a_1\alpha_1 + b_1\alpha_2 & a_1\beta_1 + b_1\beta_2 \\ a_2\alpha_1 + b_2\alpha_2 & a_2\beta_1 + b_2\beta_2 \end{vmatrix}$

(row – column multiplication)

It is also equal to $\begin{vmatrix} a_1\alpha_1 + b_1\beta_1 & a_2\alpha_2 + b_1\beta_2 \\ a_2\alpha_1 + b_2\beta_1 & a_2\alpha_2 + b_2\beta_2 \end{vmatrix}$

(row – row multiplication)

10. Find the determinant of the following eqns:

(Contd..........)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಬಾಹ್ಯಾಕಾಶ ಆರ್ಥಿಕತೆ: 10 ವರ್ಷಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಶೇ 8ರಷ್ಟು ಪಾಲು

44 ಶತಕೋಟಿ ಡಾಲರ್‌ಗೆ 'ಇನ್‌ಸ್ಪೇಸ್' ಗುರಿ

ಪ್ರಜಾವಾಣಿ ವಾರ್ತೆ

ಇನ್‌ಸ್ಪೇಸ್ ಅಧ್ಯಕ್ಷ ಡಾ.ಪವನ್ ಗೋಯೆಂಕಾ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ನಿರ್ದೇಶಕ ಡಾ.ವಿನೋದ್ ಕುಮಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಚಂದ್ರನ ಮೇಲೆ 'ಹೆಜ್ಜೆ' ಇಟ್ಟು, ಮಂಗಳ ಗ್ರಹಕ್ಕೆ ಸುತ್ತು ಹಾಕಿ ಸೂರ್ಯನತ್ತ ಹೊರಟಿರುವ ಭಾರತ ಇದೀಗ ಬಾಹ್ಯಾಕಾಶ ಆರ್ಥಿಕ ಕ್ಷೇತ್ರದಲ್ಲೂ ದೊಡ್ಡ 'ಜಿಗಿತ'ಕ್ಕಾಗಿ ಗುರಿ ನಿಗದಿ ಮಾಡಿಕೊಂಡಿದೆ. 10 ವರ್ಷಗಳಲ್ಲಿ ಅಂದರೆ 2033 ರ ವೇಳೆಗೆ ಬಾಹ್ಯಾಕಾಶ ಆರ್ಥಿಕತೆಯನ್ನು ₹3.65 ಲಕ್ಷ ಕೋಟಿ ತಲುಪಿಸುವ ಸಾಮರ್ಥ್ಯ ಹೊಂದಿದೆ. ಆ ಗುರಿ ತಲುಪಲು 'ಇನ್‌ಸ್ಪೇಸ್' ಸಂಕಲ್ಪ ತೊಟ್ಟಿದೆ.

ಭಾರತದ ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಅಧಿಕಾರ ಕೇಂದ್ರದ (ಇನ್‌ಸ್ಪೇಸ್) ಅಧ್ಯಕ್ಷ ಪವನ್ ಗೋಯೆಂಕಾ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಬಾಹ್ಯಾಕಾಶ ಆರ್ಥಿಕತೆಗೆ ದಶಕದ ಮುನ್ನೋಟವನ್ನು ವಿವರಿಸಿದರು. ಬಾಹ್ಯಾಕಾಶ ವಿಜ್ಞಾನ ಇಲಾಖೆ, ಇಸ್ರೊ, ಇನ್‌ಸ್ಪೇಸ್, ಎನ್‌ಎಸ್‌ಐಎಲ್ ಮತ್ತು ಎನ್‌ಜಿಇ ಸೇರಿ ಈ ಗುರಿ ತಲುಪಲು ಶ್ರಮಿಸಲಿವೆ.

'ಈಗ ಭಾರತ ₹67 ಸಾವಿರ ಕೋಟಿ ಆರ್ಥಿಕತೆಯನ್ನು ಹೊಂದಿದೆ. ಜಾಗತಿಕವಾಗಿ ಶೇ 2 ರಷ್ಟು ಪಾಲು ಹೊಂದಿದೆ. ಇಸ್ರೊ ಸಾಧನೆ ಮತ್ತು ಸಾಮರ್ಥ್ಯದ ಹಿನ್ನೆಲೆಯಲ್ಲಿ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಆರ್ಥಿಕ ಕ್ಷೇತ್ರದಲ್ಲಿ ಬೃಹತ್‌ಶಕ್ತಿಯಾಗಿ ಹೊರ ಹೊಮ್ಮಲು ವಿಪುಲ ಅವಕಾಶಗಳಿವೆ. ಅದನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುವುದು. ಸರ್ಕಾರ ಮತ್ತು ಖಾಸಗಿ ಕ್ಷೇತ್ರಗಳು ಜಂಟಿಯಾಗಿ ಈ ಗುರಿಯನ್ನು ಮುಟ್ಟಲು ಶ್ರಮಿಸಲಾಗುವುದು' ಎಂದು ಹೇಳಿದರು.

'₹3.32 ಲಕ್ಷ ಕೋಟಿ ಆರ್ಥಿಕತೆಯ ಗುರಿಯನ್ನು ಮುಟ್ಟಲು ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನಗಳ ಚಟುವಟಿಕೆಗಳ ಮೇಲೆ ಸುಮಾರು 1.82 ಲಕ್ಷ ಕೋಟಿ ಗಳಷ್ಟು ಹೂಡಿಕೆಯೂ ಆಗಬೇಕು. ಸರ್ಕಾರ, ಖಾಸಗಿ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳ ಮೂಲಕವೇ ಈ ಹೂಡಿಕೆ ಆಗಬೇಕಿದೆ. ಸಾಕಷ್ಟು ಖಾಸಗಿ ಕಂಪನಿಗಳು ಹೂಡಿಕೆಗೆ ಮುಂದೆ ಬರುತ್ತಿವೆ. ಸರ್ಕಾರ ಕೂಡ ಬಾಹ್ಯಾಕಾಶ ವಿಜ್ಞಾನ ಇಲಾಖೆಯಲ್ಲದೇ, ವಿವಿಧ ಇಲಾಖೆಗಳ ಮೂಲಕವೂ ಹೂಡಿಕೆ ಮಾಡಲಿದೆ' ಎಂದು ಗೋಯೆಂಕಾ ತಿಳಿಸಿದರು.

ತಂತ್ರಜ್ಞಾನ ವರ್ಗಾವಣೆ: 'ಖಾಸಗಿ ಕಂಪನಿಗಳು ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಇಸ್ರೊ ಪೂರ್ಣ ಪ್ರಮಾಣದಲ್ಲಿ ತಂತ್ರಜ್ಞಾನ ವರ್ಗಾವಣೆ ಮಾಡುತ್ತಿದೆ. ಇದು ವಿಶ್ವದಲ್ಲೇ ಪ್ರಥಮ. ಖಾಸಗಿಯವರೇ ಸ್ವತಂತ್ರವಾಗಿ ಉಡಾವಣಾ ವಾಹನಗಳನ್ನು ತಯಾರಿಸಿ ಸಣ್ಣಗಾತ್ರದ ರಾಕೆಟ್‌ಗಳನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಲು ಅವಕಾಶ ನೀಡಲಾಗುತ್ತದೆ. ದೇಶ ಮತ್ತು ವಿದೇಶಗಳ ಸಣ್ಣ ಮತ್ತು ಮಧ್ಯಮ ಗಾತ್ರದ ಉಪಗ್ರಹಗಳ ಉಡಾವಣೆಗೆ ಇದು ಅನುಕೂಲವಾಗುತ್ತದೆ' ಎಂದು ಹೇಳಿದರು.

ತೂತ್ತುಕುಡಿಯಲ್ಲಿ ಖಾಸಗಿ ಉಡಾವಣೆಗಳಿಗೆ ಕೇಂದ್ರ

ತಮಿಳುನಾಡಿನ ತೂತ್ತುಕುಡಿ (ಟ್ಯೂಟಿಕಾರ್ನ್)ಯಲ್ಲಿ ಖಾಸಗಿ ವಲಯದ ರಾಕೆಟ್‌ಗಳ ಉಡಾವಣೆಗಳಿಗಾಗಿ ಉಡಾವಣಾ ಕೇಂದ್ರವನ್ನು ಸ್ಥಾಪಿಸಲಾಗುವುದು. ಇದನ್ನು ನಿರ್ಮಿಸುವಲ್ಲಿ ಇಸ್ರೊ ನೆರವು ನೀಡಲಿದೆ ಎಂದು ಪವನ್ ಗೋಯೆಂಕಾ ತಿಳಿಸಿದರು.

ಇದಕ್ಕಾಗಿ 2,000 ಎಕರೆ ಜಮೀನು ಸ್ವಾದೀನ ಪಡಿಸಿಕೊಂಡಿದ್ದು, ಅದನ್ನು ಇಸ್ರೊಗೆ ಹಸ್ತಾಂತರಿಸಲಾಗಿದೆ. ಎರಡು ವರ್ಷಗಳಲ್ಲಿ ಉಡಾವಣೆ ಕೇಂದ್ರ ಸ್ಥಾಪನೆಗೊಳ್ಳಲಿದೆ. ಇಲ್ಲಿ ಇಸ್ರೊ ರಾಕೆಟ್‌ಗಳ ಉಡಾವಣೆ ನಡೆಯುವುದಿಲ್ಲ ಎಂದು ವಿವರಿಸಿದರು.

ನವೋದ್ಯಮಗಳಿಗೆ ನೆರವು: ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ನವೋದ್ಯಮ ಆರಂಭಿಸುವವರಿಗೆ ಆರಂಭಿಕ ನಿಧಿ (ಸೀಡ್ ಫಂಡ್) ನೀಡಲಾಗುವುದು. ಈಗಾಗಲೇ ಎರಡು ನವೋದ್ಯಮಗಳಿಗೆ ಆರಂಭಿಕ ನಿಧಿ ನೀಡಲಾಗಿದೆ. ತಲಾ ₹1 ಕೋಟಿಯಷ್ಟು ನೀಡಲಾಗಿದೆ ಎಂದರು.

ಐಐಟಿಗಳಲ್ಲಿ ಕೋರ್ಸ್: ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಚಟುವಟಿಕೆಗಳ ವಿಸ್ತರಣೆ ಆಗುವುದರಿಂದ ಅದಕ್ಕೆ ಪೂರಕವಾಗಿ ಶಿಕ್ಷಣದಲ್ಲೂ ಕೋರ್ಸ್‌ಗಳನ್ನು ಆರಂಭಿಸಲಾಗುವುದು. ವಿವಿಧ ಐಐಟಿಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲಾಗುವುದು ಎಂದೂ ಗೋಯೆಂಕಾ ಹೇಳಿದರು.

44 ಶತಕೋಟಿ ಡಾಲರ್ ಚಟುವಟಿಕೆಗಳು

- ಭೂವೀಕ್ಷಣೆಯ ಉಪಗ್ರಹಗಳ ಮೂಲಕ ಕೃಷಿ, ಅರಣ್ಯ, ಸಮುದ್ರ ವೀಕ್ಷಣೆ, ನಿಗಾ, ಮ್ಯಾಪಿಂಗ್ ಮತ್ತು ಇತರ ಸೇವೆಗಳು
- ನೈಸರ್ಗಿಕ ವಿಕೋಪ ಮತ್ತು ತುರ್ತುಸ್ಥಿತಿಯ ನಿರ್ವಹಣೆಯಲ್ಲಿ ಬಾಹ್ಯಾಕಾಶ ಸೇವೆಗಳು
- ವಿಮೆ, ಬ್ಯಾಂಕಿಂಗ್, ಹಣಕಾಸು, ಸಾರಿಗೆ ಮೂಲ ಸೌಕರ್ಯ, ಗ್ರಾಹಕ ಪರಿಹಾರ, ಇಂಧನ, ಗಣಿ, ಹವಾಮಾನ, ಪರಿಸರ ನಿರ್ವಹಣೆ
- ಗ್ರೌಂಡ್ ನೆಟ್‌ವರ್ಕ್, ಉಪಗ್ರಹಗಳು ಅದಕ್ಕೆ ಸಂಬಂಧಿಸಿದ ಉಪಕರಣಗಳ ತಯಾರಿಕೆ
- ಉಡಾವಣಾ ವಾಹನಗಳ ತಯಾರಿಕೆ. ಅಧಿಕ ಭಾರದ ಉಡಾವಣಾ ವಾಹನಗಳನ್ನು ಇಸ್ರೊ ನಿರ್ಮಿಸಿ, ಖಾಸಗಿಯವರಿಗೆ ದೇಶೀ ಬಳಕೆಗೆ ಅವಕಾಶ. ಸಣ್ಣ ಉಡಾವಣಾ ವಾಹನಗಳ ನಿರ್ಮಾಣ ಮತ್ತು ಉಡಾವಣೆ ಖಾಸಗಿಯವರಿಗೆ ಅವಕಾಶ.
- ಬಾಹ್ಯಾಕಾಶ ಟ್ರಾಫಿಕ್ ಮ್ಯಾನೇಜ್‌ಮೆಂಟ್
- **ಬೇಡಿಕೆ ಸೃಷ್ಟಿಸುವಿಕೆ:** ಭೂ ವೀಕ್ಷಣೆ (ಇಒ) ವೇದಿಕೆ, ಸಂವಹನ ವೇದಿಕೆ, ದಿಕ್ಸೂಚಿ ವೇದಿಕೆ, ಸಂಶೋಧನೆ ಮತ್ತು ಅಭಿವೃದ್ಧಿ, ಪರಿಸರ ವ್ಯವಸ್ಥೆ, ಪ್ರತಿಭಾನ್ವಿತರ ತಂಡ ರಚನೆ, ಹಣಕಾಸು ಸೌಲಭ್ಯ, ಅಂತರರಾಷ್ಟ್ರೀಯ ಪಾಲುದಾರಿಕೆ ಮತ್ತು ಸಹಯೋಗ, ನೀತಿ ಮತ್ತು ನಿಯಂತ್ರಣ ಕ್ರಮಗಳು

'ಉಪಗ್ರಹ ಸೇವೆಯನ್ನು ಪಡೆಯಲು ಹಲವು ದೇಶಗಳು ಆಸಕ್ತಿ ತೋರಿಸಿವೆ. ಇಸ್ರೊ ಮತ್ತು ಖಾಸಗಿ ಕಂಪನಿಗಳು ಸೇವೆಯನ್ನು ನೀಡಬಹುದಾಗಿದೆ. ಈಗಾಗಲೇ ಖಾಸಗಿ ಕಂಪನಿಗಳು ಉಡಾವಣಾ ವಾಹನಗಳನ್ನು ತಯಾರಿಸುವ ಕಾರ್ಯದಲ್ಲಿ ನಿರತವಾಗಿವೆ' ಎಂದು ಗೋಯೆಂಕಾ ಅವರು ಹೇಳಿದರು.

ಪ್ರಜಾವಾಣಿ 75 www.prajavani.net



ಉದ್ವೇಗಕ್ಕೆ ಒಳಗಾಗದೆ ನಿಷ್ಪಕ್ಷಪಾತವಾದ ವರದಿಗಳನ್ನು ಪ್ರಕಟಿಸುವ ಪತ್ರಿಕೆ ಪ್ರಜಾವಾಣಿ

76 ಲಕ್ಷಕ್ಕೂ ಹೆಚ್ಚು ಓದುಗರನ್ನು ಹೊಂದಿರುವ, ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆ ಪ್ರಜಾವಾಣಿ. ಶಿಕ್ಷಣ, ಭೂಮಿಕಾ, ಸಿನಿಮಾ ಮುಂತಾದ ವೈವಿಧ್ಯಮಯ ಪುರವಣಿಗಳೊಂದಿಗೆ ಮನೆಮಂದಿಗೆಲ್ಲ ಸಲ್ಲುವ ಸಾತ್ವಿಕ ಪತ್ರಿಕೆ.

Source: TR, IRS 2019,Q4

Follow us on @prajavani

Total readership 76.42 lacs*

ಬಿಜೆಪಿ ಟಿಕೆಟ್ ವಂಚನೆ: ವಜ್ರದೇಹಿ ಮಠದ ಸ್ವಾಮೀಜಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಟಿಕೆಟ್ ವಂಚನೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ಮಂಗಳೂರಿನ ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿಗೆ ನೋಟಿಸ್ ನೀಡಿದ್ದಾರೆ.

ಪ್ರಕರಣದ ತನಿಖಾಧಿಕಾರಿಯಾಗಿರುವ ಎಸಿಪಿ ರೀನಾ ಸುವರ್ಣ ಅವರು ಸ್ವಾಮೀಜಿಗೆ ನೋಟಿಸ್ ಪ್ರತಿ ಕಳುಹಿಸಿದ್ದಾರೆ. 'ನೋಟಿಸ್ ತಲುಪಿದ ನಂತರ ಮೂರು ದಿನಗಳ ಒಳಗಾಗಿ ವಿಚಾರಣೆಗೆ ಹಾಜರಾಗಬೇಕು' ಎಂದು ಸೂಚಿಸಿದ್ದಾರೆ.

ಉದ್ಯಮಿ ಗೋವಿಂದ ಬಾಬು ಪೂಜಾರಿ ನೀಡಿದ್ದ ದೂರಿನನ್ವಯ ಆರೋಪಿಗಳಾದ ಚೈತ್ರಾ ಕುಂದಾಪುರ, ಹಿರೇಹಡಗಲಿ ಹಾಲಸ್ವಾಮಿ ಮಠದ ಹಾಲವೀರಪ್ಪ ಸ್ವಾಮೀಜಿ ಸೇರಿದಂತೆ ಹಲವರನ್ನು ಸಿಸಿಬಿ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ.

'ಚೈತ್ರಾ ಕುಂದಾಪುರ ವಂಚನೆ ಬಗ್ಗೆ ನನಗೆ ಮಾಹಿತಿ ಇತ್ತು. ಜೊತೆಗೆ, ಅವರು ಯಾರಿಗೆಲ್ಲ ವಂಚನೆ ಮಾಡಿದ್ದಾರೆಂಬ ಮಾಹಿತಿ ನನ್ನ ಬಳಿ ಇದೆ' ಎಂಬುದಾಗಿ ಸ್ವಾಮೀಜಿ ಪರಿಚಯಸ್ಥರ ಬಳಿ ಹೇಳಿಕೊಂಡಿದ್ದರು. ಈ ಬಗ್ಗೆ ಮಾಧ್ಯಮಗಳಲ್ಲೂ ಸುದ್ದಿ ಬಂದಿತ್ತು. ಇದೇ ಕಾರಣಕ್ಕೆ ಅವರಿಗೆ ನೋಟಿಸ್ ನೀಡಲಾಗಿದೆ. ವಿಚಾರಣೆಗೆ ಬಂದು ಮಾಹಿತಿ ನೀಡುವಂತೆ ತಿಳಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಮೊರ ಮಾರಾಟದ ತಿರುಗಾಟ

ದವಸ ಧಾನ್ಯಗಳನ್ನು ಕೇರಲು ಬಳಸುವ ಮೊರಗಳನ್ನು ಸಿದ್ಧಪಡಿಸಿ, ಮಾರುವ ಮಹಿಳೆಯರು ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

'ಬಡ್ತಿ ಮೀಸಲು ಅನ್ಯಾಯ ಸಚಿವರ ಜೊತೆ ಶೀಘ್ರವೇ ಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿ, ನೌಕರರಿಗೆ ಬಿ.ಕೆ. ಪವಿತ್ರ -2ರ ತೀರ್ಪಿನ ಅನ್ವಯ ಬಡ್ತಿಯಲ್ಲಿ ಮೀಸಲಾತಿ ನೀಡುವ ಸಂದರ್ಭದಲ್ಲಿ ಹಲವು ಇಲಾಖೆಗಳು ಅನ್ಯಾಯ ಮಾಡುತ್ತಿವೆ. ಹಳೆ ನಿಯಮವನ್ನು ಉಲ್ಲೇಖಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಅಭಿಪ್ರಾಯ ನೀಡುತ್ತಿರುವುದೇ ಇದಕ್ಕೆ ಕಾರಣ' ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರ ಶೇಖರಯ್ಯ ದೂರಿದ್ದಾರೆ.

'ಬಡ್ತಿಯಲ್ಲಿ ಎಸ್‌ಸಿಗೆ ಶೇ 17, ಎಸ್‌ಟಿಗೆ ಶೇ 7 ಮೀಸಲಾತಿ ಇದೆ. ಆದರೆ, ಇಲಾಖೆಗಳಿಗೆ ಅಭಿಪ್ರಾಯ ನೀಡುವ ಸಂದರ್ಭದಲ್ಲಿ ಹಳೆ ಆದೇಶವನ್ನು ಡಿಪಿಎಆರ್ ನಮೂದಿಸುತ್ತಿದೆ. ಇದರಿಂದ ಎಸ್‌ಸಿ, ಎಸ್‌ಟಿ ನೌಕರರು ಬಡ್ತಿ ವಂಚಿತರಾಗುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಸ್ಪಷ್ಟ ಅಭಿಪ್ರಾಯ ನೀಡಿದ್ದರೂ ಲೋಕೋಪಯೋಗಿ ಇಲಾಖೆಯಲ್ಲಿ 134 ಅಧಿಕಾರಿಗಳನ್ನು ಬಡ್ತಿಗೆ ಪರಿಗಣಿಸಿಲ್ಲ. ಎಇ ಹುದ್ದೆಯಿಂದ ಎಇಇ ಹುದ್ದೆಗೆ 34 ಮಂದಿಗೆ ಬಡ್ತಿ ನೀಡುವಾಗ ಮೀಸಲಾತಿಯನ್ನೇ ಅಳವಡಿಸಿಲ್ಲ. ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಇನ್ನೂ ಬಿ.ಕೆ. ಪವಿತ್ರ 1ರ ಜ್ಯೇಷ್ಠತೆಯನ್ನೇ ಮುಂದುವರಿಸಲಾಗಿದೆ. ಕೃಷಿ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ 80 ಹುದ್ದೆಗಳನ್ನು ತುಂಬಲು ಸಮಾಜ ಕಲ್ಯಾಣ ಇಲಾಖೆ ಸೂಚಿಸಿದ್ದರೂ ಮುಂಬಡ್ತಿ ನೀಡಿಲ್ಲ' ಎಂದು ಅವರು ಆರೋಪಿಸಿದ್ದಾರೆ.

'ಆರು ವಲಯ ಅಗ್ನಿಶಾಮಕ ಅಧಿಕಾರಿ ಹುದ್ದೆ ಖಾಲಿ ಇದ್ದರೂ ಎಲ್ಲ ಹುದ್ದೆಗಳನ್ನು ಪರಿಶಿಷ್ಟರಿಗೆ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಅಗ್ನಿ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಬಡ್ತಿ ಪ್ರಕ್ರಿಯೆಯನ್ನೇ ನಡೆಸಿಲ್ಲ. ಈ ರೀತಿ ಹಲವು ಇಲಾಖೆಗಳಲ್ಲಿ ಮೀಸಲಾತಿ ನೀದಿರುವ ಬಗ್ಗೆ ಇದೇ 12ರಂದು ಸಚಿವರಾದ ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ, ಸತೀಶ ಜಾರಕಿಹೊಳಿ, ಎಚ್‌.ಸಿ. ಮಹದೇವಪ್ಪ, ಅಡ್ವೊಕೇಟ್ ಜನರಲ್, ಕಾನೂನು ಇಲಾಖೆಯ ಕಾರ್ಯದರ್ಶಿ, ಡಿಪಿಎಆರ್ ಕಾರ್ಯದರ್ಶಿ ಜೊತೆ ಸಂಘದ ಪದಾಧಿಕಾರಿಗಳ ಜೊತೆ ಸಭೆ ನಿಗದಿಯಾಗಿತ್ತು. ಆದರೆ, ಸಚಿವರು ವಿದೇಶ ಪ್ರಯಾಣದಲ್ಲಿರುವ ಕಾರಣ ಅಂದಿನ ಸಭೆಯನ್ನು ಮುಂದೂಡಲಾಗಿದ್ದು, ಶೀಘ್ರದಲ್ಲಿ ಸಭೆ ಆಯೋಜಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ.

ಸರ್ಕಾರಿ ನೌಕರರ ರಾಜ್ಯ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ತುಮಕೂರು: ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ನಗರದಲ್ಲಿ ಅ. 27, 28 ಮತ್ತು 29ರಂದು ನಡೆಯಲಿವೆ.

3,500 ಮಹಿಳಾ ಕ್ರೀಡಾಪಟುಗಳು ಸೇರಿದಂತೆ ಒಟ್ಟು 9,952 ಮಂದಿ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ನಗರದ ವಿವಿಧ ಶಾಲಾ- ಕಾಲೇಜು, ವಿಶ್ವವಿದ್ಯಾಲಯ ಒಳಗೊಂಡಂತೆ 17 ಕಡೆ ಸ್ಪರ್ಧೆಗಳು ನಡೆಯಲಿವೆ.

ಗಾಯನ, ಲಘು ಸಂಗೀತ, ನೃತ್ಯ, ವಾದ್ಯ ಸಂಗೀತ, ಜಾನಪದ ಹಾಡು ಮತ್ತು ನೃತ್ಯ ಸ್ಪರ್ಧೆಗಳ ಜೊತೆಗೆ ಕರಕುಶಲ ಪ್ರದರ್ಶನ ಇರಲಿದೆ. ಜಿಲ್ಲಾ ಮಟ್ಟದಲ್ಲಿ ಅರ್ಹತೆ ಪಡೆದವರು ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ. ಕ್ರೀಡಾಕೂಟದ ನಂತರ ಪ್ರತಿ ದಿನಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ.

ಕರ್ನಾಟಕ ನೇತ್ರಜ್ಞರ ಸಂಘ

ಸದಸ್ಯರಿಗೆ ಸೂಚನೆ

ದಿನಾಂಕ: 10.10.2023

ಈ ಮೂಲಕ ಸಮಸ್ತ ಸದಸ್ಯರಿಗೆ ತಿಳಿಸುವುದು ಏನೆಂದರೆ, ಇದೀಗ ವಾರ್ಷಿಕ ಚುನಾವಣೆಗಳು ಸನ್ನಿಹಿತವಾಗಿದ್ದು, ಸಂಬಂಧಿತ ವಿವರಗಳನ್ನು www.kosonline.org ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇನ್ನುವರೆಗೆ ಯಾರು ತಮ್ಮ ಇಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆಗಳನ್ನು ಅಪ್‌ಡೇಟ್ ಮಾಡಿಕೊಂಡಿರುವುದಿಲ್ಲವೊ, ಅಂತಹವರು 15–10–2023 ರಂದು ಅಥವಾ ಮೊದಲು info@kosonline.org ಇಮೇಲ್ ಐಡಿ ಮುಖಾಂತರ ಅಪ್‌ಡೇಟ್ ಮಾಡಿಕೊಳ್ಳಬಹುದು. ಆನ್‌ಲೈನ್ ಪ್ರಕ್ರಿಯೆ ಮೂಲಕ ಮತದಾನ ಕೈಗೊಳ್ಳಲಾಗುತ್ತದೆ (18.10.2023 ರಿಂದ 26.10.2023) ಹಾಗೂ KOSCON23 ಪ್ರಾಂಗಣದಲ್ಲಿ 27.10.2023 ರಂದು ಪ್ರತ್ಯಕ್ಷವಾಗಿ ಕೈಗೊಳ್ಳಲಾಗುತ್ತದೆ.

ಸಹಿ/–
ಕಾರ್ಯದರ್ಶಿ, ಕರ್ನಾಟಕ ನೇತ್ರಜ್ಞರ ಸಂಘ

'ಅರಿವು' ಸಾಲ ₹5 ಲಕ್ಷಕ್ಕೆ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕೋಟಾದಡಿ ವೈದ್ಯಕೀಯ ಸೀಟು ಪಡೆಯುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ 'ಅರಿವು' ಯೋಜನೆಯಡಿ ನೀಡುವ ಸಾಲದ ಮೊತ್ತವನ್ನು ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ವಸತಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಗಳ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಅವರು ಈ ಸಲಹೆ ನೀಡಿದರು.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಹೆಚ್ಚಳ ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಮಾಣ ಹೆಚ್ಚಳ ಮಾಡಿರುವುದಕ್ಕೆ ಅನುಗುಣವಾಗಿ ಹೆಚ್ಚುವರಿ ಹುದ್ದೆಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸುವಂತೆಯೂ ಅವರು ತಿಳಿಸಿದರು.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಿಗೆ ನಿಗದಿತ ಗುರಿಗೆ ಎದುರಾಗಿ ನಿರೀಕ್ಷೆಗೂ ಮೀರಿ ಅರ್ಜಿಗಳು ಸ್ವೀಕೃತ ಆಗಿರುವುದರಿಂದ ಅರ್ಹ ಫಲಾನುಭವಿಗಳ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ, ಅನುದಾನ ಲಭ್ಯತೆಗೆ ಅನುಸಾರವಾಗಿ ಸೌಲಭ್ಯ ವಿತರಿಸಬೇಕು. 'ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆ'ಯಡಿ ಅಲ್ಪಸಂಖ್ಯಾತರ ಕಾಲೊನಿಗಳ ಅಭಿವೃದ್ಧಿಗೆ ₹ 1 ಸಾವಿರ ಕೋಟಿಯ ಕ್ರಿಯಾಯೋಜನೆ ರೂಪಿಸಿ, ಆದ್ಯತೆ ಅನುಸಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು ಎಂದೂ ಸಲಹೆ ನೀಡಿದರು.

ಆಯವ್ಯಯದಲ್ಲಿ ಅಲ್ಪಸಂಖ್ಯಾತರ ಇಲಾಖೆಯಡಿ ಘೋಷಿಸಲಾದ 19 ಘೋಷಣೆಗಳ ಪೈಕಿ 16 ಘೋಷಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಫಲಾನುಭವಿ ವಂತಿಕೆ ಮೊತ್ತ ಹೆಚ್ಚು ಇದೆ. ಹೀಗಾಗಿ, ಸಂಪನ್ಮೂಲ ಕ್ರೋಢೀಕರಣಕ್ಕೆ ನೀತಿ ರೂಪಿಸಲು ಪ್ರಸ್ತಾವನೆ ಸಲ್ಲಿಸಬೇಕು. ಒಂದು ಲಕ್ಷ ವಸತಿ ಯೋಜನೆಯಡಿ ನಿರ್ಮಿಸುತ್ತಿರುವ ಮನೆಗಳಿಗೆ ಆದ್ಯತೆ ಮೇರೆಗೆ ಮೂಲಸೌಕರ್ಯಗಳನ್ನು ಕಲ್ಪಿಸಬೇಕು ಎಂದೂ ಸೂಚಿಸಿದರು.

ಆರ್ಥಿಕ ನೆರವಿಗೆ ಒಪ್ಪಿಗೆ–ಸಚಿವ ಜಮೀರ್

'ಕೊಳೆಗೇರಿ ಅಭಿವೃದ್ಧಿ ಮಂಡಳಿ ಮತ್ತು ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ನಿರ್ಮಿಸಲಾಗುತ್ತಿರುವ 2.30 ಲಕ್ಷ ಮನೆಗಳನ್ನು ಪೂರ್ಣಗೊಳಿಸಲು ಆರ್ಥಿಕ ನೆರವು ನೀಡಲು ಮುಖ್ಯಮಂತ್ರಿ ಒಪ್ಪಿದ್ದಾರೆ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಹೇಳಿದರು.

2013ರಿಂದ 2018ರವರೆಗೆ ಮಂಜೂರು ಮಾಡಿರುವ ಮನೆಗಳ ಕಾಮಗಾರಿ ವಿವಿಧ ಹಂತಗಳಲ್ಲಿವೆ. ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ 1.80 ಲಕ್ಷ, ರಾಜೀವ್ ಗಾಂಧಿ ವಸತಿ ನಿಗಮದಿಂದ 50 ಸಾವಿರ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಈ ಯೋಜನೆ ಪೂರ್ಣಗೊಳಿಸಲು ₹ 8 ಸಾವಿರ ಕೋಟಿ ಅಗತ್ಯ ಇರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ. ಆರ್ಥಿಕ ನೆರವು ಸಿಕ್ಕಿದರೆ ನನೆಗುದಿಗೆ ಬಿದ್ದಿರುವ ಈ ಯೋಜನೆಗಳನ್ನು ವರ್ಷದೊಳಗೆ ಪೂರ್ಣಗೊಳಿಸಿ, ಹಂಚಿಕೆ ಮಾಡಬಹುದು' ಎಂದು ಹೇಳಿದರು.

'ಬೆಂಗಳೂರಿನಲ್ಲಿ 'ಮುಖ್ಯಮಂತ್ರಿ ಒಂದು ಲಕ್ಷ ಮನೆ' ಯೋಜನೆ ಪೂರ್ಣಗೊಳಿಸಲು ₹ 500 ಕೋಟಿ ಸಾಲದ ವ್ಯವಸ್ಥೆ ಮಾಡಲು ಕೂಡಾ ಮುಖ್ಯಮಂತ್ರಿ ಒಪ್ಪಿದ್ದಾರೆ. ವಸತಿ ಯೋಜನೆಗಳಿಗೆ ಜಿಎಸ್‌ಟಿ ವಿನಾಯಿತಿ ನೀಡಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದೂ ಅವರು ತಿಳಿಸಿದರು.

ಬಿಡಿಎ ಲಂಚ ಪ್ರಕರಣ ಬಿಎಸ್‌ವೈಗೆ ಮತ್ತೆ ತಲೆನೋವು

ಒಂದನೇ ಪುಟದಿಂದ...

ಬೆಂಗಳೂರು ಪೂರ್ವ ತಾಲ್ಲೂಕಿನ ಕೋನದಾಸನಪುರದಲ್ಲಿ ಬಿಡಿಎ ನಿರ್ಮಿಸುತ್ತಿರುವ ಬಹುಮಹಡಿ ವಸತಿ ಸಮುಚ್ಚಯದ ಕಾಮಗಾರಿಯ ಗುತ್ತಿಗೆ ಸಂಬಂಧ ಚಂದ್ರಕಾಂತ್ ರಾಮಲಿಂಗಂ ಅವರಿಂದ ಆರೋಪಿಗಳು ಒಟ್ಟು ₹29.5 ಕೋಟಿ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ ಟಿ.ಜೆ. ಅಬ್ರಹಾಂ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿತ್ತು.

ಯಡಿಯೂರಪ್ಪ ಅವರ ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ, ಅವರ ಮಗ ಶಶಿಧರ ಮರಡಿ, ವಿರೂಪಾಕ್ಷಪ್ಪ ಅವರ ಅಳಿಯ ಸಂಜಯ್ ಶ್ರೀ, ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ, ಐಎಎಸ್ ಅಧಿಕಾರಿ ಜಿ.ಸಿ. ಪ್ರಕಾಶ್ ಮತ್ತು 37 ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ.ರವಿ ಇತರ ಆರೋಪಿಗಳು. ಈ ಎಲ್ಲರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ. ಯಡಿಯೂರಪ್ಪ ವಿರುದ್ಧದ ತನಿಖೆಗೆ ನ್ಯಾಯಪೀಠ ತಡೆ ನೀಡಿದೆ.

ಎಫ್‌ಐಆರ್ ದಾಖಲಿಸಲು ಆದೇಶ ಹೊರಡಿಸುವ ಮುನ್ನ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಎಂಬ ಅಂಶವನ್ನು ಪರಿಗಣಿಸಿಲ್ಲ ಎಂದು ಆರೋಪಿಸಿ ಯಡಿಯೂರಪ್ಪ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಮುಖ್ಯಮಂತ್ರಿ ಮನೆಗೆ ಕಲ್ಲು: ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಟಿ.ಕೆ.ಬಡಾವಣೆಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಗೆ ಕಲ್ಲು ಎಸೆದ ಆರೋಪದ ಮೇಲೆ ಎಂ.ಶಿವಮೂರ್ತಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಆರೋಪಿಯು ಸ್ಕೂಟರಿನಲ್ಲಿ ಬಂದು ಮುಖ್ಯಮಂತ್ರಿ ಮನೆಯ ಕಿಟಕಿಗಳಿಗೆ ಕಲ್ಲು ಎಸೆದಿದ್ದ. ಅದನ್ನು ತಡೆದ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ. ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದಾರೆ.

ಹೂಟಗಳ್ಳಿ ನಿವಾಸಿ ಆರೋಪಿಯು ಕಳೆದ ವಿಧಾನಸಭೆ ಚುನಾವಣೆಯ ಮತದಾನದ ದಿನ ಹೂಟಗಳ್ಳಿ ಮತಗಟ್ಟೆಯಲ್ಲಿ ಇವಿಎಂ ಕಂಟ್ರೋಲ್ ಯುನಿಟ್ ಒಡೆದು ಹಾಕಿದ್ದು, ಪ್ರಕರಣ ದಾಖಲಾಗಿತ್ತು.

ಉದ್ಯೋಗ ವಾಣಿ

MM RUBBER COMPANY LIMITED
A Leading Mattress Brand
REQUIRES
SALES EXECUTIVE
mm FOAM

based at HUBLI to be part of the Sales Team. Candidate should be a Graduate in any discipline preferably with MBA, fluent in Kannada & English, with 4 - 5 years of experience, aged around 30 years with an aptitude for field sales in consumer durables preferably mattress, furniture, etc.

Salary commensurate with experience.

Interested candidate may please apply within 7 days to:
mmfoamhr@gmail.com

YARANA FEEDS & FARMS PVT. LTD., HUBLI
We're more than Five Decades in this field & gained immense expertise in Cattle & Poultry Feeds for the Best Quality.
We're looking for qualified & adequate experienced persons

HATCHERY MANAGER
HATCHERY SUPERVISOR
BREEDING FARM MANAGER
Knowledge of A.I must
BREEDING FARM SUPERVISOR

Forward detailed Resume within 7 days to, The Director,
Yarana Feeds & Farms Pvt. Ltd.
B-55,56, Industrial Estate, Gokul Road,
HUBBALLI - 580 030 Karnataka
email:yaranaffpl@gmail.com WhatsApp : **07975779826**

ADVERTORIAL

ಭಾರತದಿಂದ ವಿದೇಶ ಪ್ರವಾಸ ಮಾಡುವವರ ಸಂಖ್ಯೆಯಲ್ಲಿ ಹೆಚ್ಚಳ: VFS ಗ್ಲೋಬಲ್‌ನಿಂದ ವೀಸಾ ಮೋಸದ ಬಗ್ಗೆ ಅರ್ಜಿದಾರರಿಗೆ ಮುನ್ನೆಚ್ಚರಿಕೆ

ಪ್ರವಾಸಿಗರ ಸಂಖ್ಯೆಯಲ್ಲಿ ಏರಿಕೆಯಾಗಿರುವುದನ್ನು ಮೋಸಗಾರರು ಮತ್ತು ಮೋಸದ ಸಂಸ್ಥೆಗಳು ದುರ್ಬಳಕೆ ಮಾಡಿಕೊಂಡು, ವೀಸಾ ಸ್ಕ್ಯಾಮ್‌ಗಳಿಗೆ ಅಮಾಯಕ ಪ್ರವಾಸಿಗರನ್ನು ದೂಡುತ್ತಾರೆ

ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಪ್ರಕಟಣೆ

ಭಾರತದಿಂದ ಹೊರ ದೇಶಗಳಿಗೆ ಪ್ರವಾಸಿಗರ ಸಂಖ್ಯೆಯಲ್ಲಿ ಅಪಾರ ಏರಿಕೆಯಾಗಿರುವುದರ ಜೊತೆಗೆ ವೀಸಾ ಹೆಸರಿನಲ್ಲಿ ಮೋಸ ಮಾಡುವವರ ಸಂಖ್ಯೆಯೂ ಏರಿಕೆಯಾಗಿದೆ. ಹೆಚ್ಚು ಹೆಚ್ಚು ಭಾರತೀಯರು ತಮ್ಮ ತಿರುಗಾಟದ ಹುಚ್ಚಿಗೆ ನೀರೆರೆಯುತ್ತಿದ್ದು, ಇದನ್ನು 'ರಿವೆಂಜ್ ಟ್ರಾವೆಲ್' ಎಂದೇ ಬಣ್ಣಿಸಲಾಗಿದೆ. ಈ ಹವ್ಯಾಸದಿಂದಾಗಿ ವೀಸಾ ಅಪಾಯಿಂಟ್‌ಮೆಂಟ್‌ಗಳಿಗೆ ಬೇಡಿಕೆ ಏರಿಕೆಯಾಗಿದ್ದು, ಇದೇ ಸಮಯಕ್ಕಾಗಿ ಕಾಯುತ್ತಿದ್ದ ಮೋಸಗಾರರ ಬಲೆಗೆ ಬೀಳುವ ಅಪಾಯವೂ ಹೆಚ್ಚಾಗಿದೆ.

ಈ ಹಿನ್ನೆಲೆಯಲ್ಲಿ, ಸರ್ಕಾರ ಮತ್ತು ರಾಜತಾಂತ್ರಿಕ ಯೋಜನೆಗಳಿಗೆ ವಿಶ್ವದ ಅತಿದೊಡ್ಡ ಔಟ್‌ಸೋರ್ಸಿಂಗ್ ಮತ್ತು ತಂತ್ರಜ್ಞಾನ ಸೇವೆಗಳ ಪರಿಣಿತರಾಗಿರುವ ನಾವು ವಿಎಫ್‌ಎಸ್ ಗ್ಲೋಬಲ್‌ನ ವಕ್ತಾರರ ಜೊತೆಗೆ ಮಾತನಾಡಿದ್ದು, ಅಪಾಯಿಂಟ್‌ಮೆಂಟ್‌ಗಳನ್ನು ಮಾರುವುದು, ನಕಲಿ ಅಪಾಯಿಂಟ್‌ಮೆಂಟ್ ಲೆಟರ್‌ಗಳನ್ನು ವಿತರಿಸುವುದು, ವೀಸಾ ನಿರ್ಧಾರ ಧನಾತ್ಮಕವಾಗಿ ಮಾಡುವ ಪ್ರಭಾವವನ್ನು ಹೊಂದಿದ್ದೇವೆ ಎಂದು ಹೇಳಿಕೊಳ್ಳುವ ಮೋಸದ ಬಗ್ಗೆ ಚರ್ಚೆ ನಡೆಸಿದ್ದೇವೆ.

ಮೋಸದ ಬಗ್ಗೆ ತಿಳಿದುಕೊಳ್ಳಲು ಇಲ್ಲಿ ಒಂದು ಮಾರ್ಗಸೂಚಿ ಇದೆ.

ಪ್ರ1. ವೀಸಾ ಅಪಾಯಿಂಟ್‌ಮೆಂಟ್‌ಗಳನ್ನು ಬುಕ್ ಮಾಡಲು ಶುಲ್ಕ ಇದೆಯೇ?
ನಾವು ಸೇವೆ ಸಲ್ಲಿಸುತ್ತಿರುವ ದೇಶಗಳಲ್ಲಿ ವೀಸಾ ಅಪಾಯಿಂಟ್‌ಮೆಂಟ್‌ಗಳನ್ನು ಶೆಡ್ಯೂಲ್ ಮಾಡುವುದಕ್ಕೆ ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ. ಅಪಾಯಿಂಟ್‌ಮೆಂಟ್‌ಗಳು ಉಚಿತವಾಗಿವೆ ಮತ್ತು ಅದನ್ನು www.vfsglobal.com ನಲ್ಲಿ ಬುಕ್ ಮಾಡಬಹುದು. ಆಯ್ದ ದೇಶಗಳಲ್ಲಿ ಅತ್ಯಲ್ಪ ಸೇವಾ ಶುಲ್ಕ ಇದ್ದು, ಇದನ್ನು ಮೊದಲೇ ಪಾವತಿ ಮಾಡಬಹುದಾಗಿದೆ.

ಪ್ರ2. ವೀಸಾ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಎಫ್‌ಎಸ್ ಗ್ಲೋಬಲ್ ಯಾವುದೇ ಪಾತ್ರ ವಹಿಸುತ್ತದೆಯೇ?
ವೀಸಾ ಅರ್ಜಿಗಳು, ವೀಸಾ ಅವಧಿ ಮತ್ತು ಅವುಗಳನ್ನು ಪ್ರಕ್ರಿಯೆಗೊಳಿಸಲು ಬೇಕಿರುವ ಕಾಲಾವಧಿಯ ನಿರ್ಧಾರವು ಸಂಬಂಧಿಸಿದ ರಾಯಭಾರ ಕಚೇರಿ ಅಥವಾ ಕಾನ್ಸುಲೇಟ್‌ಗಳಿಗೆ ಸಂಬಂಧಿಸಿರುತ್ತದೆ. VFS ಗ್ಲೋಬಲ್ ಕೇವಲ ನಿರ್ಧಾರವನ್ನು ಹೊರತುಪಡಿಸಿದ ಮತ್ತು ಆಡಳಿತಾತ್ಮಕ ವೀಸಾ ಅರ್ಜಿ ಪ್ರಕ್ರಿಯೆಯನ್ನು ನಿರ್ವಹಿಸುತ್ತದೆ. ನಿಮ್ಮ ವೀಸಾ ಅರ್ಜಿಯ ನಿರ್ಧಾರದಲ್ಲಿ ನಾವು ಯಾವುದೇ ಪಾತ್ರ ಹೊಂದಿರುವುದಿಲ್ಲ ಅಥವಾ ಪ್ರಭಾವವನ್ನೂ ಬೀರುವುದಿಲ್ಲ.

ಪ್ರ3. ವೀಸಾ ಒದಗಿಸಲು VFS Global ತೃತೀಯ ಪಕ್ಷದ ಸಂಸ್ಥೆಗಳ ಜೊತೆಗೆ ಸಹಭಾಗಿತ್ವ ಸಾಧಿಸುತ್ತದೆಯೇ?
ಇಲ್ಲ. ಯಾವುದೇ ತೃತೀಯ ಪಕ್ಷದ ಸಂಸ್ಥೆಯ ಜೊತೆಗೆ ನಾವು ಸಹಭಾಗಿತ್ವದಲ್ಲಿ ಕೆಲಸ ಮಾಡುವುದಿಲ್ಲ. ನಮ್ಮ ಜೊತೆಗೆ ಸಹಭಾಗಿತ್ವ ಹೊಂದಿದ್ದೇವೆ ಎಂದು ಹೇಳುವ ಅಥವಾ VFS ಗ್ಲೋಬಲ್ ಎಂಬಂತೆ ಕಾಣಿಸಿಕೊಳ್ಳುವ ಮೋಸಗಾರರು ಮತ್ತು ಮೋಸದ ಸಂಸ್ಥೆಗಳ ಬಗ್ಗೆ ಅರ್ಜಿದಾರರು ಎಚ್ಚರಿಕೆಯಿಂದಿರಬೇಕು. ಇಂತಹ ವೀಸಾ ಸಂಬಂಧಿತ ಮೋಸಗಳ ಬಗ್ಗೆ ಎಚ್ಚರಿಕೆಯಿಂದಿರುವಂತೆ ಪ್ರವಾಸಿಗರಿಗೆ ಜಾಗೃತಿ ಮೂಡಿಸಲು ಮತ್ತು ತಿಳಿವಳಿಕೆ ಮೂಡಿಸಲು ಟ್ರಾವೆಲ್ ಏಜೆಂಟ್ ಸಂಘಟನೆಗಳ ಜೊತೆಗೆ ನಾವು ನಿಕಟವಾಗಿ ಶ್ರಮಿಸುತ್ತಿದ್ದೇವೆ.

ಪ್ರ4. ವೀಸಾ ಅಪಾಯಿಂಟ್‌ಮೆಂಟ್‌ಗಳನ್ನು ಬುಕ್ ಮಾಡಲು ಎಲ್ಲಿಗೆ ಹೋಗಬೇಕು?
www.vfsglobal.com ಮಾತ್ರ ಏಕೈಕ ಅಧಿಕೃತ ವೆಬ್‌ಸೈಟ್ ಆಗಿದ್ದು, ನಾವು ಸೇವೆ ಸಲ್ಲಿಸುವ ದೇಶಗಳಲ್ಲಿ ವೀಸಾ ಅಪಾಯಿಂಟ್‌ಮೆಂಟ್‌ಗಳನ್ನು ಬುಕ್ ಮಾಡಬಹುದಾಗಿದೆ. ಅಪಾಯಿಂಟ್‌ಮೆಂಟ್‌ಗಳು ಉಚಿತವಾಗಿವೆ. ಆದರೆ, ಆಯ್ದ ದೇಶಗಳಲ್ಲಿ ಅತ್ಯಲ್ಪ ಸೇವಾ ಶುಲ್ಕ ಇದ್ದು, ಇದನ್ನು ಮೊದಲೇ ಪಾವತಿ ಮಾಡಬಹುದಾಗಿದೆ.

ಪ್ರ5. ಸಾಮಾಜಿಕ ಮಾಧ್ಯಮ, ಇಮೇಲ್‌ಗಳು, ಎಸ್‌ಎಂಎಸ್ ಅಥವಾ ಕರೆಗಳ ಮೂಲಕ ಯಾವುದೇ ವೈಯಕ್ತಿಕ ಮಾಹಿತಿ ಅಥವಾ ಮುಂಗಡ ಪಾವತಿಯನ್ನು ಕಂಪನಿ ಕೇಳುತ್ತದೆಯೇ?
ಯಾವುದೇ ಸಾಮಾಜಿಕ ಮಾಧ್ಯಮ ಮೆಸೇಜ್, ಇಮೇಲ್, ಎಸ್‌ಎಂಎಸ್ ಅಥವಾ ಕರೆಗಳ ಮೂಲಕ ವೈಯಕ್ತಿಕ ಮಾಹಿತಿ ಅಥವಾ ಮುಂಗಡ ಪಾವತಿ ಮಾಡುವಂತೆ ವೀಸಾ ಅರ್ಜಿದಾರರ ಬಳಿ ನಾವು ಎಂದೂ ಕೇಳುವುದಿಲ್ಲ. ನಿಮ್ಮ ವೀಸಾ ಅರ್ಜಿ ಪ್ರಕ್ರಿಯೆಯನ್ನು ತ್ವರಿತವಾಗಿ ಮಾಡಲು ವೈಯಕ್ತಿಕ ಖಾತೆಗಳಿಗೆ ಪಾವತಿ ಮಾಡುವಂತೆ ನಿಮ್ಮ ಬಳಿ ಯಾರಾದರೂ ಕೇಳಿದ್ದಾರೆ ಎಂದಾದರೆ, ನೀವು ಮೋಸಗಾರರ ಜೊತೆಗೆ ಸಂವಹನ ನಡೆಸುತ್ತಿದ್ದೀರಿ ಎಂದು ಅರ್ಥ. ವಿನಂತಿಸುವವರು ಅಸಲಿ ಎಂದು ದೃಢಪಡುವವರೆಗೂ ವೈಯಕ್ತಿಕ ವಿವರಗಳನ್ನು ಹಂಚಿಕೊಳ್ಳದಂತೆ ನಾವು ಅರ್ಜಿದಾರರ ಬಳಿ ಆಗ್ರಹಿಸುತ್ತೇವೆ. ಪಾವತಿಯನ್ನು ನಮ್ಮ ಅಧಿಕೃತ ವೆಬ್‌ಸೈಟ್ (www.vfsglobal.com) ಮೂಲಕ ಅಥವಾ ನಮ್ಮ ವೀಸಾ ಅರ್ಜಿ ಕೇಂದ್ರದಲ್ಲಿ ಮಾತ್ರವೇ ಪಾವತಿಗಳನ್ನು ಮಾಡಬೇಕು.

ಪ್ರ7. ಇಮಿಗ್ರೇಶನ್ ಮತ್ತು ಉದ್ಯೋಗ ಸೇವೆಗಳನ್ನು VFS ಗ್ಲೋಬಲ್ ಒದಗಿಸುತ್ತದೆಯೇ?
ಇಲ್ಲ. ನಾವು ಇಮಿಗ್ರೇಶನ್ ಮತ್ತು ಉದ್ಯೋಗ ಸೇವೆಗಳನ್ನು ಒದಗಿಸುವುದಿಲ್ಲ. ಹಣಕ್ಕಾಗಿ ಉದ್ಯೋಗ ಅಥವಾ ಇಮಿಗ್ರೇಶನ್ ಅವಕಾಶಗಳನ್ನು ನೀಡುವ ಮೋಸಗಾರರ ಬಗ್ಗೆ ಎಚ್ಚರಿಕೆಯಿಂದಿರಿ ಎಂದು ಅರ್ಜಿದಾರರಿಗೆ ಸಲಹೆ ನೀಡಲಾಗಿದೆ.

ಮಾಹಿತಿ ಹೊಂದಿರುವುದು ಮತ್ತು VFS ಗ್ಲೋಬಲ್ ಒದಗಿಸಿದ ಮಾರ್ಗಸೂಚಿಗಳನ್ನು ಅನುಸರಿಸುವ ಮೂಲಕ ಅರ್ಜಿದಾರರು ವೀಸಾ ಮೋಸಕ್ಕೆ ಒಳಗಾಗುವುದರಿಂದ ರಕ್ಷಣೆ ಪಡೆದುಕೊಳ್ಳಬಹುದು ಮತ್ತು ಸರಾಗ ಮತ್ತು ಅಸಲಿ ವೀಸಾ ಅರ್ಜಿ ಅನುಭವವನ್ನು ಪಡೆಯಬಹುದು.

ಯಾವುದೇ ಮೋಸದ ಚಟುವಟಿಕೆ ಶಂಕೆಯನ್ನು ವರದಿ ಮಾಡಲು ಅರ್ಜಿದಾರರು/ಪ್ರವಾಸಿಗರು ಈ QR ಕೋಡ್ ಸ್ಕ್ಯಾನ್ ಮಾಡಬಹುದು.

ಕೃಷಿ, ಗೃಹ ಬಳಕೆಗಷ್ಟೇ ಲೋಡ್ ಶೆಡ್ಡಿಂಗ್ • 2 ಸಾವಿರ ಮೆಗಾವಾಟ್ ವಿದ್ಯುತ್ ಕೊರತೆ ಎದುರಿಸುತ್ತಿರುವ ರಾಜ್ಯ

ಕೈಗಾರಿಕೆಗಳಿಗೆ ಮಣೆ; ಕೃಷಿ ಕಡೆಗಣನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ಅಭಾವ ತೀವ್ರಗೊಂಡಿದ್ದು, ಕೊರತೆ ಮಧ್ಯೆಯೂ ಎಲ್ಲ ಎಸ್ಕಾಂಗಳು (ವಿದ್ಯುತ್ ಸರಬರಾಜು ಕಂಪನಿಗಳು) ಕೈಗಾರಿಕಾ ವಲಯಕ್ಕೆ ಆದ್ಯತೆ ನೀಡಿ, ಕೃಷಿ ಪಂಪ್‌ಸೆಟ್‌ಗಳನ್ನು ಸಂಪೂರ್ಣ ಕಡೆಗಣಿಸಿವೆ.

ರಾಜ್ಯದಲ್ಲಿ ವಿದ್ಯುತ್ ಕೃಷಿ ವಲಯಕ್ಕೆ ಶೇ 35ರಷ್ಟು, ಕೈಗಾರಿಕಾ ವಲಯಕ್ಕೆ ಶೇ 19.50ರಷ್ಟು ಬಳಕೆಯಾಗುತ್ತಿದೆ. 1.50 ಕೋಟಿ ಗೃಹ ಬಳಕೆದಾರರು ಹಾಗೂ 32 ಲಕ್ಷ ಕೃಷಿ ಪಂಪ್‌ಸೆಟ್‌ಗಳಿಗೆ ಸರ್ಕಾರ ಉಚಿತ ವಿದ್ಯುತ್ ನೀಡುತ್ತಿದೆ. ಹಾಗಾಗಿ, ಆದಾಯದ ಮೂಲವಾದ ಕೈಗಾರಿಕಾ ವಲಯಕ್ಕೆ ವಿದ್ಯುತ್ ವ್ಯತ್ಯಯವಾದಂತೆ ಪೂರೈಸಲಾಗುತ್ತಿದ್ದು, ಉಚಿತ ಕ್ಷೇತ್ರಗಳನ್ನು ಕಡೆಗಣಿಸಲಾಗುತ್ತಿದೆ ಎನ್ನುವುದು ವಿವಿಧ ರೈತ ಸಂಘಟನೆಗಳ ಆರೋಪ.

ಮಳೆ ಅಭಾವದ ಕಾರಣ ಎಲ್ಲೆಡೆ ಬರ ಪರಿಸ್ಥಿತಿ ಸೃಷ್ಟಿಯಾಗಿದೆ. ಜಲಾಶಯಗಳು ಬರಿದಾಗಿವೆ. ಮಳೆಯಾಶ್ರಿತ ಪ್ರದೇಶಗಳ ಬೆಳೆ ಸಂಪೂರ್ಣ ಒಣಗಿವೆ. ನೀರಾವರಿ ಪ್ರದೇಶದ ತೋಟಗಾರಿಕಾ ಬೆಳೆ ಉಳಿಸಿಕೊಳ್ಳಲು ರೈತರು ಹರಸಾಹಸ ಪಡುತ್ತಿದ್ದಾರೆ.

ಆದರೆ, ಕೃಷಿ ಪಂಪ್‌ಸೆಟ್‌ಗಳಿಗೆ ಅಗತ್ಯ ವಿದ್ಯುತ್ ಪೂರೈಕೆಯಾಗದೇ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಿಯಮದಂತೆ ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿದಿನ 7 ತಾಸು ತ್ರಿಫೇಸ್ ವಿದ್ಯುತ್ ಪೂರೈಸಬೇಕು.

ಅಕ್ಟೋಬರ್‌ನಲ್ಲಿ ಪೂರೈಕೆಯಾಗಿರುಗುತ್ತಿರುವುದು ಗರಿಷ್ಠ ಎರಡು ತಾಸು ಮಾತ್ರ.

ಪ್ರಸ್ತುತ ಬೇಸಿಗೆಯ ಸಮಯದಲ್ಲಿ ಇರುತ್ತಿದ್ದ ವಿದ್ಯುತ್ ಬೇಡಿಕೆ ಕಳೆದ ಎರಡು ತಿಂಗಳಿನಿಂದಲೂ ಮುಂದುವರಿದಿದೆ. ಪ್ರಸ್ತುತ 16 ಸಾವಿರ ಮೆಗಾವಾಟ್‌ಗೆ ಬೇಡಿಕೆ ಇದೆ. ರಾಜ್ಯದ ಒಟ್ಟು ಉತ್ಪಾದನಾ ಸಾಮರ್ಥ್ಯ 32 ಸಾವಿರ ಮೆಗಾವಾಟ್‌ನಷ್ಟಿದೆ.

ಹಾಗಿದ್ದರೂ ಜಲಾಶಯಗಳಲ್ಲಿ ನೀರಿನ ಕೊರತೆ, ಕಲ್ಲಿದ್ದಲು ಪೂರೈಕೆಯ ವ್ಯತ್ಯಯ, ಕಳಪೆ ಉತ್ಪಾದನೆ, ನಿರ್ವಹಣಾ ಸಾಮರ್ಥ್ಯ ಮತ್ತಿತರ ಕಾರಣಗಳಿಂದ ಉತ್ಪಾದನೆ 10 ಸಾವಿರ ಮೆಗಾವಾಟ್ ದಾಟಿಲ್ಲ. ಕೇಂದ್ರ, ಇತರೆ ರಾಜ್ಯಗಳ ಪೂರೈಕೆ ಸೇರಿ 14 ಸಾವಿರ ಮೆಗಾವಾಟ್ ಲಭ್ಯವಾಗುತ್ತಿದೆ. ಇದರಿಂದ ಬೇಸಿಗೆ ಆರಂಭಕ್ಕೂ ನಾಲ್ಕು ತಿಂಗಳ ಮೊದಲೇ ಲೋಡ್‌ಶೆಡ್ಡಿಂಗ್ ಅನಿವಾರ್ಯವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಸಾಕಷ್ಟು ಸಮಸ್ಯೆ ಸೃಷ್ಟಿಸಿದೆ.

ಅಂಕಿ–ಅಂಶ

- **32** ಲಕ್ಷ — ಕೃಷಿ ಪಂಪ್‌ಸೆಟ್
- **15,147** — ದೊಡ್ಡ ಕೈಗಾರಿಕೆಗಳು
- **5.35** — ಸಣ್ಣ ಕೈಗಾರಿಕೆಗಳು
- **2** ಕೋಟಿ — ಒಟ್ಟು ಗೃಹ ಬಳಕೆದಾರರು
- **1.50** ಕೋಟಿ — ಉಚಿತ ವಿದ್ಯುತ್ ಪಡೆಯುತ್ತಿರುವವರು

ವಿದ್ಯುತ್ ಬೇಡಿಕೆ–ಪೂರೈಕೆ (ಮೆಗಾವಾಟ್‌ಗಳಲ್ಲಿ)	
ವಿದ್ಯುತ್ ಬೇಡಿಕೆ	16 ಸಾವಿರ
ರಾಜ್ಯದ ಉತ್ಪಾದನೆ	10 ಸಾವಿರ
ಕೇಂದ್ರದ ಪೂರೈಕೆ	3 ಸಾವಿರ
ಹೊರ ರಾಜ್ಯದ ಪೂರೈಕೆ	1 ಸಾವಿರ
ಕೊರತೆ	2 ಸಾವಿರ

1.50 ಲಕ್ಷ ಪಂಪ್‌ಸೆಟ್‌ಗಳಿಗೆ ಇಲ್ಲ ಸಂಪರ್ಕ

ರಾಜ್ಯದ ರೈತರು 1.50 ಲಕ್ಷ ಪಂಪ್‌ಸೆಟ್‌ಗಳಿಗೆ ಸಂಪರ್ಕ ಕಲ್ಪಿಸಲು ವಿವಿಧ ಎಸ್ಕಾಂಗಳಿಗೆ ಅರ್ಜಿ ಸಲ್ಲಿಸಿದ್ದಾರೆ. 2015ರಿಂದ ಅಂತಹ ಪಂಪ್‌ಸೆಟ್‌ಗಳಿಗೆ ಸಂಪರ್ಕವೇ ಸಿಕ್ಕಿಲ್ಲ. ಅಕ್ರಮ–ಸಕ್ರಮ ಯೋಜನೆ ಅಡಿ ಸಂಪರ್ಕ ಕಲ್ಪಿಸಲು ಸರ್ಕಾರ ನಿರ್ಧರಿಸಿದ್ದು, ಅದಕ್ಕಾಗಿ ₹6,099 ಕೋಟಿ ವೆಚ್ಚ ಮಾಡುತ್ತಿದೆ. ಬರ ಪರಿಸ್ಥಿತಿಯ ಈ ಸಮಯದಲ್ಲಿ ತುರ್ತು ಕ್ರಮಕೈಗೊಂಡು ರೈತರಿಗೆ ನೆರವಾಗಬೇಕು ಎನ್ನುತ್ತಾರೆ ನೆಲಮಂಗಲ ತಾಲ್ಲೂಕು ಮಾರಗೊಂಡನಹಳ್ಳಿಯ ರೈತ ಎಂ.ಆರ್.ಚಿಕ್ಕರಾಮೇಗೌಡ.

ಹೊರ ರಾಜ್ಯಗಳ ವಿದ್ಯುತ್ ಪೂರೈಕೆಯೂ ಸ್ಥಗಿತ

ಹೊರ ರಾಜ್ಯಗಳಿಂದಾಗುತ್ತಿರುವ ವಿದ್ಯುತ್ ಪೂರೈಕೆಯಲ್ಲೂ ವ್ಯತ್ಯಯವಾಗಿದೆ. 2ತಿಂಗಳು ಕೇಂದ್ರ ಹಾಗೂ ಇತರೆ ರಾಜ್ಯಗಳಿಂದ 6 ಸಾವಿರ ಮೆಗಾವಾಟ್ ಖರೀದಿಸಲಾಗಿತ್ತು. ಅಕ್ಟೋಬರ್‌ನಲ್ಲಿ ಕೇಂದ್ರ ಗ್ರಿಡ್ 3 ಸಾವಿರ ಮೆಗಾವಾಟ್ ಪೂರೈಸಿದರೆ, ಇತರೆ ರಾಜ್ಯಗಳಿಂದ ದೊರೆತಿರುವುದು 1 ಸಾವಿರ ಮೆಗಾವಾಟ್ ಮಾತ್ರ. ಹಾಗಾಗಿ, ರಾಜ್ಯದ ವಿದ್ಯುತ್ ಕ್ಷಾಮ ಮತ್ತಷ್ಟು ಹೆಚ್ಚಾಗಿದೆ. ಕೊರತೆ ನೀಗಿಸಲು ಪಂಜಾಬ್, ಉತ್ತರ ಪ್ರದೇಶ ಸರ್ಕಾರಗಳ ಜತೆ ಮಾತುಕತೆ ನಡೆಸುತ್ತಿರುವುದಾಗಿ ಇಂಧನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಕೊರತೆ ನೀಗಿಸಲು ಅಗತ್ಯವಾದ ವಿದ್ಯುತ್ ಖರೀದಿಸಲು ಉತ್ತರದ ರಾಜ್ಯಗಳ ಜತೆ ಮಾತುಕತೆ ನಡೆದಿದೆ. ಶೀಘ್ರ ಬೇಡಿಕೆಗೆ ತಕ್ಕ ವಿದ್ಯುತ್ ಲಭ್ಯವಾಗಲಿದೆ
ಕೆ.ಜೆ.ಜಾರ್ಜ್, ಇಂಧನ ಸಚಿವ

ಬರದಿಂದ ಮುಂಗಾರಿನ ಫಸಲು ನಾಶವಾಗಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ತ್ರಿಫೇಸ್ ನೀಡದೇ ತೋಟಗಾರಿಕೆ ಬೆಳೆಗಳನ್ನೂ ಇಂಧನ ಇಲಾಖೆ ಹಾಳುಮಾಡುತ್ತಿದೆ
ಎಚ್.ಆರ್.ಬಸವರಾಜಪ್ಪ, ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾದ ಕಾರಣ ಸೋಮವಾರ ರಾತ್ರಿ ಕುಣಿಗಲ್ ಪುರಸಭೆಯಲ್ಲಿ ಶಾಸಕ ಡಾ.ರಂಗನಾಥ್ ಅವರು ಮೊಬೈಲ್ ಟಾರ್ಚ್ ಬೆಳಕಿನಲ್ಲಿ ಸಭೆ ನಡೆಸಿದರು

ಶಾಸಕರ ಸಭೆಗೂ ತಟ್ಟಿದ ಲೋಡ್ ಶೆಡ್ಡಿಂಗ್ ಬಿಸಿ!

ಕುಣಿಗಲ್ (ತುಮಕೂರು): ಅಮೃತ ಯೋಜನೆ ಕುರಿತು ಚರ್ಚಿಸಲು ಸೋಮವಾರ ರಾತ್ರಿ ಶಾಸಕ ಡಾ.ರಂಗನಾಥ್ ಕರೆದ ಪೂರ್ವಭಾವಿ ಸಭೆಗೂ ಲೋಡ್ ಶೆಡ್ಡಿಂಗ್ ಬಿಸಿ ತಟ್ಟಿತು.

ಅಧಿಕಾರಿಗಳೊಂದಿಗೆ ಶಾಸಕರು ಸ್ಥಳೀಯ ಪುರಸಭೆಯಲ್ಲಿ ಸಭೆ ನಡೆಸುತ್ತಿರುವಾಗಲೇ ವಿದ್ಯುತ್ ಕೈಕೊಟ್ಟಿತು. ಹಾಗಾಗಿ ಮೊಬೈಲ್ ಟಾರ್ಚ್ ಬೆಳಕಿನಲ್ಲಿಯೇ ಶಾಸಕರು ಸಭೆ ನಡೆಸಿದರು. ಸಭೆ ಮುಗಿಯುವವರೆಗೂ ಅಧಿಕಾರಿಯೊಬ್ಬರು ತಮ್ಮ ಮೊಬೈಲ್‌ನಲ್ಲಿ ಟಾರ್ಚ್ ಹಾಕಿ ಶಾಸಕರ ಪಕ್ಕದಲ್ಲಿ ನಿಂತಿದ್ದರು.

'ರಾಜ್ಯದಲ್ಲಿ ಮಳೆ ಕಡಿಮೆಯಾಗಿದೆ. ನಿರೀಕ್ಷಿತ ಮಟ್ಟದಲ್ಲಿ ವಿದ್ಯುತ್ ಉತ್ಪಾದನೆಯಾಗದ ಕಾರಣ ಸಮಸ್ಯೆ ಉಂಟಾಗುತ್ತಿದೆ. ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಶೀಘ್ರದಲ್ಲಿಯೇ ಸರ್ಕಾರ ಸೂಕ್ತ ವ್ಯವಸ್ಥೆ ಮಾಡಲಿದೆ' ಎಂದು ಶಾಸಕ ಡಾ.ರಂಗನಾಥ್ ಹೇಳಿದರು.

ಸುದ್ದಿ 2 ನಿಮಿಷ

ವಿದ್ಯುತ್ ದುಸ್ಥಿತಿ: ಶ್ವೇತಪತ್ರ ಹೊರಡಿಸಲು ಒತ್ತಾಯ

ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ಕ್ಷಾಮ ತಲೆದೋರಿದ್ದು, ವಿದ್ಯುತ್ ದುಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಸರ್ಕಾರದ ದೂರದೃಷ್ಟಿಯ ಕೊರತೆ, ನಿರ್ವಹಣಾ ವೈಫಲ್ಯದಿಂದ ಡಿಸೆಂಬರ್ ವೇಳೆಗೆ ಕರ್ನಾಟಕ 'ಕತ್ತಲೆ ಭಾಗ್ಯ'ದ ಕೂಪಕ್ಕೆ ಬೀಳುವುದು ಖಚಿತವಾಗಿದೆ. ಜನವರಿ ವೇಳೆಗೆ ಗೃಹಜ್ಯೋತಿ ಕತ್ತಲಲ್ಲಿ ಮರೆಯಾಗಲಿದೆ.

ರಾಜ್ಯದ ವಿದ್ಯುತ್ ಉತ್ಪಾದನೆ ಮೂಲಗಳೇ ಅವನತಿಯತ್ತ ಸಾಗಿವೆ. ಜಲ, ಪವನ, ಸೌರವಿದ್ಯುತ್ ಉತ್ಪಾದನೆ ಕುಸಿತವಾಗಿದೆ. ವಿದ್ಯುತ್‌ಗಾಗಿ ಹೊರರಾಜ್ಯಗಳ ಮುಂದೆ ಕೈಕಟ್ಟಿ ನಿಲ್ಲುವಂತಾಗಿದೆ. ಕೊಳವೆಬಾವಿಗಳಿಂದ ನೀರೆತ್ತಲು ವಿದ್ಯುತ್ ದೊರೆಯದೇ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆ ಎಂದಿದ್ದಾರೆ.

ವಿದ್ಯುತ್ ಖರೀದಿಸಲು ಸರ್ಕಾರದ ಬಳಿ ಹಣವಿಲ್ಲ. ಖಾಸಗಿ ವಿದ್ಯುತ್ ಪೂರೈಕೆದಾರರಿಗೆ ಆರೇಳು ತಿಂಗಳಿನಿಂದ ಬಾಕಿ ಹಣ ನೀಡಿಲ್ಲ. ಕೆಲ ಕಂಪನಿಗಳಿಗೆ 11 ತಿಂಗಳ ಬಾಕಿ ಇದೆ ಎನ್ನಲಾಗುತ್ತಿದೆ ಎಂದ ಅವರು, ತಮಿಳುನಾಡು ವಿಧಾನಸಭೆಯಲ್ಲಿ ರಾಜ್ಯದ ವಿರುದ್ಧ ನಿಲುವಳಿ ಸೂಚನೆ ಅಂಗೀಕಾರವಾಗಿದೆ. ಎಮ್ಮೆ ಚರ್ಮದ ಸರ್ಕಾರ ಕಾವೇರಿ ಒಡಲಾಳದ ಬೇಗುದಿ ಬಗ್ಗೆ ಜಾಣ ಕುರುಡು ಪ್ರದರ್ಶಿಸುತ್ತಿದೆ. ಕಳ್ಳಬೆಕ್ಕಿನಂತೆ ಕಣ್ಣಾಮುಚ್ಚಾಲೆ ಆಡುತ್ತಿದೆ ಎಂದು ಟೀಕಿಸಿದ್ದಾರೆ.

ಮಹಿಷ ದಸರಾ, ಚಲೋ ಚಾಮುಂಡಿ ಬೆಟ್ಟ: ಅನುಮತಿ ನಿರಾಕರಣೆ

ಮೈಸೂರು: ಮಹಿಷ ದಸರಾ ಆಚರಣೆ ಸಮಿತಿಯು ಅ.13ರಂದು ಹಮ್ಮಿಕೊಂಡಿರುವ 'ಮಹಿಷ ದಸರಾ' ಮತ್ತು ಅದನ್ನು ವಿರೋಧಿಸಿ ಅಂದೇ ಬಿಜೆಪಿಯು ಹಮ್ಮಿಕೊಂಡಿರುವ 'ಚಾಮುಂಡಿಬೆಟ್ಟ ಚಲೋ'– ಎರಡೂ ಕಾರ್ಯಕ್ರಮಕ್ಕೂ ಅನುಮತಿ ನಿರಾಕರಿಸಿ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಆದೇಶ ಹೊರಡಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ 9.30ಕ್ಕೆ ಚಾಮುಂಡಿ ಬೆಟ್ಟದಲ್ಲಿರುವ ಮಹಿಷ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಬಳಿಕ ಚಾಮುಂಡಿ ಬೆಟ್ಟದ ತಪ್ಪಲಿನ ಮುಖ್ಯದ್ವಾರ ತಾವರೆಕಟ್ಟೆಯಿಂದ ಮೃಗಾಲಯ ರಸ್ತೆ ಮೂಲಕ ಮೆರವಣಿಗೆಯಲ್ಲಿ ಸಾಗಿ, ಪುರಭವನದ ಮುಂಭಾಗವಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲು ಮಹಿಷ ದಸರಾ ಸಮಿತಿ ಅಧ್ಯಕ್ಷ ಪುರುಷೋತ್ತಮ ಮನವಿ ಮಾಡಿದ್ದರು. 'ಚಾಮುಂಡಿ ಬೆಟ್ಟ ಚಲೋ' ಅಂಗವಾಗಿ ಬೆಳಿಗ್ಗೆ 8ಕ್ಕೆ ತಾವರೆಕಟ್ಟೆಯಲ್ಲಿ ಸೇರಿ ಅಲ್ಲಿಂದ ಬೆಟ್ಟಕ್ಕೆ ತೆರಳಿ ಕಾರ್ಯಕ್ರಮ ಹಮ್ಮಿಕೊಳ್ಳಲು ಅನುಮತಿ ನೀಡಬೇಕೆಂದು ಶಾಸಕ ಟಿ.ಎಸ್. ಶ್ರೀವತ್ಸ ಮನವಿ ಸಲ್ಲಿಸಿದ್ದರು.

'ಈ ಕಾರ್ಯಕ್ರಮಗಳಿಗೆ ಅನುಮತಿ ನೀಡಿದರೆ ನಗರದ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಗೆ ತೊಂದರೆ ಉಂಟಾಗುವ ಹಿನ್ನೆಲೆಯಲ್ಲಿ ಅನುಮತಿ ನಿರಾಕರಿಸಲಾಗಿದೆ' ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದ್ದಾರೆ.

ಮುಂದಿನ ವಾರ ಮತ್ತೆ ಚರ್ಚೆ

ಮೈತ್ರಿ

ಬೆಂಗಳೂರು: ಜೆಡಿಎಸ್-ಬಿಜೆಪಿ ಮೈತ್ರಿ ಇನ್ನಷ್ಟು ಗಟ್ಟಿಗೊಳಿಸಲು ನಿರ್ಧರಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ, ಮುಂದಿನ ವಾರ ದೆಹಲಿಗೆ ತೆರಳಿ ಮತ್ತೊಂದು ಸುತ್ತಿನ ಮಾತುಕತೆ ನಡೆಸಲಿದ್ದಾರೆ.

ಅ.14ರಂದು ಅಮಾವಾಸ್ಯೆ ಕಳೆದ ನಂತರ ಬಿಜೆಪಿ ವರಿಷ್ಠರ ಜತೆ ಮುಂದಿನ ಯೋಜನೆಗಳ ಕುರಿತು ಚರ್ಚೆ ನಡೆಸುವರು. ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಭೇಟಿ ಮಾಡುವರು. ಮುಂದಿನ ಲೋಕಸಭಾ ಚುನಾವಣೆಗೆ ಕ್ಷೇತ್ರಗಳನ್ನು ಅಂತಿಮಗೊಳಿಸುವ ಕುರಿತು ಚರ್ಚೆ ನಡೆಸಲು ಈ ಭೇಟಿ ಪೂರ್ವಭಾವಿ ವೇದಿಕೆಯಾಗಲಿದೆ. ಆದರೆ, ಯಾವ, ಯಾವ ನಾಯಕರನ್ನು ಭೇಟಿ ಮಾಡುತ್ತಾರೆ ಎನ್ನುವುದು ಖಚಿತವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಇಸ್ರೇಲ್‌ನಲ್ಲಿ ಸಿಲುಕಿದ ಕೃಷಿ ವಿವಿ ಪ್ರಾಧ್ಯಾಪಕ

ಪ್ರಜಾವಾಣಿ ವಾರ್ತೆ

ಧಾರವಾಡ: ಕೃಷಿ ವಿಶ್ವವಿದ್ಯಾಲಯದ ವಿಜಯಪುರದ ಸಂಶೋಧನಾ ಕೇಂದ್ರದ ಹವಾಮಾನ ವಿಭಾಗದ ಪ್ರಾಧ್ಯಾಪಕ ಸುಮೇಶ್ ಅವರು ಯುದ್ಧಪೀಡಿತ ಇಸ್ರೇಲ್‌ನಲ್ಲಿ ಸಿಲುಕಿದ್ದಾರೆ. ವಿಶ್ವ ಬ್ಯಾಂಕ್ ನೆರವಿನ ಯೋಜನೆಯಡಿ ಅಲ್ಲಿ ತರಬೇತಿ ಶಿಬಿರಕ್ಕೆ ತೆರಳಿರುವ ಅವರು ಸದ್ಯ ಸುರಕ್ಷಿತವಾಗಿದ್ದಾರೆ.

'ಸುಮೇಶ್ ಅವರೊಂದಿಗೆ ವ್ಯಾಟ್ಸ್ ಅಪ್ ಮೂಲಕ ಸತತ ಸಂಪರ್ಕದಲ್ಲಿ ಇದ್ದೇವೆ. ಅವರು ಸುರಕ್ಷಿತವಾಗಿದ್ದಾರೆ. ವಾರಕ್ಕೆ ಆಗುವಷ್ಟು ಆಹಾರ, ನೀರು ಸಂಗ್ರಹ ಅವರ ಬಳಿಯಿದೆ ತಿಳಿಸಿದ್ದಾರೆ. ತಕ್ಷಣವೇ ದೇಶಕ್ಕೆ ವಾಪಸಾಗಲು ಅವರಿಗೆ ಹೇಳಿದ್ದೇವೆ' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪಿ.ಎಲ್.ಪಾಟೀಲ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಎಚ್‌ಡಿಕೆ ಮಾತಿಗೆ ಬೆಲೆ ಇದೆಯಾ?'

ಕುಮಾರಸ್ವಾಮಿ ಅವರದ್ದು ಹಗಲುಗನಸು: ಸಚಿವ ಜಮೀರ್ ಅಹ್ಮದ್ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಕುಮಾರಸ್ವಾಮಿ ಮಾತಿಗೆ ಮೂರು ಕಾಸಿನ ಬೆಲೆ ಇದೆಯಾ? ಅವರ ಮಾತಿನಲ್ಲಿ ಸತ್ಯ ಇದೆಯಾ? ಅವರ ಹೇಳಿಕೆಗಳಿಗೆಲ್ಲ ನಾನು ಉತ್ತರ ಕೊಡುವುದಿಲ್ಲ. ಅವರ ಬಗ್ಗೆ ನನ್ನನ್ನು ಕೇಳಬೇಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಜಾತಿಗಣತಿ ವರದಿ ವಿಚಾರದಲ್ಲಿ ಸಿದ್ದರಾಮಯ್ಯ ತುಟಿ ಬಿಚ್ಚಿರಲಿಲ್ಲ' ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಪುಟ್ಟರಂಗಶೆಟ್ಟಿಯನ್ನು (ಸಮ್ಮಿಶ್ರ ಸರ್ಕಾರದಲ್ಲಿ ಹಿಂದುಳಿದ ವರ್ಗಗಳ ಸಚಿವರಾಗಿದ್ದರು) ಕೇಳಿ ನೋಡಿ. ಕುಮಾರಸ್ವಾಮಿ ಏನು ಮಾಡಿದ್ದರೆಂದು ಅವರೇ ಹೇಳುತ್ತಾರೆ. ಪುಟ್ಟರಂಗಶೆಟ್ಟಿಯನ್ನು ಹೆದರಿಸಿ, ಬೈಯ್ದು ಕಳುಹಿಸಿದ್ದರು. ಈಗ ಸುಮ್ಮನೆ ಆರೋಪ ಮಾಡುತ್ತಾರೆ' ಎಂದರು. 'ಕಾಂಗ್ರೆಸ್ ಸರ್ಕಾರ ಪತನವಾಗಲಿದೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ, 'ಪಾಪ... ಕುಮಾರಸ್ವಾಮಿ ಭ್ರಮೆಯಲ್ಲಿದ್ದಾರೆ. ಸಮ್ಮಿಶ್ರ ಸರ್ಕಾರ ಬರುತ್ತದೆ, ಮುಖ್ಯಮಂತ್ರಿ ಆಗುತ್ತೇನೆ ಅಂದುಕೊಂಡಿದ್ದರು. ಅದು ಆಗಲಿಲ್ಲ. ಅದಕ್ಕೆ ಏನೇನೋ ಮಾತನಾಡುತ್ತಾರೆ' ಎಂದರು.



ಜಮೀರ್ ಅಹ್ಮದ್ ಖಾನ್

ಕುಮಾರಸ್ವಾಮಿ ಹಗಲುಗನಸು: ಸಚಿವ ಜಮೀರ್ ಅಹ್ಮದ್ ಖಾನ್, 'ನಾನು ಕುಮಾರಸ್ವಾಮಿ ಜೊತೆಗೆ ಇದ್ದವನು. ಯಾವುದಾದರೂ ಸರ್ಕಾರ ಐದು ವರ್ಷ ಇರಲಿದೆಯೆಂದು ಎಂದಾದರು ಹೇಳಿದ್ದಾರಾ? ಅವರದ್ದೇ ಸರ್ಕಾರ ಉಳಿಸಿಕೊಳ್ಳಲು ಅವರಿಗೆ ಆಗಲಿಲ್ಲ' ಎಂದು ವ್ಯಂಗ್ಯವಾಡಿದರು.

'ನಮ್ಮ ಸರ್ಕಾರ ಬೀಳಲು ಹೇಗೆ ಸಾಧ್ಯ? ಬಿಜೆಪಿಯವರು 104 ಶಾಸಕರು ಇದ್ದುಕೊಂಡು, ಆಪರೇಷನ್ ಕಮಲ ಮಾಡಿ ನಾಲ್ಕು ವರ್ಷ ಅಧಿಕಾರ ನಡೆಸಿದರು. ನಾವು ಕಡಿಮೆಯಲ್ಲ, 136 ಇದ್ದೇವೆ. ಸರ್ಕಾರ ಹೇಗೆ ಬೀಳುತ್ತೆ. ಕುಮಾರಸ್ವಾಮಿ ಹಗಲುಗನಸು ಕಾಣುತ್ತಿದ್ದಾರೆ' ಎಂದರು.

'ಡಿ.ಕೆ. ಶಿವಕುಮಾರ್ ಮತ್ತೆ ತಿಹಾರ್ ಜೈಲಿಗೆ ಹೋಗಲಿದ್ದಾರೆ' ಎಂಬ ಹೇಳಿಕೆಗೆ 'ಶಿವಕುಮಾರ್ ಅವರನ್ನು ಜೈಲಿಗೆ ಕಳುಹಿಸುವ ವಿಚಾರದಲ್ಲಿ ಶಾ ಮತ್ತು ಕುಮಾರಸ್ವಾಮಿ ನಡುವೆ ಬಹುಶಃ ಒಪ್ಪಂದ ಆಗಿರಬೇಕು. ಅದಕ್ಕೆ ಈ ರೀತಿ ಹೇಳುತ್ತಿದ್ದಾರೆ' ಎಂದರು.

'ಡಿಕೆಶಿ ಜೈಲಿಗೆ ಕಳುಹಿಸುವ ಹುನ್ನಾರ'



ಕೃಷ್ಣ ಬೈರೇಗೌಡ

ಚಿತ್ರದುರ್ಗ: 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಜೈಲಿಗೆ ಕಳುಹಿಸುವ ಒಳಸಂಚಿನ ಭಾಗವಾಗಿ ಜೆಡಿಎಸ್ ನಾಯಕರು ಬಿಜೆಪಿ ಜೊತೆ ಕೈಜೋಡಿಸಿದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಮಾತಿನಲ್ಲಿಯೇ ಇದು ವ್ಯಕ್ತವಾಗಿದೆ. ಸೇಡಿನ ರಾಜಕಾರಣಕ್ಕೆ ಜನರು ಚುನಾವಣೆ ವೇಳೆ ತಕ್ಕ ಪಾಠ ಕಲಿಸಲಿದ್ದಾರೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ಕಾಂಗ್ರೆಸ್ ನೇತೃತ್ವದ ಸರ್ಕಾರ ಬಡವರ ಪರ ಆರಂಭಿಸಿರುವ ಯೋಜನೆಗಳು ಬಿಜೆಪಿ ಮತ್ತು ಜೆಡಿಎಸ್ ಕಣ್ಣು ಕುಕ್ಕುತ್ತಿವೆ. ಭ್ರಷ್ಟಾಚಾರ ಮಾಡಿಕೊಂಡು ಕಾಲ ಕಳೆದಿರುವ ಬಿಜೆಪಿಗೆ ರಾಜ್ಯ ಸರ್ಕಾರದ ಕಾರ್ಯ ವೈಖರಿಯನ್ನು ಸಹಿಸಲು ಆಗುತ್ತಿಲ್ಲ. ಕಾಂಗ್ರೆಸ್ ನಾಯಕರನ್ನು ಜೈಲಿಗೆ ಕಳುಹಿಸಿ ಸೇಡಿನ ರಾಜಕಾರಣ ಮಾಡಲು ಮುಂದಾಗಿದೆ. ಇದನ್ನು ಎದುರಿಸಲು ಕಾಂಗ್ರೆಸ್ ಸಜ್ಜಾಗಿದೆ' ಎಂದು ಹೇಳಿದರು.

ಸಾವಿರ ವಿದ್ಯಾರ್ಥಿನಿಯರಿಗೆ ಇರುವುದೊಂದೇ ಶೌಚಾಲಯ

ಒಂದನೇ ಪುಟದಿಂದ...

ಕಾಲೇಜಿನಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮೂರೂ ವಿಭಾಗಗಳಲ್ಲಿ ಒಟ್ಟು 1,044 ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ. ಸದ್ಯ ಏಳು ಕೊಠಡಿಗಳು ಮಾತ್ರ ಇವೆ. ಇನ್ನೂ ಆರು ಕೊಠಡಿಗಳು ನಿರ್ಮಾಣಗೊಳ್ಳಬೇಕಿದೆ. ಒಂದು ಡೆಸ್ಕ್‌ನಲ್ಲಿ ನಾಲ್ಕೈದು ವಿದ್ಯಾರ್ಥಿನಿಯರು ಕುಳಿತುಕೊಳ್ಳುತ್ತಿದ್ದಾರೆ. ಡೆಸ್ಕ್ ಇಲ್ಲದ ಕಡೆ ನೆಲವೇ ಗತಿ. ಒಂದೇ ಪ್ರಯೋಗಾಲಯವಿದೆ. ವಿಜ್ಞಾನ ವಿಭಾಗದ ತರಗತಿಗಳ ಪ್ರಯೋಗಾಲಯಕ್ಕೆ ಪ್ರತ್ಯೇಕ ಜಾಗವಿಲ್ಲದ ಕಾರಣ ಸರದಿ ಪ್ರಕಾರ ಪ್ರಯೋಗ ನಡೆಸಬೇಕಾಗಿದೆ. ಹೀಗಾಗಿ ಈ ವಿಭಾಗದ ವಿದ್ಯಾರ್ಥಿನಿಯರು ಬೆಳಿಗ್ಗೆ 8ರಿಂದ ಸಂಜೆ 4ರವರೆಗೂ ಕಾಲೇಜಿನಲ್ಲೇ ಇರಬೇಕಾಗುತ್ತದೆ.

2021–22ರಲ್ಲಿ ಕೆಕೆಆರ್‌ಡಿಬಿಯ ಮೈಕ್ರೊ ಯೋಜನೆಯಲ್ಲಿ ಈ ಕಾಲೇಜಿನಲ್ಲಿ ಮೂರು ಪ್ರಯೋಗಾಲಯಗಳ ನಿರ್ಮಾಣಕ್ಕೆ ₹1 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು. ನೆಲಮಟ್ಟದ ಒಂದು ಮತ್ತು ಎರಡು ಅಂತಸ್ತಿನ ಕಟ್ಟಡದ ಕೆಲಸ ಅರೆಬರೆ ನಡೆದಿದ್ದು, ನಾಲ್ಕು ತಿಂಗಳಿನಿಂದ ಕಾಮಗಾರಿ ಸ್ಥಗಿತಗೊಂಡಿದೆ. ಕಾಮಗಾರಿಯ ಹೊಣೆ ಹೊತ್ತಿರುವ ನಿರ್ಮಿತಿ ಕೇಂದ್ರದ ಎಂಜಿನಿಯರ್‌ಗಳು ಇತ್ತ ಕಣ್ಣು ಹಾಯಿಸಿಲ್ಲ ಎಂದು ಊರಿನ ಜನರು ಆರೋಪಿಸಿದ್ದಾರೆ.

ಇಲ್ಲಿನ ವಸತಿ ನಿಲಯದ ಹಳೆ ಕಟ್ಟಡ ತೆರವುಗೊಳಿಸಿದ ಜಾಗದಲ್ಲಿ ಮೂತ್ರಾಲಯ, ಶೌಚಾಲಯ ನಿರ್ಮಾಣಕ್ಕೆ ಮುಂದಾಗಿದ್ದು, ₹21 ಲಕ್ಷ ಅನುದಾನ ಕೆಕೆಆರ್‌ಡಿಬಿಯಿಂದ ಬಿಡುಗಡೆಯಾಗಿದೆ. ಆದರೆ, ನಿರ್ಮಾಣ ಏಜೆನ್ಸಿಯಾಗಿರುವ ಪಂಚಾಯಿತಿ ರಾಜ್ ಎಂಜಿನಿಯರಿಂಗ್ ಉಪವಿಭಾಗದವರು ಕೆಲಸ ಆರಂಭಿಸಿಲ್ಲ. ಬಡವರ ಮಕ್ಕಳೇ ಹೆಚ್ಚಿರುವ ಕಾಲೇಜಿನ ಸಮಸ್ಯೆ ಬಗೆಹರಿಸುವ ದಿಸೆಯಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಪಾಲಕರೊಬ್ಬರು ಹೇಳಿದ್ದಾರೆ.

'ಹಣ ಖರ್ಚಿಗೆ ಸರ್ಕಾರದಿಂದ ಕೊಕ್ಕೆ'

'ಕಾಲೇಜಿನ ಸಮಸ್ಯೆ ಗಮನಕ್ಕಿದೆ. ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಹಣ ಖರ್ಚು ಮಾಡುವುದಕ್ಕೆ ಕೊಕ್ಕೆ ಹಾಕಿದ್ದರಿಂದ ಎಲ್ಲ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿವೆ. ಶೀಘ್ರದಲ್ಲೇ ಕೆಲಸ ಆರಂಭಿಸುವಂತೆ ನಿರ್ಮಿತಿ ಕೇಂದ್ರಕ್ಕೆ ಸೂಚಿಸಿದ್ದೇನೆ. ತ್ವರಿತಗತಿಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಅಧಿಕಾರಿಗಳಿಗೆ ಹೇಳುತ್ತೇನೆ' ಎಂದು ಕುಷ್ಟಗಿ ಶಾಸಕ ದೊಡ್ಡನಗೌಡ ಪಾಟೀಲ ಪ್ರತಿಕ್ರಿಯಿಸಿದರು.

ಕಾಂತಾವರ ದತ್ತಿ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ



ವೈ.ವಿ. ಗುಂಡೂರಾವ್

ಶ್ರೀಕೃಷ್ಣ ಭಟ್ ಅರ್ತಿಕಜೆ

ಎಸ್‌.ಡಿ. ಶೆಟ್ಟಿ

ಮಂಗಳೂರು: ಕಾಂತಾವರ ಕನ್ನಡ ಸಂಘದ 2023ನೇ ಸಾಲಿನ ದತ್ತಿನಿಧಿ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

'ಶ್ರೀಮತಿ ಸರಸ್ವತಿ ಬಲ್ಲಾಳ್ ಮತ್ತು ಡಾ.ಸಿ.ಕೆ.ಬಲ್ಲಾಳ್ ದಂಪತಿ ಪ್ರತಿಷ್ಠಾನ' ದಿಂದ ನೀಡುವ 'ಕರ್ನಾಟಕ ಏಕೀಕರಣದ ನೇತಾರ ಕೆ.ಬಿ. ಜಿನರಾಜ ಹೆಗ್ಡೆ ಸ್ಮಾರಕ ಸಾಂಸ್ಕೃತಿಕ ಪ್ರಶಸ್ತಿ'ಗೆ ಬಂಟ್ವಾಳ ತಾಲ್ಲೂಕಿನ ವಿಟ್ಲ ಸಮೀಪದ ಮೂರ್ಕಜೆಯಲ್ಲಿರುವ ಮೈತ್ರೇಯಿ ಗುರುಕುಲವನ್ನು ಆಯ್ಕೆ ಮಾಡಲಾಗಿದೆ.

ಭಾಷಾತಜ್ಞ ಯು.ಪಿ.ಉಪಾಧ್ಯಾಯ ಅವರ ಹೆಸರಿನ 'ಮಹೋಪಾಧ್ಯಾಯ ಪ್ರಶಸ್ತಿ'ಯನ್ನು ಉಜಿರೆಯ ಎಸ್‌.ಡಿ. ಶೆಟ್ಟಿ ಅವರಿಗೆ, ಧಾರವಾಡದ ಸಾಹಿತಿ ಜಿ.ಎಂ. ಹೆಗಡೆ ಅವರ ದತ್ತಿನಿಧಿಯ 'ಪ್ರಾಧ್ಯಾಪಕ ಸಂಶೋಧಕ ಪ್ರಶಸ್ತಿ'ಯನ್ನು ಚೆನ್ನೈಯ ಶ್ರೀಕೃಷ್ಣ ಭಟ್ ಅರ್ತಿಕಜೆ ಅವರಿಗೆ ಮತ್ತು ರಂಗಕರ್ಮಿ ಶ್ರೀಪತಿ ಮಂಜನಬೈಲ್ ಅವರು ಸ್ಥಾಪಿಸಿದ ದತ್ತಿನಿಧಿಯಿಂದ ಕೊಡಲಾಗುವ 'ಮಂಜನಬೈಲ್ ರಂಗಸನ್ಮಾನ್' ಪ್ರಶಸ್ತಿಯನ್ನು ಬೆಂಗಳೂರಿನ ವೈ.ವಿ. ಗುಂಡೂರಾವ್ ಅವರಿಗೆ ನೀಡಲಾಗುವುದು.

ಪ್ರಶಸ್ತಿಯು ತಲಾ ₹10 ಸಾವಿರ ಗೌರವ ಸಂಭಾವನೆ, ತಾಮ್ರ ಪತ್ರ ಮತ್ತು ಸನ್ಮಾನ ಒಳಗೊಂಡಿದೆ. ಕಾಂತಾವರ ಕನ್ನಡ ಸಂಘದ ಅಧ್ಯಕ್ಷ ನಾ.ಮೊಗಸಾಲೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ನವೆಂಬರ್ 1ರಂದು ನಡೆಯುವ 'ಕಾಂತಾವರ ಉತ್ಸವ'ದಲ್ಲಿ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಅಧ್ಯಕ್ಷತೆಯಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ತಿಳಿಸಿದ್ದಾರೆ.

ಬಿಜೆಪಿ ಆಡಳಿತದಲ್ಲೂ 'ಉರ್ದು ಕವಿಗೋಷ್ಠಿ'

ಒಂದನೇ ಪುಟದಿಂದ...

ದೇಶದ ವಿವಿಧೆಡೆಯ 22 ಉರ್ದು ಲೇಖಕರು ಪಾಲ್ಗೊಂಡಿದ್ದರು. 2019ರಲ್ಲಿ ಜಗನ್ಮೋಹನ ಅರಮನೆಯಲ್ಲಿ 'ವಿಖ್ಯಾತ' ಗೋಷ್ಠಿ ನಡೆದಿತ್ತು. ಉರ್ದು, ತುಳು, ಕೊಂಕಣಿ, ಕೊಡವ ಭಾಷೆಯಲ್ಲೂ ಕವಿಗೋಷ್ಠಿ ನಡೆದಿತ್ತು.

ಬಿಜೆಪಿ ಮುಖಂಡರ ವಿರೋಧ: ಉರ್ದು ಕವಿಗೋಷ್ಠಿ ಆಯೋಜಿಸಿದ್ದಕ್ಕೆ ಸರ್ಕಾರದ ಮೇಲೆ ಬಿಜೆಪಿ ಶಾಸಕರಾದ ವಿ.ಸುನಿಲ್ ಕುಮಾರ್, ಬಸನಗೌಡ ಪಾಟೀಲ ಯತ್ನಾಳ ಅವರು 'ಎಕ್ಸ್' (ಟ್ವೀಟ್) ಮೂಲಕ ಹರಿಹಾಯ್ದಿದ್ದಾರೆ.

'ರಾಜ್ಯ ಸರ್ಕಾರ ನಾಡಹಬ್ಬ ದಸರಾದಲ್ಲಿ ಉರ್ದು ಕವಿಗೋಷ್ಠಿಯನ್ನು ಆಯೋಜಿಸಿದೆ. ಕನ್ನಡದ ಶ್ರೀಮಂತ ಸಂಸ್ಕೃತಿಯ ಪ್ರದರ್ಶನಕ್ಕೆ ವೇದಿಕೆಯಾಗಬೇಕಿದ್ದ ದಸರಾದಲ್ಲಿ ಉರ್ದು ಹೇರಿಕೆ ಏಕೆ? ತನ್ನ ಮತಬ್ಯಾಂಕ್ ಓಲೈಕೆಗಾಗಿ ಕಾಂಗ್ರೆಸ್ ಪಕ್ಷ ಕನ್ನಡದ ಮೇಲೆ ಉರ್ದುವನ್ನು ಹೇರುತ್ತಿದೆ. ದಸರಾದಲ್ಲಿ ನಾಡದೇವಿ ಚಾಮುಂಡಿ ಹಾಗೂ ಮೈಸೂರು ಒಡೆಯರ್ ಅವರ ವೈಭವವಾಗಬೇಕೇ ವಿನಾ ಟಿಪ್ಪು ಸಂಸ್ಕೃತಿಯಲ್ಲ' ಎಂದು ಸುನಿಲ್ ಕುಮಾರ್ 'ಎಕ್ಸ್'ನಲ್ಲಿ ಟೀಕಿಸಿದ್ದರೆ, ಬಸನಗೌಡ ಪಾಟೀಲ ಯತ್ನಾಳ, 'ಮೈಸೂರು ದಸರಾ ಆಚರಣೆಯಲ್ಲಿ ಉರ್ದು ಕವಿಗೋಷ್ಠಿ?' ಎಂದು ಪೋಸ್ಟ್ ಹಾಕಿದ್ದಾರೆ.

'ನಾಡಹಬ್ಬ ಎಂದರೆ ಎಲ್ಲರದ್ದು'

'ನಾಡಹಬ್ಬ ನಿರ್ದಿಷ್ಟ ಸಮುದಾಯಕ್ಕೆ ಸೀಮಿತವಲ್ಲ. ಯಾವುದೇ ಸಮುದಾಯವನ್ನು ಹೊರಗಿಟ್ಟು ಮಾಡುವುದು ನಾಡಹಬ್ಬ ಹೇಗಾಗುತ್ತದೆ? ಸಮಾಜಗಳನ್ನು ವಿಮುಖಗೊಳಿಸುವ ಕೆಲಸ ಯಾರೂ ಮಾಡಬಾರದು. ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ಅವರು ತಾರತಮ್ಯ ಮಾಡಿರಲಿಲ್ಲ' ಎಂದು ಚಿಂತಕ ಪ್ರೊ.ಮುಜಾಫರ್ ಅಸ್ಸಾದಿ ತಿಳಿಸಿದರು.

'ಕನ್ನಡ ಪದಕೋಶದಲ್ಲಿ ಸಾವಿರಾರು ಉರ್ದು ಪದಗಳಿವೆ. ಕಂದಾಯ ಇಲಾಖೆಯಲ್ಲಿ ಬಳಸುವ ಪಹಣಿ, ಪಟ್ಟ, ಜೋಡಿ, ಅಮಲ್ದಾರ್, ತಹಶೀಲ್ದಾರ್ ಸೇರಿದಂತೆ ಎಲ್ಲ ಪದಗಳೂ ಉರ್ದು. ದಸರಾ ಆಚರಣೆಯಲ್ಲೂ ನೂರಾರು ಉರ್ದು ಪದಗಳಿವೆ' ಎಂದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಬಿಸಿಯೂಟ ತಯಾರಕರ ಅನಿರ್ದಿಷ್ಟಾವಧಿ ಧರಣಿ

₹6 ಸಾವಿರ ವೇತನ ನೀಡುವಂತೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಯೂಟ ತಯಾರಕರಿಗೆ ಮಾಸಿಕ ₹6 ಸಾವಿರ ವೇತನ ನೀಡುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ಫೆಡರೇಷನ್ ರಾಜ್ಯ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಕಾರ್ಯಕರ್ತರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

'ರಾಜ್ಯ ಸರ್ಕಾರ ಬಿಸಿಯೂಟ ಯೋಜನೆಯನ್ನು ಖಾಸಗೀಕರಣಗೊಳಿಸುವ ಹುನ್ನಾರ ಮಾಡುತ್ತಿದೆ. 2022ರ ಡಿಸೆಂಬರ್ 8ರಂದು ಯೋಜನೆಯ ಆಯುಕ್ತರು ಶಾಲೆಯ ಮುಖ್ಯೋಪಾಧ್ಯಾಯ ಮತ್ತು ಎಸ್‌ಡಿಎಂಸಿ ಅಧ್ಯಕ್ಷರ ಹೆಸರಿನಲ್ಲಿ ಜಂಟಿ ಖಾತೆ ತೆರೆಯುವಂತೆ ಆದೇಶಿಸಿದ್ದರು. ಕೂಡಲೇ ಆ ಆದೇಶವನ್ನು ಹಿಂಪಡೆದು ಮುಖ್ಯೋಪಾಧ್ಯಾಯ ಮತ್ತು ಮುಖ್ಯ ಅಡುಗೆಯವರ ಜಂಟಿ ಬ್ಯಾಂಕ್ ಖಾತೆ ಯನ್ನು ಮುಂದುವರಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿಯಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ಸದಸ್ಯರು

'ಬಿಸಿಯೂಟ ತಯಾರಕರನ್ನು ಮಾರ್ಚ್ 31ಕ್ಕೆ ಬಿಡುಗಡೆಗೊಳಿಸಿ ಜೂನ್ 1ಕ್ಕೆ ಪುನಃ ನೇಮಕಾತಿ ಮಾಡಿಕೊಳ್ಳುವ ಆದೇಶವನ್ನು ಹಿಂಪಡೆಯಬೇಕು. ಜತೆಗೆ ಸೇವಾ ಭದ್ರತೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಕೊಪ್ಪಳ ಜಿಲ್ಲೆಯ ಬೋಚನಹಳ್ಳಿಯ ದೇವಮ್ಮ, ಹಾವೇರಿ ಜಿಲ್ಲೆಯ ಕಾಡಶೆಟ್ಟಿಹಳ್ಳಿಯ ನಿರ್ಮಲಾ ದೊಡ್ಡಮನಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಅನ್ನಪೂರ್ಣಮ್ಮ ಹಳ್ಯಾಳ ಅವರು ಶಾಲೆಯಲ್ಲಿ ಅಡುಗೆ ತಯಾರಿಸುವ ವೇಳೆ ಅವಘಡ ಸಂಭವಿಸಿ ಮೃತಪಟ್ಟಿದ್ದಾರೆ. ರಾಜ್ಯ ಸರ್ಕಾರ ಅವರ ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ ಹಾಗೂ ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'20 ವರ್ಷ ಕಾರ್ಯನಿರ್ವಹಿಸಿ ನಿವೃತ್ತಿಯಾದ ಮತ್ತು ಮಕ್ಕಳ ಸಂಖ್ಯೆ ಕಡಿಮೆ ಇದೆ ಎಂದು ಹೇಳಿ ಕೆಲಸದಿಂದ ತೆಗೆದು ಹಾಕಿದ ಬಿಸಿಯೂಟ ತಯಾರಕರಿಗೆ ₹2.50 ಲಕ್ಷ ಇಡಿಗಂಟು ನೀಡಬೇಕು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಿಸಿಯೂಟ ತಯಾರಕರಿಗೆ ಹೆಚ್ಚುವರಿಯಾಗಿ ₹1 ಸಾವಿರ ನೀಡುವಂತೆ ಬಜೆಟ್‌ನಲ್ಲಿ ಘೋಷಿಸಿದ್ದರು. ಅದನ್ನು ಜೂನ್ ತಿಂಗಳಿಂದ ಅನ್ವಯವಾಗುವಂತೆ ಜಾರಿಗೊಳಿಸಬೇಕು. ಅಡುಗೆ ಸಿಬ್ಬಂದಿಗೆ ವರ್ಷಕ್ಕೆ ಎರಡು ಬಾರಿ ಸಮವಸ್ತ್ರ, ಎಪ್ರಾನ್, ಟೋಪಿ ಮತ್ತು ಕೈಗವಸುಗಳನ್ನು ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಪ್ರಕರಣ ದಾಖಲು • ತಲೆ ಮರೆಸಿಕೊಂಡ ಆರೋಪಿ

ನೀರು ತುಂಬಲು ಹೋದ ಪರಿಶಿಷ್ಟ ಬಾಲಕಿಯನ್ನು ನಿಂದಿಸಿದ ಪೂಜಾರಿ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಚನ್ನಮಾನಹಳ್ಳಿಯಲ್ಲಿ ಸೋಮವಾರ ದೇವಸ್ಥಾನದ ನಲ್ಲಿಯಲ್ಲಿ ನೀರು ಹಿಡಿಯಲು ಹೋದ ಪರಿಶಿಷ್ಟ ಜಾತಿಗೆ ಸೇರಿದ 13 ವರ್ಷದ ಬಾಲಕಿಯನ್ನು ದೇವಸ್ಥಾನದ ಪೂಜಾರಿ ಹಾಗೂ ಆತನ ಸಹೋದರಿ ಜಾತಿ ಹೆಸರಲ್ಲಿ ನಿಂದಿಸಿದ್ದಾರೆ.

ಇದನ್ನು ಪ್ರಶ್ನಿಸಿದ ಬಾಲಕಿಯ ಚಿಕ್ಕಪ್ಪ ಹಾಗೂ ಸ್ನೇಹಿತನ ಮೇಲೆ ಹಲ್ಲೆ ನಡೆದಿದೆ. ಈ ಕುರಿತು ಎಸ್‌ಸಿ ಮತ್ತು ಎಸ್‌ಟಿ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಐಜೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಸಮೀಪದ ಮಾರಮ್ಮ ದೇವಸ್ಥಾನದ ಆವರಣದಲ್ಲಿರುವ ನಲ್ಲಿಯಲ್ಲಿ ನೀರು ತುಂಬಲು ಬಾಲಕಿ ಬಿಂದಿಗೆಯೊಂದಿಗೆ ತೆರಳಿದ್ದಳು. ಇದನ್ನು ಗಮನಿಸಿದ ದೇವಸ್ಥಾನದ ಪೂಜಾರಿ ಕುಮಾರ್ ಮತ್ತು ಆತನ ಸಹೋದರಿ ಯಶೋಧಾ, 'ದೇವಸ್ಥಾನ ಮೈಲಿಗೆ ಮಾಡುತ್ತೀರಿ' ಎಂದು ನಿಂದಿಸಿದರು ಎಂದು ಬಾಲಕಿ ಮನೆಯಲ್ಲಿ ತಿಳಿಸಿದ್ದಾಳೆ.

ಈ ಬಗ್ಗೆ ವಿಚಾರಿಸಲು ಸ್ನೇಹಿತ ಸಿ.ಬಿ. ಜಯಕುಮಾರ್ ಎಂಬುವರ ಜೊತೆ ಬಾಲಕಿಯ ಚಿಕ್ಕಪ್ಪ ಪ್ರಸನ್ನಕುಮಾರ್ ದೇವಸ್ಥಾನಕ್ಕೆ ಹೋದಾಗ ಗಲಾಟೆಯಾಗಿದೆ.

'ಕುಮಾರ್ ಮತ್ತು ಯಶೋಧಾ ತಮ್ಮ ಕೆನ್ನೆಗೆ ಹೊಡೆದು, ಕಲ್ಲಿನಿಂದ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿದರು' ಎಂದು ಬಾಲಕಿಯ ಚಿಕ್ಕಪ್ಪ ಪ್ರಸನ್ನಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ಕೂಗಾಟ ಕೇಳಿದ ಗ್ರಾಮಸ್ಥರು ಸ್ಥಳಕ್ಕೆ ಬಂದು ಜಗಳ ಬಿಡಿಸಿದ್ದಾರೆ. ಘಟನೆಯಿಂದಾಗಿ ಗ್ರಾಮದಲ್ಲಿ ಕೆಲ ಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಹಲ್ಲೆಯಿಂದ ಗಾಯಗೊಂಡ ಪ್ರಸನ್ನಕುಮಾರ್ ಮತ್ತು ಜಯಕುಮಾರ್ ಅವರು ರಾಮನಗರ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಐಜೂರು ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ.

ಪೊಲೀಸರು ಕುಮಾರ್ ಮತ್ತು ಯಶೋಧಾ ವಿರುದ್ಧ ಎಸ್‌ಸಿ ಮತ್ತು ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ, ಐಪಿಸಿ 323, 324, 504, 506 ಹಾಗೂ 34 ಕಲಂ ಅಡಿ ಪ್ರಕರಣ ದಾಖಲಿಸಿದ್ದಾರೆ.

'ಘಟನೆ ಬಳಿಕ ದೇವಸ್ಥಾನದ ಪೂಜಾರಿ ಕುಮಾರ್ ತಲೆಮರೆಸಿಕೊಂಡಿದ್ದಾರೆ. ಗ್ರಾಮಕ್ಕೆ ಭೇಟಿ ನೀಡಿ ಯಶೋಧಾ ಅವರನ್ನು ವಿವರಣೆ ಕೇಳಲಾಗಿದೆ. ಪ್ರಕರಣದ ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ತೆಲಂಗಾಣ: ಸಾರ್ವಜನಿಕ ಸಭೆಯಲ್ಲಿ ಮತದಾರರಿಗೆ ಗೃಹಸಚಿವ ಅಮಿತ್ ಶಾ ಭರವಸೆ

‘ಆಧುನಿಕ ರಜಾಕಾರರಿಂದ ರಕ್ಷಣೆ’

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಧುನಿಕ ರಜಾಕಾರರಿಂದ ತೆಲಂಗಾಣವನ್ನು ಬಿಜೆಪಿ ಮಾತ್ರ ರಕ್ಷಿಸಬಲ್ಲದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ತೆಲಂಗಾಣದ ಆದಿಲಾಬಾದ್‌ನಲ್ಲಿ ಹೇಳಿದರು.

ಹಿಂದಿನ ಹೈದರಾಬಾದ್ ರಾಜ್ಯದಲ್ಲಿ ನಿಜಾಮರ ಆಡಳಿತವಿದ್ದಾಗ ರಜಾಕಾರರು ಹಿಂದೂಗಳ ಮೇಲೆ ಕ್ರೌರ್ಯ, ದೌರ್ಜನ್ಯ ಎಸಗಿದ್ದರು. ಹೈದರಾಬಾದ್ ರಾಜ್ಯ ಮತ್ತು ತೆಲಂಗಾಣದ ಇತಿಹಾಸದಲ್ಲಿ ರಜಾಕಾರರ ಆಡಳಿತದ ಅವಧಿಯನ್ನು ‘ಕರಾಳ ಕಥನ’ವೆಂದೇ ಪರಿಗಣಿಸಲಾಗುತ್ತದೆ.

ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಶಾ ಅವರು, ‘ಕೆಸಿಆರ್ ಅವರ ಚುನಾವಣಾ ಚಿಹ್ನೆ ಕಾರು. ಆದರೆ ಅದರ ಸ್ಟೀರಿಂಗ್ ವೀಲ್ ಮಾತ್ರ ಓವೈಸಿ ಬಳಿ ಇದೆ. ಇಂತಹ ಸರ್ಕಾರ ರಾಜ್ಯಕ್ಕೆ ಬೇಕಿದೆಯಾ? ಚಂದ್ರಶೇಖರ್ ರಾವ್‌ಜಿ, ದಲಿತರಿಗೆ ಮೂರು ಎಕರೆ ಜಮೀನು ನೀಡುವ ಗ್ಯಾರಂಟಿ ಏನಾಯಿತು? ಅವರು ದಲಿತರ ಬಗ್ಗೆ ದೊಡ್ಡ ಮಾತನಾಡುತ್ತಾರೆ. ಆದರೆ ದಲಿತರಿಗೆ ಒಳಿತನ್ನು ಮಾಡುವುದಿಲ್ಲ’ ಎಂದು ಹೇಳಿದರು.

ತೆಲಂಗಾಣದಲ್ಲಿ ಡಬಲ್ ಎಂಜಿನ್ ಸರ್ಕಾರವನ್ನು ಹೊಂದಲು ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎಂದು ಮತದಾರರನ್ನು ಒತ್ತಾಯಿಸಿದರು.

ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಅವರು ಭ್ರಷ್ಟಾಚಾರದಲ್ಲಿ ಮತ್ತು ರೈತರ ಆತ್ಮಹತ್ಯೆಯಲ್ಲಿ ತೆಲಂಗಾಣವನ್ನು ಮೊದಲ ಸ್ಥಾನಕ್ಕೆ ತಂದಿದ್ದಾರೆ. ತಮ್ಮ ಮಗ ಕೆಟಿಆರ್ ಅವರನ್ನು ಮುಖ್ಯಮಂತ್ರಿಯಾಗಿಸುವ ಬಗ್ಗೆಯೇ ಗಮನ ಹರಿಸಿದ್ದಾರೆ. ಬಡವರು, ದುರ್ಬಲವರ್ಗದವರ ಕಡೆ ಅವರ ಗಮನವಿಲ್ಲ ಎಂದು ಟೀಕಿಸಿದರು.

‘ಕೆಸಿಆರ್ ಅವರು ತಮ್ಮ ಕುಟುಂಬಕ್ಕಾಗಿ ಮಾತ್ರ ಕೆಲಸ ಮಾಡುತ್ತಾರೆ. ಹಿಂದೆ ನೀಡಿದ್ದ ಭರವಸೆಗಳನ್ನು ಈಡೇರಿಸಲಿಲ್ಲ. ಡಬಲ್ ಎಂಜಿನ್ ಸರ್ಕಾರ ತೆಲಂಗಾಣಕ್ಕೆ ಅಗತ್ಯವಿದೆ. ಡಬಲ್ ಎಂಜಿನ್ ಸರ್ಕಾರವೆಂದರೆ ಅಭಿವೃದ್ಧಿ ಮತ್ತು ಅಭಿವೃದ್ಧಿ’ ಎಂದರು.

ಕೆಸಿಆರ್ ಸರ್ಕಾರದ ನಡವಳಿಕೆಯಿಂದಾಗಿ ಬುಡಕಟ್ಟು ವಿವಿ ಸ್ಥಾಪಿಸುವುದು ವಿಳಂಬವಾಯಿತು. ಕೆಸಿಆರ್ ಸರ್ಕಾರ ಈ ಬಗ್ಗೆ ಆಸಕ್ತಿ ಹೊಂದಿರಲಿಲ್ಲ. ಈ ಸರ್ಕಾರ ಬಡವರು, ದಲಿತರು ಮತ್ತು ಬುಡಕಟ್ಟು ಜನರ ಬಗ್ಗೆ ಗಮನ ಹರಿಸಲಿಲ್ಲ ಎಂದು ವಾಗ್ದಾಳಿ ನಡೆಸಿದರು.

ತೆಲಂಗಾಣದಲ್ಲಿ ನವೆಂಬರ್ 30ರಂದು ಚುನಾವಣೆ ನಡೆಯಲಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತೆಲಂಗಾಣದ ಆದಿಲಾಬಾದ್‌ನಲ್ಲಿ ಮಂಗಳವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷ ಜಿ. ಕಿಶನ್ ರೆಡ್ಡಿ, ನಾಯಕ, ಬಂಡಿ ಸಂಜಯ್ ಕುಮಾರ್ ಮತ್ತಿತರರು ಇದ್ದಾರೆ —ಪಿಟಿಐ ಚಿತ್ರ

ಶಾ ಹೇಳಿದ್ದೇನು?

- **ತೆಲಂಗಾಣಕ್ಕೆ ಡಬಲ್ ಎಂಜಿನ್ ಸರ್ಕಾರದ ಅಗತ್ಯವಿದೆ**
- **ಕುಟುಂಬಕ್ಕಾಗಿ ಮಾತ್ರ ಕೆಲಸ ಮಾಡುವ ಕೆಸಿಆರ್**

‘ಮಧ್ಯಪ್ರದೇಶವು ಬಿಜೆಪಿಯ ಭ್ರಷ್ಟಾಚಾರದ ಪ್ರಯೋಗಾಲಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶವು ಬಿಜೆಪಿಯ ಭ್ರಷ್ಟಾಚಾರದ ಪ್ರಯೋಗಾಲಯ ಆಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಆರೋಪಿಸಿದರು.

ಆದಿವಾಸಿ ಜನರೇ ಹೆಚ್ಚಾಗಿರುವ ಮಧ್ಯಪ್ರದೇಶದ ಶಹಡೋಲ್‌ನ ಬ್ಯೋಹಾರೀಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು ಕೇಂದ್ರ ಸರ್ಕಾರವು ₹100 ವೆಚ್ಚ ಮಾಡಿದರೆ, ಅದರಲ್ಲಿ 10 ಪೈಸೆಯಷ್ಟು ವೆಚ್ಚ ಮಾಡುವುದರ ಕುರಿತು ಮಾತ್ರ ಆದಿವಾಸಿಗಳು ನಿರ್ಧಾರ ಕೈಗೊಳ್ಳುತ್ತಾರೆ ಎಂದರು.

ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟವಾದ ಬಳಿಕ ಮೊದಲ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಜಾತಿ ಗಣತಿ ಕುರಿತು ಚಕಾರ ಎತ್ತುವುದಿಲ್ಲ. ಜನರ ಗಮನ ಬೇರೆಡೆ ಸೆಳೆಯಲು ಪಾಕಿಸ್ತಾನ, ಅಫ್ಗಾನಿಸ್ತಾನ ಮತ್ತು ದಕ್ಷಿಣ ಭಾರತದ ಬಗ್ಗೆ ಮಾತನಾಡುತ್ತಾರೆ ಎಂದು ಆಪಾದಿಸಿದರು.

ಜಾತಿ ಗಣತಿ ನಡೆಸಲು ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಎಂಬುದನ್ನು ಅವರು ಪುನರುಚ್ಚರಿಸಿದರು. ಜಾತಿ ಗಣತಿ ನಡೆಸುವಂತೆ ಬಿಜೆಪಿ ಮೇಲೆ ಒತ್ತಡ ಹೇರಲಾಗುವುದು ಎಂದರು.

ಕೇಂದ್ರ ಸರ್ಕಾರದಲ್ಲಿರುವ 90 ಕಾರ್ಯದರ್ಶಿಗಳ ಪೈಕಿ ಇತರ ಹಿಂದುಳಿದ ವರ್ಗ (ಒಬಿಸಿ)ದಿಂದ ಮೂವರು ಮಾತ್ರ ಇದ್ದಾರೆ ಎಂಬುದನ್ನು ಅವರು ಪ್ರಸ್ತಾಪಿಸಿದರು. ‘ಜನಸಂಖ್ಯೆಯಲ್ಲಿ ಶೇ 50ರಷ್ಟು ಮಂದಿ ಇದ್ದರೂ ಈ ಸಮುದಾಯದ ಅಧಿಕಾರಿಗಳು ಭಾರತ ಸರ್ಕಾರದ ಒಟ್ಟು ವೆಚ್ಚದಲ್ಲಿ ಶೇ 5ರಷ್ಟು ವೆಚ್ಚದ ಕುರಿತು ಮಾತ್ರ ನಿರ್ಧಾರ ಕೈಗೊಳ್ಳುತ್ತಾರೆ’ ಎಂದು ಹೇಳಿದರು.

‘ಜಾರಿಗೆ ತರುವಂಥಹ ಭರವಸೆಗಳನ್ನು ಮಾತ್ರ ನೀಡಲು ಕಾಂಗ್ರೆಸ್ ನಿರ್ಧರಿಸಿದೆ. ಮಧ್ಯಪ್ರದೇಶದಲ್ಲಿ ಅಧಿಕಾರಕ್ಕೆ ಬಂದರೆ ಪಕ್ಷ ಮಾಡುವ ಮೊದಲ ಕೆಲಸ ಜಾತಿ ಗಣತಿ ನಡೆಸುವುದು. ಜಾತಿಗಣತಿ ದೇಶದ ಎಕ್ಸ್ ರೇ ಇದ್ದಂತೆ. ಒಬಿಸಿ, ದಲಿತರು ಮತ್ತು ಬುಡಕಟ್ಟು ಜನರ ಬಗ್ಗೆ ಇದು ಬೆಳಕು ಚೆಲ್ಲುತ್ತದೆ. ಇದನ್ನು ನಾವು ಮಾಡುತ್ತೇವೆ. ಪ್ರಧಾನಿ ಮೋದಿ ಅವರೂ ಈ ಎಕ್ಸ್ ರೇ ಮಾಡಿ ತೋರಿಸಲಿ’ ಎಂದು ಅವರು ಸವಾಲು ಹಾಕಿದರು.

ಮಧ್ಯಪ್ರದೇಶವು ಬಿಜೆಪಿ-ಆರ್‌ಎಸ್‌ಎಸ್‌ನ ಪ್ರಯೋಗಾಲಯವಿದ್ದಂತೆ ಎಂದಿದ್ದ ಬಿಜೆಪಿ ಹಿರಿಯ ನಾಯಕ ಎಲ್‌.ಕೆ. ಅಡ್ವಾಣಿ ಅವರ ಹೇಳಿಕೆ ಪ್ರಸ್ತಾಪಿಸಿ, ವಾಸ್ತವವಾಗಿ ವ್ಯಾಪಂ, ಶಾಲಾ ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಯೋಜನೆಗಳಲ್ಲಿನ ಹಗರಣಗಳು, ಮಹಿಳೆ ಮತ್ತು ಬುಡಕಟ್ಟು ಜನರ ಮೇಲೆ ದೌರ್ಜನ್ಯಕ್ಕೆ ಈ ರಾಜ್ಯವು ಬಿಜೆಪಿಯ ಪ್ರಯೋಗಾಲಯ ಆಗಿದೆ ಎಂದು ಆರೋಪಿಸಿದರು.

‘ಮಧ್ಯಪ್ರದೇಶದಲ್ಲಿ 18 ವರ್ಷಗಳ ಬಿಜೆಪಿ ಆಡಳಿತದಲ್ಲಿ 18,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿ ದಿನ ಮೂವರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬಿಜೆಪಿಯ ನಾಯಕರು ಆದಿವಾಸಿಗಳ ಮೇಲೆ ಮೂತ್ರ ವಿಸರ್ಜಿಸುತ್ತಿದ್ದಾರೆ’ ಎಂದು ದೂರಿದರು.

‘ಮೋದಿ ಅವರು ಬುಡಕಟ್ಟು ಜನರ ಬಗ್ಗೆ ವಿವರಿಸುವಾಗ ವನವಾಸಿ ಎಂಬ ಪದ ಬಳಕೆ ಕೈ ಬಿಟ್ಟಿದ್ದಾರೆ. ಆದರೆ ಅವರ ಹೃದಯದಲ್ಲಿ ಬುಡಕಟ್ಟು ಜನರು ವನವಾಸಿಗಳೇ ಆಗಿದ್ದಾರೆ. ಬುಡಕಟ್ಟು ಜನರನ್ನು ಕಾಂಗ್ರೆಸ್ಸಿನವರು ವನವಾಸಿ ಎಂದು ಕರೆಯುವುದಿಲ್ಲ. ಆದಿವಾಸಿಗಳು ಎಂದು ಕರೆಯುತ್ತಾರೆ. ಏಕೆಂದರೆ ಭೂಮಿ ಮತ್ತು ಸಂಪನ್ಮೂಲದ ಮೇಲೆ ಅವರಿಗೆ ಮೊದಲ ಹಕ್ಕು ಇದೆ. ವನವಾಸಿಗಳು ಎಂದು ಕರೆದಾಗ ಅವರು ಆ ಹಕ್ಕನ್ನು ಕಳೆದುಕೊಳ್ಳುತ್ತಾರೆ’ ಎಂದು ವಿವರಿಸಿದರು. ಮಧ್ಯಪ್ರದೇಶದಲ್ಲಿ ನವೆಂಬರ್ 17ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ.

ಮಧ್ಯಪ್ರದೇಶದ ಶಹಡೋಲ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್ —ಪಿಟಿಐ ಚಿತ್ರ

> **ಜಾತಿಗಣತಿ ಬಗ್ಗೆ ಮಾತನಾಡುವ ಬದಲು ಮೋದಿ ಅವರು ಪಾಕಿಸ್ತಾನ, ಅಫ್ಗಾನಿಸ್ತಾನದ ಬಗ್ಗೆ ಮಾತನಾಡುತ್ತಾರೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ವಸುಂಧರಾ ರಾಜೇ ಅವರನ್ನು ವರಿಷ್ಠರು ನಿರ್ಲಕ್ಷಿಸುತ್ತಿದ್ದಾರೆಯೇ: ಬಿಜೆಪಿಯೊಳಗೆ ಚರ್ಚೆ

ಬಿಎಸ್‌ವೈ ಹಾದಿಯಲ್ಲಿದ್ದಾರೆಯೇ ‘ಮಹಾರಾಣಿ’

• ಮಂಜುನಾಥ ಹೆಬ್ಬಾರ್

ಸುದ್ದಿ ವಿಶ್ಲೇಷಣೆ

ನವದೆಹಲಿ: ರಾಜಸ್ಥಾನದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅಶೋಕ ಗೆಹಲೋತ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯ ಘಟಕವು ಈ ವರ್ಷದ ಮಾರ್ಚ್‌ನಲ್ಲಿ ಜೈಪುರದಲ್ಲಿ ಭಾರಿ ಪ್ರತಿಭಟನೆ ಸಂಘಟಿಸಿತು. ಈ ಪ್ರತಿಭಟನೆಯ ನೇತೃತ್ವ ವಹಿಸಿದವರು ಬಿಜೆಪಿ ರಾಜ್ಯ ಘಟಕದ ಆಗಿನ ಅಧ್ಯಕ್ಷ ಸತೀಶ್ ಪುನಿಯಾ. ಆದರೆ, ಪಕ್ಷದ 40ಕ್ಕೂ ಹೆಚ್ಚು ಶಾಸಕರು ಹಾಗೂ 10 ಸಂಸದರು ಈ ಪ್ರತಿಭಟನೆಗೆ ಚಕ್ಕರ್ ಹೊಡೆದರು. ಬದಲಿಗೆ ಜೈಪುರದಿಂದ 240 ಕಿ.ಮೀ. ದೂರದ ಚುರುವಿಗೆ ಈ ಮುಖಂಡರು ಪ್ರಯಾಣಿಸಿದರು. ಅಲ್ಲಿ ನಡೆದ ವಸಂತೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಸಿಂಧಿಯಾ ಮುಖ್ಯ ಅತಿಥಿಯಾಗಿದ್ದರು.

ಪ್ರತಿಭಟನೆಗೆ ಗೈರಾಗಿ ಚುರುವಿನ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ರಾಜೆ ಬಣವು ಬಿಜೆಪಿ ಹೈಕಮಾಂಡ್‌ಗೆ ಬಲವಾದ ಹಾಗೂ ಸ್ಪಷ್ಟವಾದ ಸಂದೇಶ ರವಾನಿಸಿತು. ಜತೆಗೆ, ರಾಜ್ಯ ನಾಯಕರ ಮೇಲೆ ತಮಗಿರುವ ಬಲವಾದ ಹಿಡಿತವನ್ನು ರಾಜೇ ಪ್ರದರ್ಶಿಸಿದರು. ಹೋಳಿ ಮುಗಿದ ಮೂರೇ ವಾರಗಳಲ್ಲಿ ಪುನಿಯಾ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಲಾಯಿತು. ಆ ಜಾಗಕ್ಕೆ ಚಿತ್ತೋರ್‌ಗಢ ಸಂಸದ ಸಿ.ಪಿ.ಜೋಶಿ ಅವರನ್ನು ತರಲಾಯಿತು. ಪುನಿಯಾ ಅವರು ಮೊದಲಿನಿಂದಲೂ ರಾಜೇ ಅವರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು. ಪಕ್ಷದ ರಾಜ್ಯ ಘಟಕದಲ್ಲಿ ರಾಜೇ ಅವರ ಉತ್ತರಾಧಿಕಾರಿಯಾಗುವ ಮಹತ್ವಾಕಾಂಕ್ಷೆ ತೋರಿದ್ದರು.

ಕಳೆದ ವಾರ ಜೋಧಪುರದಲ್ಲಿ ₹5,000 ಕೋಟಿ ಮೊತ್ತದ ವಿವಿಧ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ವೇದಿಕೆಯಲ್ಲಿ ‘ಪ್ರಧಾನ ಸೇವಕ’ ಮೋದಿ ಅವರ ಪಕ್ಕದಲ್ಲಿ ಕೂರಲು ‘ಮಹಾರಾಣಿ’ ರಾಜೇ ಅವರಿಗೆ ಅವಕಾಶ ಸಿಕ್ಕಿತು. ರಾಜೆ ಅವರೊಂದಿಗೆ ಪ್ರಧಾನಿ ಆಡಿದ್ದು ಒಂದೆರಡು ಮಾತುಗಳಷ್ಟೇ. ಜತೆಗೆ, ರಾಜೇ ಅವರಿಗೆ ಭಾಷಣ ಮಾಡಲೂ ಅವಕಾಶ ಸಿಗಲಿಲ್ಲ. ‘ಕಮಲ’ದ ಹೆಸರಿನಲ್ಲಿ ಪಕ್ಷ ಚುನಾವಣೆ ಎದುರಿಸಲಿದೆ ಎಂದು ಹೇಳುವ ಮೂಲಕ ಪ್ರಧಾನಿ ಅವರು ರಾಜೇ ಅವರ ಆಸೆಗೆ ತಣ್ಣೀರನ್ನೂ ಎರಚಿದರು.

ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ತಮ್ಮನ್ನು ಘೋಷಿಸಬೇಕು ಎಂದು ರಾಜೇ ಅವರು ಬಹುದಿನಗಳಿಂದ ಬೇಡಿಕೆ ಮುಂದಿಟ್ಟಿದ್ದಾರೆ. ಆದರೆ, ಈ ಬೇಡಿಕೆಗೆ ವರಿಷ್ಠರು ಕವಡೆ ಕಾಸಿನ ಕಿಮ್ಮತ್ತು ನೀಡಿಲ್ಲ. ರಾಜ್ಯದಲ್ಲಿ ಸಾಮೂಹಿಕ ನಾಯಕತ್ವದಡಿ ಚುನಾವಣೆ ಎದುರಿಸುವುದಾಗಿ ಪಕ್ಷದ ವರಿಷ್ಠರು ಸ್ಪಷ್ಟಪಡಿಸಿದ್ದಾರೆ. ಕಳೆದ ಆರು ತಿಂಗಳಲ್ಲಿ ರಾಜೇ ಹಾಗೂ ಬೆಂಬಲಿಗರು ಹಲವು ಬಗೆಯ ಒತ್ತಡ ಹೇರಿದರೂ ವರಿಷ್ಠರು ಅದನ್ನು ನಿರ್ಲಕ್ಷಿಸುತ್ತಲೇ ಬಂದರು. ಅದರೊಂದಿಗೆ, ರಾಜೇ ಬೆಂಬಲಿಗರನ್ನು ನಿಧಾನವಾಗಿ ಮಟ್ಟ ಹಾಕುವ ಕೆಲಸವನ್ನೂ ಮಾಡಿದರು. ಆ ಜಾಗದಲ್ಲಿ ಹೊಸ ಮುಖಗಳಿಗೆ ಹಾಗೂ ಪಕ್ಷನಿಷ್ಠರಿಗೆ ಅವಕಾಶ ನೀಡಿದರು. ಚುನಾವಣಾ ಪ್ರಣಾಳಿಕೆ ಹಾಗೂ ಚುನಾವಣಾ ನಿರ್ವಹಣಾ ಸಮಿತಿಗಳಲ್ಲೂ ರಾಜೇ ಅವರಿಗೆ ಜಾಗ ಸಿಗಲಿಲ್ಲ. ಪಕ್ಷದ ರಾಷ್ಟ್ರೀಯ ಸಂಘಟನೆಯ ಪುನರ್ ರಚನೆಯ ವೇಳೆಯಲ್ಲೂ ರಾಜೇ ಅವರಿಗೆ ಬಡ್ತಿ ಸಿಗಲಿಲ್ಲ. ರಾಷ್ಟ್ರೀಯ ಉಪಾಧ್ಯಕ್ಷ ಸ್ಥಾನದಲ್ಲೇ ಅವರನ್ನು ಮುಂದುವರಿಸಲಾಯಿತು.

ವಿಧಾನಸಭಾ ಚುನಾವಣೆ ವೇಳಾಪಟ್ಟಿ ಘೋಷಣೆಯಾದ ಬೆನ್ನಲ್ಲೇ ಬಿಜೆಪಿಯು ರಾಜಸ್ಥಾನದ 41 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿತು. ಈ ಪಟ್ಟಿಯಲ್ಲಿ ರಾಜೇ ಅವರ ಹೆಸರು ಇರಲಿಲ್ಲ. ಜೈಪುರದ ಹಿಂದಿನ ರಾಜಕುಮಾರಿ ದಿಯಾ ಕುಮಾರಿ ಸೇರಿದಂತೆ ಏಳು ಸಂಸದರ ಹೆಸರು ಮೊದಲ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ. ಬಿಜೆಪಿ ಪಾಳಯದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಸೆಪ್ಟೆಂಬರ್ ಕೊನೆಯ ವಾರದಲ್ಲಿ ದಿಯಾ ಕುಮಾರಿ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ್ದರು. ದಿಯಾ ಅವರನ್ನು ಇದೀಗ ಜೈಪುರದ ವಿದ್ಯಾಧರನಗರದಿಂದ ಕಣಕ್ಕೆ ಇಳಿಸಲಾಗಿದೆ. ರಾಜೇ ಅವರ ನಿಕಟವರ್ತಿ ನರ್ಪತ್ ಸಿಂಗ್ ರಾಜ್ವಿ ಅವರಿಗೆ ಟಿಕೆಟ್ ನಿರಾಕರಿಸಿ ದಿಯಾ ಕುಮಾರಿ ಅವರಿಗೆ ಅವಕಾಶ ನೀಡಲಾಗಿದೆ.

ಸಂಸತ್‌ನಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ಸಿಕ್ಕ ಬಳಿಕ ಪ್ರಧಾನಿಯವರು ಸೆಪ್ಟೆಂಬರ್ 25ರಂದು ಜೈಪುರದಲ್ಲಿ ಪ್ರಚಾರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಈ ಕಾರ್ಯಕ್ರಮದ ನಿರೂಪಣೆ ಹೊಣೆಯನ್ನು ದಿಯಾ ಕುಮಾರಿ ಅವರಿಗೆ ವಹಿಸಲಾಗಿತ್ತು. ರಾಜ್ಯದಲ್ಲಿ ಎರಡನೇ ಹಂತದ ನಾಯಕರನ್ನು ಮುಂಚೂಣಿಗೆ ತರುವ ಪ್ರಯತ್ನದ ಭಾಗವಾಗಿ ದಿಯಾ ಕುಮಾರಿ ಅವರಿಗೆ ವರಿಷ್ಠರು ಆದ್ಯತೆ ನೀಡುತ್ತಿದ್ದಾರೆ. ಜತೆಗೆ, ರಾಜೇ ಅವರನ್ನು ನಿಧಾನವಾಗಿ ಮಟ್ಟ ಹಾಕುವ ಕೆಲಸವನ್ನೂ ಮಾಡುತ್ತಿದ್ದಾರೆ ಎಂಬ ಚರ್ಚೆಗಳು ಪಕ್ಷದ ವಲಯದಲ್ಲಿ ನಡೆದಿವೆ.

ರಾಜಸ್ಥಾನದ ಬಿಜೆಪಿಯ ದೊಡ್ಡ ನಾಯಕ ಭೈರೋನ್ ಸಿಂಗ್ ಶೆಖಾವತ್ ಅವರು 2002ರ ಕೊನೆಯಲ್ಲಿ ದೇಶದ ಉಪರಾಷ್ಟ್ರಪತಿಯಾಗಿ ಆಯ್ಕೆಯಾದರು. ಆಗ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ರಾಜೇ ಅವರನ್ನು ನೇಮಿಸಲಾಯಿತು. 2003ರ ವಿಧಾನಸಭಾ ಚುನಾವಣೆಯನ್ನು ರಾಜೇ ನೇತೃತ್ವದಲ್ಲೇ ಪಕ್ಷ ಎದುರಿಸಿತು. ಆ ಚುನಾವಣೆಯಲ್ಲಿ ಬಿಜೆಪಿ ವಿಜಯ ಗಳಿಸಿತು. ಅಂದಿನಿಂದ ರಾಜೇ ಹಿಂತಿರುಗಿ ನೋಡಲೇ ಇಲ್ಲ. 2013ರ ವಿಧಾನಸಭಾ ಚುನಾವಣೆಯಲ್ಲಿ ರಾಜೇ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಲಾಯಿತು. ಆ ಚುನಾವಣೆಯಲ್ಲಿ ಬಿಜೆಪಿ 163 ಸ್ಥಾನಗಳನ್ನು ಗೆದ್ದು ಪ್ರಚಂಡ ಬಹುಮತ ಗಳಿಸಿತು. ಆಡಳಿತ ವಿರೋಧಿ ಅಲೆಯಿಂದಾಗಿ 2018ರ ಚುನಾವಣೆಯಲ್ಲಿ ಕೇಸರಿ ಪಾಳಯ ಸೋತಿತು. ಆ ಬಳಿಕ ರಾಷ್ಟ್ರ ರಾಜಕಾರಣಕ್ಕೆ ರಾಜೇ ಅವರನ್ನು ಕರೆ ತರಲು ಬಿಜೆಪಿ ವರಿಷ್ಠರು ಹಲವು ಸಲ ಪ್ರಯತ್ನ ನಡೆಸಿದರು. ಒಂದು ವೇಳೆ ರಾಷ್ಟ್ರ ರಾಜಕಾರಣಕ್ಕೆ ಬಂದರೆ ‘ಮರುಭೂಮಿ’ಯ ಹಿಡಿತ ತಪ್ಪಲಿದೆ ಎಂದು ಭಾವಿಸಿದ ‘ಮಹಾರಾಣಿ’ ವರಿಷ್ಠರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಇನ್ನೊಂದೆಡೆ, ಮುಖ್ಯಮಂತ್ರಿ ಅಶೋಕ ಗೆಹಲೋತ್ ಬಗ್ಗೆ ಮೃದುಧೋರಣೆ ತಾಳುತ್ತಾ ಬಂದರು. ಮತ್ತೊಂದೆಡೆ, ಅವರು ಏಕಾಂಗಿಯಾಗಿ ರಾಜ್ಯ ಪ್ರವಾಸ ಮಾಡಿ ತಮಗಿರುವ ಜನಬೆಂಬಲ ತೋರ್ಪಡಿಸಿದರು. ಪಕ್ಷದ ಕಾರ್ಯಕ್ರಮಗಳಲ್ಲಿ ಅಷ್ಟಾಗಿ ಕಾಣಿಸಿಕೊಳ್ಳಲೂ ಹೋಗಲಿಲ್ಲ. ಅವರು ಈಗ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ (ಬಿಎಸ್‌ವೈ) ಹಾದಿಯಲ್ಲೇ ಸಾಗುತ್ತಿದ್ದಾರೆಯೇ?

ಕರ್ನಾಟಕದಲ್ಲಿ ಯಡಿಯೂರಪ್ಪ ಅವರು ಪಕ್ಷ ಸಂಘಟನೆಗೆ ಹಾಗೂ ಪ್ರವಾಸಕ್ಕೆ ಹಲವು ಸಲ ಉಮೇದು ತೋರಿದ್ದಾರೆ. ಆದರೆ, ಅದಕ್ಕೆ ವರಿಷ್ಠರು ಒಪ್ಪಿಗೆ ನೀಡಿದ್ದು ಕಡಿಮೆ. ಒಂದರ್ಥದಲ್ಲಿ ರಾಜೇ ಹಾಗೂ ಯಡಿಯೂರಪ್ಪ ಅವರು ಒಂದೇ ದೋಣಿಯ ಪಯಣಿಗರು!

‘ಮಿಜೋರಾಂ ಮತ ಎಣಿಕೆ ದಿನ ಬದಲಿಸಿ’

ಪ್ರಜಾವಾಣಿ ವಾರ್ತೆ

ಗುವಾಹಟಿ: ಕ್ರೈಸ್ತರೇ ಹೆಚ್ಚಿರುವ ಮಿಜೋರಾಂನಲ್ಲಿ ಡಿಸೆಂಬರ್ 3ರಂದು ಭಾನುವಾರ ಚರ್ಚ್ ಸಭೆಗಳೂ ಇರುವ ಕಾರಣ ಮತ ಎಣಿಕೆಯ ದಿನವನ್ನು ಬದಲಾಯಿಸಬೇಕು ಎಂದು ಆಡಳಿತಾರೂಢ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಮತ್ತು ಪ್ರತಿಪಕ್ಷ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.

ನಲವತ್ತು ಸದಸ್ಯ ಬಲದ ಮಿಜೋರಾಂ ವಿಧಾನ ಸಭೆಗೆ ನವೆಂಬರ್ 7ರಂದು ಚುನಾವಣೆ ನಡೆಸುವುದಾಗಿ ಚುನಾವಣಾ ಆಯೋಗ ಸೋಮವಾರ ಘೋಷಿಸಿತ್ತು. ಅಲ್ಲದೆ ಮಿಜೋರಾಂ, ಛತ್ತೀಸಗಢ, ಮಧ್ಯಪ್ರದೇಶ, ತೆಲಂಗಾಣ ಮತ್ತು ರಾಜಸ್ಥಾನ ರಾಜ್ಯಗಳ ಮತ ಎಣಿಕೆ ದಿನವನ್ನು ಡಿ. 3ಕ್ಕೆ ನಿಗದಿಪಡಿಸಿತ್ತು.

ದಿನಾಂಕ ಪ್ರಕಟವಾಗುತ್ತಿದ್ದಂತೆ, ಮತ ಎಣಿಕೆ ದಿನವು ಭಾನುವಾರ ನಿಗದಿಯಾಗಿರುವ ಬಗ್ಗೆ ಮಿಜೋರಾಂನಲ್ಲಿನ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿತ್ತು. ಎಣಿಕೆಯನ್ನು ಬೇರೆ ದಿನಕ್ಕೆ ಮರುನಿಗದಿಪಡಿಸುವಂತೆ ಆಯೋಗವನ್ನು ಕೋರಿತ್ತು.

ಮತ ಎಣಿಕೆಯ ದಿನವನ್ನು ಡಿ. 4ಕ್ಕೆ ಮರುನಿಗದಿಪಡಿಸಬೇಕು. ಮಿಜೋರಾಂನಾದ್ಯಂತ ಭಾನುವಾರ ಚರ್ಚ್ ಸಭೆಗಳು ನಡೆಯಲಿವೆ ಅಲ್ಲದೆ ಕ್ರೈಸ್ತರಿಗೆ ಅದು ಪ್ರಮುಖ ದಿನ ಎಂದು ಎಂಎನ್‌ಎಫ್‌ನ ಪ್ರಧಾನ ಕಾರ್ಯದರ್ಶಿ ಟಿ.ಸಿ. ಕಫಮಿಂಗ್‌ತಾಂಗ್ ಅವರು ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ವಾರಾಂತ್ಯದಲ್ಲಿ ಮತದಾನ ಅಥವಾ ಮತಎಣಿಕೆ ದಿನವನ್ನು ನಿಗದಿಪಡಿಸಬಾರದು ಎಂದು ಮಿಜೋರಾಂಗೆ ಆ. 30ರಂದು ಭೇಟಿ ನೀಡಿದ್ದ ಆಯೋಗದ ತಂಡಕ್ಕೆ ಪ್ರಮುಖ ಪಕ್ಷಗಳು ಒತ್ತಾಯಿಸಿದ್ದವು. ಆದರೂ ಮತ ಎಣಿಕೆ ದಿನವನ್ನು ಡಿ. 3 ಭಾನುವಾರ ನಿಗದಿಪಡಿಸಿರುವುದು ಪಕ್ಷಗಳಿಗೆ ಅಚ್ಚರಿ ಮೂಡಿಸಿದೆ.

ಭಾರತದಲ್ಲಿನ ಪ್ಯಾಲೆಸ್ಟೀನ್ ರಾಯಭಾರಿ ಅದ್ನಾನ್ ಅಬು ಅಲ್‌ಹೈಜಾ ಅಭಿಮತ

ಬಿಕ್ಕಟ್ಟು ತಿಳಿಗೊಳಿಸುವ ಅರ್ಹತೆ ಭಾರತಕ್ಕಿದೆ

ನವದೆಹಲಿ (ಪಿಟಿಐ): ಇಸ್ರೇಲ್-ಹಮಾಸ್ ಸಂಘರ್ಷದಿಂದ ಉಂಟಾಗಿರುವ ಬಿಕ್ಕಟ್ಟನ್ನು ತಿಳಿಗೊಳಿಸುವಲ್ಲಿ ಮಹತ್ವದ ಪಾತ್ರ ನಿಭಾಯಿಸುವ ಸ್ಥಾನದಲ್ಲಿ ಭಾರತ ಇದೆ ಎಂದು ಭಾರತದಲ್ಲಿ ಪ್ಯಾಲೆಸ್ಟೀನ್‌ನ ರಾಯಭಾರಿ ಆಗಿರುವ ಅದ್ನಾನ್ ಅಬು ಅಲ್‌ಹೈಜಾ ಹೇಳಿದ್ದಾರೆ.

ಜಾಗತಿಕವಾಗಿ ಹೆಚ್ಚುತ್ತಿರುವ ಸ್ಥಾನಮಾನ ಮತ್ತು ಪಶ್ಚಿಮ ಏಷ್ಯಾದ ಪ್ರಮುಖ ದೇಶಗಳಲ್ಲಿ ಹೊಂದಿರುವ ಪ್ರಭಾವದ ಕಾರಣದಿಂದಾಗಿ ಭಾರತವು ಈ ಸಂಘರ್ಷವನ್ನು ತಿಳಿಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಬಹುದು ಎಂದು ಅವರು ಪ್ರತಿಪಾದಿಸಿದ್ದಾರೆ. ಪ್ಯಾಲೆಸ್ಟೀನ್ ಜನರ ಹಕ್ಕುಗಳ ಪರವಾಗಿ ಭಾರತವು ಮಹಾತ್ಮ ಗಾಂಧಿಯವರ ಕಾಲದಿಂದಲೂ ದೃಢವಾಗಿ ನಿಂತಿದೆ ಎಂದು ನೆನಪಿಸಿಕೊಂಡಿದ್ದಾರೆ. ಅವರು ಪಿಟಿಐ ಜೊತೆಗಿನ ಸಂದರ್ಶನದಲ್ಲಿ ಈ ಮಾತು ಹೇಳಿದ್ದಾರೆ.

ಈಗಿನ ಉದ್ವಿಗ್ನತೆಯನ್ನು ತಗ್ಗಿಸುವ ಅರ್ಹತೆಯು ಭಾರತಕ್ಕೆ ಇದೆ. ಭಾರತವು ಇಸ್ರೇಲ್‌ಗೂ ಸ್ನೇಹಿತ, ಪ್ಯಾಲೆಸ್ಟೀನ್‌ಗೂ ಸ್ನೇಹಿತ. ಭಾರತವು ಯುರೋಪಿನ ದೇಶಗಳ ಜೊತೆ, ಅಮೆರಿಕ ಹಾಗೂ ಪಶ್ಚಿಮ ಏಷ್ಯಾದ ದೇಶಗಳ ಜೊತೆ ಕೂಡ ಮಾತುಕತೆ ನಡೆಸಬಹುದು. ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಇಸ್ರೇಲ್ ಮೇಲೆ ಒತ್ತಡ ತರುವ ಕೆಲಸವನ್ನು ಭಾರತವು ಮಾಡಬಹುದು ಎಂದು ಅಲ್‌ಹೈಜಾ ಹೇಳಿದ್ದಾರೆ.

‘ಪ್ಯಾಲೆಸ್ಟೀನ್ ಜನರ ಬೇಡಿಕೆಗಳು ಏನು ಎಂಬುದು ಭಾರತಕ್ಕೆ ಮೊದಲಿನಿಂದಲೂ ಗೊತ್ತಿದೆ… ಭಾರತವು ಬಹಳ ಪ್ರಮುಖವಾದ ದೇಶ… ಈ ವಿಚಾರದಲ್ಲಿ ಅದು ನಾಯಕನ ಸ್ಥಾನದಲ್ಲಿ ಕೆಲಸ ಮಾಡಬಹುದು’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಭಾರತವು ಮಧ್ಯಸ್ಥಿಕೆದಾರನ ಕೆಲಸ ಮಾಡಬೇಕು ಎಂದು ಪ್ಯಾಲೆಸ್ಟೀನ್ ಬಯಸುತ್ತಿದೆಯೇ ಎಂಬ ಪ್ರಶ್ನೆಗೆ ಅವರು, ‘ಹಾಗೆ ಮಾಡಲಿ ಎಂದು ನಾನು ಆಶಿಸುತ್ತಿದ್ದೇನೆ’ ಎಂದು ಉತ್ತರಿಸಿದ್ದಾರೆ.

ಈ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ಅಥವಾ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆಯೇ ಎಂದು ಕೇಳಿದಾಗ ಅಲ್‌ಹೈಜಾ ಅವರು, ‘ಈ ವಿಚಾರವನ್ನು ಸುಮಾರು ಎರಡು ವರ್ಷಗಳ ಹಿಂದೆಯೇ ಹೇಳಿದ್ದೆ’ ಎಂದಿದ್ದಾರೆ.

ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ನಡೆಸಿರುವ ದಾಳಿಯು ‘ಇಸ್ರೇಲ್ ಬಹುಕಾಲದಿಂದ ಮಾಡಿಕೊಂಡು ಬಂದಿರುವ ಕೆಲಸಕ್ಕೆ ಪ್ರತಿಕ್ರಿಯೆ’ ಎಂದು ವ್ಯಾಖ್ಯಾನಿಸಿದ್ದಾರೆ. ‘ನಾಗರಿಕರು ಪ್ಯಾಲೆಸ್ಟೀನ್‌ನವರಾಗಲಿ, ಇಸ್ರೇಲ್‌ನವರಾಗಲಿ ಅವರ ಹತ್ಯೆಯನ್ನು ನಾನು ಖಂಡಿಸುತ್ತೇನೆ’ ಎಂದು ಅಲ್‌ಹೈಜಾ ಹೇಳಿದ್ದಾರೆ.

‘ಗಾಜಾ ಪ್ರದೇಶವು 22 ಲಕ್ಷ ಜನರ ಪಾಲಿಗೆ ಬಯಲು ಬಂದೀಖಾನೆಯಂತೆ ಇದೆ. ಅಲ್ಲಿನವರು ಎಲ್ಲಿಗೂ ಹೋಗಲು ಸಾಧ್ಯವಿಲ್ಲ. ಪಶ್ಚಿಮ ದಂಡೆಗೆ ಬರಲು ಇಸ್ರೇಲ್‌ನವರು ಅವಕಾಶ ಕೊಡದೆ ಇದ್ದರೆ ಗಾಜಾದ ಜನ ಚಿಕಿತ್ಸೆ ಪಡೆಯಲಿಕ್ಕೂ ಬೇರೆಡೆ ತೆರಳಲು ಅವಕಾಶವಿಲ್ಲ’ ಎಂದು ಅಲ್‌ಹೈಜಾ ಅಳಲು ತೋಡಿಕೊಂಡಿದ್ದಾರೆ.

ಇಸ್ರೇಲ್ ಮಂಗಳವಾರ ವಾಯುದಾಳಿ ನಡೆಸಿದ ಪರಿಣಾಮ ಧ್ವಂಸಗೊಂಡಿರುವ ಗಾಜಾ ಪಟ್ಟಣದ ವೈಮಾನಿಕ ದೃಶ್ಯ —ಎಎಫ್‌ಪಿ ಚಿತ್ರ

ಇಸ್ರೇಲ್-ಹಮಾಸ್ ಸಮರ

ಇಸ್ರೇಲ್‌ಗೆ ಐದು ರಾಷ್ಟ್ರಗಳ ಬೆಂಬಲ

ಲಂಡನ್ (ಪಿಟಿಐ): ತನ್ನನ್ನು ಹಾಗೂ ದೌರ್ಜನ್ಯಗಳಿಂದ ತನ್ನ ಜನರನ್ನು ರಕ್ಷಿಸಿಕೊಳ್ಳಲು ಇಸ್ರೇಲ್ ನಡೆಸುತ್ತಿರುವ ಯತ್ನಗಳಿಗೆ ಬೆಂಬಲ ನೀಡುವುದಾಗಿ ಅಮೆರಿಕ, ಫ್ರಾನ್ಸ್, ಬ್ರಿಟನ್, ಜರ್ಮನಿ, ಇಟಲಿ ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

‘ಪ್ಯಾಲೆಸ್ಟೀನ್ ನಾಗರಿಕರ ನ್ಯಾಯಬದ್ಧ ಆಕಾಂಕ್ಷೆಗಳನ್ನು ನಾವು ಒಪ್ಪುತ್ತೇವೆ. ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಜನರ ಸ್ವಾತಂತ್ರ್ಯವನ್ನು ಸಮಾನವಾಗಿ ಬೆಂಬಲಿಸುತ್ತೇವೆ. ಆದರೆ, ಹಮಾಸ್ ಸಂಘಟನೆಯು ಪ್ಯಾಲೆಸ್ಟೀನ್ ಜನರನ್ನು ಪ್ರತಿನಿಧಿಸುವುದಿಲ್ಲ. ಇನ್ನಷ್ಟು ಭಯೋತ್ಪಾದನೆ ಮತ್ತು ರಕ್ತಪಾತವನ್ನು ಹೊರತುಪಡಿಸಿದರೆ ಹಮಾಸ್ ಸಂಘಟನೆಯು ಪ್ಯಾಲೆಸ್ಟೀನ್ ಜನರಿಗೆ ಇನ್ನೇನನ್ನೂ ಕೊಡುವುದಿಲ್ಲ’ ಎಂದು ಈ ಐದು ದೇಶಗಳು ಹೇಳಿವೆ.

ಒತ್ತೆಯಾಳುಗಳ ಹತ್ಯೆ: ಹಮಾಸ್ ಎಚ್ಚರಿಕೆ

ಜೆರುಸಲೇಂ (ಎಎಫ್‌ಪಿ): ಮುನ್ನೆಚ್ಚರಿಕೆ ನೀಡದೆ ಗಾಜಾ ನಿವಾಸಿಗಳ ಮೇಲೆ ವೈಮಾನಿಕ ದಾಳಿ ನಡೆಸುವುದನ್ನು ಮುಂದುವರಿಸಿದರೆ ಒತ್ತೆಯಾಳುಗಳನ್ನಾಗಿ ಇರಿಸಿಕೊಂಡಿರುವ ಅಂದಾಜು 150 ಜನರನ್ನು ಹತ್ಯೆ ಮಾಡುವುದಾಗಿ ಹಮಾಸ್ ಬಂಡುಕೋರ ಸಂಘಟನೆ ಹೇಳಿದೆ.

ಗಾಜಾ ಪಟ್ಟಿಯ ಸುತ್ತ ಇಸ್ರೇಲ್ ದಿಗ್ಬಂಧನ ವಿಧಿಸಿದ ನಂತರದಲ್ಲಿ ಹಮಾಸ್ ಈ ಎಚ್ಚರಿಕೆ ನೀಡಿದೆ. ಇಸ್ರೇಲ್ ನಡೆಸಿರುವ ವಾಯುದಾಳಿಯಲ್ಲಿ ನಾಲ್ಕು ಮಂದಿ ಒತ್ತೆಯಾಳುಗಳು ಮೃತಪಟ್ಟಿದ್ದಾರೆ ಎಂದು ಹಮಾಸ್ ತಿಳಿಸಿದೆ.

- **ಮಾನವೀಯ ಕಾರಿಡಾರ್ ನಿರ್ಮಿಸಲು ಡಬ್ಲ್ಯುಎಚ್‌ಒ ಕರೆ**
- **ಕುಟುಂಬವನ್ನು ಸ್ಥಳಾಂತರಿಸಲು ಗಾಜಾದಲ್ಲಿರುವ ಭಾರತ ಮೂಲದ ಮಹಿಳೆ ಲುಬ್ನಾ ನಾಝಿರ್ ಮನವಿ**
- **ಗಾಜಾ ಬಳಿಯ ಪಟ್ಟಣಗಳಿಂದ ಇಸ್ರೇಲ್ ನಾಗರಿಕರ ಸ್ಥಳಾಂತರ**
- **ಭಾರತೀಯರಿಗೆ ರಕ್ಷಣೆಗೆ ಒದಗಿಸಿ: ಸಚಿವ ಜೈಶಂಕರ್‌ಗೆ ಕೇರಳ ಸಿ.ಎಂ ಪತ್ರ**
- **ಅನಾಥರನ್ನು ಕುಟುಂಬದ ಜೊತೆ ಒಗ್ಗೂಡಿಸಲು ಯತ್ನ: ರೆಡ್ ಕ್ರಾಸ್‌ನ ಅಂತರರಾಷ್ಟ್ರೀಯ ಸಮಿತಿ**

‘ದಾಳಿ’ಗಿಂತ ‘ಮರಳುವ’ ಭಯ ಹೆಚ್ಚು

ಇಸ್ರೇಲ್‌ನಲ್ಲಿ ನೆಲೆಸಿದವರ ಮಾಹಿತಿ ನೀಡದ ಕುಟುಂಬಸ್ಥರು

• ಗಣಪತಿ ಹೆಗಡೆ

ಕಾರವಾರ: ‘ಇಸ್ರೇಲ್‌ನಲ್ಲಿ ವರ್ಷಗಳಿಂದ ನೆಲೆಸಿರುವ ನಮಗೆ ಗುಂಡಿನ ಚಕಮಕಿ, ಕ್ಷಿಪಣಿ ದಾಳಿ ಹೊಸದೇನಲ್ಲ. ಆತಂಕ ಮೂಡಿಸುವ ವಿಷಯವೂ ಅಲ್ಲ. ಯುದ್ಧದ ಸನ್ನಿವೇಶಕ್ಕೆ ಹೆದರಿ ಭಾರತಕ್ಕೆ ನಮ್ಮನ್ನು ಏಕಾಏಕಿ ವಾಪಸ್ ಕರೆಸಿಕೊಳ್ಳಬಹುದು ಎಂಬುದೇ ನಮ್ಮ ಆತಂಕ’

ಇದು ಇಸ್ರೇಲ್‌ನಲ್ಲಿ ನಾಲ್ಕು ವರ್ಷಗಳಿಂದ ‘ಕೇರ್ ಟೇಕರ್’ ಆಗಿರುವ ತಾಲ್ಲೂಕಿನ ಮಲ್ಲಾಪುರದ ರೇಮಿ ಅವರ ಮಾತು. ಯುದ್ಧಪೀಡಿತ ಪ್ರದೇಶದಿಂದ ಕೊಂಚ ದೂರದಲ್ಲಿ ನೆಲೆಸಿರುವ ಅವರಿಗೆ ಬಾಂಬ್ ಸ್ಫೋಟದ ಸದ್ದು ಸಾಮಾನ್ಯ ಸಂಗತಿ. ಆದರೆ, ಉದ್ಯೋಗ ಕಳೆದುಕೊಂಡು ಭಾರತಕ್ಕೆ ಮರಳಬೇಕಾದ ಪರಿಸ್ಥಿತಿ ಬರಬಹುದು ಎಂಬ ಭೀತಿ ಅವರಿಗೆ ಕಾಡುತ್ತಿದೆ.

‘2014 ರಿಂದ ಇಸ್ರೇಲ್ ದೇಶದಲ್ಲಿ ನೆಲೆಸಿದ್ದೇನೆ. 9 ವರ್ಷಗಳಲ್ಲಿ ಎರಡು ಬಾರಿ ಭಾರತಕ್ಕೆ ಬಂದು ಮರಳಿದ್ದೇನೆ. ನಾಲ್ಕು ತಿಂಗಳ ಹಿಂದಷ್ಟೆ ಊರಿಗೆ ಬಂದಿದ್ದೆ. ನಾವಿರುವ ಸ್ಥಳ ಸುರಕ್ಷಿತವಾಗಿದೆ. ಇಲ್ಲಿನ ಕಟ್ಟಡಗಳಲ್ಲಿ ಬಾಂಬ್, ಕ್ಷಿಪಣಿ ನಿರೋಧಕ ಕೊಠಡಿಗಳಿವೆ. ಕ್ಷಿಪಣಿ ನುಗ್ಗಿ ಬಂದರೆ ಸೈರನ್ ಮೊಳಗುತ್ತದೆ. ಆಗ ಜನರು ಆ ಕೊಠಡಿಯೊಳಗೆ ಅವಿತುಕೊಳ್ಳುತ್ತಾರೆ’ ಎಂದು ಭಟ್ಕಳದ ಹನುಮಾನ್ ನಗರದ ಉಮೇಶ ನಾಯ್ಕ ‘ಪ್ರಜಾವಾಣಿ’ಗೆ ತಿಳಿಸಿದರು.

‘ಹಿರಿಯ ನಾಗರಿಕರ ಆರೈಕೆ ಮಾಡುವ ಕೆಲಸಕ್ಕೆ ಭಾರತದಿಂದ ಸಾವಿರಾರು ಜನ ಇಸ್ರೇಲ್‌ಗೆ ಬರುತ್ತಾರೆ. ಅವರಲ್ಲಿ ಉತ್ತರ ಕನ್ನಡದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಉದ್ಯೋಗಾವಕಾಶ ಕಲ್ಪಿಸುವ ಖಾಸಗಿ ಏಜೆನ್ಸಿಗಳಿಗೆ ₹ 30 ಲಕ್ಷದವರೆಗೆ ಹಣ ನೀಡಿ ಕೆಲಸ ಪಡೆದವರು ಇದ್ದಾರೆ. ನಾನು ಇಲ್ಲಿ ಬಂದು ಏಳು ತಿಂಗಳಾಗಿದೆ. ಯುದ್ಧ ಭೀತಿ ಎದುರಾಗಿದೆ. ಇದೇ ಕಾರಣಕ್ಕೆ ಉದ್ಯೋಗಿಗಳನ್ನು ಭಾರತಕ್ಕೆ ಮರಳಿ ಕರೆಯಿಸಿಕೊಂಡರೆ ಆರ್ಥಿಕ ಹೊರೆ ಹೆಚ್ಚಾಗುತ್ತದೆ’ ಎಂದು ಕುಮಟಾ ಮೂಲದ ಮಹಿಳೆಯೊಬ್ಬರು ಅಳಲು ತೋಡಿಕೊಂಡರು.

‘ಏಳು ವರ್ಷದಿಂದ ಪತ್ನಿ ಕ್ರಿಸ್ಮಾ ಲೋಪೆಜ್ ಇಸ್ರೇಲ್‌ನಲ್ಲಿ ಉದ್ಯೋಗದಲ್ಲಿದ್ದಾಳೆ. ವಾರದಿಂದ ಆಕೆ ಜತೆ ನಿತ್ಯ ಎರಡು ಮೂರು ಬಾರಿ ಮಾತನಾಡುತ್ತಿದ್ದೆ. ಸೋಮವಾರದಿಂದ ದೂರವಾಣಿ ಸಂಪರ್ಕಕ್ಕೆ ಸಿಗುತ್ತಿಲ್ಲ. ಆತಂಕಗೊಂಡಿದ್ದೇನೆ’ ಎಂದು ಬೈತಕೋಲದ ರೋಜರ್ ಲೋಪೆಜ್ ಹೇಳಿದರು.



ಉಮೇಶ ನಾಯ್ಕ



ಕ್ರಿಸ್ಮಾ ಲೋಪೆಜ್

> **ಇಸ್ರೇಲ್‌ನಲ್ಲಿ ನೆಲೆಸಿದವರ ಮಾಹಿತಿ ನೀಡುವಂತೆ ಜನರಿಗೆ ಕೋರಲಾಗಿದೆ. ಕೆಲವರಷ್ಟೆ ಮಾಹಿತಿ ನೀಡಿದ್ದು, ಬಹುತೇಕ ಜನರು ಮಾಹಿತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ**
> **ಗಂಗೂಬಾಯಿ ಮಾನಕರ್**
> ಜಿಲ್ಲಾಧಿಕಾರಿ

ಗಾಜಾ: 1500 ಮೃತದೇಹ ಪತ್ತೆ

ಒಂದನೇ ಪುಟದಿಂದ...

ಯುದ್ಧ ಟ್ಯಾಂಕ್‌ಗಳು ಹಾಗೂ ಇತರ ಶಸ್ತ್ರಾಸ್ತ್ರಗಳನ್ನು ಗಾಜಾ ಸಮೀಪದಲ್ಲಿ ಮತ್ತು ಉತ್ತರದ ಲೆಬನಾನ್ ಗಡಿಯ ಬಳಿ ನಿಯೋಜಿಸಿದೆ.

ಗಾಜಾ ಪಟ್ಟಿಯ ಮೇಲೆ ಮಂಗಳವಾರವೂ ಇಸ್ರೇಲ್ ಬಾಂಬ್ ದಾಳಿ ಮುಂದುವರಿಸಿದ್ದು, ಅಲ್ಲಿನ ಪ್ಯಾಲೆಸ್ಟೀನಿಯನ್ನರು ಭಯಭೀತರಾಗಿದ್ದಾರೆ. ಗಾಜಾ ಪಟ್ಟಿಗೆ ನೀರು, ಆಹಾರ, ವಿದ್ಯುತ್ ಹಾಗೂ ಇತರ ಅಗತ್ಯ ವಸ್ತುಗಳ ಪೂರೈಕೆಯನ್ನು ಇಸ್ರೇಲ್ ಸ್ಥಗಿತಗೊಳಿಸಿದೆ.

ಆದರೆ, ‘ನಾಗರಿಕರಿಗೆ ಜೀವನಾವಶ್ಯಕ ವಸ್ತುಗಳು ಸಿಗದಂತೆ ಮಾಡಿ ಅವರ ಜೀವಕ್ಕೆ ಅಪಾಯ ತಂದೊಡ್ಡುವ ಕ್ರಮಗಳು ಅಂತರರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧ’ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮುಖ್ಯಸ್ಥ ವೊಲ್ಕರ್ ಟರ್ಕ್ ಹೇಳಿದ್ದಾರೆ.

ಇಸ್ರೇಲ್ ನಡೆಸುತ್ತಿರುವ ದಾಳಿಯು ಗಾಜಾದಲ್ಲಿನ ವಸತಿ ಕಟ್ಟಡಗಳನ್ನು ಮತ್ತು ಮಸೀದಿಗಳನ್ನು ನೆಲಸಮಗೊಳಿಸಿದೆ. ಗಾಜಾದ ಜಬಾಲಿಯಾ ನಿರಾಶ್ರಿತರ ಶಿಬಿರದಲ್ಲಿ ಸುಟ್ಟು ಕರಕಲಾದ ಹಲವು ದೇಹಗಳು ಪತ್ತೆಯಾಗಿವೆ. ಇಸ್ರೇಲ್ ವಾಯುದಾಳಿಗೆ ಪ್ಯಾಲೆಸ್ಟೀನ್‌ನ ಮೂವರು ಪತ್ರಕರ್ತರು ಮೃತಪಟ್ಟಿದ್ದಾರೆ.

ಇಸ್ರೇಲ್‌ಗೆ ಬೆಂಬಲವಾಗಿ ಮದ್ದುಗುಂಡು, ಸೇನಾ ಉಪಕರಣಗಳನ್ನು ರವಾನಿಸುವುದಾಗಿ ಅಮೆರಿಕ ಹೇಳಿದೆ. ಆದರೆ ತನ್ನ ಸೈನಿಕರನ್ನು ಕಾರ್ಯಾಚರಣೆಗೆ ನಿಯೋಜಿಸುವ ಉದ್ದೇಶ ಇಲ್ಲ ಎಂದು ತಿಳಿಸಿದೆ.

ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರು ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮದ್ ಅಬ್ಬಾಸ್ ಅವರ ಜೊತೆ ಮಾತುಕತೆ ನಡೆಸಿದ್ದು, ಈ ಬಿಕ್ಕಟ್ಟು ಇಡೀ ಮಧ್ಯಪ್ರಾಚ್ಯಕ್ಕೆ ಹರಡಂತೆ ನೋಡಿಕೊಳ್ಳುವ ಯತ್ನ ನಡೆಸಿರುವುದಾಗಿ ತಿಳಿಸಿದ್ದಾರೆ ಎಂದು ಮಾಧ್ಯಮಗಳು ಮಂಗಳವಾರ ವರದಿ ಮಾಡಿವೆ. ನಾಗರಿಕರ ಮೇಲೆ ವಿಪರೀತ ಬಲಪ್ರಯೋಗ ಮಾಡಬಾರದು ಎಂದು ಟರ್ಕಿ ಅಧ್ಯಕ್ಷ ರೆಸಿಪ್ ತಯ್ಯಿಪ್ ಎರ್ಡೊಗನ್ ಅವರು ಇಸ್ರೇಲ್‌ಗೆ ಎಚ್ಚರಿಕೆ ನೀಡಿದ್ದಾರೆ. ಹಮಾಸ್ ಮತ್ತು ಇಸ್ರೇಲ್ ಯುದ್ಧದ ನೀತಿಗಳನ್ನು ಪಾಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಸುಭಾಷಿತ

ನಿಮ್ಮ ಮನಸ್ಸು ಏನನ್ನಾದರೂ ಇಷ್ಟಪಡದೇ ಇದ್ದರೆ ಅದಕ್ಕೆ ಮನ್ನಣೆ ಕೊಡಿ.

–ವಿಲಿಯಂ ಷೇಕ್ಸ್‌ಪಿಯರ್

ಸರ್ಕಾರಿ ಶಾಲೆ ದುಃಸ್ಥಿತಿ: ಹೈಕೋರ್ಟ್ ತಿವಿತದಿಂದಲಾದರೂ ಎಚ್ಚೆತ್ತುಕೊಳ್ಳಿ

'ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಸರ್ಕಾರದ ನಿರ್ಲಕ್ಷ್ಯ ಧೋರಣೆ ಮುಂದುವರಿದಿದ್ದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದೆ' ಎನ್ನುವ ಹೈಕೋರ್ಟ್‌ನ ಅಭಿಪ್ರಾಯವು ನಮ್ಮ ಶೈಕ್ಷಣಿಕ ವ್ಯವಸ್ಥೆಗೆ ಹಿಡಿದ ಕೈಗನ್ನಡಿ. ಇದುವರೆಗೆ ರಾಜ್ಯದಲ್ಲಿ ಆಡಳಿತ ನಡೆಸಿರುವ ರಾಜಕೀಯ ಪಕ್ಷಗಳು ಶೈಕ್ಷಣಿಕ ಸುಧಾರಣೆ ಕುರಿತು ಪುಂಖಾನುಪುಂಖವಾಗಿ ಮಾತನಾಡಿದ್ದೇ ಬಂತು. ವಾಸ್ತವವಾಗಿ, ಶಾಲಾ ವಾತಾವರಣದಲ್ಲಿ ಹೇಳಿಕೊಳ್ಳುವಂತಹ ಸುಧಾರಣೆಗಳು ಆಗಿಲ್ಲ ಎನ್ನುವ ಕಹಿಸತ್ಯವನ್ನು ನಾವೆಲ್ಲ ಒಪ್ಪಿಕೊಳ್ಳಲೇಬೇಕು. ಇಂತಹ ವಿಷಮ ಸನ್ನಿವೇಶವೇ, 'ಸರ್ಕಾರಿ ಶಾಲೆಗಳಲ್ಲಿನ ಕೆಟ್ಟ ಪರಿಸ್ಥಿತಿ ಖಾಸಗಿ ಶಾಲೆಗಳ ಮಾಲೀಕರಿಗೆ ಇಂಬು ನೀಡಿದೆ. ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುವಂತಹ ಸನ್ನಿವೇಶ ಎದುರಾಗಿದೆ' ಎಂದು ನ್ಯಾಯಪೀಠ ಖಾರವಾಗಿ ಮಾತನಾಡುವಂತೆ ಮಾಡಿದೆ. ಶಾಲೆಗಳ ಅವ್ಯವಸ್ಥೆ ಕುರಿತು ನಡೆಯಲು ಎರಡು ಅಂಶಗಳು ಬಹುಮುಖ್ಯ. ಒಂದು, ಕೊಠಡಿಗಳು, ಶೌಚಾಲಯ, ಕುಡಿಯುವ ನೀರು ಸೇರಿದಂತೆ ಎಲ್ಲ ಮೂಲಸೌಕರ್ಯಗಳನ್ನೂ ಶಾಲೆಯು ಒಳಗೊಂಡಿರಬೇಕು. ಎರಡು, ಪಾಠ ಮಾಡಲು ಅಗತ್ಯವಾದ ಸಂಖ್ಯೆಯಷ್ಟು ಶಿಕ್ಷಕರು ಆ ಶಾಲೆಯಲ್ಲಿ ಲಭ್ಯರಿರಬೇಕು. ಈ ಎರಡೂ ವಿಚಾರಗಳಲ್ಲಿ ನಮ್ಮ ಸರ್ಕಾರಿ ಶಾಲೆಗಳು ಹಿಂದೆ ಬಿದ್ದಿರುವುದು ಹಲವು ಸಮೀಕ್ಷೆಗಳಿಂದ ನಿರೂಪಿತವಾಗಿದೆ. ಒಳ್ಳೆಯ ಶಿಕ್ಷಣ ಸಿಗುವುದು ಖಾತರಿ ಆಗದಿದ್ದಾಗ ಯಾವ ಪೋಷಕರಾದರೂ ಅಂತಹ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಷ್ಟಪಡುವುದಿಲ್ಲ. ಅಲ್ಲದೆ, ಸೌಲಭ್ಯಗಳ ಕೊರತೆಯಿಂದಾಗಿ ಸರ್ಕಾರಿ ಶಾಲೆಗಳನ್ನು ಮುಚ್ಚಿದ ಉದಾಹರಣೆಗಳೂ ಇವೆ. ಹಣಕಾಸಿನ ತೀವ್ರ ಸಮಸ್ಯೆ ಎದುರಿಸುತ್ತಿರುವ ಬಡ ಪೋಷಕರ ಮೇಲೆ ಇಂತಹ ಸನ್ನಿವೇಶಗಳು ತೀವ್ರ ರೀತಿಯಲ್ಲಿ ಒತ್ತಡವನ್ನು ಉಂಟು ಮಾಡುತ್ತವೆ. ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ವರ್ಗದ (ಇಡಬ್ಲ್ಯುಎಸ್) 23.97 ಲಕ್ಷ ಮಕ್ಕಳು ಖಾಸಗಿ ಶಾಲೆಗಳಿಗೆ ಪ್ರವೇಶ ಪಡೆದಿದ್ದಾರೆ ಎಂದು ಕೇಂದ್ರ ಸರ್ಕಾರದ ಸಮೀಕ್ಷೆಯಲ್ಲಿ ತಿಳಿಸಲಾಗಿದೆ. ಬಡವರು ತಮ್ಮ ಮಕ್ಕಳನ್ನು ಅನಿವಾರ್ಯವಾಗಿ ಖಾಸಗಿ ಶಾಲೆಗಳಿಗೆ ಸೇರಿಸುವಂತಹ ಪರಿಸ್ಥಿತಿ ಸೃಷ್ಟಿಯಾಗುತ್ತಿರುವುದು ಆಡಳಿತ ವ್ಯವಸ್ಥೆಯ ವೈಫಲ್ಯದ ಸಂಕೇತ ಎಂದೇ ಅರ್ಥೈಸಬೇಕಾಗುತ್ತದೆ. ಸಾವಿರಾರು ಮಕ್ಕಳು ಶಾಲೆಯಿಂದಲೇ ಹೊರಗುಳಿಯಲು ಈ ಸನ್ನಿವೇಶ ಕಾರಣವಾಗಿದೆ. ಹೀಗಾಗಿ, ಕೋರ್ಟ್‌ನಲ್ಲಿ ವಾದಿಸಲಾಗಿರುವಂತೆ 'ಸಂವಿಧಾನದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಿದ ಉದ್ದೇಶಕ್ಕೂ ಸೋಲಾಗುತ್ತಿದೆ'.

ಕೋರ್ಟ್‌ನಲ್ಲಿ ಮಾತು ಕೊಟ್ಟಿರುವಂತೆ, ಸರ್ಕಾರ ಎರಡು ತಿಂಗಳಿನಲ್ಲಿ ಶಾಲೆಗಳ ಸ್ಥಿತಿಗತಿ ಸಮೀಕ್ಷೆ ನಡೆಸಿ, ಅವುಗಳ ಆಮೂಲಾಗ್ರ ಸುಧಾರಣೆಗೆ ದೃಢ ಹೆಜ್ಜೆ ಇಡಬೇಕು

'ಯಾವ ಮಕ್ಕಳು ಸರ್ಕಾರಿ ಶಾಲೆಗೆ ಹೋಗುತ್ತಾರೆ ಎಂಬುದನ್ನು ಸಂಶೋಧನೆ ಮಾಡಿ ತಿಳಿಯಬೇಕಿಲ್ಲ. ಕಡುಬಡವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಾರೆ. ದುರದೃಷ್ಟ ಎಂದರೆ, ಇಂದು ಉಳ್ಳವರು ಎಲ್ಲ ಸೌಲಭ್ಯ ಪಡೆಯುತ್ತಿದ್ದಾರೆ. ಇಲ್ಲದವರಿಗೆ ಏನೂ ಇಲ್ಲ ಎಂಬಂತಾಗಿದೆ' ಎಂಬ ಕೋರ್ಟ್‌ನ ಮಾತು, ಶಿಕ್ಷಣ ಇಲಾಖೆಯ ಅಧಿಕಾರಿಗಳ ಹೃದಯಕ್ಕೆ ನಾಟಬೇಕು. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ–2009 ಹಾಗೂ ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳನ್ನು ಜಾರಿಗೊಳಿಸುವ ಸ್ಥಾನದಲ್ಲಿರುವ ಅವರು ತಮ್ಮ ಹೊಣೆಯಿಂದ ನುಣುಚಿಕೊಳ್ಳುವಂತಿಲ್ಲ. ಅನುಷ್ಠಾನ ಹಂತದಲ್ಲಿ ಆಗಿರುವ ಲೋಪಗಳು ಅಪಾರ ಸಂಖ್ಯೆಯ ಮಕ್ಕಳು ಶಾಲೆಯಿಂದ ಹೊರಗುಳಿಯುವಂತೆ ಮಾಡಿವೆ ಎಂಬ ಸಂಗತಿ ಅವರಲ್ಲಿ ಪಾಪಪ್ರಜ್ಞೆ ಕಾಡುವಂತೆ ಮಾಡಬೇಕು. ಅಮಿಕಸ್ ಕ್ಯೂರಿಯಿಂದ ಕೋರ್ಟ್‌ಗೆ ಸಲ್ಲಿಕೆಯಾದ ವರದಿ ಪ್ರಕಾರ, 464 ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಮತ್ತು 87 ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಈ ವ್ಯವಸ್ಥೆ ಮಾಡಲು ತುಂಬಾ ದೊಡ್ಡ ಬಾಬತ್ತೇನೂ ಬೇಕಾಗಿಲ್ಲ. ಸರ್ಕಾರ ಮನಸ್ಸು ಮಾಡಿದರೆ ಪಂಚಾಯಿತಿ ಮಟ್ಟದಲ್ಲೇ ಅನುದಾನ ಒದಗಿಸಿ, ತಿಂಗಳಿನಲ್ಲಿಯೇ ಸೌಲಭ್ಯ ಒದಗಿಸಲು ಸಾಧ್ಯ. ಆಡಳಿತ ಇಲ್ಲವೆ ವಿರೋಧ ಎಂಬ ಪಕ್ಷಭೇದವಿಲ್ಲದೆ ಹಲವು ಶಾಸಕರು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಭಾಗವಾಗಿ, ಅಲ್ಲಿ ಹಿತಾಸಕ್ತಿ ಹೊಂದಿರುವಾಗ ಸರ್ಕಾರಿ ಶಾಲೆಗಳ ಸುಧಾರಣೆಗಾಗಿ ಅವರು ಪ್ರಯತ್ನ ಮಾಡಿಯಾರು ಎನ್ನುವುದು ಹುಸಿ ನಿರೀಕ್ಷೆಯಾದೀತು. ಇಲ್ಲದಿದ್ದರೆ ಕಳೆದ ಐದು ವರ್ಷಗಳಲ್ಲಿ ಒಂದೇ ಒಂದು ಹೊಸ ಸರ್ಕಾರಿ ಶಾಲೆಯನ್ನೂ ತೆರೆಯದೆ ಇರುತ್ತಿರಲಿಲ್ಲ, ಸಾವಿರಾರು ಸಂಖ್ಯೆಯಲ್ಲಿ ಖಾಸಗಿ ಶಾಲೆಗಳೂ ತಲೆ ಎತ್ತುತ್ತಿರಲಿಲ್ಲ. 'ಪುಸ್ತಕ ಇಲ್ಲದ ಅಂಬೇಡ್ಕರ್ ಅವರ ಪುತ್ಥಳಿ ಅಥವಾ ಚಿತ್ರವನ್ನು ನೋಡಿದ್ದೀರಾ? ಶಿಕ್ಷಣದಿಂದ ಸಮಾನತೆ ಸಾಧ್ಯ ಎಂಬ ಕಾರಣಕ್ಕಾಗಿಯೇ ನಾವು ಅಂಬೇಡ್ಕರ್ ಅವರನ್ನು ಪುಸ್ತಕ ಹಿಡಿದಿರುವ ರೀತಿಯಲ್ಲಿ ಕಾಣುತ್ತೇವೆ' ಎಂಬ ನ್ಯಾಯಪೀಠದ ಮಾತು, ಜನಪ್ರತಿನಿಧಿಗಳ ಹೃದಯದ ಆಳಕ್ಕೂ ಇಳಿಯಬೇಕು. ಹಣ ಹೊಂದಿಸಲು ಆಗದವರೂ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವಂತಹ ವಾತಾವರಣ ನಿರ್ಮಾಣಗೊಳ್ಳಬೇಕು. ಅದಕ್ಕಾಗಿ ಸಂಸತ್ತು, ವಿಧಾನಸಭೆ ಬೇಕಾದಷ್ಟು ಕಾಯ್ದೆಗಳನ್ನು ಮಾಡಿವೆ ನಿಜ. ಆದರೆ, ಅನುಷ್ಠಾನದ ವಿಷಯದಲ್ಲಿ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತದೆ. ಕೋರ್ಟ್‌ನಲ್ಲಿ ಮಾತು ಕೊಟ್ಟಿರುವಂತೆ, ಸರ್ಕಾರ ಎರಡು ತಿಂಗಳಿನಲ್ಲಿ ಶಾಲೆಗಳ ಸ್ಥಿತಿಗತಿ ಸಮೀಕ್ಷೆ ನಡೆಸಿ, ಅವುಗಳ ಆಮೂಲಾಗ್ರ ಸುಧಾರಣೆಗೆ ದೃಢ ಹೆಜ್ಜೆ ಇಡುವ ಮೂಲಕ ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕು.

ದಿನದ ಟ್ವೀಟ್

ಎಲ್ಲಿ ಹೋಯಿತು ಮಾನವೀಯತೆ?

ಒಂದು ಕಣ್ಣಿಗೆ ಪ್ರತಿಯಾಗಿ ಮತ್ತೊಂದು ಕಣ್ಣನ್ನು ತೆಗೆಯುತ್ತಾ ಹೋದರೆ ಎಲ್ಲರೂ ಕುರುಡರಾಗುತ್ತಾರೆ ಎಂಬ ಗಾಂಧಿಯವರ ಎಚ್ಚರಿಕೆಯು ಗಾಜಾದಲ್ಲಿ ನಿಜವಾಗುತ್ತಿದೆ. ವಿಶ್ವಸಂಸ್ಥೆಯ ಮಾನವ ಹಕ್ಕು ಕಾರ್ಯಕರ್ತರ ಪ್ರಕಾರ, ಬರೀ 24 ಗಂಟೆಗಳಲ್ಲಿ 22 ಲಕ್ಷ ಪ್ಯಾಲೆಸ್ಟೀನಿಯನ್ನರನ್ನು 12 ಕಿ.ಮೀ. X 14 ಕಿ.ಮೀ. ಜಾಗದಲ್ಲಿ ನೀರು, ವಿದ್ಯುತ್ ಇಲ್ಲದೇ ಇರಿಸಲಾಗಿದೆ. ಬಾಂಬ್ ದಾಳಿಗಳ ನಡುವೆಯೂ 2 ಲಕ್ಷಕ್ಕೂ ಹೆಚ್ಚು ಮಂದಿ ಶಾಲೆಗಳಲ್ಲಿ ಆಶ್ರಯ ಪಡೆದಿದ್ದಾರೆ!

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ

ಮಾತೆತ್ತಿದರೆ ಸರ್ಕಾರಿ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮ ಪ್ರಾರಂಭಿಸುತ್ತೇವೆ ಎನ್ನುವ ಜನಪ್ರತಿನಿಧಿಗಳಿಂದ ಬೇರೇನು ನಿರೀಕ್ಷಿಸಲು ಸಾಧ್ಯ?

(ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ಹೈಕೋರ್ಟ್ ಕಿಡಿ ಕಾರಿರುವುದಕ್ಕೆ ಪ್ರತಿಕ್ರಿಯೆ)

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಭಾನುವಾರ, 11-10-1998

- **ಸುಷ್ಮಾ ಸ್ವರಾಜ್ ದೆಹಲಿ ಹೊಸ ಮುಖ್ಯಮಂತ್ರಿ**

ನವದೆಹಲಿ, ಅ. 10– ಜನಪ್ರಿಯತೆ ಮತ್ತು ವರ್ಚಸ್ಸು ಕಳೆದುಕೊಳ್ಳುತ್ತಿರುವ ಆತಂಕದಲ್ಲಿದ್ದ ಬಿಜೆಪಿಯು ಕೇಂದ್ರ ಸಚಿವೆ ಸುಷ್ಮಾ ಸ್ವರಾಜ್ ಅವರನ್ನು ನೂತನ ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡುವ ತೀರ್ಮಾನವನ್ನು ಕೈಗೊಳ್ಳುವ ಮೂಲಕ, ಮುಂದಿನ ತಿಂಗಳು ನಡೆಯುವ ದೆಹಲಿ ಚುನಾವಣೆಗೆ ಹೊಸ ಆಯಾಮ ನೀಡಿದೆ.

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಜತೆಗೆ ಸಂಪರ್ಕ ಖಾತೆಯನ್ನೂ ನಿರ್ವಹಿಸುತ್ತಿರುವ ಸುಷ್ಮಾ ಸ್ವರಾಜ್ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸುವ ಸಂಭವವಿದೆ. ಪದತ್ಯಾಗ ಮಾಡಬೇಕಾಗಿ ಬಂದ ಮುಖ್ಯಮಂತ್ರಿ ಸಾಹೀಬ್ ಸಿಂಗ್ ವರ್ಮಾ ತಮ್ಮ ಬದಲಾವಣೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 11-10-1973

- **ಕದನವಿರಾಮ ರೇಖೆ ದಾಟಿದ ಇಸ್ರೇಲ್ ಪಡೆ; ಯುದ್ಧ ಕಣಕ್ಕೆ ಇರಾಕ್**

ಪಶ್ಚಿಮ ಏಷ್ಯಾ ಯುದ್ಧದ ಐದನೇ ದಿನವಾದ ಬುಧವಾರ ಕದನವಿರಾಮ ರೇಖೆಯ ಸಿರಿಯಾ ಕಡೆಯೊಳಗಿನ ಪ್ರದೇಶದೊಳಗೆ ಹೋರಾಡುತ್ತಿರುವ ಇಸ್ರೇಲಿ ಪಡೆಗಳು ಗೋಲನ್ ಪರ್ವತ ವಲಯದಲ್ಲಿ 1967ರ ಕದನವಿರಾಮ ರೇಖೆ ದಾಟಿ ಹೋಗಿದ್ದರೆ, ಇನ್ನೊಂದು ಕಡೆ ರಣರಂಗಕ್ಕೆ ಇರಾಕಿ ಪಡೆ ಧಾವಿಸಿದೆ ಎಂಬ ಪ್ರಕಟಣೆಯೊಂದಿಗೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿಕೊಂಡಂತಾಗಿದೆ.

ತನ್ನ ವಿಮಾನಗಳು ಡಮಾಸ್ಕಸ್ ವಿಮಾನ ನಿಲ್ದಾಣದ ಮೇಲೆ ಬಾಂಬ್ ದಾಳಿ ಮಾಡಿದ್ದಾಗಿ ಇಸ್ರೇಲ್ ಪ್ರಕಟಿಸಿದೆ.

- **ಕಾವೇರಿ ಜಲ: ರಾಜ್ಯಗಳ ಬೇಡಿಕೆ ಹೊಂದಾಣಿಕೆಗೆ ಕೇಂದ್ರ ಅಧ್ಯಯನ**

ನವದೆಹಲಿ, ಅ. 10– ಲಭ್ಯವಿರುವ ಕಾವೇರಿ ನದಿ ನೀರಿನ ಪ್ರಮಾಣ ಅನುಸರಿಸಿ ಮೂರು ರಾಜ್ಯಗಳ ಬೇಡಿಕೆಗಳ ಹೊಂದಾಣಿಕೆ ಕುರಿತ ಕೇಂದ್ರದ ಅಧ್ಯಯನಕ್ಕೆ ತಮಿಳುನಾಡು, ಕೇರಳ ಮತ್ತು ಮೈಸೂರು ರಾಜ್ಯಗಳು ಇಂದು ಒಪ್ಪಿಕೊಂಡವು. ಸಚಿವ ಮಟ್ಟದ ಎರಡು ದಿನಗಳ ಮಾತುಕತೆ ಇಲ್ಲಿ ಮುಕ್ತಾಯಗೊಂಡಿತು.

- **ಕೃಷಿ ಕಾರ್ಮಿಕರ ವೇತನ ಏರಿಕೆ**

ಬೆಂಗಳೂರು, ಅ. 10– ಜೀವನವೆಚ್ಚ ಹೆಚ್ಚಿರುವುದರಿಂದ ರಾಜ್ಯ ಸರ್ಕಾರವು ಕನಿಷ್ಠ ವೇತನ ಕಾಯ್ದೆಯ ಕಲಮುಗಳನ್ವಯ ಅಕ್ಟೋಬರ್ 2ರಿಂದ ಕೃಷಿ ಕಾರ್ಮಿಕರ ಕನಿಷ್ಠ ವೇತನವನ್ನು ಪರಿಷ್ಕರಿಸಿದೆ.

ಈ ಪ್ರಕಾರ, ಹಸು, ಕುರಿ ಮತ್ತು ಮೇಕೆ ಮೇಯಿಸುವವರೂ ದಿನಕ್ಕೆ 1.30 ರೂಪಾಯಿ ಪಡೆಯಬಲ್ಲರು. ಈ ಮೊದಲು ಅವರು 75 ಪೈಸೆಯನ್ನು ಪಡೆಯುತ್ತಿದ್ದರು.

ಸನಾತನಧರ್ಮದ ಅಭಿವ್ಯಕ್ತಿ ಒಂದೊಂದು ಸಂಸ್ಕೃತಿಯಲ್ಲಿ ಒಂದೊಂದು 'ರೂಪ'ದಲ್ಲಿರುತ್ತದೆ

ಬುದ್ಧ ಉಪದೇಶಿಸಿದ್ದೂ ಸನಾತನಧರ್ಮವನ್ನೇ

ಅನುತ್ತರ

ಎಸ್. ಸೂರ್ಯಪ್ರಕಾಶ ಪಂಡಿತ್

ನ ಹಿ ವೇರೇನ ವೇರಾನಿ
ಸಮ್ಮಂತೀ ಧ ಕದಾಚನಜ್
ಅವೇರೇನ ಚ ಸಮ್ಮಂತಿ
ಯೇಸ ಧಮ್ಮೋ ಸನಾತನೋ

(ಈ ಲೋಕದಲ್ಲಿ ವೈರದಿಂದ ವೈರಗಳು ಎಂದಿಗೂ ಶಾಂತವಾಗುವುದಿಲ್ಲ; ಅವೈರದಿಂದಲೇ ಶಾಂತವಾಗುವುವು. ಇದೇ ಸನಾತನಧರ್ಮ.)

ಇದು ಬುದ್ಧ ಭಗವಂತನ ಉಪದೇಶ. ಅದನ್ನು ಅವನು 'ಸನಾತನಧರ್ಮ' ಎಂದು ಕರೆಯುತ್ತಿದ್ದಾನೆ. ಸನಾತನಧರ್ಮವನ್ನು ಕುರ್ಚೋದ್ಯ ಮಾಡುತ್ತಿರುವವರ ಪ್ರಕಾರ, ಬುದ್ಧ ಹೇಳುತ್ತಿರುವುದು 'ಬ್ರಾಹ್ಮಣಧರ್ಮ', 'ಶ್ರೇಣೀಕೃತ ಜಾತಿಪದ್ಧತಿ' ಎಂದಾಗುತ್ತದೆ. ಹಾಗಾದರೆ ಜಾತಿವ್ಯವಸ್ಥೆಯನ್ನು ಪ್ರತಿಪಾದಿಸುವುದು ಬುದ್ಧನ ಉಪದೇಶದ ಉದ್ದೇಶವೇ?

ಕೆಲವರು ನಿಘಂಟುಗಳಲ್ಲಿ 'ಸನಾತನ'ದ ಅರ್ಥವನ್ನು ಹುಡುಕುವಂಥ 'ಔದಾರ್ಯ'ವನ್ನೇನೋ ತೋರಿದರು; 'ಧರ್ಮ'ಕ್ಕೆ ಮಾತ್ರ 'ರಿಲಿಜನ್', 'ತಾರತಮ್ಯಪ್ರತಿಪಾದಕ ಆಚರಣೆಗಳು'– ಹೀಗೆ ತಮಗೆ ಬೇಕಾದ 'ಅರ್ಥ'ಗಳನ್ನು ಕಲ್ಪಿಸಿಕೊಂಡು, ಅವನ್ನು 'ಸನಾತನಧರ್ಮ'ದಲ್ಲಿ ತುರುಕಿ, ಅಪವ್ಯಾಖ್ಯೆಯನ್ನು ಹೊರಡಿಸುತ್ತಿದ್ದಾರೆ.

'ಪುರಾತನವಾದುದು', 'ಶಾಶ್ವತವಾದುದು' ಎಂಬುದು 'ಸನಾತನ'ದ ಪ್ರಮುಖ ಅರ್ಥ. ಆದರೆ 'ಧರ್ಮ'ಕ್ಕೆ ಇಷ್ಟು ಸುಲಭವಾಗಿ ಒಂದೆರಡು ಅರ್ಥಗಳನ್ನಷ್ಟೆ ಟಂಕಿಸಲಾಗದು. ಧಾರಣ ಮಾಡಿರುವುದು, ನಿಯಮ, ಆಚಾರ, ಪುರುಷಾರ್ಥಗಳಲ್ಲಿ ಒಂದು, ಕರ್ತವ್ಯ, ಯುಧಿಷ್ಠಿರ, ಗುಣ, ಸ್ವಭಾವ, ನ್ಯಾಯ, ದಾನ, ನಿಷ್ಠೆ, ಕರುಣೆ, ತೆರಿಗೆ, ಯಜ್ಞ– 'ಧರ್ಮ'ಕ್ಕೆ ಹೀಗೆ ಹತ್ತಾರು ಅರ್ಥಗಳುಂಟು. ಸಂದರ್ಭನಿಷ್ಠವಾಗಿಯೇ ಈ ಪದವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಧಾರಣ ಮಾಡುವುದು– ಎಲ್ಲವನ್ನೂ ಎತ್ತಿಹಿಡಿಯಬಲ್ಲ ಸಾಮರ್ಥ್ಯವುಳ್ಳದ್ದು– ಎನ್ನುವುದು ಮುಖ್ಯಾರ್ಥ. ಮನುಷ್ಯ ಜೀವನದಲ್ಲಿ ಮಾರ್ಗವಾಗಿಯೂ ಗುರಿಯಾಗಿಯೂ ಒದಗಬಲ್ಲ ರೀತಿ–ನೀತಿಗಳೂ ಅವುಗಳ ಸರಿ–ತಪ್ಪುಗಳ ವಿಶ್ಲೇಷಣೆಯೂ ಸೇರಿಕೊಂಡಂತಿರುವ ವಿವರಗಳೇ 'ಧರ್ಮ'. 'ಧರ್ಮ' ಮತ್ತು 'ಸನಾತನ' ಸೇರಿ 'ಸನಾತನಧರ್ಮ'ವಾಗಿದೆ.

'ಸನಾತನಧರ್ಮ'ದ ಅತ್ಯಂತ ಪ್ರಾಚೀನ ಬಳಕೆ ಬುದ್ಧನ ಮಾತಿನಲ್ಲಿದೆ. ಸನಾತನವನ್ನು 'ಬ್ರಾಹ್ಮಣಧರ್ಮ' ಎಂದಷ್ಟೆ ಪ್ರತಿಪಾದಿಸಹೊರಟರೆ ಆಗ ನಾವು ಬುದ್ಧನ ಉಪದೇಶಗಳನ್ನು 'ಬ್ರಾಹ್ಮಣಧರ್ಮ' ಎಂದೇ ಒಪ್ಪಬೇಕಾಗುತ್ತದೆಯಲ್ಲವೆ? ಆದರೆ ಇಲ್ಲಿ ಬುದ್ಧನು ಧ್ವನಿಸುತ್ತಿರುವುದಾದರೂ ಏನನ್ನು? 'ನಾನು ಹೇಳುತ್ತಿರುವ ಈ ಉಪದೇಶಗಳು ಶಾಶ್ವತವಾದ, ಎಂದೆಂದೂ ಇದ್ದ–ಇರುವ–ಇರಬೇಕಾದ ಮೌಲ್ಯಗಳು' ಎಂದೇ ಹೌದು. ಹೀಗೆ ಎಂದೆಂದೂ ಇರಬೇಕಾದ ಮೌಲ್ಯ–ತತ್ತ್ವಗಳೆಲ್ಲವೂ 'ಸನಾತನಧರ್ಮ'ದ ಸಂಗತಿಗಳೇ. ಇಷ್ಟು ವ್ಯಾಪಕವಾಗಿರುವ ಮೌಲ್ಯಗಳನ್ನು ಯಾವುದೋ ಒಂದು ದೇಶ–ಕಾಲ–ವರ್ಗಕ್ಕೆ ಸೀಮಿತವಾಗಷ್ಟೆ ಗ್ರಹಿಸುತ್ತಿರುವುದಕ್ಕೆ ಕಾರಣ ಅಂಥವರ ಅಪಮೌಲ್ಯಗೊಂಡ ತಿಳಿವಳಿಕೆಯೇ. ಮನುಷ್ಯನ ಒಳಿತನ್ನೂ ಒಲವನ್ನೂ ಎತ್ತಿಹಿಡಿಯುವ, ಎಲ್ಲೆಲ್ಲೂ ಇರುವ ತತ್ತ್ವವನ್ನೇ ಆನಂದ ಕುಮಾರಸ್ವಾಮಿಯವರಂಥ ದಾರ್ಶನಿಕರು, 'ಇದು ಭಾರತಕ್ಕಷ್ಟೆ ಸೀಮಿತವಾದ ವಿವರವಲ್ಲ' ಎಂದು ನಿರೂಪಿಸಿ, ಅದನ್ನು 'ಫಿಲಾಸಫಿಯಾ ಪೆರಿನಿಯಸ್' ಎಂದು ಒಕ್ಕಣಿಸಿದರು.

ವೈಶ್ವಿಕವಾದ ಸನಾತನಧರ್ಮದ ಅಭಿವ್ಯಕ್ತಿ ಒಂದೊಂದು ಸಂಸ್ಕೃತಿಯಲ್ಲಿ ಒಂದೊಂದು 'ರೂಪ'ದಲ್ಲಿ ತೋರಿಕೊಂಡಿರುತ್ತದೆ. ಭಾರತೀಯ ಪರಂಪರೆಯಲ್ಲಿ ಇದು ಪ್ರಮುಖವಾಗಿ 'ಪುರುಷಾರ್ಥ'ಗಳ ರೂಪದಲ್ಲಿ ಪ್ರಕಟಗೊಂಡಿದೆ. ಈ ಪುರುಷಾರ್ಥಗಳ ಮೀಮಾಂಸೆಯನ್ನು ವೇದ–ಉಪನಿಷತ್ತುಗಳು, ರಾಮಾಯಣ–ಮಹಾಭಾರತ, ಶಾಸ್ತ್ರಗಳು, ಬೌದ್ಧ–ಜೈನವಾಙ್ಮಯ, ವಚನ–ತತ್ತ್ವಪದಗಳು– ಇಂಥವುಗಳಲ್ಲಿ ಕಾಣುತ್ತೇವೆ. ಇವುಗಳಲ್ಲಿ ಸನಾತನಧರ್ಮದ ಮೌಲ್ಯಗಳ ವಿಚಾರ–ವಿಮರ್ಶೆಯೂ ನಡೆದಿದೆ. ಈ ವಿವರಗಳ ಆಧಾರದಿಂದ ಕಟ್ಟಿಕೊಂಡ ಜೀವನವಿಧಾನದಲ್ಲೂ ಸನಾತನಧರ್ಮದ ಕ್ರಿಯಾರೂಪಗಳು ಕಾಣಸಿಗುತ್ತವೆ. ಇವೆಲ್ಲ ಮಿಳಿತಗೊಂಡೇ 'ಭಾರತೀಯ ಸಂಸ್ಕೃತಿ' ರೂಪುಗೊಂಡಿರುವುದು. ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ, ಆನಂದ ಕುಮಾರಸ್ವಾಮಿ, ಗಾಂಧೀಜಿ ಮುಂತಾದ ಆಧುನಿಕರು 'ಹಿಂದೂಧರ್ಮ' ಎಂದು ವ್ಯವಹರಿಸಿದ್ದು ಸನಾತನಧರ್ಮ ಎಂಬ ಆತ್ಮದ ಈ ಶಾರೀರಿಕ ಸ್ವರೂಪವನ್ನೇ. ಸನಾತನ–ಸಂಸ್ಕೃತಿಯ ಅಮೂರ್ತತತ್ತ್ವಗಳು ಮೂರ್ತವಾಗಿ ಪ್ರಕಟ ಆಗುವುದು ಮಾನವರ ಮೂಲಕವೇ ಆದುದರಿಂದ ಅವುಗಳ ಶೈಥಿಲ್ಯವೂ ನಡೆದಿರುತ್ತದೆ. ಆದರೆ ಇದು ಮೌಲ್ಯಗಳ ಸಮಸ್ಯೆಯಲ್ಲ; ಅವು ಪ್ರಕಟವಾಗುವ ಮಾಧ್ಯಮಗಳಲ್ಲಿರುವ ಸಮಸ್ಯೆ. ಸಂವಿಧಾನ ಅಥವಾ ಕಾನೂನಿನ ಶಕ್ತಿ–ಔದಾರ್ಯಗಳನ್ನು ಕಂಡುಕೊಳ್ಳಬೇಕಾದದ್ದು ಈ ತತ್ತ್ವಗಳು ಎತ್ತಿಹಿಡಿಯುವ ಮೌಲ್ಯಗಳ ಮೂಲಕವೇ ಹೊರತು, ಅವನ್ನು ತಪ್ಪಾಗಿ ಪ್ರತಿನಿಧಿಸಿ, ಅನುಸರಿಸುವವರ ಮೂಲಕವಲ್ಲವಷ್ಟೆ. ಭಾರತೀಯ ಸಮಾಜದಲ್ಲಿಯ ದೋಷಗಳನ್ನು ಕುರಿತಂತೆ ಆತ್ಮಾವಲೋಕನವೂ ತಿದ್ದಿಕೊಳ್ಳುವ ಸುಧಾರಣೆಯ ಪ್ರಕ್ರಿಯೆಗಳೂ ನಿರಂತರವಾಗಿ ನಡೆಯುತ್ತ ಬಂದಿವೆ. ನಮ್ಮ ಕಾಲದಲ್ಲಿ ಅತ್ಯಂತ ಟೀಕೆಗೆ ಒಳಗಾಗಿರುವ ಮನುಸ್ಮೃತಿಯೂ 'ರಾಗದ್ವೇಷಗಳಿಂದ ಮುಕ್ತರಾದವರ ನಡವಳಿಕೆಯನ್ನೇ ಧರ್ಮ' ಎನ್ನುತ್ತದೆ; ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳ ಪರೀಕ್ಷೆಯಲ್ಲಿ ಧರ್ಮತತ್ತ್ವವು ಉತ್ತೀರ್ಣವಾಗಬೇಕು ಎನ್ನುತ್ತದೆ. ಇಲ್ಲೊಂದು ಮಾತು. 'ಮನುಸ್ಮೃತಿ' ಎಂದೂ ಪ್ರಾಚೀನ ಭಾರತದ ರೀತಿ–ನೀತಿಗಳ ಮೂಲಗ್ರಂಥ ಆಗಿರಲಿಲ್ಲ. ಸನಾತನಧರ್ಮ ಹೀಗೆ ಯಾವುದೋ ಒಂದು ಗ್ರಂಥ ಅಥವಾ ವ್ಯಕ್ತಿಯ ಆಧಾರದ ಮೇಲೂ ನಿಂತಿಲ್ಲ. ಇರಲಿ. ಹೀಗೆ ನಿರಂತರವಾಗಿ ಪರೀಕ್ಷೆಗೆ ತನ್ನನ್ನು ಒಡ್ಡಿಕೊಂಡು, ಶುದ್ಧವಾಗುತ್ತ, ಮನುಷ್ಯನ ಅಭ್ಯುದಯ–ನಿಃಶ್ರೇಯಸಗಳನ್ನು ಎತ್ತಿಹಿಡಿಯುವ ಸಾರ್ವಕಾಲಿಕ ಮೌಲ್ಯಗಳ ಸಂಹಿತೆಯೇ ಸನಾತನಧರ್ಮ. ಧರ್ಮದ ಜಿಜ್ಞಾಸೆ ನಿರಂತರವಾಗಿ ನಡೆಯುತ್ತಿರಬೇಕು ಎಂದು ಪರಂಪರೆ ಒತ್ತಾಯಿಸುತ್ತದೆ. ಇದೇ ನೆಲೆಯಲ್ಲಿಯೇ ಅಶೋಕನೂ 'ಶಾಸನ'ವಾಗಿ ಹೇಳಿದ್ದು: 'ಧರ್ಮದಾನಕ್ಕಿಂತಲೂ ಮಿಗಿಲಾದ ದಾನ ಮತ್ತೊಂದಿಲ್ಲ'. ಬುದ್ಧನ ಪ್ರಧಾನ ಉಪದೇಶಗಳನ್ನು 'ಆರ್ಯಸತ್ಯ'ಗಳೆಂದೂ, ಬುದ್ಧನನ್ನು 'ಧರ್ಮಕಾಯ'ನೆಂದೂ ಕರೆಯಲಾಗಿದೆ.

ನಮ್ಮ ಕಾಲದಲ್ಲೂ ಹಲವರು ಪ್ರಾಜ್ಞರು ಧರ್ಮಜಿಜ್ಞಾಸೆಯಲ್ಲಿ ತೊಡಗಿ, ಕಾಲಿಕವಾಗಿ 'ಹಿಂದೂಧರ್ಮ'ಕ್ಕೆ ಅಂಟಿರುವ ಕೊಳೆಗಳನ್ನು ಸ್ವಚ್ಛಮಾಡುತ್ತ, ಸನಾತನಧರ್ಮದ ಹೊಳಪನ್ನು ಎತ್ತಿಹಿಡಿದಿದ್ದಾರೆ. ಇಂಥವರಲ್ಲಿ ಗಾಂಧೀಜಿ ಕೂಡ ಒಬ್ಬರು. ಅವರು ತಮ್ಮನ್ನು 'ಸನಾತನಿ ಹಿಂದೂ' ಎಂದೇ ಕರೆದುಕೊಂಡಿದ್ದಾರೆ. ವೇದ, ಉಪನಿಷತ್, ಪುರಾಣಗಳಲ್ಲಿ ನಂಬಿಕೆ; 'ವೇದಪ್ರಣೀತ ವರ್ಣಾಶ್ರಮಧರ್ಮ'ದಲ್ಲಿ ನಂಬಿಕೆ; ಗೋರಕ್ಷಣೆಯಲ್ಲಿ ನಂಬಿಕೆ; ವಿಗ್ರಹಾರಾಧನೆಯಲ್ಲಿ ನಂಬಿಕೆ. ಇವು ಅವರು ಸ್ವೀಕರಿಸಿದ ಹಿಂದೂಧರ್ಮದ ನಾಲ್ಕು ಲಕ್ಷಣಗಳ ಸಾರಾಂಶ. ಅವರ ವ್ಯಾಖ್ಯಾನದಲ್ಲಿ ಹಳೆಯ ವಿವರಗಳ ಜೊತೆಗೆ ಸುಧಾರಣೆಯ ಅಂಶಗಳೂ ಇವೆ. ಇಂಥ ಸುಧಾರಣೆಗಳು ವೇದಗಳ ಕಾಲದಿಂದ ಈ ದಿನದ ತನಕವೂ ನಡೆಯುತ್ತಲೇ ಬಂದಿವೆ.

ಇನ್ನು ಸನಾತನಧರ್ಮ, ಹಿಂದೂ ಮತ್ತು ಹಿಂದುತ್ವಗಳ ಸಂಬಂಧಸೂತ್ರ. ಸನಾತನಧರ್ಮವನ್ನು ಆತ್ಮ ಎಂದು ಗುರುತಿಸಿದರೆ, ನಮ್ಮ ದೇಶದ ಸಂದರ್ಭದಲ್ಲಿ ಅದಕ್ಕೆ ಆಶ್ರಯವಾಗಿರುವ ದೇಹವನ್ನು 'ಹಿಂದೂ' ಎನ್ನಬಹುದು. ದಿಟ, ಆತ್ಮದ ನಾಶ ಯಾರಿಂದಲೂ ಸಾಧ್ಯವಿಲ್ಲ; ಆದರೆ ಶರೀರದ ಮೇಲೆ ದಾಳಿ ಸಾಧ್ಯ. ಇಂಥ ದಾಳಿ ಹೊರಗಿನವರಿಂದಲೂ, ಒಳಗಿನವರಿಂದಲೂ ನಡೆದಿದೆ, ನಡೆಯುತ್ತಲೂ ಇದೆ. ಒಂದು ಕಾಲದಲ್ಲಿ ಹಿಂದೂಸಂಸ್ಕೃತಿಯ 'ಶಾರದಾಪೀಠ'ವಾಗಿದ್ದ ಕಾಶ್ಮೀರದ ಇಂದಿನ ಸ್ಥಿತಿಯನ್ನು ನೋಡಿದರೆ ಹೊರಗಿನ ಆಕ್ರಮಣಗಳ ಸುಳಿವು ದೊರೆಯುತ್ತದೆ. ಹೀಗೆಯೇ ಜಾತಿವ್ಯವಸ್ಥೆಯ ಶ್ರೇಷ್ಠ–ಕನಿಷ್ಠಗಳ ಗೊಡವೆಗಳಲ್ಲಿ ಒಳಗಿನ ವ್ರಣಗಳೂ ಗೊತ್ತಾಗುತ್ತವೆ. ಸನಾತನಧರ್ಮವು ನಿಕೃಷ್ಟವಾಗಿದೆಯೆಂದೂ, ಹೀಗಾಗಿ ಅದನ್ನು ನಿರ್ನಾಮ ಮಾಡುವುದೇ ತಮ್ಮ ಕರ್ತವ್ಯವೆಂದೂ ಭಾವಿಸಿಕೊಂಡ ಮತಾಂತರದ ಉದ್ಯಮಿಗಳೂ ಇಲ್ಲಿ ನೂರಾರು ವರ್ಷಗಳಿಂದ ಕ್ರಿಯಾಶೀಲರಾಗಿದ್ದಾರೆ. ಇವುಗಳ ಮಧ್ಯೆ, ಶರೀರದ ಗಾಯಗಳನ್ನು ಉಪಚರಿಸುತ್ತೇನೆಂದು ಹೇಳುತ್ತಿರುವ 'ಹಿಂದುತ್ವ' ಎಂಬ ಹೊಸ ಮುಲಾಮೊಂದು ಸಮಾಜದಲ್ಲಿದೆ. ಇದು ಗಾಯಗಳನ್ನು ವಾಸಿಮಾಡುತ್ತದೆಯೋ ಉಲ್ಬಣಗೊಳಿಸುತ್ತದೆಯೋ ಎಂಬುದನ್ನು ಕಾಲವೇ ಹೇಳಬೇಕು. ಆದರೆ ಸದ್ಯ 'ಶರೀರಕ್ಕೆ ಅಪಾಯವೂ ಇಲ್ಲ' ಎಂದು ಯಾರಾದರೂ ಹೇಳಿದರೆ ಅದು ಅಜ್ಞಾನವೇ ಆಗುತ್ತದೆಯೆನ್ನಿ!

ಚುರುಮುರಿ

ಪದಕ- ಪರೀಕ್ಷೆ

• ಕೆ.ವಿ.ರಾಜಲಕ್ಷ್ಮಿ

'ಇಷ್ಟು ದಿನ ಏಷ್ಯನ್ ಗೇಮ್ಸ್ ಆಯ್ತು, ಇನ್ನು ಕ್ರಿಕೆಟ್, ನಿಮ್ಮನ್ನು ಮಾತಾಡ್ಸೋ ಹಾಗಿಲ್ಲ, ಟೀವಿಲೇ ಮುಳುಗಿಬಿಡ್ತೀರಿ' ನನ್ನವಳು ಕೆಣಕಿದಳು.

'107 ಪದಕಗಳಲ್ಲಿ 28 ಚಿನ್ನ... ಶತಕಗಳ ಭರಾಟೆ ಶುರು, ಕ್ರಿಕೆಟ್ ಆಚೆಗೂ ಹೋಗಿ ಗೇಮ್ಸ್‌ನಲ್ಲಿ ಬಂದಿರೋದು ಎಷ್ಟು ಚಂದ, ಸಿಂಗಾರ ಸಿರಿಯೆ, ಬಂಗಾರ ಗರಿಯೆ' ಪುಟ್ಟಿಯ ಸಂಭ್ರಮ.

'ನಿಮ್ಮ ಧಾರಾವಾಹಿಗಳ ಹಾಗೆ ಎಳೆಯೋಲ್ಲ. ಪಂದ್ಯದ ಅಂತ್ಯದಲ್ಲಿ ಸೋಲೋ ಗೆಲುವೋ ಕೊನೆಗೆ ಡ್ರಾನೋ ಏನೋ ಒಂದು ನಿರ್ಧಾರವಾಗುತ್ತೆ' ನಾನೆಂದೆ.

'ಶತಕ ಅಂದಕೂಡಲೇ ನೆನಪಾಯ್ತು, ಬದುಕಿರೋವ್ರನ್ನು ಸಾಯಿಸೋ ಈ ಸುಳ್ಳು ಸುದ್ದಿ ಹುಟ್ಟಿಸೋವ್ರಿಗೆ ಹೇಗೆ ಬುದ್ಧಿ ಕಲಿಸಬೇಕೋ? ಓಂ ಶಾಂತಿ ಸಂದೇಶಗಳು ಬಿದ್ದಿದ್ದೂ ಬಿದ್ದಿದ್ದೇ' ಅತ್ತೆ ಕಿಡಿಕಾರಿದರು.

'ನಿಜ, ಹುಷಾರಿಲ್ಲ ಅಂತ ಆಸ್ಪತ್ರೆಗೆ ಸೇರಿದ ಕೂಡಲೇ ಅದೇನು ಊಹಾಪೋಹ! ಪಾಪ, ಈ ಬಾರಿ ಸಾಲುಮರದ ತಿಮ್ಮಕ್ಕನ ಹೆಸರು' ನನ್ನವಳೂ ಬೇಸರಗೊಂಡಳು.

'ಕೇಂದ್ರ ಪಠ್ಯಕ್ರಮದಲ್ಲಿ ಹತ್ತು, ಹನ್ನೆರಡನೇ ತರಗತಿಯವರಿಗೆ ಎರಡು ಪರೀಕ್ಷೆಯಂತೆ, ಐಚ್ಛಿಕವಂತೆ, ಏನೂ ಅರ್ಥವಾಗದು. ಸದ್ಯ ಒಂದನ್ನು ಎದುರಿಸೋದೇ ಕಷ್ಟ' ಅತ್ತೆ ಪೇಪರಿನಲ್ಲಿ ಕಣ್ಣಾಡಿಸಿದರು.

'ನಮ್ಮಲ್ಲಿ ಮೂರು ಪರೀಕ್ಷೆಗಳು. ಅಜ್ಜೀ... ಬೆಸ್ಟ್ ಆಫ್ ಥ್ರೀ. ಸಾವಕಾಶವಾಗಿ ಬೇಕಾದ ವಿಷಯವನ್ನು ಹೆಚ್ಚು ವಿಶ್ವಾಸದಿಂದ ಬರೆಯಬಹುದು' ಪುಟ್ಟಿ ಹಲ್ಕಿರಿದಳು.

ಅಷ್ಟರಲ್ಲೇ ಕಂಠಿ ಬಂದ 'ಪಟಾಕಿ ಚೀಟಿ ಮುಗೀತು' ರಸೀತಿ ಕೊಟ್ಟ. 'ಏನು ಪಟಾಕಿ ಹೊಡೆಯೋದು? ನಡೆದಿರೋ ದುರಂತ ಸಾಲದೇ?' ಅತ್ತೆ ಅತ್ತಿಬೆಲೆ ಅವಘಡ ನೆನೆದು ಸಿಡಿಯತೊಡಗಿದರು.

'ಪಟಾಕಿ ಬದಲು ಸಿಂಥೆಟಿಕ್ ಸೀರೆ ಕೊಡ್ತಾರೆ. ಅದು ಬೇಡ ಅಂದ್ರೆ, ಮೇಲೆ ಒಂಚೂರು ದುಡ್ಡು ಕೊಟ್ರೆ ಒಳ್ಳೆ ರೇಷ್ಮೆ ಸೀರೆ...' ಕಂಠಿಯಿಂದ ಕ್ಲಾರಿಟಿ.

'ಅಯ್ಯೋ! ಕೊಟ್ಟರಾಯ್ತು, ಅದಕ್ಕೇನಂತೆ, ಅಲ್ವೇ?' ನನ್ನವಳು ನನ್ನತ್ತ ನೋಡಿದಾಗ ಹೊಸ ಪರೀಕ್ಷೆ ಎದುರಿಸುವಂತಾಯಿತು.

ಚರ್ಚೆ

ಫಲವತ್ತಾಗಿದೆ ಕನ್ನಡ ಭಾಷಾ ಭೂಮಿ

ಮಕ್ಕಳಿಗೆ ಭಾಷೆ ಕಲಿಸುವ ಹೊಣೆ ತಮ್ಮದು ಎನ್ನುವುದಕ್ಕಿಂತ, ಪಾಠಗಳಲ್ಲಿನ ಅರ್ಥ ತಿಳಿಸಿದರೆ ಸಾಕು ಎಂಬುದೇ ಬಹುಪಾಲು ಭಾಷಾ ಬೋಧಕರ ಗ್ರಹಿಕೆಯಾಗಿರುವುದು ದುಃಖದ ಸಂಗತಿ

• ಪು.ಸೂ.ಲಕ್ಷ್ಮೀನಾರಾಯಣ ರಾವ್

'**ಕನ್ನಡ** ಪಠ್ಯಪುಸ್ತಕದ ಮೂಲಕ ಕನ್ನಡ ಭಾಷೆ ಬಿಟ್ಟು ಬೇರೆಲ್ಲವನ್ನೂ ಕಲಿಸಲಾಗುತ್ತಿದೆ!' ಎಂಬ ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ ಅವರ ಲೇಖನ (ಸಂಗತ, ಅ. 6) ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಕನ್ನಡ ಭಾಷಾ ಬೋಧನೆಗೆ ಸಂಬಂಧಿಸಿದಂತೆ ನೂರಕ್ಕೆ ನೂರರಷ್ಟು ಸತ್ಯ ಮತ್ತು ವಿಷಾದಕರವಾದ ಸಂಗತಿಯಾಗಿದೆ.

ನಾನು ವೃತ್ತಿನಿರತನಾಗಿದ್ದ ಪ್ರೌಢಶಾಲೆಯಲ್ಲಿ ನಾಲ್ಕು ಮಂದಿ ಕನ್ನಡ ಮೇಷ್ಟ್ರುಗಳಿದ್ದೆವು. ಪ್ರತಿವರ್ಷವೂ ಎಸ್‌ಎಸ್‌ಎಲ್‌ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಶೇ 95ಕ್ಕಿಂತ ಹೆಚ್ಚಿನ ಫಲಿತಾಂಶವೇ ಬರುತ್ತಿತ್ತು. ನಮ್ಮಲ್ಲಿ ಕಾಲೇಜುಗಳಲ್ಲಿ ಇದ್ದ ಹಾಗೆ ಒಂದೊಂದು ವಿಷಯಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಕೊಠಡಿ ಇರುತ್ತಿತ್ತು. ಒಂದು ದಿನ ನಾಲ್ಕೂ ಮಂದಿ ಡಬ್ಬಿ ತೆಗೆದು ಊಟ ಮಾಡುತ್ತಿದ್ದಾಗ ನಾನು, 'ನಾವು ಪುಸ್ತಕದಲ್ಲಿನ ಗದ್ಯ, ಪದ್ಯಗಳ ಅರ್ಥವನ್ನು ಬಿಡಿಸಿ ಹೇಳುತ್ತಿದ್ದೇವೆಯೇ ವಿನಾ ಭಾಷಾ ಬೋಧನೆ ಮಾಡುತ್ತಿಲ್ಲ' ಅಂದೆ. ಆಗ ಉಳಿದವರೂ ಬೇಸರದಿಂದಲೇ ನನ್ನ ಮಾತನ್ನು ಸಮ್ಮತಿಸಿದರು.

ಮಕ್ಕಳಿಗೆ ಭಾಷೆಯನ್ನು ಕಲಿಸುವ ಹೊಣೆ ತಮ್ಮ ಮೇಲಿದೆ ಎನ್ನುವುದಕ್ಕಿಂತ ಪಾಠಗಳಲ್ಲಿರುವ ಅರ್ಥವನ್ನು ತಿಳಿಸಿದರೆ ಸಾಕು ಎಂಬುದೇ ಬಹುಪಾಲು ಭಾಷಾ ಬೋಧಕರ ಗ್ರಹಿಕೆಯಾಗಿರುವುದು ದುಃಖದ ಸಂಗತಿಯಾಗಿದೆ. ಇಲ್ಲಿ ಶಿಕ್ಷಕರನ್ನೇ ನಾವು ಪೂರ್ಣವಾಗಿ ದೂಷಿಸಲಾಗದು. ಅವರು ನಿಗದಿತ ಸಮಯದಲ್ಲಿ ಪಾಠಗಳನ್ನು ಮುಗಿಸಿ, ಪರೀಕ್ಷೆ - ಮೌಲ್ಯಮಾಪನ ಹಾಗೂ ವಿದ್ಯಾರ್ಥಿಗಳು ಮಾಡಿರುವ ಮನೆಗೆಲಸದ ಪರಿಶೀಲನೆ ಮಾಡಬೇಕಾಗಿರುತ್ತದೆ. ಹಾಜರಾತಿ, ಅಂಕಿಅಂಶ ದಾಖಲಾತಿಯಂತಹ ಕೆಲಸಗಳು, ಪೋಷಕರ ಸಂದರ್ಶನದಂತಹ ಬೋಧಕೇತರವಾದ ಕೆಲಸಗಳೂ ಬಹಳಷ್ಟಿರುತ್ತವೆ. ಮಕ್ಕಳ ಗಣತಿ, ಚುನಾವಣೆ ಕಾರ್ಯ, ಶಾಲೆಯನ್ನು ಬಿಡುವ ಮಕ್ಕಳ ಮಾಹಿತಿ ಸಂಗ್ರಹ, ಬಿಸಿಯೂಟ ನಿರ್ವಹಣೆಯ ಕಾರ್ಯಗಳೂ ಇರುತ್ತವೆ. ಹೀಗಾಗಿ, ಬೋಧನೆಯಷ್ಟೇ ಗುಮಾಸ್ತರ ಕೆಲಸವನ್ನೂ ನಿಭಾಯಿಸಬೇಕಾಗುತ್ತದೆ.

ಈ ನಡುವೆ 'ಪೋರ್ಷನ್ ಕವರ್' ಮಾಡುವುದೇ ಕಷ್ಟವಾಗಿಬಿಡುತ್ತದೆ. ಆದ್ದರಿಂದ ಯಾರೂ ಕೇಳದ ಭಾಷಾ ಕೌಶಲವನ್ನು ಕಲಿಸುವ ಯೋಚನೆಯನ್ನು ಶಿಕ್ಷಕರು ಸಹ ಮಾಡುವುದಿಲ್ಲ. ಒಟ್ಟಿನಲ್ಲಿ ಭಾಷಾ ಕಲಿಕೆಯ ವಿಷಯದಲ್ಲಿ 'ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?' ಎಂಬಂತಾಗಿದೆ ಪ್ರಸ್ತುತ ಪರಿಸ್ಥಿತಿ. ನಾವಿಂದು ಕನ್ನಡ ಪಾಠ ಮಾಡುತ್ತಿರುವುದಕ್ಕೂ ಕನ್ನಡ ಭಾಷೆಯನ್ನು ಕಲಿಸುವುದಕ್ಕೂ ತುಂಬಾ ವ್ಯತ್ಯಾಸವಿದೆ. ಓದುವ ಮತ್ತು ಬರೆಯುವ ಕಲೆಗೆ ವಿಶೇಷ ಗಮನ ನೀಡಬೇಕಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ಪದೇಪದೇ ಗದ್ಯ, ಪದ್ಯಗಳ ವಾಚನ ಮಾಡಿಸಬೇಕಾಗುತ್ತದೆ. ಬರವಣಿಗೆಗೆ ಸಂಬಂಧಿಸಿದ ಹಾಗೆ ಉಕ್ತಲೇಖನದ ಪದ್ಧತಿ ಬಹಳ ಪರಿಣಾಮಕಾರಿ. ಇಂತಹ ಸಂದರ್ಭದಲ್ಲಿ ಶಿಕ್ಷಕರು ಒಬ್ಬೊಬ್ಬ ವಿದ್ಯಾರ್ಥಿಯ ಪಕ್ಕದಲ್ಲಿ ಕುಳಿತು ಕಾಗುಣಿತ ದೋಷವನ್ನು ತಿಳಿಯಪಡಿಸಿ ಸರಿಯಾದ ರೂಪವನ್ನು ಬರೆದು ತೋರಿಸಬೇಕಾಗುತ್ತದೆ. ಉದಾಹರಣೆಗೆ: ವಿದ್ಯಾರ್ಥಿಗಳು ಸಾಮಾನ್ಯವಾಗಿ 'ನಾನು' ಎಂಬುದಕ್ಕೆ 'ನನು' ಎಂದು ಬರೆದಿರುತ್ತಾರೆ. ಅದಕ್ಕೆ ಕಾರಣ, ಮಕ್ಕಳು ಇಡೀ ಪದವನ್ನು ಗ್ರಹಿಸದೆ ಒಂದೊಂದೇ ಅಕ್ಷರವನ್ನು ಬಾಯಲ್ಲಿ ಹೇಳಿಕೊಂಡು ಬರೆಯುತ್ತಾ ಹೋಗುತ್ತಾರೆ. ಮಕ್ಕಳಿಗೆ ಹ್ರಸ್ವ ಮತ್ತು ದೀರ್ಘ ಸ್ವರಗಳು, ಒತ್ತಕ್ಷರ, ಅಲ್ಪಪ್ರಾಣ, ಮಹಾಪ್ರಾಣಗಳ ಬಳಕೆಯನ್ನು ಶಿಕ್ಷಕರು ಉಚ್ಚರಿಸಿ ಮನದಟ್ಟು ಮಾಡಿಸಬೇಕಾಗುತ್ತದೆ.

ಕನ್ನಡ ಶಿಕ್ಷಕರಿಗೆ ಮಕ್ಕಳನ್ನು ಮುದಗೊಳಿಸಲು ಮತ್ತು ಆಕರ್ಷಿಸಲು ಆಕರವಾಗಿ ಅವರ ಮುಂದೆ ಅಪಾರವಾದ ಸಾಹಿತ್ಯ ರಾಶಿಯೇ ಇದೆ. ಕನ್ನಡ ಕಾವ್ಯ ಒಂದು ಅಕ್ಷಯ ಪಾತ್ರೆ, ತವನಿಧಿ. ಶಿಕ್ಷಕ ತನ್ನ ಸಾಮರ್ಥ್ಯ ಇದ್ದಷ್ಟೂ ಕೃಷಿ ಮಾಡಲು ಕನ್ನಡ ಭಾಷಾ ಭೂಮಿ ಫಲವತ್ತಾಗಿದೆ. ಭಾಷಾ ಶಿಕ್ಷಕ ರಜೆಯ ಸಂದರ್ಭದಲ್ಲಿ ತನಗಾದ ಅನುಭವಗಳೆಲ್ಲವನ್ನೂ ತರಗತಿಯಲ್ಲಿ ಭಾಷಾ ಕಲಿಕೆಯ ಸಲುವಾಗಿ ಮಕ್ಕಳೊಂದಿಗೆ ಸಂಭಾಷಿಸುತ್ತ ಅವರಿಗೆ ಅರಿವಿಲ್ಲದಂತೆಯೇ ಅವರಲ್ಲಿ ಭಾಷಾ ಜ್ಞಾನವನ್ನು ಅರಳಿಸಬಹುದಾಗಿದೆ. ಆಗ ಅವರಲ್ಲಿ ಪುಸ್ತಕಗಳನ್ನು ಕೊಂಡು ಓದುವ ಸ್ವಭಾವ ರೂಢಿಯಾಗುತ್ತದೆ. ಈ ಕಾರಣದಿಂದ, ಭಾಷಾ ಚಟುವಟಿಕೆಗಳಿಗೆ ಪ್ರಾಧಾನ್ಯ ಕೊಡುವ ಪಠ್ಯಪುಸ್ತಕಗಳು ರಚನೆಯಾಗಬೇಕಾಗಿದೆ.



ವ್ಯಾಕರಣ, ಛಂದಸ್ಸು, ಅಲಂಕಾರಗಳನ್ನು ಯಥೋಚಿತವಾಗಿ ಭಾಷಾ ವೈಶಿಷ್ಟ್ಯಗಳನ್ನು ಅರಿಯಲು ಮಾತ್ರ ಪಠ್ಯಪುಸ್ತಕಗಳಲ್ಲಿ ನಿಗದಿಗೊಳಿಸಬೇಕಾಗುತ್ತದೆ. ಆಗ ಭಾಷಾ ಕಲಿಕೆ ಆನಂದದಾಯಕವಾದ ಯಾನವಾಗುತ್ತದೆ. ಹಾಗೆ ಆಗದೆ ಇರುವುದರಿಂದಲೇ ಇಂದು ಅನೇಕ ಪದವೀಧರರು ಕೂಡ ಕನ್ನಡದಲ್ಲಿ ಒಂದು ಸಣ್ಣ ಅರ್ಜಿಯನ್ನು ಸಹ ಬರೆದುಕೊಡಲು ಹಿಂಜರಿಯುತ್ತಾರೆ. ತಪ್ಪಾದರೂ ಸರಿಯೆ ಇಂಗ್ಲಿಷ್‌ನಲ್ಲಿ ಬರೆಯುತ್ತಾರೆ. 'ನನಗೆ ಕನ್ನಡ ಅಷ್ಟು ಅಭ್ಯಾಸ ಇಲ್ಲ' ಎಂದು ಒಂದು ರೀತಿಯ ಹೆಮ್ಮೆಯಿಂದ ಹೇಳುತ್ತಾ ತಮ್ಮ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಾರೆ. ವಾಸ್ತವದಲ್ಲಿ, ಯಾವ ಭಾಷೆಯೂ ಚೆನ್ನಾಗಿ ಮೈಗೂಡಿಕೊಳ್ಳದೆ, ತಮಗೆ ಇಷ್ಟವಾದ ವಿಷಯಗಳ ಬಗೆಗಿನ ಉತ್ತಮ ಪುಸ್ತಕಗಳನ್ನು ಓದಿ ಜ್ಞಾನವನ್ನು ಹೆಚ್ಚಿಸಿಕೊಳ್ಳಲಾಗದೆ, ಯಾರದೋ ಮಾತುಗಳನ್ನು, ವಿಡಿಯೊಗಳನ್ನು ಫಾರ್ವರ್ಡ್ ಮಾಡಿಕೊಂಡು ಸ್ವಂತಿಕೆಯನ್ನು ರೂಪಿಸಿಕೊಳ್ಳಲಾಗದೆ ನಷ್ಟಚೇತನರಾಗುತ್ತಾರೆ.

ವಾಚಕರ ವಾಣಿ

ಗಣತಿ ಊರುಗೋಲಾಗಲಿ

ಜನಗಣತಿ, ಜಾತಿ ಜನಗಣತಿ, ಸಾಮಾಜಿಕ ಸ್ಥಿತಿಗತಿ ಗಣತಿ, ಆರ್ಥಿಕ ಸಾಕ್ಷರತಾ ಗಣತಿ, ಮೀಸಲಾತಿ (ರಾಜಕೀಯ, ಶಿಕ್ಷಣ, ಉದ್ಯೋಗ) ಪಡೆದ ಕುಟುಂಬದ ಗಣತಿ ಇವು ಕಾಲಕಾಲಕ್ಕೆ ಸರಿಯಾಗಿ ನಡೆದರೆ, ನಿಖರ ದತ್ತಾಂಶದ ಮೂಲಕ ವಂಚಿತರಿಗೆ ಅವಕಾಶ ಕಲ್ಪಿಸಲು 'ಊರುಗೋಲು' ಆಗುತ್ತವೆ. ಇಲ್ಲದಿದ್ದರೆ, ಉಳ್ಳವರ 'ಬಾರುಕೋಲು' ಆಗುತ್ತವೆ. ಹಾಗಾಗಿ, ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಸಾರ್ವಜನಿಕ ಹಣ ಖರ್ಚು ಮಾಡಿ ಸಿದ್ಧಪಡಿಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿ ಕುರಿತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು. ಈ ಮೂಲಕ, ರಾಜ್ಯ ಸರ್ಕಾರ ಹೊಸ ಯೋಜನೆ ರೂಪಿಸಲು ಅನುವು ಮಾಡಿಕೊಡಬೇಕು.

ಎಂ.ಮಂಚಶೆಟ್ಟಿ, ಕಡಿಲುವಾಗಿಲು

ಬಡಾವಣೆ ಅಭಿವೃದ್ಧಿ: ಕಾಲಮಿತಿ ಬೇಕು

ಕರ್ನಾಟಕ ಗೃಹ ಮಂಡಳಿಯು ಕೆಲವು ಊರುಗಳಲ್ಲಿ ಬೇಡಿಕೆ ಆಧಾರದ ಮೇಲೆ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು 'ಬೇಡಿಕೆ ಸಮೀಕ್ಷೆ'ಯನ್ನು ನಡೆಸುತ್ತದೆ. ಇದೇ ಸಮಯದಲ್ಲಿ ನಿವೇಶನ ಅಥವಾ ಮನೆಯ ಬೆಲೆಯನ್ನೂ ನಿಗದಿಪಡಿಸಲಾಗುತ್ತದೆ. ಹಿಂದಿರುಗಿಸಲಾಗದ ಅರ್ಜಿ ನೋಂದಣಿ ಶುಲ್ಕದೊಂದಿಗೆ ನಿಗದಿತ ಪ್ರಮಾಣದ ಬಡ್ಡಿರಹಿತ ಆರಂಭಿಕ ಠೇವಣಿ ಪಾವತಿಸಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಬಳಿಕ ಬಡಾವಣೆ ಅಭಿವೃದ್ಧಿಪಡಿಸಲು ಹಲವಾರು ವರ್ಷಗಳೇ ತಗಲುತ್ತವೆ. ಕೆಲವು ಊರುಗಳಲ್ಲಿ ಬೇಡಿಕೆ ಸಮೀಕ್ಷೆಯ ನೆಪದಲ್ಲಿ ಅರ್ಜಿಗಳನ್ನು ಸ್ವೀಕರಿಸಿ ದಶಕಗಳೇ ಕಳೆದಿದ್ದರೂ ಬಡಾವಣೆಯನ್ನು ಅಭಿವೃದ್ಧಿಪಡಿಸಿಲ್ಲ. ನಿವೇಶನ ಅಥವಾ ಮನೆ ಹೊಂದುವ ಆಸೆಯಿಂದ ಅರ್ಜಿ ಸಲ್ಲಿಸಿದವರು ಚಾತಕಪಕ್ಷಿಗಳಂತೆ ಕಾದುಕುಳಿತಿದ್ದಾರೆ.

ವಸ್ತುಸ್ಥಿತಿ ಹೀಗಿದ್ದರೂ ದೇವನಹಳ್ಳಿ ಹಾಗೂ ಹೊಸಕೋಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು ಬೇಡಿಕೆ ಸಮೀಕ್ಷೆ ನಡೆಸಲು ಮುಂದಾಗಿದ್ದು, ಅರ್ಜಿ ಸಲ್ಲಿಸುವ ಗಡುವು ಸಹ ಮುಗಿದಿದೆ. ಅನೇಕರು ಅರ್ಜಿಯನ್ನೂ ಸಲ್ಲಿಸಿರಬಹುದು. ಈ ಹಿಂದೆ ಕೈಗೆತ್ತಿಕೊಂಡ ಯೋಜನೆಗಳನ್ನು ಪೂರ್ಣಗೊಳಿಸದೆ ಮತ್ತೆ ಹೊಸ ಯೋಜನೆಗಳಿಗೆ ಅರ್ಜಿ ಆಹ್ವಾನಿಸಿರುವುದು ಎಷ್ಟರಮಟ್ಟಿಗೆ ಸರಿ? ಒಂದುವೇಳೆ ಈ ಯೋಜನೆಗಳೂ ನನೆಗುದಿಗೆ ಬಿದ್ದರೆ ಅರ್ಜಿದಾರರಿಗೆ ನಿರಾಸೆಯಾಗುತ್ತದೆ. ಪಾವತಿಸಿದ ಆರಂಭಿಕ ಠೇವಣಿಗೆ ಬಡ್ಡಿ ನೀಡುವ ಅವಕಾಶ ಇಲ್ಲದಿರುವುದರಿಂದ ಆರ್ಥಿಕ ನಷ್ಟವುಂಟಾಗುತ್ತದೆ. ಆದ್ದರಿಂದ ಮಂಡಳಿಯು ಬೇಡಿಕೆ ಸಮೀಕ್ಷೆ ನಡೆಸುವ ಬಡಾವಣೆಯನ್ನು ಒಂದೆರಡು ವರ್ಷಗಳ ಕಾಲಮಿತಿಯಲ್ಲಿ ಅಭಿವೃದ್ಧಿಪಡಿಸಿ ಹಂಚಿಕೆ ಮಾಡಿದಲ್ಲಿ ಮಂಡಳಿಗೂ ಒಳ್ಳೆಯ ಹೆಸರು ಬರುತ್ತದೆ, ಅರ್ಜಿದಾರರ ಕನಸು ಸಾಕಾರಗೊಳ್ಳಲೂ ಅನುವಾಗುತ್ತದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಕಬ್ಬು ಬೆಳೆಗಾರರ ಹಿತ ಕಾಯಬೇಕಿದೆ

ಪ್ರಸಕ್ತ ಸಾಲಿನ ಕಬ್ಬು ನುರಿಸುವ ಹಂಗಾಮು ನವೆಂಬರ್ 1ರ ನಂತರ ಆರಂಭವಾಗಲಿದೆ ಎಂದು ಬೆಳಗಾವಿ ಜಿಲ್ಲಾಧಿಕಾರಿ ಇತ್ತೀಚೆಗೆ ತಿಳಿಸಿದ್ದು, ಈಗಾಗಲೇ ಸಕ್ಕರೆ ಕಾರ್ಖಾನೆಗಳು ಕಬ್ಬಿಗೆ ಎಫ್‌ಆರ್‌ಪಿ (ನ್ಯಾಯ ಮತ್ತು ಮೌಲ್ಯಾಧಾರಿತ ಬೆಲೆ) ಘೋಷಿಸಿವೆ. ಈ ಬಾರಿ ರಾಜ್ಯದಲ್ಲಿ ಸರಿಯಾಗಿ ಮಳೆಯಾಗದೆ ಕಬ್ಬು ಬೆಳೆಗಾರರು ಕಂಗಾಲಾಗಿದ್ದಾರೆ. ರಾಜ್ಯ ಸರ್ಕಾರವು ಬೆಳಗಾವಿ ಜಿಲ್ಲೆಯನ್ನು ಮೊದಲು ಮಾಡಿಕೊಂಡು ಹಲವು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಿದೆ. ಮಾರುಕಟ್ಟೆಯಲ್ಲಿ ಕಳೆನಾಶಕ ಹಾಗೂ ರಸಗೊಬ್ಬರಗಳ ಬೆಲೆ ಏರಿಕೆಯ ಬಿಸಿ ಕಬ್ಬು ಬೆಳೆಗಾರರಿಗೆ ತಟ್ಟಿದ್ದು ನಿಜ. ಜಗತ್ತಿಗೆ ಯಾವಾಗಲೂ ಸಿಹಿ ನೀಡುವ ಕಬ್ಬು ಬೆಳೆಗಾರರು ಮಾತ್ರ ಈಗ ಕಹಿ ಕ್ಷಣಗಳನ್ನೇ ಅನುಭವಿಸುತ್ತಿರುವುದು ವಿಪರ್ಯಾಸ.

ಎಫ್‌ಆರ್‌ಪಿ ದರಕ್ಕಿಂತ ಹೆಚ್ಚಿನ ದರವನ್ನು ಕಬ್ಬು ಬೆಳೆಗಾರರಿಗೆ ನೀಡಬೇಕೆಂದು ಕಾರ್ಖಾನೆಗಳ ಮಾಲೀಕರಿಗೆ ಸೂಚಿಸಿದ್ದು ಗಮನಾರ್ಹ. ಆದರೆ ಸರ್ಕಾರದ ಆದೇಶಗಳು, ನಿಯಮಗಳು ಕಾಗದದಲ್ಲಷ್ಟೇ ಕಂಗೊಳಿಸುವಂತೆ ಆಗಬಾರದು. ನಮ್ಮ ಜನಪ್ರತಿನಿಧಿಗಳು ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿದಾಗ ಮಾತ್ರ ಕಬ್ಬು ಬೆಳೆಗಾರರ ಹಿತ ಕಾಪಾಡಲು ಸಾಧ್ಯ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಭಿಕ್ಷುಕರ ಹಾವಳಿ ತಗ್ಗುವುದಿಲ್ಲವೇಕೆ?

ರಸ್ತೆಯ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಹಸಿರು ದೀಪಕ್ಕಾಗಿ ವಾಹನ ಚಾಲಕರು ಕಾಯುತ್ತಿರುವಾಗ, ಬೇಡುವವರು ಧುತ್ತೆಂದು ಪ್ರತ್ಯಕ್ಷರಾಗಿ ಭಿಕ್ಷೆಗಾಗಿ ಗೋಗರೆಯಲು ಶುರು ಮಾಡುತ್ತಾರೆ. ಸರ್ಕಾರವು ಆಸ್ತಿ ತೆರಿಗೆ ವಸೂಲಿ ಮಾಡುವಾಗ ಅದರಲ್ಲಿ ಭಿಕ್ಷುಕ ಕರವೂ ಸೇರಿರುತ್ತದೆ. ಭಿಕ್ಷುಕರ ಕಲ್ಯಾಣಕ್ಕಾಗಿ ದೊಡ್ಡ ಮೊತ್ತವನ್ನು ಸಂಗ್ರಹಿಸಿ ಅವರನ್ನು ಮೇಲಕ್ಕೆತ್ತಲು ಸರ್ಕಾರ ಪ್ರಯತ್ನಿಸಿದರೂ ಹಲವಾರು ಉಚಿತ ಯೋಜನೆಗಳನ್ನು, ಕಡಿಮೆ ಬೆಲೆಯಲ್ಲಿ ಪಡಿತರ ಪದಾರ್ಥಗಳನ್ನು ಕೊಡುತ್ತಲೇ ಇದ್ದರೂ ಭಿಕ್ಷುಕರ ಹಾವಳಿ ಏಕೆ ಕಡಿಮೆಯಾಗುವುದಿಲ್ಲ?

ಬಿ.ಎನ್.ಭರತ್, ಬೆಂಗಳೂರು

ಸ್ವಚ್ಛತೆ ಕಾಯ್ದುಕೊಳ್ಳಲು ಬೇಕು ದೃಢ ಸಂಕಲ್ಪ

ಇಂದು ಸ್ವಚ್ಛತೆಯ ಬಗ್ಗೆ ಮಾತನಾಡುತ್ತಾ ಟಿ.ವಿ., ಪತ್ರಿಕೆಗಳಲ್ಲಿ ಛಾಯಾಚಿತ್ರ, ವಿಡಿಯೊಗಳಿಗೆ ಪೋಸ್ ಕೊಟ್ಟ ಮಾತ್ರಕ್ಕೆ ಸ್ವಚ್ಛತೆ ಸಾಧಿಸಿದಂತೆ ಆಗುವುದಿಲ್ಲ. ಹೊಲದಲ್ಲಿ ಬೀಜ ಹಾಕಿದಾಗ ಅದು ಮೊಳಕೆಯೊಡೆದು ಗಿಡವಾಗಿ, ಹೆಮ್ಮರವಾಗಿ ಬೆಳೆಯುತ್ತದಲ್ಲ ಹಾಗೇ ಸ್ವಚ್ಛತೆ ಕಾಯ್ದುಕೊಳ್ಳಬೇಕು ಎಂಬುದು ಒಳಗಿನಿಂದಲೇ ಬರಬೇಕು. ನಮ್ಮ ಮನೆಯು ಹೇಗೆ ಸ್ವಚ್ಛವಾಗಿ ಇರಬೇಕೆಂದು ಬಯಸುತ್ತೇವೆಯೋ ಹಾಗೆಯೇ ಈ ದೇಶ ಹಾಗೂ ಪ್ರತಿ ಸಾರ್ವಜನಿಕ ಸ್ಥಳವೂ ಸ್ವಚ್ಛತೆಯಿಂದ ಕೂಡಿರಬೇಕು ಎಂಬ ಭಾವನೆ ಬರಬೇಕು.

ಆದರೆ ಸಾರ್ವಜನಿಕ ಶೌಚಾಲಯವನ್ನು ನಾವು ಇಟ್ಟುಕೊಂಡಿರುವ ರೀತಿ ಇದಕ್ಕೆ ತದ್ವಿರುದ್ಧವಾಗಿದೆ. ಗೋಡೆಗಳ ತುಂಬೆಲ್ಲಾ ಅಶ್ಲೀಲ ಬರಹಗಳು ಕಾಣುತ್ತವೆ. ಸಾರ್ವಜನಿಕವಾಗಿ ಗುಟ್ಕಾ, ಬೀಡಿ, ಸಿಗರೇಟ್ ಸೇವನೆ ನಡೆಯುತ್ತದೆ. ಇದೆಲ್ಲಾ ತಪ್ಪಬೇಕು. ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವ ಪರಿಪಾಟವನ್ನು ಬಿಡಬೇಕು. ಸಾರ್ವಜನಿಕ ಬಸ್, ಗ್ರಂಥಾಲಯ, ಉದ್ಯಾನ, ಶಾಲೆ ಪ್ರತಿಯೊಂದನ್ನೂ ಸ್ವಚ್ಛವಾಗಿ ಇಟ್ಟುಕೊಳ್ಳುವ ಕೆಲಸ ಆಗಬೇಕು. ಇದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಇಲ್ಲದಿದ್ದರೆ ಸ್ವಚ್ಛ ಭಾರತ ಯೋಜನೆಯು ಹೆಸರಿಗಷ್ಟೇ ಎಂಬಂತಾಗಿ ಪ್ರಯೋಜನವಿಲ್ಲದಂತೆ ಆಗುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ತ್ರೀ ಸಂವೇದನೆಯ ಅಭಿವ್ಯಕ್ತಿ ನೆಲೆ

ಮಹಿಳಾ ಕಾಳಜಿಯ ಕಥನ

'ಪ್ರಜಾವಾಣಿ'ಯು ಮಹಿಳಾದನಿಗಳನ್ನು ಅಂದಂದಿನ ಕಾಲದ ಸಂದರ್ಭಗಳಿಗೆ ಅನುಸಾರವಾಗಿ ನಿರೂಪಿಸಿಕೊಂಡು ಬಂದಿದೆ. ಸುದ್ದಿ, ವರದಿ, ವಿಶ್ಲೇಷಣೆ, ಲೇಖನ, ನುಡಿಚಿತ್ರ, ಅಂಕಣ ಬರಹಗಳು, ಸಂಪಾದಕೀಯ, ವಾಚಕರ ವಾಣಿ - ಹೀಗೆ ಪತ್ರಿಕೆಯ ವಿವಿಧ ವಿಭಾಗಗಳಲ್ಲಿನ ಬರಹ ಪ್ರಕಾರಗಳಲ್ಲಿ ಮಹಿಳೆ ಬಿಂಬಿತಳಾಗಿದ್ದಾಳೆ

• ಸಿ.ಜಿ. ಮಂಜುಳಾ

'ವರದಕ್ಷಿಣೆ ಕೊಡಲಿಲ್ಲವೆಂಬ ದ್ವೇಷದ ಕಾರಣ ಅತ್ತೆಯಿಂದ ಸುಡಲ್ಪಟ್ಟ ಸೊಸೆಯ ಸಾವು' - 1963ರ ನವೆಂಬರ್ 21ರ 'ಪ್ರಜಾವಾಣಿ' ಸಂಚಿಕೆಯ ಮೊದಲ ಪುಟದಲ್ಲಿ ಪ್ರಕಟವಾಗಿರುವ ಮೂರು ಕಾಲಂ ಸುದ್ದಿಯ ಶೀರ್ಷಿಕೆ ಇದು. ಈ ಘಟನೆ ನಡೆದಿರುವುದು ಭದ್ರಾವತಿಯಲ್ಲಿ.

ಕಳೆದ ಶತಮಾನದ 70ರ ದಶಕದ ಉತ್ತರಾರ್ಧ ಹಾಗೂ ಎಂಬತ್ತರ ದಶಕದ ಆರಂಭದಲ್ಲಿ ಮಹಿಳಾ ಸಂಘಟನೆಗಳು ವರದಕ್ಷಿಣೆ ವಿರುದ್ಧ ದೊಡ್ಡ ಮಟ್ಟದ ಆಂದೋಲನ ಶುರು ಮಾಡಿದ ನಂತರವಷ್ಟೇ ವಧು ದಹನ ಪ್ರಕರಣಗಳು ಭಾರತದಲ್ಲಿ ಹೆಚ್ಚಾಗಿ ಬೆಳಕಿಗೆ ಬರಲು ಶುರುವಾದವು ಎಂಬುದು ನಮಗೆ ಗೊತ್ತಿರುವ ಸಂಗತಿ. ಆದರೆ, 1961ರಲ್ಲೇ ವರದಕ್ಷಿಣೆ ನಿಷೇಧ ಕಾನೂನು ರಾಷ್ಟ್ರದಲ್ಲಿ ಜಾರಿಯಾಗಿತ್ತು. ಬಹುಶಃ ಈ ಕುರಿತಾದ ಸೂಕ್ಷ್ಮ ಸಂವೇದನೆಯೊಂದಾಗಿ ಈ ಸುದ್ದಿಯ ಮಹತ್ವವನ್ನು ಗ್ರಹಿಸಿ ಎಂದಿನ ಪುಟದಲ್ಲಿ ಅದನ್ನು ಬಿಂಬಿಸಿರುವ ರೀತಿಯಲ್ಲಿ, ಸ್ವಸ್ಥ ಸಮಾಜದ ಪರವಾಗಿ ಮೊದಲಿನಿಂದಲೂ 'ಪ್ರಜಾವಾಣಿ' ರೂಢಿಸಿಕೊಂಡು ಬಂದಿರುವ ಕಾಳಜಿಯನ್ನು ಗುರುತಿಸಬಹುದು.

1967ರ ಆಗಸ್ಟ್ 19ರ 'ಪ್ರಜಾವಾಣಿ'ಯ ಮೊದಲ ಪುಟದಲ್ಲಿ 'ಬಾಕ್ಸ್ ಐಟಂ' ಆಗಿ ಒಂದು ಸುದ್ದಿಯನ್ನು ಹೈಲೈಟ್ ಮಾಡಿ 'ಗಂಡಸರ ರಾಜ್ಯ' ಎಂಬ ಹೆಡ್ಡಿಂಗ್ ಅಡಿ ಮುದ್ರಿಸಲಾಗಿದೆ. ಉತ್ತರ ಪ್ರದೇಶದ ಸಮುದಾಯ ಅಭಿವೃದ್ಧಿ ಇಲಾಖೆಯಲ್ಲಿರುವ ಸುಮಾರು ಮೂರು ಸಾವಿರಕ್ಕಿಂತ ಹೆಚ್ಚು ಮಂದಿಯನ್ನು ವಜಾ ಮಾಡಿರುವುದು ಈ ಸುದ್ದಿಯ ಸಾರ. ಮಹಿಳಾ ವಿಭಾಗವೇ ರದ್ದಾಗಿದ್ದು ಮಹಿಳಾ ಪ್ರೊಬೇಷನರ್ ಅಧಿಕಾರಿಗಳನ್ನೂ ಕಿತ್ತೊಗೆಯಲಾಗಿದೆ. ಈ ಮಹಿಳೆಯರಿಗೆ ಇತರ ನೌಕರಿಗಳನ್ನು ನೀಡುವ ಬಗ್ಗೆ ಕೇಂದ್ರ ಸಮಾಜ ಅಭಿವೃದ್ಧಿ ಖಾತೆಯ ಸ್ಟೇಟ್ ಸಚಿವೆ ಫೂಲ್ ರೇಣು ಗುಹಾ ಅವರು ನಡೆಸಿದ ಪ್ರಯತ್ನವೂ ವಿಫಲಗೊಂಡಿರುವುದು ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಆತಂಕವನ್ನುಂಟು ಮಾಡಿದೆ. ಉತ್ತರ ಪ್ರದೇಶದವರೇ ಆಗಿರುವ ಇಂದಿರಾಗಾಂಧಿ ಪ್ರಧಾನಿಯಾಗಿದ್ದರೂ ಸುಚೇತ ಕೃಪಲಾನಿ ಅವರು ಇತ್ತೀಚಿನವರೆಗೂ ಉತ್ತರ ಪ್ರದೇಶ ಮುಖ್ಯಮಂತ್ರಿಯಾಗಿದ್ದರೂ ಉತ್ತರ ಪ್ರದೇಶವು ವಾಸ್ತವವಾಗಿ ಗಂಡಸರ ರಾಜ್ಯವೇ ಆಗಿದೆ ಎಂಬ ವ್ಯಾಖ್ಯಾನವನ್ನೂ ನೀಡಿರುವ ಈ ವರದಿ ಮಹಿಳಾ ಪರ ಧೋರಣೆಯನ್ನು ಧ್ವನಿಸಿದೆ.

1966ರ ಜೂನ್ 4ರ 'ಪ್ರಜಾವಾಣಿ' ಸಂಚಿಕೆಯ ಮೊದಲ ಪುಟದಲ್ಲಿ 'ಮಹಿಳೆಯರೇ ಇಲ್ಲದ ವಿಧಾನಸಭೆ' ಎಂಬ ಶಿರೋನಾಮೆಯ ಚಿಕ್ಕ ಸುದ್ದಿಯು, ಜಮ್ಮು ಮತ್ತು ಕಾಶ್ಮೀರದ ಹೊಸ ವಿಧಾನಸಭೆಯಲ್ಲಿ ಮಹಿಳೆಯರಿಗೆ ಸ್ಥಾನವಿಲ್ಲ. ಹಿಂದಿನ ಎರಡೂ ವಿಧಾನಸಭೆಗಳಲ್ಲೂ ಮಹಿಳೆಯರಿರಲಿಲ್ಲ ಎಂಬುದನ್ನು ವರದಿ ಮಾಡುತ್ತಲೇ ತಾರತಮ್ಯ ಹಾಸುಹೊಕ್ಕಾಗಿರುವ ಸಮಾಜಕ್ಕೆ ಕನ್ನಡಿ ಹಿಡಿದಿದೆ.

'ಅತ್ಯಧಿಕ ಪ್ರಸಾರದ ಕನ್ನಡ ದಿನಪತ್ರಿಕೆ' ಎಂಬಂಥ ಹೆಗ್ಗಳಿಕೆ ಹೊಂದಿದ್ದು ಈಗಲೂ 'ವಿಶ್ವಾಸಾರ್ಹ ದಿನಪತ್ರಿಕೆ'ಯಾಗಿರುವ 'ಪ್ರಜಾವಾಣಿ', ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ವಿಚಾರಗಳನ್ನು ಅಂದಂದಿನ ಕಾಲದ ಸಂದರ್ಭಗಳಿಗೆ ಅನುಸಾರವಾಗಿ ನಿರೂಪಿಸಿಕೊಂಡು ಬಂದಿದೆ. ಸುದ್ದಿ, ವರದಿ, ವಿಶ್ಲೇಷಣೆ, ಲೇಖನ, ನುಡಿಚಿತ್ರ, ಅಂಕಣ ಬರಹಗಳು, ಸಂಪಾದಕೀಯ, ವಾಚಕರ ವಾಣಿ - ಹೀಗೆ ಪತ್ರಿಕೆಯ ವಿವಿಧ ವಿಭಾಗಗಳಲ್ಲಿನ ಬರಹ ಪ್ರಕಾರಗಳಲ್ಲಿ ಮಹಿಳೆ ಬಿಂಬಿತಳಾಗಿದ್ದಾಳೆ.

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಸಾಮ್ರಾಜ್ಯಶಾಹಿ ಬ್ರಿಟಿಷ್ ಸರ್ಕಾರದ ವಿರುದ್ಧದ ಸಮರಕ್ಕೆ ಪತ್ರಿಕೆಗಳೂ ವೇದಿಕೆಯಾಗಿದ್ದವು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ರಾಷ್ಟ್ರೀಯವಾದಿ ಪತ್ರಿಕೆಗಳು ದೇಶೀ ಸರ್ಕಾರದ ಪರವಾಗಿ ಬೆಂಬಲದ ಧೋರಣೆ ತಾಳಿದ್ದವು. ಸ್ವಾತಂತ್ರ್ಯ ಬಂದ ನಂತರ ಪೂರ್ಣ ಪ್ರಮಾಣದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭಾರತ ಆಯ್ಕೆ ಮಾಡಿಕೊಂಡಾಗ, ಅದು ದೊಡ್ಡ ಸವಾಲಿನ ರಾಜಕೀಯ ಸಾಹಸದ ಆರಂಭವಾಗಿತ್ತು. ಸಾಂಸ್ಕೃತಿಕ ವೈವಿಧ್ಯ, ಜನರ ಬಡತನ, ಅನಕ್ಷರತೆ, ಹೆಚ್ಚುತ್ತಿದ್ದ ಜನಸಂಖ್ಯೆಯನ್ನು ಸರ್ಕಾರ ಸಂಭಾಳಿಸಬೇಕಿತ್ತು. ಇವು, ಸಹಜವಾಗಿಯೇ ಸ್ವಾತಂತ್ರ್ಯಾನಂತರ ಪ್ರಕಟಣೆ ಆರಂಭಿಸಿದ 'ಪ್ರಜಾವಾಣಿ'ಯ ಆರಂಭದ ದಿನಗಳಲ್ಲಿನ ಆದ್ಯತೆಗಳೂ ಆಗಿದ್ದವು. ಹೆಣ್ಣುಮಕ್ಕಳ ಸಾಕ್ಷರತೆ ಪ್ರಮಾಣ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಇದ್ದದ್ದು ಕೇವಲ ಶೇ 9. ಹೆಣ್ಣುಮಕ್ಕಳ ಶಿಕ್ಷಣ, ಬಾಲ್ಯ ವಿವಾಹದ ಪಿಡುಗು, ವಿವಾಹ ವಯಸ್ಸು ನಿಗದಿ, ತಾಯಿ-ಮಗು ಆರೋಗ್ಯ- ಇಂತಹ ವಿಚಾರಗಳು ಪತ್ರಿಕೆಯ ವಿವಿಧ ವಿಭಾಗಗಳಲ್ಲಿ ಆದ್ಯತೆ ಪಡೆದುಕೊಂಡಿರುವುದನ್ನು ಕಾಣಬಹುದು.

ಮಹಿಳೆಯ ಉದ್ಯೋಗ ಪ್ರವೇಶಕ್ಕೂ ಆ ಕಾಲದಲ್ಲಿದ್ದ ಪೂರ್ವಗ್ರಹಗಳನ್ನು ಎತ್ತಿ ತೋರಿಸುವ ರೀತಿಯಲ್ಲಿ ವರದಿಗಳು ಪ್ರಕಟವಾಗಿವೆ. ಐಎಎಸ್‌ನಲ್ಲಿ ವಿವಾಹಿತ ಮಹಿಳೆಯರ ಮುಂದುವರಿಕೆ ಹಾಗೂ ನೇಮಕಾತಿಗಳಿಗೆ ಇದ್ದ ನಿರ್ಬಂಧವನ್ನು ಕಿತ್ತು ಹಾಕಲು ಐಎಎಸ್ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕೆಂಬ ಸಂಸತ್‌ನ ಮೇಲ್ಮನೆಯ ಸದಸ್ಯರ ಪ್ರಯತ್ನ ವಿಫಲವಾದದ್ದು 1954ರ ಸೆಪ್ಟೆಂಬರ್ 25ರ ಸಂಚಿಕೆಯಲ್ಲಿ ವರದಿಯಾಗಿದೆ. ಇದು ಕೇವಲ ಭಾರತೀಯ ಆಡಳಿತ ಸೇವೆಗೆ (ಐಎಎಸ್) ಅನ್ವಯಿಸುತ್ತದೆ ಎಂದು ಈ ನಿರ್ಬಂಧವನ್ನು ಸಮರ್ಥಿಸಿಕೊಂಡು ಕೇಂದ್ರ ಗೃಹ ಸಚಿವರು ಅಂದು ಹೇಳಿದ್ದ ಮಾತುಗಳಿವು: 'ತಾಯಿಯ ಮೊದಲ ಕರ್ತವ್ಯ ಮಗುವಿನ ಪಾಲನೆ. ಗುಂಡು ಹಾರಿಸಲು ಆದೇಶ ನೀಡುವುದಲ್ಲ'. ಇದನ್ನು ಪ್ರತಿಭಟಿಸಿ ಐವರು ಕಾಂಗ್ರೆಸ್ ಮಹಿಳಾ ಎಂಪಿಗಳು ಹೊರ ನಡೆದಿದ್ದೂ ವರದಿಯಾಗಿದೆ.

ಐವತ್ತರ ದಶಕದಲ್ಲಿ ಮಧ್ಯಮ ವರ್ಗದ ಮಹಿಳೆಯ ಉದ್ಯೋಗರಂಗ ಪ್ರವೇಶವು ಹಲ ಬಗೆಯ ಸಂಶಯಗಳಡಿ ಸಿಲುಕಿತ್ತು ಎಂಬುದು ಇದರಿಂದ ವೇದ್ಯ. 'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಗಳಲ್ಲಿ 'ವಾದಭೂಮಿ' ಅಂಕಣದ ಅಡಿ 'ಮಹಿಳೆಯರು ದುಡಿದು ತರಬೇಕೆ?' ಎಂಬುದು ತೀವ್ರ ಚರ್ಚೆಗೊಳಪಟ್ಟಿದೆ. ಮೈಸೂರಿನ ಹ.ಪ.ನಾಗರಾಜಯ್ಯ (ಅಕ್ಟೋಬರ್ 9, 1955) ಎಂಬವರು, 'ಯಾವ ಪುರುಷನಿಗೂ ದೊರಕಲಾರದ 'ಮಾತೃದೇವೋ ಭವ'ದಂತಹ ಪವಿತ್ರ ಸ್ಥಾನ ತೊರೆದು ಮಾಣಿಕ್ಯ ಬಿಸುಟು ಗಾಜಿನ ಚೂರಿಗಾಗಿ ಅಲೆಯುವಂತೆ, ಗುಮಾಸ್ತೆ ಹುದ್ದೆಗಾಗಿ ಸ್ತ್ರೀ ಬರಬೇಕೇ' ಎಂದು ಪ್ರಶ್ನಿಸಿದ್ದಾರೆ. 'ಅತಿ ಮುಖ್ಯವಾದ ಗೃಹಕೃತ್ಯಕ್ಕೆ ಸ್ತ್ರೀಯರು ಅತ್ಯಾವಶ್ಯವಾಗಿರುವುದರಿಂದ ಅವರೂ ದುಡಿಯಲು ಹೊರಡುವುದು ಅನರ್ಥಕಾರಿ' ಎಂದಿದ್ದಾರೆ ಭದ್ರಾವತಿಯ ಎಸ್ ಕೃಷ್ಣ ಭಟ್ಟ. 'ಗಂಡಸು ತರುವ ಸಂಬಳದಲ್ಲಿ ಸಂಸಾರವನ್ನು ತೂಗಿಸಿ ಆಕೆ ಹೇಗೆ ತಾನೇ ಸಾಮ್ರಾಜ್ಞಿಯಂತೆ ಮೆರೆದಾಳು' ಎಂದು ಪ್ರಶ್ನಿಸಿರುವವರು ಬೆಂಗಳೂರಿನ ಶಾಂತಿ ಶ್ರೀಪಾದರಾಜ್.

ಲೈಂಗಿಕ ವೃತ್ತಿ ನಿರತರ ವಿಚಾರಗಳನ್ನು 'ಪ್ರಜಾವಾಣಿ' ಗಂಭೀರ ನೆಲೆಗಳಲ್ಲಿ ಪ್ರಕಟಿಸಿಕೊಂಡು ಬರುತ್ತಲೇ ಇದೆ. 2017ರಲ್ಲಿ ಜಯಮಾಲಾ ನೇತೃತ್ವದ ಸಮಿತಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ 'ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿಗಳ ಅಧ್ಯಯನ 'ವರದಿಯನ್ನು ಲೇಖನಮಾಲಿಕೆಯ ಮೂಲಕ ಪ್ರಜಾವಾಣಿ ಬಹಿರಂಗ ಪಡಿಸಿತ್ತು. ಬಳ್ಳಾರಿ ಜಿಲ್ಲೆಯಲ್ಲಿ, ದಲಿತ ಯುವತಿಯರ ಮೇಲೆ ಸವರ್ಣೀಯ ಪುರುಷರು ನಡೆಸುತ್ತಿದ್ದ 'ಓಕುಳಿ ಎರಚುವ' ಹೀನ ಸಂಪ್ರದಾಯ ಆಚರಣೆ, ಚಂದ್ರಗುತ್ತಿ ಬೆತ್ತಲೆ ಸೇವೆ ಆಚರಣೆಗಳ ಬಗ್ಗೆ 'ಪ್ರಜಾವಾಣಿ'ಯ ವಸ್ತುನಿಷ್ಠ ಹಾಗೂ ಸೂಕ್ಷ್ಮ ಸಂವೇದನೆಯ ವರದಿಗಳು ಜನರಲ್ಲಿ ಜಾಗೃತಿ ಮೂಡಿಸಿವೆ.

ಕೋಲಾರ ಜಿಲ್ಲೆಯ 'ದೊಂಬರ ಗುಡಿಸಲು' ಕುಗ್ರಾಮದ ಪ್ರತಿ ಕುಟುಂಬಕ್ಕೂ ವೇಶ್ಯಾವೃತ್ತಿಯೇ ಜೀವನಾಧಾರವಾಗಿತ್ತು. 1989ರಲ್ಲಿ ಕೋಲಾರ ಗ್ರಾಮೀಣ ಬ್ಯಾಂಕ್ ಶಾಖೆ ಮ್ಯಾನೇಜರ್ ಆಗಿ ಅಧಿಕಾರ ವಹಿಸಿಕೊಂಡ ಬಸವರಾಜ್ ಅವರು 1990ರ ಫೆಬ್ರುವರಿ 6ರಂದು ಈ ಗ್ರಾಮವನ್ನು ದತ್ತು ತೆಗೆದುಕೊಂಡು ಕೃಷಿ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ವ್ಯಾಪಾರ ಇತ್ಯಾದಿ ಆರ್ಥಿಕ ಚಟುವಟಿಕೆಗಳಿಗೆ ಮಹಿಳೆಯರನ್ನು ಪ್ರೇರೇಪಿಸಿದರು. ಬಸವರಾಜ್ ಅವರಿಗೆ ಕೃತಜ್ಞತೆ ಸಲ್ಲಿಸಲು ಊರಿನ ಹೆಸರೇ 'ಬಸವರಾಜ ಪುರ' ಎಂದು ಬದಲಾಯಿಸಲಾಯಿತು. ಆ ನಂತರ ಮತ್ತೆ 1999ರಲ್ಲಿ ಬ್ಯಾಂಕ್ ಸಾಲ ತೀರಿಸಲಾಗದೆ ಬಸವರಾಜಪುರ ಗ್ರಾಮಸ್ಥರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ 'ಕರ್ನಾಟಕ ದರ್ಶನ' ಪುರವಣಿಯ ಎರಡು ಲೇಖನಗಳು ಬೆಳಕು ಚೆಲ್ಲಿ ಅಭಿವೃದ್ಧಿ ಸಾಧನೆ ಹಾಗೂ ಆನಂತರ ಮುಂದುವರಿಸಿಕೊಂಡು ಹೋಗಬೇಕಾದ ಹಾದಿಯ ಕಲ್ಲುಮುಳ್ಳುಗಳನ್ನು ಪರಿಚಯಿಸಿವೆ.



1967ರ ಆಗಸ್ಟ್ 19ರ 'ಪ್ರಜಾವಾಣಿ'ಯ ಮೊದಲ ಪುಟದಲ್ಲಿ ಪ್ರಕಟವಾಗಿದ್ದ ಸುದ್ದಿ

ಮುಂಬೈನ ವೇಶ್ಯಾಪೇಟೆ ಕುರಿತು 1957ರ ಜುಲೈ 14ರಂದು ಪ್ರಕಟವಾಗಿದ್ದ ಲೇಖನ

ಚಿತ್ರಗಳು: ಪ್ರಜಾವಾಣಿ ಆರ್ಕೈವ್

ವಾಸ್ತವಿಕ ವಿಶ್ಲೇಷಣೆ

'ಪ್ರಜಾವಾಣಿ'ಯ ಭಾನುವಾರದ ಪುಟಗಳಲ್ಲಿ ಮಹಿಳಾ ವಿಚಾರಗಳು ಲೇಖನಗಳಾಗಿ ವಿಸ್ತೃತವಾಗಿ ಗಂಭೀರ ವಿಶ್ಲೇಷಣೆಗೊಳಪಡುವುದು ಅಂದಿನಿಂದಲೂ ನಡೆದು ಬಂದಿದೆ. 'ಗೌರವವಿಲ್ಲದ ವೃತ್ತಿ - ವೇಶ್ಯಾವೃತ್ತಿಯ ವಿಶ್ಲೇಷಣೆ' ಎಂಬ ಲೇಖನವು ಚಿತ್ರಗಳ ಸಹಿತ 1957ರ ಜುಲೈ 14ರಂದು ಪ್ರಕಟವಾಗಿದೆ. ಮುಂಬೈ ನಗರದ ವೇಶ್ಯಾಪೇಟೆ, ಕಣ್ಣಿಗೆ ಕಪ್ಪು ಪಟ್ಟಿ ಹಾಕಿದ ವೇಶ್ಯೆ, ವಿಟರನ್ನು ಆಕರ್ಷಿಸಲು ನಿಂತ 'ಪಂಜರದ ಗಿಣಿಗಳು' ಎಂಬಂಥ ಶೀರ್ಷಿಕೆಯ ಚಿತ್ರಗಳ ಸಹಿತ ಮಾಹಿತಿ ಪೂರ್ಣ ಲೇಖನ ಇದು.

ವೇಶ್ಯಾವೃತ್ತಿಯ ಬಗ್ಗೆ ಭಾರತದ ನಿಲುವಿನ ಬಗ್ಗೆ ಈ ಲೇಖನ ಪ್ರಸ್ತಾಪಿಸಿದೆ. ಶ್ವೇತವರ್ಣೀಯರ ಗುಲಾಮರ ವ್ಯಾಪಾರದ ಸಮಸ್ಯೆಯಯತ್ತ ಲೀಗ್ ಆಫ್ ನೇಷನ್ಸ್ ಜಗತ್ತಿನ ರಾಷ್ಟ್ರಗಳ ಗಮನ ಸೆಳೆದಾಗ, ಭಾರತವೂ ಸಹ 1904 ಮತ್ತು 1910ರಲ್ಲಾದ ಶ್ವೇತವರ್ಣೀಯರ ಗುಲಾಮರ ವ್ಯಾಪಾರವನ್ನು ತಡೆಗಟ್ಟುವ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದೆ.

'ಎಷ್ಟೇ ಹಾನಿಕಾರಕ ವೃತ್ತಿಯಾದರೂ ವ್ಯಭಿಚಾರ ನಿರ್ಮೂಲನೆ ಸಾಧ್ಯವಿಲ್ಲ' ಎಂಬ ನಿಲುವನ್ನೂ ಲೇಖಕಿ ವ್ಯಕ್ತಪಡಿಸಿದ್ದಾರೆ. 'ಭಾರತದ ನೀತಿಯೂ ಸಹ ವೇಶ್ಯಾ ವ್ಯಾಪಾರವನ್ನು ಸಮೂಲಾಗ್ರವಾಗಿ ನಿರ್ಮೂಲ ಮಾಡುವ ನೀತಿಯಾಗಿಲ್ಲ. ಬದಲು ಅದನ್ನು ಆದಷ್ಟು ಅಂಕೆಯಲ್ಲಿಡಲು ಪ್ರಯತ್ನಿಸಲಾಗುತ್ತಿದೆ' ಎಂಬುದನ್ನು ಹೇಳಲಾಗಿದೆ. ಯಾವಾಗ ವ್ಯಭಿಚಾರವು ಅದರ ಆಚರಣೆಯೂ ಸಮಾಜದ ಸಭ್ಯತೆಗೆ ಹಾನಿಯನ್ನು ಉಂಟು ಮಾಡುತ್ತದೆಯೋ ಆಗ ಕಾನೂನು ಪ್ರವೇಶಿಸಬಲ್ಲುದೇ ಹೊರತು; ಸಮಾಜವು ಅನೈತಿಕ ಸಂಪರ್ಕವೆಂದು ಭಾವಿಸುವ ವೈಯಕ್ತಿಕ ವ್ಯಭಿಚಾರದಲ್ಲಿ ಕಾನೂನು ಪ್ರವೇಶಿಸಲಾರದು ಎಂದು ಲೇಖನ ವಿಶ್ಲೇಷಿಸಿದೆ.

ವ್ಯಭಿಚಾರ -ಅದರಲ್ಲೂ ವೈಯಕ್ತಿಕ ವ್ಯಭಿಚಾರವನ್ನು ಕಾನೂನಿನಿಂದ ತಡೆಗಟ್ಟಲಾಗುವುದಿಲ್ಲ. ಕಾರಣ: ನಮ್ಮ ರಾಜ್ಯಾಂಗವು ಪ್ರತಿಯೊಬ್ಬ ವ್ಯಕ್ತಿಗೂ 'ಯಾವುದೇ ವೃತ್ತಿ ಅಭ್ಯಾಸ ವ್ಯಾಪಾರ ಮತ್ತು ವ್ಯವಹಾರವನ್ನು ನಡೆಸಲು' ಇತ್ತಿರುವ ಮೂಲಭೂತ ಹಕ್ಕಿಗೆ ಕುಂದುಂಟಾಗುತ್ತದೆ ಆದ್ದರಿಂದ ನಮ್ಮ ರಾಜ್ಯಾಂಗದ ಸಂದಿಗ್ಧ ನಿಬಂಧನೆಯಾದ 19ನೇ ನಿಬಂಧನೆಯು ಜನರ ಆರೋಗ್ಯ, ಸಭ್ಯತೆ ಹಾಗೂ ನೀತಿಯ ದೃಷ್ಟಿಯಿಂದ ಪರಿಷ್ಕೃತವಾಗುವವರೆಗೂ ಏನನ್ನೂ ಮಾಡುವಂತಿಲ್ಲ' ಎಂದು ಸುದೀರ್ಘವಾಗಿ ವಿವರಿಸಿದೆ ಈ ಲೇಖನ. ಗಂಭೀರವಾದ ಮಹಿಳಾ ದೃಷ್ಟಿಕೋನ ಹೊಂದಿದ ವಸ್ತುನಿಷ್ಠ ವಾಸ್ತವಿಕ ವಿಶ್ಲೇಷಣೆಯ ಲೇಖನವಿದು.

ಹರಿಜನ ಯುವತಿಯರು ಮತ್ತು ದೇವದಾಸಿಯರ ಮೇಲೆ ಸವರ್ಣೀಯ ಪುರುಷರ ಓಕುಳಿ ಎರಚಾಟ ಕಾರ್ಯಕ್ರಮವನ್ನು ಪೊಲೀಸರು ತಡೆದ ಬಗ್ಗೆ 1986ರ ಏಪ್ರಿಲ್ 14ರಂದು ಪ್ರಕಟವಾಗಿದ್ದ ವರದಿ

ವಿವೇಚನೆಯ ಮಥನ

ಹಿಂದೂ ಕೋಡ್ ಮಸೂದೆ, ಸ್ವತಂತ್ರ ಭಾರತದಲ್ಲಿ ಮಹಿಳಾ ಸಬಲೀಕರಣದತ್ತ ಇರಿಸಿದ ಮೊದಲ ಹೆಜ್ಜೆಯಾಗಿತ್ತು. ಆದರೆ ಈ ಮಸೂದೆ ಬಗ್ಗೆ ಸ್ವತಃ ಆಗಿನ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಸೇರಿದಂತೆ ಪಾರ್ಲಿಮೆಂಟ್ ಸದಸ್ಯ ಗಣ ಹಾಗೂ ಸಂಪ್ರದಾಯವಾದಿ ಸಾರ್ವಜನಿಕರ ಪ್ರತಿಭಟನೆ ತೀವ್ರವಾಗಿತ್ತು. ಜೊತೆಗೆ ರಾಷ್ಟ್ರದ ಮೊದಲ ಲೋಕಸಭೆ ಚುನಾವಣೆ (1952) ಮೇಲೆ 'ಹಿಂದೂ ಕೋಡ್ ಹಟ'ವು ಬೀರಬಹುದಾದ ಪರಿಣಾಮವನ್ನು ಅರಿತುಕೊಂಡು ಮಸೂದೆ ಮಂಡನೆಯನ್ನು ಕೈಬಿಟ್ಟ ನೆಹರೂ ಕ್ರಮವನ್ನು 'ವಿವೇಕದ ನಿಲುವು' ಎಂದು 'ಪ್ರಜಾವಾಣಿ'ಯ ಸಂಪಾದಕೀಯ (28 ಸೆಪ್ಟೆಂಬರ್ 1951) ಸಮರ್ಥಿಸಿಕೊಂಡಿದೆ.

'ವಸ್ತು ಸ್ಥಿತಿ ಅನುಸರಿಸಿ, ಸನ್ನಿವೇಶಾನುಗುಣವಾಗಿ ಜವಾಹರಲಾಲರು ಕೈಗೊಂಡ ನೀತಿಯು ನ್ಯಾಯಾಂಗ ಮಂತ್ರಿ ಅಂಬೇಡ್ಕರ್ ಅವರಿಗೆ ಹಿಡಿಸದಿದ್ದುದು ಆಶ್ಚರ್ಯವಲ್ಲ. ಅವರು ರಾಜೀನಾಮೆಯಿತ್ತಿರುವರೆಂಬುದ-ಕ್ಕೂ ಹಿಂದೂ ಕೋಡ್ ಮಸೂದೆಯ ಹಿಂದೋಟ ಪ್ರಮುಖ ಕಾರಣವೆನ್ನಬಹುದು' ಎಂದು ಸಂಪಾದಕೀಯ ಪ್ರಸ್ತಾಪಿಸಿದೆ. 'ಲೌಕಿಕ ರಾಜ್ಯತತ್ವಕ್ಕೆ ಬದ್ಧರಾಗಿರುವ ನಮಗೆ ಪ್ರಗತಿ ಸಾಧಕ ಶಾಸನಗಳು ಅಗತ್ಯ. ಆದರೆ ಅಂಥ ಕ್ರಮಗಳನ್ನು ಕೈಗೊಳ್ಳುವಾಗ ಅವಸರ, ಆತುರಗಳು ಸಲ್ಲವೆಂಬುದು ಈಗ ವ್ಯಕ್ತವಾಗಿದೆ. ಪಾರ್ಲಿಮೆಂಟಿನಲ್ಲಿ ಹಿಂದೂ ಕೋಡ್ ಮಸೂದೆಯು ಎದ್ದು, ಬೀಳುತ್ತ, ತೆವಳಿದುದನ್ನೂ, ಈಗ ಮುಂದಕ್ಕೆ ಹಾಕಲ್ಪಟ್ಟಿರು-ವುದನ್ನೂ ನೋಡಿದರೆ, ಅದು ಶಾಸನವಾಗುವ ಹೊತ್ತಿಗೆ ಮೂಲ ರೂಪವೇ ಬದಲಾಗುವುದೆಂಬುದು ಖಚಿತವಾಗಿ ಕಾಣುತ್ತಿದೆ' ಎಂಬ ಮುನ್ನೋಟವನ್ನೂ ಸಂಪಾದಕೀಯ ನೀಡಿದೆ.

'ಚುನಾವಣೆಯ ನಂತರ ಜನತೆಯ 'ನೈಜ' ಪ್ರತಿನಿಧಿಗಳಾಗಿ ಪಾರ್ಲಿಮೆಂಟಿಗೆ ಬರುವ ಸದಸ್ಯ ಗಣದ ವಿವೇಚನೆಯ ಮಥನಕ್ಕೆ ಸಿಕ್ಕುವ ಅವಕಾಶ ದೊರೆತಿರುವ ಹಿಂದೂ ಕೋಡ್ ಮಸೂದೆ, ಹಿಂದೂ ಸಮಾಜದ ಆಧುನಿಕ ಅವಶ್ಯಕತೆಗಳಿಗೆ ಹೊಂದುವ ಸಮರ್ಪಕ ಶಾಸನ ಮಾಡುವುದೆಂದು ಆಶಿಸೋಣ' ಎಂಬಂಥ ಆಶಯವನ್ನೂ ಸಂಪಾದಕೀಯದಲ್ಲಿ ವ್ಯಕ್ತಪಡಿಸಲಾಗಿದೆ.

'ಶೋಷಿತೆ' ಟ್ರೇಲರ್ ಬಿಡುಗಡೆ

ಡಾ.ಜಾನ್ವಿರಾಯಲ

ಕಿರುತೆರೆ ನಿರೂಪಕಿ ಡಾ.ಜಾನ್ವಿರಾಯಲ, ಕೆಜಿಎಫ್ ಖ್ಯಾತಿಯ ರೂಪಾ ರಾಯಪ್ಪ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ಶೋಷಿತೆ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ ಕೆಲ ಕಿರುಚಿತ್ರಗಳನ್ನು ನಿರ್ದೇಶಿಸಿದ್ದ ಶಶಿಧರ್ ಈ ಚಿತ್ರಕ್ಕೆ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದು, ಕಾರ್ನಿವಲ್ ಪ್ರೊಡಕ್ಷನ್ ಮೂಲಕ ಸಿರಿಶಾಅಲ್ಲ ನಿರ್ಮಿಸಿದ್ದಾರೆ.

'ಮದುವೆಯಾದ ನಂತರ ಹೆಣ್ಣುಮಗಳು ಯಾವ ರೀತಿ ಶೋಷಣೆಗೆ ಒಳಗಾಗುತ್ತಾಳೆ ಎಂಬ ಕಥೆಯನ್ನು ಹೊಂದಿರುವ ಚಿತ್ರ. ನಿರ್ದೇಶಕ ಶಶಿಧರ್ ಕನ್ನಡದವರಲ್ಲ. ಆದರೂ ಕನ್ನಡ ಕಲಿತು, ನಮ್ಮ ಭಾಷೆಯಲ್ಲಿ ಚಿತ್ರ ಮಾಡುತ್ತಿರುವುದು ಸಂತಸದ ವಿಷಯ. ನಾವೆಲ್ಲ ಒಂದು ತಂಡವಾಗಿ ಚಿಕ್ಕ ಬಜೆಟ್‌ನಲ್ಲಿ ಸಿನಿಮಾ ಮಾಡಿದ್ದೇವೆ. ನಿರ್ದೇಶಕರೇ ಸೆಟ್‌ಗೆ ಊಟ ತಂದು ಬಡಿಸುತ್ತಿದ್ದರು. ಇಲ್ಲಿ ಎಲ್ಲರೂ ಎಲ್ಲ ಕೆಲಸ ಮಾಡಿದ್ದೇವೆ. ಹೀಗಾಗಿ ಒಂದು ಮನೆಯ ರೀತಿಯ ಭಾವವಿತ್ತು' ಎಂದರು ನಟಿ ಡಾ.ಜಾನ್ವಿರಾಯಲ.

'2015ರಲ್ಲಿ ಆಂಧ್ರಪ್ರದೇಶದ ನೆಲ್ಲೂರಿನಲ್ಲಿ ನಡೆದಂತಹ ಘಟನೆಯು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದರ ಒಂದು ಎಳೆಯನ್ನು ತೆಗೆದುಕೊಂಡು ಕಥೆ ಮಾಡಲಾಗಿದೆ. ನವೆಂಬರ್‌ನಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ರೂಪ ರಾಯಪ್ಪ ಖಳನಾಯಕಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೆ.ವಿ.ಎನ್. ಎಂ. ಸಂಗೀತ, ರವಿವರ್ಮ.ಕೆ ಛಾಯಾಗ್ರಹಣ ಚಿತ್ರಕ್ಕಿದೆ. ಬೆಂಗಳೂರು, ಹೊಸಕೋಟೆ ಮೊದಲಾದೆಡೆ ಚಿತ್ರೀಕರಣಗೊಂಡಿದೆ. ❖

ರಂಗಭೂಮಿ ಕಲಾವಿದನ 'ವೇಷ'

ರಾಘವೇಂದ್ರ ಡಿ.ಜಿ, ನಿಧಿ ಮಾರೋಲಿ

ಹಂಸಿನಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿ, ರಾಘವೇಂದ್ರ ಡಿ.ಜಿ ನಾಯಕನಾಗಿ ಅಭಿನಯಿಸಿರುವ 'ವೇಷ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೃಷ್ಣ ನಾಡ್ಪಾಲ್ ಚಿತ್ರವನ್ನು ನಿರ್ದೇಶಿಸಿದ್ದಾರೆ.

'ಪ್ರತಿಯೊಬ್ಬರೂ ಜೀವನದಲ್ಲಿ ಒಂದಲ್ಲ ಒಂದು ರೀತಿ ವೇಷ ಹಾಕುತ್ತಾರೆ. ನಮ್ಮ ಚಿತ್ರದಲ್ಲಿಯೂ ನಾಯಕನಿಗೆ ಯಾವುದೋ ಒಂದು ಸಂದರ್ಭ ವೇಷ ಹಾಕುವಂತೆ ಮಾಡುತ್ತದೆ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ. ನಾನು ಮೂಲತಃ ರಂಗಭೂಮಿ ಕಲಾವಿದ. ನಟನೆ ನನ್ನ ಹವ್ಯಾಸ. ಅನಿವಾರ್ಯವಾಗಿ ಈ ಚಿತ್ರಕ್ಕೆ ನಾಯಕನಾಗಬೇಕಾಯಿತು' ಎಂದರು ರಾಘವೇಂದ್ರ ಡಿ.ಜಿ.

ನಿಧಿ ಮಾರೋಲಿ, ಸೌಖ್ಯ ಗೌಡ ನಾಯಕಿಯರು. ಜಯ್ ಶೆಟ್ಟಿ, ರಾಜ ಅಲಿ, ಶಿಲ್ಪ ಕುಮಟಾ ಮೊದಲಾದವರು ತಾರಾಗಣದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಎರಡು ಹೂಗಳು

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ನನ್ನ ಶಿಷ್ಯನೊಬ್ಬ ಇನ್‌ಸ್ಪೆಕ್ಟರ್ ಆಗಿ ನಮ್ಮೂರಿನ ಠಾಣೆಗೆ ಬಂದಿದ್ದ. ಆತನನ್ನು ಕಾಣಲು ಹೋದೆ. ಆತ ತನ್ನ ಸಹೋದ್ಯೋಗಿಗಳಿಗೆ ಇವರು ನಮ್ಮ ಮೇಷ್ಟ್ರು ಎಂದೆಲ್ಲಾ ಹೇಳಿಕೊಂಡ. ಅವನ ಜೊತೆ ಹೀಗೆ ಕೂತಿದ್ದಾಗ ಮತ್ತೊಬ್ಬ ಶಿಷ್ಯ ದೂರದಿಂದ ನಮಸ್ಕಾರ ಸಾರ್ ಎಂದು ಕೂಗಿದ. ತಿರುಗಿ ನೋಡಿದರೆ ಅವನ ನಮಸ್ಕಾರ ಸೆಲ್ ಒಳಗಿಂದ ಕೇಳಿ ಬಂದಿತ್ತು. ಅವನನ್ನು ಸರಿಯಾಗಿ ತದುಕಿ ಕೂರಿಸಿದ್ದರು.

'ನೀನು ಮರೆತಿರಬಹುದು ನಿನ್ನ ಜೂನಿಯರ್ ಬ್ಯಾಚಲ್ಲಿ ಕಲಿತ ಹುಡುಗ ಇವನು. ಯಾಕೆ ಹೀಗಾಗಿದ್ದಾನೆ ಎಂದು ನನಗೂ ಅರ್ಥವಾಗುತ್ತಿಲ್ಲ. ಎಂತ ಕರ್ಮ ನೋಡು ನಾನು ಪಾಠ ಮಾಡಿದ ಒಂದೇ ಬಳ್ಳಿಯ ಹೂಗಳು ನೀವಿಬ್ಬರು. ಇದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು' ಎಂದೆ.

ಒಳಗಿದ್ದ ಅವನಿಗೆ ಬಟ್ಟೆ ತೊಡಿಸಿ ಹೊರಗೆ ಕರೆಸಿಕೊಂಡ ಇನ್‌ಸ್ಪೆಕ್ಟರ್, 'ನೋಡು ಜೀವನದಲ್ಲಿ ನೀನೇನು ಕಲಿತೆಯೋ? ಯಾಕೆ ಕೆಟ್ಟೆಯೋ? ನನಗೆ ಗೊತ್ತಿಲ್ಲ. ನನ್ನ ಮನೆಯ ಕಷ್ಟಗಳು ನಾ ಕೆಡದಂತೆ ನೋಡಿಕೊಂಡವು. ಪೋಲಿ ಘಟಿಂಗ ಗೆಳೆಯರು ನನಗೂ ಇದ್ದರೂ. ಅವರನ್ನು ನೋಡಿ ನಾನು ಎಂದೂ ಇವರಂತಾಗಬಾರದು ಎಂದು ನಿರ್ಧರಿಸಿಕೊಂಡೆ. ನಮ್ಮಪ್ಪ ಅಮ್ಮ ಕೂಲಿ ಕೆಲಸ ಮಾಡಿ ನನ್ನ ಸಾಕಿದರು. ಅವರ ಆಸೆ ಈಡೇರಿಸುವುದೇ ನನ್ನ ಧರ್ಮ ಎಂದುಕೊಂಡೆ. ನೀನು ಒಳ್ಳೆಯವನಾಗಲು ಇನ್ನೂ ಕಾಲ ಮಿಂಚಿಲ್ಲ. ಸುಳ್ಳು, ಕಳ್ಳತನ ನಿಲ್ಲಿಸಿ ಒಳ್ಳೆಯವನಾಗು' ಎಂದ.

ನಿನ್ನೆ ಹಿಡಿದು ತಂದಾಗಿನಿಂದ ಕುಂಡೆ ಮೇಲೆ ಬಾರಿಸಿ ಸಿಟ್ಟಿನಲ್ಲೇ ಕುದಿಯುತ್ತಿದ್ದ ಇನ್‌ಸ್ಪೆಕ್ಟರ್ ಈಗ ಇಷ್ಟೊಂದು ಪ್ರೀತಿಯಿಂದ ಮಾತನಾಡುತ್ತಿರುವುದು ಕಳ್ಳ ಶಿಷ್ಯನಿಗೆ ವಿಚಿತ್ರವಾಗಿ ಕಾಣುತ್ತಿತ್ತು, ಮೇಷ್ಟ್ರು ಬಂದಿದ್ದು ಒಳ್ಳೆಯದೇ ಆಯಿತೆಂಬಂತೆ ಅವನು ಕೃತಜ್ಞತೆ ಸೂಚಿಸುತ್ತಾ ನನ್ನ ನೋಡಿದ.

ಹೀಗೆ ಭಿನ್ನ ದಾರಿ ತುಳಿದ ವಿದ್ಯಾರ್ಥಿಗಳು ನಮ್ಮ ಬದುಕಲ್ಲಿ ಒಮ್ಮೆಗೇ ಸಿಕ್ಕು ಅಚ್ಚರಿ ಹುಟ್ಟಿಸುತ್ತಾರೆ. ಒಳ್ಳೆಯ ಓದು ಕಲಿತು ಉತ್ತಮ ಕೆಲಸ ಹಿಡಿದ ವಿದ್ಯಾರ್ಥಿಗಿಂತ ಹಾಳಾಗಿ ಹೋದ, ತಪ್ಪು ದಾರಿ ಹಿಡಿದ, ವಿದ್ಯಾರ್ಥಿಗಳ ಬಗ್ಗೆ ಮೇಷ್ಟ್ರಾದವನಿಗೆ ಹೆಚ್ಚು ಮಮಕಾರ, ಪ್ರೀತಿ, ಕಾಳಜಿ. ಹಳ್ಳ ಹಿಡಿದ ಮಕ್ಕಳು ಹೇಗಾದರೂ ಒಳ್ಳೆಯವರಾಗಿ ಬದುಕಲಿ ಎಂಬ ಆಸೆ ಹೆಚ್ಚಾಗುತ್ತಲೇ ಇರುತ್ತದೆ. ಸಾಧಿಸುವವರ ದಾರಿ ಬಿಡಿ ಅದು ಸದಾ ಸುಗಮ. ಆದರೆ ಸಾಧಿಸಲಾಗದೆ ವಿಫಲವಾಗುವ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಕುತೂಹಲ ಯಾವಾಗಲೂ ಉಳಿದೇ ಇರುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಅಕ್ಟೋಬರ್ 11, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದ್ವಾದಶಿ ಗಂ. 17-38 ನಕ್ಷತ್ರ: ಮಘ ಗಂ. 08-45 ಯೋಗ: ಶುಭ ಗಂ 08-42 ಕರಣ: ತೈತಿಲ ಗಂ. 17-38, ಕನ್ಯಾ ಮಾಸದ 24 ನೇ ದಿನ, ಮಳೆನಕ್ಷತ್ರ: ಚಿತ್ರ 1.
ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-24 , ಸೂರ್ಯಾಸ್ತ : 06-11, ಮುಸ್ಲಿಂ ದಿನಾಂಕ : 25 ರಬಿಉಲ್ಲಾವಲ್, ದಿನ ವಿಶೇಷ : ಯತಿ ಮಹಾಲಯ
ಅದೃಷ್ಟ ಸಂಖ್ಯೆ : 2, 8

ಮೇಷ: ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಸಾಧ್ಯತೆಗಳಿವೆ. ಪ್ರಯತ್ನಗಳು ಕೈಗೂಡಲು ತಾಳ್ಮೆ ವಹಿಸುವುದು ಸೂಕ್ತ.

ವೃಷಭ: ತಾಯಿಯ ಆರೋಗ್ಯ ಅದರಲ್ಲೂ ಹೆಚ್ಚಾಗಿ ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡು ಬಂದು ದೈನಂದಿನ ಚುಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ.

ಮಿಥುನ: ವ್ಯಾಪಾರದ ಅಭಿವೃದ್ಧಿಗೆ ಬೇಕಾದ ಆರ್ಥಿಕ ಬಲದ ಜತೆ ಕೆಲವು ಉಪಾಯಗಳನ್ನು ಬಳಸುವುದು ಒಳ್ಳೆಯದು. ಹಣದ ಮೇಲಿನ ದುರಾಸೆಗಾಗಿ ಯಾವ ಕೆಲಸವನ್ನೂ ಮಾಡಬೇಡಿ. ಮರದ ವ್ಯಾಪಾರಿಗಳಿಗೆ ಉತ್ತಮ ಲಾಭ.

ಕರ್ಕಾಟಕ: ಪ್ರಯತ್ನಿಸಿದ ಕಾರ್ಯಗಳಲ್ಲಿ ಜಯವಿದ್ದು ವಿವಿಧ ಮೂಲಗಳಿಂದ ಆದಾಯ ಲಭಿಸುವುದು. ಹಾಲು ಉತ್ಪನ್ನ ಮಾರಾಟ ಗಾರರಿಗೆ ಲಾಭ ಆಗಲಿದೆ. ವೈಯಕ್ತಿಕ ಪ್ರಗತಿಯಿಂದ ಮನಸ್ಸಿಗೆ ನೆಮ್ಮದಿ ಇರುವುದು.

ಸಿಂಹ: ಆತ್ಮವಿಶ್ವಾಸ ಹಾಗೂ ಧನಾತ್ಮಕ ಮನೋಭಾವ ಗೆಲುವಿಗೆ ಕಾರಣವಾಗಲಿದೆ. ನಿಯಮಿತ ಆಹಾರ ಸೇವನೆಯಿಂದ ಅನಾರೋಗ್ಯವನ್ನು ಸರಿ-ಪಡಿಸಿಕೊಳ್ಳಬಹುದು. ವಿಮಾ ಸಲಹೆಗಾರರ ಪ್ರಯತ್ನ ನಿಷ್ಫಲವಾಗಬಹುದು.

ಕನ್ಯಾ: ಎದುರಾಗುವ ಸುವರ್ಣ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ ಗಮನಹರಿಸಿ. ನಿದ್ರಾಹೀನತೆಯಂಥ ಸಮಸ್ಯೆಗೆ ಕೆಟ್ಟ ಯೋಚನೆಗಳೇ ಮುಖ್ಯ ಕಾರಣವಾಗಿರುತ್ತದೆ. ಭೂ ವ್ಯವಹಾರದಲ್ಲಿ ಲಾಭವಿದೆ.

ತುಲಾ: ವ್ಯವಹಾರಗಳನ್ನು ನೇರ ನಡೆ ನುಡಿಯಿರುವವರೊಂದಿಗೆ ಮಾತ್ರ ಮುಂದುವರಿಸಿಕೊಂಡು ಹೋಗುವ ತೀರ್ಮಾನ ತೆಗೆದುಕೊಳ್ಳುವಂತಾಗಲಿದೆ. ಶೀತಬಾಧೆಯಂತಹ ಸಮಸ್ಯೆಯಿಂದಾಗಿ ಆಲಸ್ಯತನ ಹೆಚ್ಚಾಗುವುದು.

ವೃಶ್ಚಿಕ: ಸಣ್ಣ ಕೈಗಾರಿಕೆಯವರಿಗೆ ಉತ್ತಮ ಸಮಯ. ಸೌಲಭ್ಯವನ್ನು ಪಡೆಯುವ ಪ್ರಯತ್ನ ನಡೆಸಬಹುದು. ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು. ಯಶಸ್ಸು ನಿಮ್ಮದಾಗಿರುತ್ತದೆ.

ಧನು: ಆರಕ್ಷಕ ವರ್ಗದವರಿಗೆ ಅಥವಾ ಕಾವಲು ಪಡೆಯವರಿಗೆ ಕಾರ್ಯ ದೊತ್ತಡ ಹೆಚ್ಚಲಿದೆ. ಕೆಲಸದಲ್ಲಿ ಸಣ್ಣ ಪುಟ್ಟ ಅಡಚಣೆಯನ್ನು ಎದುರಿಸಬೇಕಾಗ-ಬಹುದು. ವ್ಯಸನಗಳಿಂದ ಆರ್ಥಿಕ ಸ್ಥಿತಿಗತಿಯು ಕೆಳಗಿಳಿಯುವಂತಾಗಬಹುದು.

ಮಕರ: ಸೇವಿಸುವ ಆಹಾರದಲ್ಲಿನ ವಿಷ ಪದಾರ್ಥದಿಂದ ಚರ್ಮಕ್ಕೆ ಸಂಬಂಧಿಸಿದಂತೆ ಅನಾರೋಗ್ಯ. ಮಹಾಗಣಪತಿಗೆ ಹರಕೆ ಹೇಳಿ ಕೊಳ್ಳುವ ಮೂಲಕ ತೀರ್ಮಾನ ತೆಗೆದುಕೊಳ್ಳಿರಿ. ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು.

ಕುಂಭ: ಆಪ್ತರೊಬ್ಬರ ನೆರವು ದೊರೆತು ಮಗನ ವಿದ್ಯಾಭ್ಯಾಸಕ್ಕೆ ಅಥವಾ ವಸತಿಗೆ ಸಹಾಯವಾಗಲಿದೆ. ಕಾರ್ಯಕ್ಷೇತ್ರದಲ್ಲಿ ಯಾವುದೇ ಅಡ್ಡಿ-ಆತಂಕಗ-ಳು ಇರುವುದಿಲ್ಲ. ಕುಶಲಕರ್ಮಿಗಳಿಗೆ ಪರಸ್ಥಳದವರಿಂದ ಬೇಡಿಕೆ ಹೆಚ್ಚಲಿದೆ.

ಮೀನ: ಅವಶ್ಯಕತೆ ಇರುವ ಇಷ್ಟವಾಗುವ ವಸ್ತುಗಳನ್ನು ಖರೀದಿಸುವ ಯೋಗವಿದೆ. ಮಗನ ವ್ಯವಹಾರಕ್ಕೆ ಸಂಬಂಧಿಸಿದ ಶುಭ ಸುದ್ದಿಯೊಂದು ಬರಲಿದೆ. ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು.

ಪದಬಂಧ 5467 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಪಕಾರಕ್ಕೆ ಪ್ರತಿಯಾಗಿ ಮಾಡುವ ಸಹಾಯ (5)
4.ಉತ್ತರದವರ ಬಾಯಲ್ಲಿ ಅಧಿಕ (3)
5.ಸರಕ್ಕನೆ ತಂದಿರುವ ಸಾಮಾನು (3)
6.ವನದಲ್ಲಿ ಮುಂಡನ (3)
7.ನೂಲು ತೆಗೆಯುವ ಸಾಧನ (3)
9.ಆಸ್ಥಾನದಲ್ಲಿ ಸಿಕ್ಕಿರುವ ಹುದ್ದೆ! (2)
10.ಸೂಟು ಧರಿಸಿದ್ದಕ್ಕೇ ಸಿಕ್ಕಿರುವ ರಜಾ (2)
12.ಸುರನ ಸಮೀಪಿಸಿರುವ ರಾಕ್ಷಸ (3)
14.ಹುಚ್ಚು ಎನ್ನುವುದಕ್ಕೊಂದು ಪರ್ಯಾಯ ಪದ (3)
15.ಹಾಸ್ಯ ಈ ವಿಧವಾಗಿ ಬಂದಿದೆ (3)
16.ಕೆರ ತಿರುಗಿಸಿ ಮಾಡಿದ ಮಿಶ್ರಣ! (3)
17.ರುಚಿಕಟ್ಟಾದ ಭೋಜನವಿದು (5)

ಮೇಲಿಂದ ಕೆಳಕ್ಕೆ
1.ಪಡಿನೆಳಲು ಇಲ್ಲಿ ಕಾಣುತ್ತಿದೆ (4)
2.ಅಂತ್ಯ ಅಥವಾ ಸಾವು ಎಂದರೂ ಸರಿ (5)
3.ನರನ ಜಿಹ್ವೆಯಿದು (3)
4.ವಿರಳವಾಗಿರುವ ರಕ್ತ (3)
8.ಕಟಕಟೆಯಲ್ಲಿರುವ ವಂಚಕ (3)
9.ಈ ರೀತಿ ನೆಲೆಗೊಳಿಸು (3)
10.ಕನ್ನಡಿಗ ಹಿಡಿದಿರುವ ಮೈಕ್ರೊಸ್ಕೋಪ್ (5)
11.ನಡುವಿನ ಜಾಗ (4)
13.ಕುಪ್ಪಸವನ್ನು ಹೀಗೂ ಹೇಳುವರು (3)
14.ಕೊನೆಗೆ ಬೆಲೆಯಿರುವ ಹೊಟ್ಟೆ (3)



5466ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ವಿಜಯೋತ್ಸವ
4.ಪಾತಕ 5.ನಡುಕ
7.ಜನಕ 9.ತೋಳ
10.ನರಿ 11.ನಕುಲ
13.ಕರ್ತಾರ 15.ಸಲಗ
16.ಸುಮನೋಹರ

ಮೇಲಿಂದ ಕೆಳಕ್ಕೆ:
1.ಪ್ರಯೋಜನ 2.ವಿಕ
3.ವನ 4.ಪಾರಿತೋಷಕ
6.ಕಸ್ತೂರಿಮೃಗ
7.ಜವಾನ
8.ಕಮಲ 12.ಕುಡಿನೋಟ
14.ರಸು 15.ಸರ

ಸುಡೊಕು 5853

2		1		8	3		7	5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5852 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ನ್ಯೂಸ್‌ಕ್ಲಿಕ್: ನ್ಯಾಯಾಂಗ ವಶಕ್ಕೆ ಬಂಧಿತರು

ನವದೆಹಲಿ (ಪಿಟಿಐ): ನ್ಯೂಸ್‌ಕ್ಲಿಕ್ ಸುದ್ದಿ ಪೋರ್ಟಲ್‌ನ ಸ್ಥಾಪಕ ಪ್ರಬೀರ್ ಪುರಕಾಯಸ್ಥ ಮತ್ತು ಸಂಸ್ಥೆಯ ಎಚ್. ಆರ್. ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ದೆಹಲಿ ಕೋರ್ಟ್ ಮಂಗಳವಾರ 10 ದಿನದ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಚೀನಾ ಪರ ಪ್ರಚಾರಕ್ಕಾಗಿ ಸುದ್ದಿ ಪೋರ್ಟಲ್ ಹಣ ಪಡೆದಿದೆ ಎಂಬ ಆರೋಪದಲ್ಲಿ ಇಬ್ಬರನ್ನು ಪೊಲೀಸರು ಯುಎಪಿಎ ಕಾಯ್ದೆಯಡಿ ಬಂಧಿಸಿದ್ದು, ಕೋರ್ಟ್‌ಗೆ ಹಾಜರುಪಡಿಸಿದ್ದರು.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಹರ್ದೀಪ್ ಕೌರ್, ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. 'ನನ್ನ ಕಕ್ಷಿದಾರರ ವಿರುದ್ಧ ಮೇಲ್ನೋಟಕ್ಕೆ ಯಾವುದೇ ಪ್ರಕರಣವಿಲ್ಲ' ಎಂದು ಪುರಕಾಯಸ್ಥ ಪರ ವಕೀಲರು ಕೋರ್ಟ್ ಗಮಕ್ಕೆ ತಂದರು..

ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅತುಲ್ ಶ್ರೀವಾತ್ಸವ, ಆರೋಪಿಗಳ ನ್ಯಾಯಾಂಗ ಬಂಧನವು ನ್ಯಾಯಯುತವಾಗಿದೆ ಎಂದು ತಿಳಿಸಿದರು.

ಈ ಇಬ್ಬರನ್ನು ದೆಹಲಿ ಪೊಲೀಸರು ಅ.3ರಂದು ಬಂಧಿಸಿದ್ದರು.

ಮುಸ್ಲಿಂ ಕೈದಿಗಳ ಬಿಡುಗಡೆಗೆ ಕ್ರಮ: ಸಿ.ಎಂ ಸ್ಟಾಲಿನ್

ಪ್ರಜಾವಾಣಿ ವಾರ್ತೆ

ಚೆನ್ನೈ: 'ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ 20 ಮುಸ್ಲಿಮರು ಸೇರಿದಂತೆ 49 ಕೈದಿಗಳು ಅವಧಿಪೂರ್ಣಗೊಂಡಿದ್ದರೂ ಸೆರೆವಾಸ ಅನುಭವಿಸುತ್ತಿದ್ದಾರೆ. ರಾಜ್ಯಪಾಲರ ಒಪ್ಪಿಗೆ ದೊರೆತ ತಕ್ಷಣ ಈ ಕೈದಿಗಳನ್ನು ಬಿಡುಗಡೆ ಮಾಡಲಾಗುವುದು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಂಗಳವಾರ ಹೇಳಿದ್ದಾರೆ.

ವಿಧಾನಸಭೆ ಅಧಿವೇಶನದಲ್ಲಿ ಈ ವಿಷಯ ತಿಳಿಸಿದ ಸ್ಟಾಲಿನ್, 'ಈಗಾಗಲೇ 9 ಮುಸ್ಲಿಂ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ' ಎಂದು ಹೇಳಿದ್ದಾರೆ.

ಮುಸ್ಲಿಂ ಕೈದಿಗಳ ಸ್ಥಿತಿ ಕುರಿತು ವಿರೋಧ ಪಕ್ಷದ ನಾಯಕ ಇ.ಕೆ. ಪಳನಿಸ್ವಾಮಿ ಮಂಡಿಸಿದ್ದ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ವೇಳೆ ಸ್ಟಾಲಿನ್ ಈ ಮಾಹಿತಿ ನೀಡಿದ್ದಾರೆ.

'ಮುಸ್ಲಿಮರ ಕುರಿತು ಈಗ ದಿಢೀರ್ ವಿಶೇಷ ಗಮನ ಸೆಳೆಯುವ ಸೂಚನೆ ಮಂಡನೆ ಹಾಗೂ ಕಾಳಜಿ ತೋರುತ್ತಿರುವುದಕ್ಕೆ ಕಾರಣ ಏನು' ಎಂದು ಕುಟುಕಿದ ಸ್ಟಾಲಿನ್, 'ಎಐಎಡಿಎಂಕೆ ಅಧಿಕಾರದಲ್ಲಿದ್ದಾಗ ಈ ಬಗ್ಗೆ ಕೈಗೊಂಡ ಕ್ರಮವೇನು' ಎಂದು ಪ್ರಶ್ನಿಸಿದರು.

ಈ ಸೂಚನೆ ಬೆಂಬಲಿಸಿ ಮಾತನಾಡಿದ ವಿವಿಧ ಪಕ್ಷಗಳ ನಾಯಕು, ಭಯೋತ್ಪಾದನಾ ದಾಳಿಗಳು ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಸೆರೆವಾಸ ಅನುಭವಿಸುತ್ತಿರುವ ಮುಸ್ಲಿಂ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸ್ಟಾಲಿನ್, 'ವಯಸ್ಸಾದ ಮತ್ತು ಮಾರಕ ಕಾಯಿಲೆಗಳಿಂದ ಬಳಲುತ್ತಿರುವವರು ಸೇರಿದಂತೆ 20 ವರ್ಷ ಸೆರೆವಾಸ ಅನುಭವಿಸಿರುವ ಕೈದಿಗಳ ಬಿಡುಗಡೆ ಕುರಿತು ಪರಿಶೀಲಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್. ಆದಿನಾಥನ್ ನೇತೃತ್ವದಲ್ಲಿ 2021ರ ಡಿ. 22ರಂದು ಸಮಿತಿ ರಚಿಸಲಾಗಿತ್ತು'.

'ಕಳೆದ ವರ್ಷ ಅಕ್ಟೋಬರ್ 28ರಂದು ವರದಿ ಸಲ್ಲಿಸಿದ್ದ ಸಮಿತಿ, 264 ಕೈದಿಗಳ ಬಿಡುಗಡೆಗೆ ಶಿಫಾರಸು ಮಾಡಿತ್ತು. ವರದಿ ಆಧಾರದಲ್ಲಿ, 20 ಮುಸ್ಲಿಮರು ಸೇರಿದಂತೆ 49 ಕೈದಿಗಳನ್ನು ಬಿಡುಗಡೆಗಾಗಿ ಆಯ್ಕೆ ಮಾಡಿ, ಅನುಮತಿಗಾಗಿ ಪಟ್ಟಿಯನ್ನು ರಾಜ್ಯಪಾಲರಿಗೆ ಕಳಿಸಿದ್ದೇವೆ' ಎಂದೂ ವಿವರಿಸಿದರು.

ಸಂಸದ ರಾಜಾ 15 ಬೇನಾಮಿ ಆಸ್ತಿ ವಶ: ಇ.ಡಿ

ನವದೆಹಲಿ (ಪಿಟಿಐ): ಡಿಎಂಕೆ ಸಂಸದ ಎ.ರಾಜಾ ಅವರಿಗೆ ಸೇರಿದ್ದು ಎನ್ನಲಾಗಿರುವ, ₹ 55 ಕೋಟಿ ಮೌಲ್ಯದ 15 ಬೇನಾಮಿ ಆಸ್ತಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ತಿಳಿಸಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಇವುಗಳನ್ನು ವಶಕ್ಕೆ ಪಡೆಯಲಾಗಿದೆ.ರಾಜಾ ಅವರು ಕೊವೈ ಶೆಲ್ಟರ್ಸ್ ಪ್ರೊಮೋಟರ್ಸ್ ಇಂಡಿಯಾ ಸಂಸ್ಥೆ ಹೆಸರಿನಲ್ಲಿ ಹೊಂದಿದ್ದರು ಇ.ಡಿ ಈ ಕುರಿತ ಹೇಳಿಕೆಯಲ್ಲಿ ತಿಳಿಸಿದೆ.

ತಮಿಳುನಾಡಿನ ಕೊಯಮತ್ತೂರಿನಲ್ಲಿ 45 ಎಕರೆ ಭೂಮಿಯನ್ನು ಇ. ಡಿ ಕಳೆದ ಡಿಸೆಂಬರ್‌ನಲ್ಲಿ ಜಪ್ತಿ ಮಾಡಿತ್ತು.

59 ವರ್ಷ ವಯಸ್ಸಿನ ರಾಜಾ ಅವರು ಸದ್ಯ ತಮಿಳುನಾಡಿನ ನೀಲಗಿರೀಸ್ ಕ್ಷೇತ್ರವನ್ನು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿದ್ದಾರೆ.

ಗಗನಯಾನ ಪರೀಕ್ಷಾರ್ಥ ಉಡಾವಣೆ 21ಕ್ಕೆ: ಸಚಿವ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾನವ ಸಹಿತ ಗಗನಯಾನಕ್ಕೆ ಮುನ್ನ ನಡೆಸಲು ಉದ್ದೇಶಿಸಿರುವ ಮೊದಲ ಪರೀಕ್ಷಾರ್ಥ ಉಡಾವಣೆಯನ್ನು ಇದೇ 21ರಂದು ನೆರವೇರಿಸಲಾಗುವುದು ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಮಂಗಳವಾರ ಹೇಳಿದ್ದಾರೆ.

ಮಾನವಸಹಿತ ಗಗನಯಾನಕ್ಕೂ ಮುನ್ನ ಮುಂದಿನ ವರ್ಷ ಮತ್ತೊಂದು ಪರೀಕ್ಷಾರ್ಥ ಉಡಾವಣೆ ನಡೆಸಲಾಗುವುದು. 'ವ್ಯೋಮ ಮಿತ್ರ' ಹೆಸರಿನ ಮಹಿಳಾ ರೊಬೋಟ್-ಗಗನಯಾನಿಯನ್ನು ಬಾಹ್ಯಾಕಾಶಕ್ಕೆ ಕಳಿಸಲಾಗುವುದು ಎಂದು ಹೇಳಿದರು.

ಚಂದ್ರಯಾನ–3 ಕಾರ್ಯಕ್ರಮದ ತಂಡವನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಗನಯಾನಿಗಳು ಸುರಕ್ಷಿತವಾಗಿ ಭೂಮಿ ಬಂದ ಬಳಿಕ ಪಾರಾಗುವ ವ್ಯವಸ್ಥೆಯ ಪರೀಕ್ಷೆಯನ್ನು ಕೂಡ ಇಸ್ರೊ ನಡೆಸಲಿದೆ ಎಂದು ಹೇಳಿದರು.

'ಗಗನಯಾನ' ಕಾರ್ಯಕ್ರಮದ ಮೊದಲ ಪರೀಕ್ಷಾರ್ಥ ಉಡಾವಣೆಗಾಗಿ ಬೆಂಗಳೂರಿನಲ್ಲಿರುವ ಇಸ್ರೊ ಕೇಂದ್ರದಲ್ಲಿ ಸಿದ್ಧತೆ ನಡೆಯುತ್ತಿದೆ –ಪಿಟಿಐ ಚಿತ್ರ

ಗಗನಯಾನ 'ಟಿವಿ–ಡಿ1'(ಟೆಸ್ಟ್ ವೆಹಿಕಲ್ ಡೆವಲಪ್‌ಮೆಂಟ್) ಬಾಹ್ಯಾಕಾಶನೌಕೆಯ ಉಡ್ಡಯನಕ್ಕೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಸಿದ್ಧತೆ ಮಾಡಿಕೊಂಡಿದೆ ಎಂದು ತಿಳಿಸಿದರು.

ಗಗನಯಾನಿಗಳು ಭೂಮಿಗೆ ಮರಳುವಾಗ ಗಗನಯಾನಿಗಳನ್ನು ಹೊತ್ತ ಕ್ರ್ಯೂಮಾಡ್ಯೂಲ್ ಅಥವಾ ಕ್ಯಾಪ್ಸೂಲ್, ಭೂಮಿಯಿಂದ 11 ಕಿ.ಮೀ. ಎತ್ತರದಲ್ಲಿ ರಾಕೆಟ್‌ನಿಂದ ಬೇರ್ಪಡುತ್ತದೆ. ನಂತರ, ಈ ಕ್ಯಾಪ್ಸೂಲ್‌ಅನ್ನು ಬಂಗಾಳ ಕೊಲ್ಲಿಯಲ್ಲಿ ಸುರಕ್ಷಿತವಾಗಿ ಇಳಿಸಲಾಗುತ್ತದೆ. ನಂತರ, ನೌಕಾಪಡೆ ಸಿಬ್ಬಂದಿ ಈ ಕ್ಯಾಪ್ಸೂಲ್ ಅನ್ನು ತರುವರು.

'ಈ ಪರೀಕ್ಷಾರ್ಥ ಉಡ್ಡಯನವು ಮಾನವರಹಿತ ಗಗನಯಾನ ಕಾರ್ಯಕ್ರಮಕ್ಕೆ ಮುನ್ನುಡಿ ಬರೆಯಲಿದ್ದು, ನಂತರ ಕೆಳ ಭೂಕಕ್ಷೆಯಲ್ಲಿ ಮಾನವಸಹಿತ ಗಗನಯಾನಕ್ಕೆ ಶಕ್ತಿ ತುಂಬಲಿದೆ. ಈ ಪರೀಕ್ಷಾರ್ಥ ಉಡಾವಣೆಗಳ ಯಶಸ್ಸಿನ ಆಧಾರದಲ್ಲಿ ಮುಂದಿನ ವರ್ಷಾಂತ್ಯಕ್ಕೆ ಮಾನವಸಹಿತ ಗಗನಯಾನ ಕಾರ್ಯಕ್ರಮವನ್ನು ಯೋಜಿಸಲಾಗುವುದು' ಎಂದು ಸಚಿವ ಜಿತೇಂದ್ರ ಸಿಂಗ್ ಅವರು ತಿಳಿಸಿದರು.

ಸರಾಸರಿ 30 ದಿನ ದಾಟದ ಕಲಾಪ

ಐದು ರಾಜ್ಯಗಳ ವಿಧಾನಸಭಾ ಅಧಿವೇಶನದ ಅಂಕಿ ಅಂಶ ಬಹಿರಂಗ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭೆಗೆ ಚುನಾವಣೆ ಘೋಷಣೆಯ ಬೆನ್ನಲ್ಲೇ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಮತ್ತೊಂದೆಡೆ ಈ ರಾಜ್ಯಗಳಲ್ಲಿ ವಿಧಾನಸಭಾ ಕಲಾಪವು ಒಂದು ವರ್ಷಕ್ಕೆ ಸರಾಸರಿ ಮೂವತ್ತು ದಿನಗಳನ್ನೂ ದಾಟಿಲ್ಲ ಎಂಬ ಅಂಕಿಅಂಶ ಚಿಂತಕರ ಚಾವಡಿ ತೆರೆದಿಟ್ಟಿದೆ.

ರಾಜಸ್ಥಾನವು ಒಂದು ವರ್ಷದಲ್ಲಿ ಅತಿಹೆಚ್ಚು ವಿಧಾನಸಭೆ ಕಲಾಪ ನಡೆಸಿದ ಕೀರ್ತಿಗೆ ಪಾತ್ರವಾಗಿದೆ. ಈ ರಾಜ್ಯದಲ್ಲಿ ವಾರ್ಷಿಕ ಸರಾಸರಿ 29 ದಿನಗಳ ಕಾಲ ಅಧಿವೇಶನ ನಡೆದಿದೆ. ತೆಲಂಗಾಣದಲ್ಲಿ ಕಲಾಪವು ಕೇವಲ 15 ದಿನಗಳಿಗೆ ಸೀಮಿತಗೊಂಡಿದೆ ಎಂದು ಕಲಾಪ ಕುರಿತ ಚಿಂತನಾ ಸಂಸ್ಥೆಯಾದ ಪಿಆರ್‌ಎಸ್ ಶಾಸಕಾಂಗ ಸಂಶೋಧನಾ ವರದಿ ತಿಳಿಸಿದೆ.

2019ರಿಂದ 2023ರ ನಡುವೆ ಛತ್ತೀಸಗಢದಲ್ಲಿ ಒಂದು ವರ್ಷಕ್ಕೆ ಸರಾಸರಿ 23 ದಿನಗಳಷ್ಟೇ ಕಲಾಪ ನಡೆದಿದೆ. ಸರಾಸರಿ ಅವಧಿಯು ಕೇವಲ ಐದು ಗಂಟೆ ಆಗಿದೆ ಎಂದು ಹೇಳಿದೆ.

ಮಧ್ಯಪ್ರದೇಶದಲ್ಲಿ 16 ದಿನ ಅಧಿವೇಶನ ನಡೆದರೆ, ದಿನವೊಂದರ ಸರಾಸರಿ ಅವಧಿ ನಾಲ್ಕು ಗಂಟೆಗೆ ಸೀಮಿತಗೊಂಡಿದೆ. ಮಿಜೋರಾಂನಲ್ಲಿ 18 ದಿನ ಕಲಾಪ ನಡೆದಿದ್ದು, ಶಾಸಕರು ಸರಾಸರಿ ಐದು ಗಂಟೆ ಕಾಲವಷ್ಟೇ ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ ಎನ್ನುತ್ತದೆ ವರದಿ.

ರಾಜಸ್ಥಾನದಲ್ಲಿ ಅತಿಹೆಚ್ಚು ಶಾಸಕರು ಕಲಾಪದಲ್ಲಿ ಪಾಲ್ಗೊಂಡ ಹಿರಿಮೆ ಹೊಂದಿದ್ದಾರೆ. ದಿನವೊಂದಕ್ಕೆ ಸರಾಸರಿ ಏಳು ಗಂಟೆ ಕಾಲ, ರಾಜ್ಯದ ಗಮನಾರ್ಹ ವಿಷಯಗಳ ಬಗ್ಗೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದೆ.

ರಾಜಸ್ಥಾನ ವಿಧಾನಸಭೆಯ ಆರಂಭದ ಹತ್ತು ವರ್ಷಗಳ ಅವಧಿಯಲ್ಲಿ ಒಂದು ವರ್ಷಕ್ಕೆ ಸರಾಸರಿ 59 ದಿನಗಳ ಕಾಲ ಕಲಾಪ ನಡೆದಿರುವ ನಿದರ್ಶನವಿದೆ. ಮಧ್ಯಪ್ರದೇಶದಲ್ಲಿ ಇದೇ ಅವಧಿಯಲ್ಲಿ 48 ದಿನ ಅಧಿವೇಶನ ನಡೆದಿದೆ. ಆದರೆ, ಕಳೆದ ಒಂದು ದಶಕದ ಅವಧಿಯಲ್ಲಿ ಕಲಾಪದ ದಿನಗಳು ಇಳಿಕೆಯಾಗಿರುವುದಕ್ಕೆ ಅಂಕಿಅಂಶಗಳು ಕನ್ನಡಿ ಹಿಡಿದಿವೆ. ರಾಜಸ್ಥಾನದಲ್ಲಿ ಕಲಾಪದ ದಿನಗಳ ಸಂಖ್ಯೆ 29ಕ್ಕೆ ಇಳಿದರೆ, ಮಧ್ಯಪ್ರದೇಶದಲ್ಲಿ 21 ದಿನಗಳಿಗೆ ಕುಸಿದಿದೆ.

ಅಂದಹಾಗೆ ತೆಲಂಗಾಣದಲ್ಲಿ 2017ರ ವೇಳೆ 37 ದಿನ ಕಲಾಪ ನಡೆದ ದಾಖಲೆಯೂ ಇದೆ. ಆ ನಂತರದ ವರ್ಷಗಳಲ್ಲಿ ಅಧಿವೇಶನದ ವಾರ್ಷಿಕ ಸರಾಸರಿ ಪ್ರಮಾಣ 20 ದಿನಗಳಿಗೆ ಸೀಮಿತಗೊಂಡಿದೆ.

ಡೆಪ್ಯುಟಿ ಸ್ಪೀಕರ್ ನೇಮಿಸಿಲ್ಲ: ರಾಜಸ್ಥಾನ ವಿಧಾನಸಭೆ ಇಡೀ ಅವಧಿಗೆ ಡೆಪ್ಯುಟಿ ಸ್ಪೀಕರ್ ನೇಮಿಸಿಲ್ಲ. 2020ರಿಂದ ಮಧ್ಯಪ್ರದೇಶದಲ್ಲೂ ಡೆಪ್ಯುಟಿ ಸ್ಪೀಕರ್ ನೇಮಿಸಿಲ್ಲ ಎಂದು ವರದಿ ಹೇಳಿದೆ.

ಛತ್ತೀಸಗಢ ವಿಧಾನಸಭೆಯಲ್ಲಿ ಶೇ 17ರಷ್ಟು ಶಾಸಕಿಯರಿದ್ದರೆ, ರಾಜಸ್ಥಾನದಲ್ಲಿ ಶೇ 13 ಹಾಗೂ ಮಧ್ಯಪ್ರದೇಶದಲ್ಲಿ ಶೇ 10ರಷ್ಟಿದ್ದಾರೆ ಎಂದು ತಿಳಿಸಿದೆ.

ಛತ್ತೀಸಗಢದಲ್ಲಿ ಕಲಾಪಕ್ಕೆ ಶಾಸಕಿಯರ ಹಾಜರಾತಿ ಪ್ರಮಾಣ ಶೇ 93ರಷ್ಟಿದ್ದರೆ, ಶಾಸಕರ ಹಾಜರಾತಿ ಶೇ 88ರಷ್ಟಿದೆ. ಮಧ್ಯಪ್ರದೇಶದಲ್ಲಿ ಶಾಸಕಿಯರ ಹಾಜರಾತಿ ಶೇ 79ರಷ್ಟಿದ್ದರೆ, ಶಾಸಕರ ಹಾಜರಾತಿ 81ರಷ್ಟಿದೆ. ರಾಜಸ್ಥಾನದಲ್ಲಿ ಶಾಸಕಿಯರ ಹಾಜರಾತಿ ಶೇ 77ರಷ್ಟು ಹಾಗೂ ಶಾಸಕರ ಹಾಜರಾತಿ 82ರಷ್ಟಿದೆ ಎಂದು ವರದಿ ವಿವರಿಸಿದೆ.

ಎಷ್ಟು ಮಸೂದೆಗೆ ಅಂಗೀಕಾರ?

ಈ ಐದು ರಾಜ್ಯಗಳ ವಿಧಾನಸಭೆಗಳಲ್ಲಿ (ಐದು ವರ್ಷಗಳಲ್ಲಿ) ಮಂಡನೆಯಾದ ಮಸೂದೆಗಳಿಗೆ ಅಂಗೀಕಾರ ನೀಡಿದ ಪ್ರಮಾಣ ಶೇ 48ರಷ್ಟಿದೆ. ಮಿಜೋರಾಂನಲ್ಲಿ 57 ಮಸೂದೆಗಳಿಗೆ ಒಪ್ಪಿಗೆ ಸಿಕ್ಕಿದೆ.

2020ರ ವರದಿ ಪ್ರಕಾರ ಛತ್ತೀಸಗಢ ವಿಧಾನಸಭೆಯಲ್ಲಿ 6 ಗಂಟೆ ಕಾಲ ನಡೆದ ಕಲಾಪದಲ್ಲಿ 14 ಮಸೂದೆಗಳಿಗೆ ಅಂಕಿತ ದೊರೆತ ನಿದರ್ಶನವಿದೆ. 2022ರಲ್ಲಿ ಮಧ್ಯಪ್ರದೇಶದಲ್ಲಿ ಎರಡು ದಿನಗಳ ಕಾಲ ನಡೆದ ಅಧಿವೇಶನದಲ್ಲಿ 13 ಮಸೂದೆಗಳಿಗೆ ಅಂಗೀಕಾರ ನೀಡಲಾಗಿತ್ತು ಎಂದು ವರದಿ ವಿವರಿಸಿದೆ.

ಅಲ್ಲದೇ, ಈ ಎರಡು ರಾಜ್ಯಗಳಲ್ಲಿ ಅತಿಹೆಚ್ಚು ಸುಗ್ರೀವಾಜ್ಞೆಗಳನ್ನು ಅಂಗೀಕರಿಸಲಾಗಿದೆ. 2019ರಿಂದ 2023ರ ನಡುವೆ ಮಧ್ಯಪ್ರದೇಶದಲ್ಲಿ 39 ಸುಗ್ರೀವಾಜ್ಞೆಗಳಿಗೆ ಒಪ್ಪಿಗೆ ಸಿಕ್ಕಿದೆ. ಉಳಿದಂತೆ ತೆಲಂಗಾಣ 14 ಹಾಗೂ ರಾಜಸ್ಥಾನದಲ್ಲಿ 13 ಸುಗ್ರೀವಾಜ್ಞೆಗಳಿಗೆ ಅಂಗೀಕಾರ ದೊರೆತಿದೆ.

ವಿಚಾರಣೆಗೆ ಬಿಧೂಢಿ ಗೈರು

ನವದೆಹಲಿ (ಪಿಟಿಐ): ಆಕ್ಷೇಪಾರ್ಹವಾದ ಹೇಳಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಮಂಗಳವಾರ ನಿಗದಿಯಾಗಿದ್ದ ಲೋಕಸಭೆಯ ಹಕ್ಕುಬಾಧ್ಯತಾ ಸಮಿತಿ ಸಭೆಗೆ ಬಿಜೆಪಿ ಸಂಸದ ರಮೇಶ್ ಬಿಧೂಢಿ ಗೈರುಹಾಜರಾದರು.

ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ವಿರುದ್ಧ ಸದನದಲ್ಲಿಯೇ ಆಕ್ಷೇಪಾರ್ಹ ಪದ ಬಳಸಿದ ಆರೋಪ ಇವರ ಮೇಲಿದೆ. ಪೂರ್ವ ನಿಗದಿತ ಕಾರ್ಯಕ್ರಮದಿಂದಾಗಿ ಬರಲು ಆಗುತ್ತಿಲ್ಲ ಎಂದು ತಿಳಿಸಿದ್ದಾರೆ. ಅವರು ಸದ್ಯ ರಾಜಸ್ಥಾನದಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ.

ಮದುವೆ ಆಗಿಲ್ಲ ಏಕೆ: ರಾಹುಲ್ ಹೇಳಿದ್ದೇನು?

ನವದೆಹಲಿ (ಪಿಟಿಐ) 'ನಿಮ್ಮ ಇಷ್ಟದ ಆಹಾರ ಯಾವುದು, ನೀವು ಯಾಕೆ ಮದುವೆ ಆಗಿಲ್ಲ–ಇತ್ಯಾದಿಯಾಗಿ ಜೈಪುರದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ರಾಹುಲ್ ಗಾಂಧಿ ಅವರಿಗೆ ಪ್ರಶ್ನೆಗಳ ಸುರಿಮಳೆಗರೆದರು.

ಜೈಪುರದ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರ ಜತೆಗೆ ರಾಹುಲ್ ಅವರು ನಡೆಸಿದ ಸಂವಾದದ ವಿಡಿಯೊವೊಂದು ಮಂಗಳವಾರ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿದೆ. ಜಾತಿಗಣತಿ, ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ, ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಸೇರಿದಂತೆ ಅನೇಕ ವಿಷಯಗಳು ಸಂವಾದದಲ್ಲಿ ಕೇಳಿ ಬಂದಿವೆ.

'ನೀವು ಬುದ್ಧಿವಂತರು ಮತ್ತು ನೋಡಲು ಸುಂದರವಾಗಿದ್ದೀರ....ಮದುವೆ ಕುರಿತು ಯಾಕೆ ಆಲೋಚಿಸಲಿಲ್ಲ?' ಎಂದು ಕೇಳಿದ ಪ್ರಶ್ನೆಗೆ, ರಾಹುಲ್ ಅವರು 'ಏಕೆಂದರೆ ಕಾಂಗ್ರೆಸ್ ಪಕ್ಷದಲ್ಲಿ ಮತ್ತು ನನ್ನ ಕೆಲಸದಲ್ಲಿ ನಾನು ಸಂಪೂರ್ಣ ತೊಡಗಿಕೊಂಡಿದ್ದೇನೆ' ಎಂದು ಉತ್ತರಿಸಿದ್ದಾರೆ.

ಪ್ರಿಯವಾದ ಆಹಾರ ಬಗ್ಗೆ ಪ್ರತಿಕ್ರಿಯಿಸಿ, ಹಾಗಲಕಾಯಿ, ಬಟಾಣಿ, ಪಾಲಾಕ್ ಸೊಪ್ಪು ಹೊರತುಪಡಿಸಿ ಯಾವುದಾದರೂ ಆದೀತು ಎಂದಿದ್ದಾರೆ.

'ನಾನು ಇನ್ನೂ ಹೋಗದೆ ಇರುವ ಯಾವ ಸ್ಥಳಕ್ಕಾದರೂ ಹೋಗಲು, ನೋಡಲು ಇಷ್ಟಪಡುತ್ತೇನೆ. ಹೊಸ ಸ್ಥಳಗಳನ್ನು ನೋಡುವುದು ನನಗೆ ಯಾವಾಗಲೂ ಇಷ್ಟ' ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದ್ದಾರೆ.

'ಮುಖಕ್ಕೆ ಯಾವ ಕ್ರೀಂ ಬಳಸುವಿರಿ' ಎಂದು ಕೇಳಿದಾಗ ಕ್ರೀಂ ಅಥವಾ ಸೋಪನ್ನು ಬಳಸದೆ ನೀರಿನಿಂದಷ್ಟೆ ಮುಖ ತೊಳೆಯುವುದಾಗಿ ಹೇಳಿದ್ದಾರೆ.

ರಾಹುಲ್ ಪ್ರಕಾರ, ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಪುರುಷರಿಗಿಂತ ಏನೂ ಕಡಿಮೆಯಿಲ್ಲ. ಆದರೂ ಮಹಿಳೆಯರಿಗೆ ಕಡಿಮೆ ಹಕ್ಕುಗಳು ಇರುವುದು ಸರಿಯಲ್ಲ.

ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಕುರಿತು ಮಾತನಾಡುತ್ತಾ, 'ಹಣ ಎಂದರೇನು?, ಹಣ ಮತ್ತು ಅಧಿಕಾರ ಹೇಗೆ ಬಳಕೆಯಾಗುತ್ತದೆ ಎಂಬ ಬಗ್ಗೆ ವಾಸ್ತವವಾಗಿ ಮಹಿಳೆಯರಿಗೆ ಎಂದಿಗೂ ವಿವರಿಸಲಾಗಿಲ್ಲ' ಎಂದಿದ್ದಾರೆ.

'ಮಹಿಳೆಗೆ ಉದ್ಯೋಗವಿದ್ದೂ ಹಣದ ಬಗ್ಗೆ ತಿಳಿವಳಿಕೆ ಇಲ್ಲದಿದ್ದರೆ ಪ್ರಯೋಜನ ಇಲ್ಲ. ಒಂದು ವೇಳೆ ಉದ್ಯೋಗವಿಲ್ಲದಿದ್ದರೂ ಮಹಿಳೆ ಹಣದ ಬಗ್ಗೆ ತಿಳಿದಿದ್ದರೆ ಅದು ಮಹತ್ವದ ಸಂಗತಿ. ಇದು ಮಹಿಳೆಯರಿಗೆ ಅರ್ಥವಾಗದಿದ್ದರೆ ಅವರು ಯಾವಾಗಲೂ ಪುರುಷನನ್ನೇ ಅವಲಂಬಿಸಿರುತ್ತಾರೆ' ಎಂದು ವಿವರಿಸಿದ್ದಾರೆ.

'ರಾಜಕಾರಣಿ ಆಗದಿದ್ದರೆ ನಾನು ಶಿಕ್ಷಕನಾಗುತ್ತಿದ್ದೆ. ನಾನು ಅಡುಗೆಯವನಾಗುತ್ತಿದ್ದೆ.. ಇನ್ನೂ ಏನೇನೋ ಆಗಿರುತ್ತಿದ್ದೆ' ಎಂದಿದ್ದಾರೆ.

ಚುನಾವಣಾ ಬಾಂಡ್: 31ಕ್ಕೆ ಸುಪ್ರೀಂ ವಿಚಾರಣೆ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಯೋಜನೆಯ ಕ್ರಮಬದ್ಧತೆ ಪ್ರಶ್ನಿಸಿರುವ ಅರ್ಜಿಯ ಅಂತಿಮ ವಿಚಾರಣೆಯನ್ನು ಸುಪ್ರಿಂ ಕೋರ್ಟ್ ಅಕ್ಟೋಬರ್ 31ರಂದು ನಡೆಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಮಂಗಳವಾರ ಪ್ರಕರಣದ ವಿಚಾರಣೆಗೆ ದಿನ ನಿಗದಿಪಡಿಸಿತು.

ಲೋಕಸಭೆಯ 2024ರ ಸಾರ್ವತ್ರಿಕ ಚುನಾವಣೆಗಾಗಿ ಚುನಾವಣಾ ಬಾಂಡ್ ಯೋಜನೆಯು ಆರಂಭವಾಗುವ ಮೊದಲೇ ಈ ಅರ್ಜಿಯ ವಿಚಾರಣೆ ನಡೆಸಬೇಕು ಎಂಬ ವಕೀಲ ಪ್ರಶಾಂತ್ ಭೂಷಣ್ ಅವರ ನಿವೇದನೆಯನ್ನು ಪೀಠವು ಗಮನಕ್ಕೆ ತೆಗೆದುಕೊಂಡಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬೆಂಗಳೂರು–560 048.
ಸಂ: ಕಾಪಾಅ/ಎಂಡಿಪಿ/ಟಿಎನ್/07/2023–24 ದಿನಾಂಕ: 09.10.2023
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)
ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಮಹದೇವಪುರ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳ ವ್ಯಾಪ್ತಿಯಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿಗಳು.	195.00	2,92,500/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಕುರಿತ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ; **13.10.2023ರ ಅಪರಾಹ್ನ 3.00 ಗಂಟೆಯವರೆಗೆ.** 3) ಪೂರ್ವ ಭಾವಿ ಸಭೆ ದಿನಾಂಕ: **17.10.2023 ಬೆಳಿಗ್ಗೆ 11.00 ಗಂಟೆಗೆ.** 4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25.10.2023ರ ಸಂಜೆ 4.00 ಗಂಟೆಯವರೆಗೆ** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **26.10.2023ರ ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ

ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಗದಗ
ಪ ಸಂ.ಜಿ.ವ.ಶಿ.ಕಾ.ಗ/ಬಾ.ವಾ.ಪ.ಟೆಂಡರ.ಪ್ರಕಟಣೆ/2023–24 ದಿನಾಂಕ:11/10/2023
ಟೆಂಡರ್ ಪ್ರಕಟಣೆ
ಉಲ್ಲೇಖ:ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ.ಗದಗರವರ ಟಿಪ್ಪಣಿ ಅನುಮೋದನೆ ಸಂ.18/06/10/2023
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ, ಸನ್ 2023–24ನೆ ಸಾಲಿಗಾಗಿ (01–11–2023 ರಿಂದ 31–10–2024) ಅವಧಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಬೇಕಾಗಿದೆ ಕಾರಣ ವಾಹನ ಮಾಲಿಕರು ಅನುಮೋದಿತ ಟೂರ್ಸ್ ಮತ್ತು ಟ್ರಾವೆಲ್ಸ್ ಸಂಸ್ಥೆಯವರು **ಹಳದಿ ಬೋರ್ಡ ಹೊಂದಿದ 2019 ರ ಕಾರ್ ಮಾಡೆಲ್** ಟೆಂಡರಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಶುಲ್ಕ ರೂ.500/–ಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಉಪಾದ್ಯಕ್ಷರು ಜಿಲ್ಲಾ ಲೋಕ ಶಿಕ್ಷಣ ಸಮಿತಿ ಗದಗ ಇವರ ಹೆಸರಿಗೆ ಡಿಡಿಯನ್ನು ನೀಡಿ ಟೆಂಡರ್ ಫಾರ್ಮ ಪಡೆದುಕೊಳ್ಳಬಹುದು ಯಾವುದೇ ಲೋಪದೋಷವಾದರೆ ಯಾವುದೆ ಮುನ್ಸೂಚನೆ ನೀಡದೆ ಟೆಂಡರ್ ರದ್ದುಪಡಿಸುವ ಹಾಗೂ ಅಂಗಿಕರಿಸುವ ಅಧಿಕಾರ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಅಧಿಕಾರಿಗಳಿಗೆ ಇರುತ್ತದೆ. **1}ವಾಹನ ಕಾರ್ ಮಾಡೆಲ್ 2)ಇಎಂಡಿ ಮೊತ್ತ ರೂ.15000/– 3)ಟೆಂಡರ ಪಾರ್ಮ ಪಡೆಯುವ ಹಾಗೂ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:26–10–2023 ಸಮಯ ಸಾಯಂಕಾಲ 4=00 ಘಂಟೆ 4)ಟೆಂಡರ್ ಪೆಟ್ಟಿಗೆ ತೆರೆಯುವ ದಿನಾಂಕ:27–10–2023 ರಂದು ಮದ್ಯಾಹ್ನ 3=00ಘಂಟೆಗೆ**
ಹೆಚ್ಚಿನ ಮಾಹಿತಿ ಮತ್ತು ಟೆಂಡರ್ ಪಾರ್ಮಗಳಿಗೆ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ. ಜಿಲ್ಲಾ ಆಡಳಿತ ಭವನ. ಕೊಠಡಿ ಸಂಖ್ಯೆ:205, 2ನೇ ಮಹಡಿ .ಗದಗ ಇಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ:08372–220491.
ಸಹಿ/– ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು (ಹೆ.ಪ್ರ)
ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಗದಗ
ವಾ.ಸಾ.ಇ/ಗದಗ/245/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
ದೂರವಾಣಿ: 080–23349434
No: KSEAB/2023-24/SE0003 Date: 10.10.2023
ಇ–ಟೆಂಡರ್ ಪ್ರಕಟಣೆ
ನಿರ್ದೇಶಕರು, ಪರೀಕ್ಷೆಗಳು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ಇವರು **"2024ರ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಿಗೆ ಅಗತ್ಯವಿರುವ ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಸರಬರಾಜು ಕಾರ್ಯಕ್ಕೆ"** ಅರ್ಹ ಸಂಸ್ಥೆಗಳಿಂದ ಇ–ಟೆಂಡರ್ ಅರ್ಜಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ಮತ್ತು ಕೆ.ಟಿ.ಪಿ.ಪಿ. ನಿಯಮಗಳು–2000, ರಂತೆ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಸ್ತಾವೇಜುಗಳನ್ನು ಮಂಡಳಿಯ ಅಂತರ್ಜಾಲ ತಾಣ **https://kppp.karnataka.gov.in** ಮತ್ತು **https://kseab.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ, ಟೆಂಡರ್ ವೇಳಾಪಟ್ಟಿ ಮತ್ತು ಸಂಕ್ಷಿಪ್ತ ವಿವರ ಕೆಳಕಂಡಂತಿದೆ.
(1) ಟೆಂಡರ್ ಪ್ರಾರಂಭ ದಿನಾಂಕ: **10.10.2023.** (2) ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ ಮತ್ತು ಸಮಯ: **19.10.2023 11.30 AM.** (3) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: **09.11.2023 12.30 PM.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **13.11.2023 4.00 PM.** (5) ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ: **17.11.2023 4.00 PM.** (6) ಟೆಂಡರ್ ಅಂದಾಜು ಮೌಲ್ಯ: **ರೂ 4,30,59,240/–**(Exclusive of GST). (7) ಮುಂಗಡ ಹಣ ಠೇವಣಿ: **ರೂ. 8,61,185/–.** ಹೆಚ್ಚಿನ ವಿವರಗಳನ್ನು ಮಂಡಳಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ನಿರ್ದೇಶಕರು, ಪರೀಕ್ಷೆಗಳು.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023.
ದೂರವಾಣಿ ಸಂಖ್ಯೆ: 080–23113584, ಇ ಮೇಲ್ ಐಡಿ: pdrch-hfws@karnataka.gov.in
Notification No: DD/Dialysis/09/2023-24 (E-1104670) Date: 09.10.2023
Reference No.: NHM/2023-2024/SE0006/Call-2
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ
"Installation, Operations and Management of Haemodialysis Units in District and Taluk level Hospitals Under Public Private Partnership (PPP) Framework"
ರಾಷ್ಟ್ರೀಯ ಆರೋಗ್ಯ ಅಭಿಯಾನವು ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP) ಚೌಕಟ್ಟಿನಡಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಹೀಮೊಡಯಾಲಿಸಿಸ್ ಘಟಕಗಳ ಸ್ಥಾಪನೆ, ಕಾರ್ಯಾಚರಣೆಗಳು ಮತ್ತು ನಿರ್ವಹಣೆಗಳನ್ನು ಪೂರೈಸಲು ಹೆಸರಾಂತ ಸೇವಾದಾರರುಗಳಿಗೆ ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್ ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್ ಗಳನ್ನು ದಿನಾಂಕ : 09/10/2023 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯುಮೆಂಟ್ ಗಳನ್ನು ದಿನಾಂಕ: 18/10/2023 ಅಪರಾಹ್ನ 5.30 ರ ಒಳಗಾಗಿ ಸಲ್ಲಿಸತಕ್ಕದ್ದು.
ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 5.30 ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.
ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
DIPR/CP/1649/Zen/2023-24

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಕಿಇಂ–1:ಟೆಂಡರ್14/2023–24
ದಿನಾಂಕ: 04.10.2023
ಟೆಂಡರ್ ಪ್ರಕಟಣೆ ಸಂ.14/2023–24 ದಿನಾಂಕ: 04.10.2023
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 14/2023–24:ದಿನಾಂಕ 14–10–2023 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 2059–ವಿವಿಧ ಇಲಾಖಾ ಕಟ್ಟಡಗಳು ದುರಸ್ಥಿ ಮತ್ತು 3054– ಜಿಲ್ಲಾ ಮುಖ್ಯರಸ್ತೆ ನಿರ್ವಹಣೆ ಲೆಕ್ಕ ಶೀರ್ಷಿಕೆ ಅಡಿಗಳಲ್ಲಿ 01 ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ ರೂ.14.41 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.36,100/–, ಅರ್ಹ ಗುತ್ತಿಗೆದಾರರು : 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 2 ತಿಂಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 12.10.2023 ರ 16–00 ಗಂಟೆಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದಿನಾಂಕ 05.10.2023 ರಿಂದ 13.10.2023 16.00 ಗಂಟೆವರೆಗೆ ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 13.10.2023 ರ ಸಂಜೆ 16–00 ಗಂಟೆವರೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 16.10.2023 ರ ಬೆಳಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.kppp.karnataka.gov.inರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/235/KSMCA/2023-24

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
EE/RWSS/Dvn/SMG/TE/JJM/Kppp-Proc/2023-24/1045 Date : 07.10.2023
ಟೆಂಡರ್ ಪ್ರಕಟಣೆ (ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇಂಡೆಂಟ್ ಸಂಖ್ಯೆ : (1) 773 Call2 (2) 771 Call2 (3) 769 Call2 (4) 830 Call2 (5) 580 Call2 (6)675 Call2 (7) 976 Call2 (8) 274 Call2 (9) 684 Call2 (10) 483 Call2 (11) 619 Call2 (12) 603 Call2 (13) 536 Call2 (14) 508 Call2 (15) 470 Call2**
ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https: //www.kppp.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು. **ಟೆಂಡರ್‌ನ ಕೆಲವು ಷರತ್ತುಗಳು** (1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **16.10.2023 ರ ಸಂಜೆ 5.30** (2) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **18.10.2023 ರ ಬೆಳಿಗ್ಗೆ 11.30** (3) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **20.10.2023 ರ ಬೆಳಿಗ್ಗೆ 11.30** (4) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ದ್ವಿ ಲಕೋಟೆ 6 ತಿಂಗಳು (180 ದಿನಗಳು).**
ಸಹಿ/– ಕಾರ್ಯಪಾಲಕ ಇಂಜಿನಿಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ಸಂ.43-10
ಝೇಂಕಾರ್/2023-24

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

REQUIRED ACCOUNT ASSISTANT
Qualification : B.Com/ M.com. With Knowledge of Basic Computer, Tally
Age : B/W 21-30 Years
For a
The Bangalore Commercial Transporters Credit Co-operative Society Ltd
#40,1st Cross, 1st Main Rd Chamarajpet, Bangalore-18
Contact: 080-22426899 /26678030 Mobile: 9980003977, 7892050604

Multiple Vacancy

ಕಳಸದ ಹತ್ತಿರ ಇರುವ ರೆಸಾರ್ಟ್‌ನಲ್ಲಿ ಕೆಲಸ ಮಾಡಲು ಗಂಡ ಹೆಂಡತಿ, ಅಡುಗೆಯವರು, ರೂಮ್ ಬಾಯ್ಸ್ ಬೇಕಾಗಿದ್ದಾರೆ. 9632365251/ 9886789567

REQUIRED SUPERVISOR, Telecaller & Field Executive For Bank_Loan Collection. Direct Recruitment to Company:- 7899040499, 9620206756.

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 13,000 - 17,000. 8951315839, 7022770052

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

Domestic Helpers / Housekeeping

NO FEE (labour contractor) ಬೇಕಾಗಿದ್ದಾರೆ. TATA Warehouse: Hoskote, Bangalore, Salary 18000/- , OT. 128 per/ hour work: Packing Loading helpers, 250 Nos Room &Food (Deduct) Ph 9844434996/ 9035240677 SSLC Pass/Fail. Male Female

ರೆಂಟಲ್ ಪ್ರಾಪರ್ಟೀಸ್

Accommodation Available

Commercial

4FLOOR COMMERCIAL Building For Rent Next to By-Pass on Hyd Main Rd Contact-9986670488/whats app

ಭವಿಷ್ಯ

Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ಪ್ರವಾಸ

Travel

SSB TOURS&TRAVELS, HanumanthaNagar,B'lore. Nov-2 to Nov-7 ದುಬೈ ಪ್ರವಾಸ, October-29ರಿಂದ Nov-8ರವರೆಗೆ ವಿಮಾನ ಮತ್ತು ACಬಸ್ಸಿನಲ್ಲಿ ಮಧ್ಯಪ್ರದೇಶ, ಗುಜರಾತ್ ಪ್ರವಾಸ. ದಿನಾಂಕ:27-10-2023ರಿಂದ 08-11-2023ರವರೆಗೆ ವಿಮಾನ ಮತ್ತು 2+2ಬಸ್ಸಿನಲ್ಲಿ ಚಾರ್ ಧಾಮ್ ಪ್ರವಾಸ. ಮೊ:9743784300, 734951079

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact
REAL ESTATE
ಪ್ರಜಾವಾಣಿ
The 1st thing to do when Selling/Buying your Property
#1 PLACE YOUR AD HERE
BOOK NOW
www.dhclassifieds.com
Book your ad with us now! For more details contact:
+91 9900428036 | +91 9731810277 | +91 9845114560 | +91 9901641752 | +91 9886213331 | 080- 45557163/164

ಕ್ರಿಕೆಟ್: ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ ಮೇಲೆ ಕಣ್ಣು • ಸ್ಪಿನ್ನರ್‌ಗಳ ಆಟಕ್ಕೆ ವೇದಿಕೆ?

ಭಾರತಕ್ಕೆ ಮತ್ತೊಂದು ಜಯದ ಛಲ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಲಿಷ್ಠ ಆಸ್ಟ್ರೇಲಿಯಾ ಎದುರು ಗೆದ್ದ ಸಂತಸದಲ್ಲಿರುವ ಭಾರತಕ್ಕೆ ಬುಧವಾರ ಅಫ್ಗಾನಿಸ್ತಾನ ತಂಡ ಎದುರಾಗಲಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ವಿರಾಟ್ ಕೊಹ್ಲಿ ಅವರ ಮೇಲೆ ಎಲ್ಲರ ಕಣ್ಣುಗಳು ನೆಟ್ಟಿವೆ. ಎರಡು ದಿನಗಳ ಹಿಂದೆ ಚೆನ್ನೈನಲ್ಲಿ ನಡೆದಿದ್ದ ಪಂದ್ಯದಲ್ಲಿ 200 ರನ್‌ಗಳ ಗುರಿ ಬೆನ್ನಟ್ಟಿದ್ದ ಭಾರತ ತಂಡವು ಎರಡು ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತ್ತು. ಆ ಹಂತದಲ್ಲಿ ರಾಹುಲ್ ಮತ್ತು ವಿರಾಟ್ ಜೊತೆಯಾಟವಾಡಿ 165 ರನ್ ಸೇರಿಸಿದರು.

ರಾಹುಲ್ ಅಜೇಯ 97 ರನ್‌ಗಳನ್ನು ಗಳಿಸಿ ತಂಡದ ಗೆಲುವಿನ ರೂವಾರಿಯಾದರು. ಆ ಪಂದ್ಯದಲ್ಲಿ ರೋಹಿತ್ ಶರ್ಮಾ, ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ಅವರು ಸೊನ್ನೆ ಸುತ್ತಿದ್ದರು. ಅದರಿಂದ ಎದುರಾಗಿದ್ದ ಆತಂಕವನ್ನು ರಾಹುಲ್ ಮತ್ತು ವಿರಾಟ್ ದೂರ ಮಾಡಿದ್ದರು. ರಾಹುಲ್ ಅವರ ಯಶಸ್ವಿ ಇನಿಂಗ್ಸ್‌ನಿಂದಾಗಿ ಮಧ್ಯಮಕ್ರಮಾಂಕದ ದೌರ್ಬಲ್ಯ ದೂರವಾಗಿರುವುದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಸಮಾಧಾನ ತಂದಿದೆ.ಆದರೆ ಅಗ್ರಕ್ರಮಾಂಕದ ಬ್ಯಾಟರ್‌ಗಳು ಲಯಕ್ಕೆ ಮರಳಿದರೆ ಬ್ಯಾಟಿಂಗ್ ವಿಭಾಗ ಮತ್ತಷ್ಟು ಬಲಶಾಲಿಯಾಗುವುದರಲ್ಲಿ ಎರಡು ಮಾತಿಲ್ಲ.

ರನ್ ಹೊಳೆ ಹರಿಯುವುದೇ?: ಚೆನ್ನೈನಲ್ಲಿ ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ಭಾರತದ ಸ್ಪಿನ್ ಜೋಡಿ ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಆಸ್ಟ್ರೇಲಿಯಾ ಬಳಗಕ್ಕೆ ಕಡಿವಾಣ ಹಾಕಿದ್ದರು. ದೆಹಲಿಯಲ್ಲಿಯೂ ಇಂತಹದೇ ಪಿಚ್ ಸಿದ್ಧವಾಗಿರುವ ಸಾಧ್ಯತೆ ಇದೆ. ಆದರೆ ಇಲ್ಲಿ 4 ದಿನಗಳ ಹಿಂದೆ ನಡೆದಿದ್ದ ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ನಡುವಣ ಪಂದ್ಯದಲ್ಲಿ ಒಟ್ಟು 700ಕ್ಕೂ ಹೆಚ್ಚು ರನ್‌ಗಳು ಹರಿದಿದ್ದವು. 31 ಸಿಕ್ಸರ್‌ಗಳೂ ಸಿಡಿದಿದ್ದವು.

ವಿಶ್ವಕಪ್ ಟೂರ್ನಿಗಿಂತ ಮುನ್ನ ಈ ಕ್ರೀಡಾಂಗಣದ ಮುಖ್ಯ ಪಿಚ್ ನವೀಕರಣ ಮಾಡಲಾಗಿತ್ತು. ಅದರಿಂದಾಗಿ ಅದರ ಗುಣಧರ್ಮವೂ ಬದಲಾಗಿದೆ. ಶುಭಮನ್ ಗಿಲ್ ಅವರಿಗೆ ಈ ಪಂದ್ಯಕ್ಕೂ ವಿಶ್ರಾಂತಿ ನೀಡಲಾಗಿದೆ. ಅದರಿಂದಾಗಿ ರೋಹಿತ್ ಜೊತೆಗೆ ಇಶಾನ್ ಇನಿಂಗ್ಸ್ ಆರಂಭಿಸುವರು. ಅಫ್ಗನ್ ತಂಡದಲ್ಲಿರುವ ಅನುಭವಿ ಸ್ಪಿನ್ನರ್ ರಶೀದ್ ಖಾನ್, ಮೊಹಮ್ಮದ್ ನಬಿ ಮತ್ತು ಮುಜೀಬ್ ಉರ್ ರೆಹಮಾನ್ ಅವರೂ ಭಾರತದ ಬ್ಯಾಟರ್‌ಗಳಿಗೆ ಸವಾಲೊಡ್ಡಬಲ್ಲರು. ಆದರೆ ಸ್ಥಳೀಯ ಹೀರೊ ವಿರಾಟ್ ಕೊಹ್ಲಿ ಮತ್ತು ಲಯದಲ್ಲಿರುವ ರಾಹುಲ್ ಅವರನ್ನು ಕಟ್ಟಿಹಾಕುವುದು ಅಫ್ಗನ್ ಬೌಲಿಂಗ್ ಪಡೆಗೆ ಪ್ರಮುಖ ಸವಾಲಾಗಬಹುದು.

ಅಫ್ಗನ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಸೋತಿತ್ತು. ಅದರಲ್ಲಿ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರು. ಅದರಿಂದಾಗಿ ತಂಡವು ಇನ್ನೂರು ರನ್‌ಗಳ ಮೊತ್ತವನ್ನೂ ದಾಟಿರಲಿಲ್ಲ. ಬ್ಯಾಟರ್‌ಗಳು ದೊಡ್ಡ ಮೊತ್ತ ಕಲೆ ಹಾಕದಿದ್ದರೆ ಎಷ್ಟೇ ಉತ್ತಮ ಬೌಲರ್‌ಗಳಿದ್ದರೂ ಗೆಲುವು ತಂದುಕೊಡುವುದು ಸುಲಭವಲ್ಲ. ಆದ್ದರಿಂದ ಭಾರತದ ಬೌಲಿಂಗ್ ಪಡೆಯನ್ನು ಎದುರಿಸಿ ನಿಲ್ಲುವ ಸಾಹಸವನ್ನು ಹಷ್ಮತುಲ್ಲಾ ಶಾಹೀದಿ ಪಡೆ ತೋರಿದರೆ ಪಂದ್ಯ ಆಸಕ್ತಿಕರವಾಗಬಹುದು.

ಅಫ್ಗಾನಿಸ್ತಾನದ ಆಲ್‌ರೌಂಡರ್ ರಶೀದ್ ಖಾನ್ –ಎಎಫ್‌ಪಿ ಚಿತ್ರ



ಬಲಾಬಲ
3 ಪಂದ್ಯಗಳು
2 ಭಾರತ ಜಯ
1 ಟೈ

ಭಾರತದ ಕೆ.ಎಲ್. ರಾಹುಲ್ ಮತ್ತು ರೋಹಿತ್ ಶರ್ಮಾ –ಪಿಟಿಐ ಚಿತ್ರ

ಶುಭಮನ್ ಗಿಲ್ ಚೇತರಿಕೆ

ಭಾರತ ತಂಡದ ಬ್ಯಾಟರ್ ಶುಭಮನ್ ಗಿಲ್ ಅವರ ಆರೋಗ್ಯದಲ್ಲಿ ಚೇತರಿಕೆಯಾಗಿದೆ. ಅವರನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಗಿದೆ. ಈಚೆಗೆ ಚೆನ್ನೈನಲ್ಲಿ ಪಂದ್ಯ ನಡೆಯುವ ಮುನ್ನ ಅವರಿಗೆ ವೈರಲ್ ಜ್ವರ ಕಾಡಿತ್ತು. ಪರೀಕ್ಷೆಯಲ್ಲಿ ಅವರ ಪ್ಲೇಟ್‌ಲೆಟ್ ಸಂಖ್ಯೆಯು ಒಂದು ಲಕ್ಷಕ್ಕಿಂತಲೂ ಕಡಿಮೆಯಾಗಿತ್ತು.

ಅವರನ್ನು ಕೂಡಲೇ ಕಾವೇರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಂಡದ ವೈದ್ಯ ರಿಜ್ವಾನ್ ಅವರೂ ಚಿಕಿತ್ಸೆಯ ಮೇಲ್ವಿಚಾರಣೆ ವಹಿಸಿದ್ದರು. ಅದರಿಂದಾಗಿ ಗಿಲ್ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಆಡಲಿಲ್ಲ. ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನ ಎದುರಿನ ಪಂದ್ಯಗಳಲ್ಲಿಯೂ ಆಡುವುದಿಲ್ಲ ಎಂದು ಮೂಲಗಳು ತಿಳಿಸಿವೆ.

'ಶುಭಮನ್ ಗಿಲ್ ಅವರಿಗೆ ಚೆನ್ನೈನ ತಂಡದ ಹೋಟೆಲ್‌ನಲ್ಲಿ ಜ್ವರ ಬಂದಾಗ ಎರಡು ದಿನ ಡ್ರಿಪ್ಸ್ ಹಾಕಲಾಗಿತ್ತು. ಅವರ ಪ್ಲೇಟ್‌ಲೆಟ್ ಸಂಖ್ಯೆಯು 70 ಸಾವಿರಕ್ಕೆ ಕುಸಿದಾಗ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಸೋಮವಾರ ಸಂಜೆ ಅವರನ್ನು ಆಸ್ಪತ್ರೆಯಿಂದ ಕಳುಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಆರೋಗ್ಯವಂತ ವ್ಯಕ್ತಿಗಳ ರಕ್ತದಲ್ಲಿ ಪ್ಲೇಟ್‌ಲೆಟ್ ಸಂಖ್ಯೆಯು 1.5 ಲಕ್ಷದಿಂದ 4.5 ಲಕ್ಷದವರೆಗೆ ಇರುತ್ತದೆ.

ಅಫ್ಗನ್ ಮತ್ತು ಪಾಕ್ ವಿರುದ್ಧದ ಪಂದ್ಯಗಳಿಗೆ ಅವರು ಅಲಭ್ಯರಾಗಿದ್ದಾರೆ. ನಂತರದ ಪಂದ್ಯಗಳಿಗೂ ಅವರು ಫಿಟ್ ಆಗದೇ ಹೋದರೆ, ಬದಲಿ ಬ್ಯಾಟರ್ ಒಬ್ಬರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಬಹುದು. ಋತುರಾಜ್ ಗಾಯಕವಾಡ್ ಅಥವಾ ಯಶಸ್ವಿ ಜೈಸ್ವಾಲ್ ಅವರಲ್ಲಿ ಒಬ್ಬರಿಗೆ ಸ್ಥಾನ ಸಿಗಬಹುದು.

ವಿರಾಟ್ ಕೊಹ್ಲಿ ಪೆವಿಲಿಯನ್!

ದೆಹಲಿಯ ಕ್ರೀಡಾಂಗಣದಲ್ಲಿ ವಿರಾಟ್ ಕೊಹ್ಲಿ ಅವರು ಬುಧವಾರ ತಮ್ಮದೇ ಹೆಸರಿನ ಪೆವಿಲಿಯನ್ ಎದುರು ಆಡಲಿರುವುದು ವಿಶೇಷ.

ದೆಹಲಿಯವರೇ ಆದ ವಿರಾಟ್ ಪ್ರಸ್ತುತ ಕ್ರಿಕೆಟ್‌ನಲ್ಲಿ 'ಕಿಂಗ್ ಕೊಹ್ಲಿ' ಎಂದೇ ಅಭಿಮಾನಿಗಳಿಂದ ಕರೆಸಿಕೊಳ್ಳುತ್ತಾರೆ. ಮೂರು ಮಾದರಿಗಳ ಕ್ರಿಕೆಟ್‌ನಲ್ಲಿಯೂ ಹಲವು ದಾಖಲೆಗಳನ್ನು ನಿರ್ಮಿಸಿದ್ದಾರೆ. ಸಚಿನ್ ತೆಂಡೂಲ್ಕರ್ ನಿರ್ಮಿಸಿರುವ ಶತಕಗಳ ಶತಕ ಮತ್ತು ಅತಿ ಹೆಚ್ಚು ರನ್ ದಾಖಲೆಗಳನ್ನು ಮೀರಿ ನಿಲ್ಲುವ ಭರವಸೆಯನ್ನು ವಿರಾಟ್ ಮೂಡಿಸಿದ್ದಾರೆ.

ಅವರು ಆಡಿ ಬೆಳೆದ ಕ್ರೀಡಾಂಗಣದ ಪೆವಿಲಿಯನ್‌ಗೆ ವಿರಾಟ್ ಹೆಸರು ಇಡಲಾಗಿದೆ.



ಭಾರತದ ಬ್ಯಾಟರ್ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಇಶಾನ್ ಕಿಶನ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಆರ್. ಅಶ್ವಿನ್, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಮೊಹಮ್ಮದ್ ಶಮಿ, ಸೂರ್ಯಕುಮಾರ್ ಯಾದವ್, ಶಾರ್ದೂಲ್ ಠಾಕೂರ್.

ಅಫ್ಗಾನಿಸ್ತಾನ: ಹಷ್ಮತ್‌ಉಲ್ಲಾ ಶಾಹೀದಿ (ನಾಯಕ), ರೆಹಮಾನುಲ್ಲಾ ಗುರ್ಬಾಜ್, ಇಬ್ರಾಹಿಂ ಜದ್ರಾನ್, ರಿಯಾಜ್ ಹಸನ್, ರೆಹಮತ್ ಶಾ, ನಜೀಬುಲ್ಲಾ ಜದ್ರಾನ್, ಮೊಹಮ್ಮದ್ ನಬಿ, ಇಕ್ರಂ ಅಲಿಖೀಲ್, ಅಜ್ಮತ್‌ಉಲ್ಲಾ ಒಮರ್‌ಝೈ, ರಶೀದ್ ಖಾನ್, ಮುಜೀಬ್ ಉರ್ ರೆಹಮಾನ್, ನೂರ್ ಅಹಮದ್, ಫಜಲ್‌ಹಕ್ ಫಾರೂಕಿ, ಅಬ್ದುಲ್ ರೆಹಮಾನ್, ನವೀನ್ ಉಲ್ ಹಕ್.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಇಂಗ್ಲೆಂಡ್ ಗೆಲುವಿನಲ್ಲಿ ಮಿಂಚಿದ ಮಲಾನ್, ಟೋಪ್ಲಿ

ಪುಟಿದೆದ್ದ ಜೋಸ್ ಬಟ್ಲರ್ ಬಳಗ • ಬಾಂಗ್ಲಾಕ್ಕೆ ಸೋಲು

ಧರ್ಮಶಾಲಾ (ಎಎಫ್‌ಪಿ): ಉತ್ತಮ ಲಯದಲ್ಲಿರುವ ಡೇವಿಡ್ ಮಲಾನ್ ಬಿರುಸಿನ 140 ರನ್ ಬಾರಿಸಿದ ನಂತರ, ಎಡಗೈ ವೇಗದ ಬೌಲರ್ ರೀಸ್ ಟೋಪ್ಲಿ ಅವರು ಬಾಂಗ್ಲಾದೇಶದ ಅಗ್ರ ಬ್ಯಾಟಿಂಗ್ ಕ್ರಮಾಂಕ ಧ್ವಂಸಗೊಳಿಸಿದರು. ವಿಶ್ವಕಪ್ ಉದ್ಘಾಟನಾ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಬಸವಳಿದಿದ್ದ ಇಂಗ್ಲೆಂಡ್ ಮಂಗಳವಾರ ಬಾಂಗ್ಲಾದೇಶ ತಂಡದ ವಿರುದ್ಧ 137 ರನ್‌ಗಳ ಜಯಸಾಧಿಸಿ ಪುಟಿದೆದ್ದಿತು.

ಎಡಗೈ ಬ್ಯಾಟರ್ ಮಲಾನ್ ಏಕದಿನ ಪಂದ್ಯದಲ್ಲಿ ಜೀವನಶ್ರೇಷ್ಠ ಮೊತ್ತ ದಾಖಲಿಸಿ 'ಪಂದ್ಯ ಶ್ರೇಷ್ಠ' ಗೌರವಕ್ಕೆ ಪಾತ್ರರಾದರು. ಅವರ 107 ಎಸೆತಗಳ ಆಟದಲ್ಲಿ 16 ಬೌಂಡರಿ, ಐದು ಸಿಕ್ಸರ್‌ಗಳಿದ್ದವು. ಇಂಗ್ಲೆಂಡ್ 9 ವಿಕೆಟ್‌ಗೆ 364 ರನ್‌ಗಳ ದೊಡ್ಡ ಮೊತ್ತ ಗಳಿಸಿತ್ತು. ಟೋಪ್ಲಿ ದಾಳಿಗೆ ಆರಂಭದಲ್ಲೇ ಕುಸಿದ ಬಾಂಗ್ಲಾದೇಶ ನಂತರ ಚೇತರಿಸಿಕೊಳ್ಳಲಿಲ್ಲ. 49ನೇ ಓವರ್‌ನಲ್ಲಿ 227 ರನ್‌ಗಳಿಗೆ ಆಲೌಟ್ ಆಯಿತು.

ಲಿಟ್ಟನ್ ದಾಸ್ (76, 66ಎ, 7x4, 2x6) ಮತ್ತು ಅನುಭವಿ ಮುಷ್ಫಿಕುರ್ ರಹೀಂ (51, 64 ಎ, 4x4) ಮಾತ್ರ ಕೆಲಕಾಲ ಪ್ರತಿರೋಧ ತೋರಿದರು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಇಂಗ್ಲೆಂಡ್ ತಂಡಕ್ಕೆ ಜಾನಿ ಬೇಸ್ಟೊ (52, 59ಎ, 8x4) ಮತ್ತು ಮಲಾನ್ ಉತ್ತಮ ಆರಂಭ ಒದಗಿಸಿ 115 ರನ್ ಸೇರಿಸಿದರು. ಮಲಾನ್ ಜೊತೆ ರಟ್ಟೆಯರಳಿಸಿದ ರೂಟ್ (82, 68ಎ, 8x4, 1X6) ಎರಡನೇ ವಿಕೆಟ್‌ಗೆ ಕ್ಷಿಪ್ರಗತಿಯಲ್ಲಿ 151 ರನ್ ಸೇರಿಸಿ ಪಂದ್ಯದಲ್ಲಿ ತಂಡವನ್ನು ದೊಡ್ಡ ಮೊತ್ತದತ್ತ ಒಯ್ದರು.

ಒಂದು ಹಂತದಲ್ಲಿ 40 ಓವರುಗಳಾಗುಷ್ಟರಲ್ಲಿ ಇಂಗ್ಲೆಂಡ್ 3 ವಿಕೆಟ್‌ಗೆ 296 ರನ್ ಗಳಿಸಿದ್ದು, 400 ರನ್‌ಗಳ ಹತ್ತಿರ ದೃಷ್ಟಿ ನೆಟ್ಟತ್ತು. ಆದರೆ ವೇಗದ ಬೌಲರ್ ಶರೀಫುಲ್ ಇಸ್ಲಾಂ ಮತ್ತು ಆಫ್ ಸ್ಪಿನ್ನರ್ ಮೆಹೆದಿ ಹಸನ್ ತಮ್ಮೊಳಗೆ ಏಳು ವಿಕೆಟ್ ಕಿತ್ತು ಇಂಗ್ಲೆಂಡ್ ನಾಗಾಲೋಟಕ್ಕೆ ಲಗಾಮು ಹಾಕಿದರು. ಆದರೂ 365 ರನ್‌ಗಳ ಗುರಿ ದೊಡ್ಡದಾಗಿಯೇ ಇತ್ತು.

ಬಾಂಗ್ಲಾದೇಶ ತಂಡ 14 ರನ್‌ಳಾಗುವಷ್ಟರಲ್ಲಿ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಜಿದ್ ಹಸನ್ ಮತ್ತು ನಜ್ಮುಲ್ ಹುಸೇನ್ ಶಾಂತೊ ಅವರು ಟೋಪ್ಲಿ ಅವರ ಬೌಲಿಂಗ್‌ನಲ್ಲಿ ವೇಗ ಮತ್ತು ಗತಿಯನ್ನು ಅಳೆಯಲು ಪರದಾಡಿದರು. ಟೋಪ್ಲಿ ಈ ಪಂದ್ಯದಲ್ಲಿ ಮೊಯಿನ್ ಅಲಿ ಸ್ಥಾನದಲ್ಲಿ ಅವಕಾಶ ಪಡೆದಿದ್ದರು.

ನಾಯಕ ಶಕೀಬ್ ಅಲ್ ಹಸನ್ (1) ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ. ಮೆಹದಿ ಹಸನ್ ಅವರು ವಿಕೆಟ್ ಕೀಪರ್ ಬಟ್ಲರ್‌ಗೆ ಕ್ಯಾಚ್ ನೀಡುವಂತೆ ಪ್ರಚೋದಿಸುವಲ್ಲಿ ಕ್ರಿಸ್ ವೋಕ್ಸ್ ಯಶಸ್ವಿಯಾದರು (49ಕ್ಕೆ4). ಲಿಟ್ಟನ್ ದಾಸ್ ಮತ್ತು ಮುಷ್ಫಿಕುರ್ 72 ರನ್ ಸೇರಿಸಿ ಕುಸಿತವನ್ನು ತಡೆಗಟ್ಟುವಲ್ಲಿ ಯಶಸ್ವಿಯಾದರಷ್ಟೇ. ಮುಷ್ಫಿಕುರ್ ಕೂಡ ಟೋಪ್ಲಿ ಅವರಿಗೆ ವಿಕೆಟ್ ನೀಡಿದ ಮೇಲೆ ಸೋಲು ಖಚಿತವಾಗಿತ್ತು.

ಸ್ಕೋರುಗಳು: ಇಂಗ್ಲೆಂಡ್: 50 ಓವರುಗಳಲ್ಲಿ 9 ವಿಕೆಟ್‌ಗೆ 364 (ಜಾನಿ ಬೇಸ್ಟೊ 52, ಡೇವಿಡ್ ಮಲಾನ್ 140, ಜೋ ರೂಟ್ 82, ಜೋಸ್ ಬಟ್ಲರ್ 20, ಹ್ಯಾರಿ ಬ್ರೂಕ್ 20; ಶರೀಫುಲ್ ಇಸ್ಲಾಂ 75ಕ್ಕೆ3, ಮೆಹೆದಿ ಹಸನ್ 71ಕ್ಕೆ4); **ಬಾಂಗ್ಲಾದೇಶ:** 48.2 ಓವರುಗಳಲ್ಲಿ 227 (ಲಿಟ್ಟನ್ ದಾಸ್ 76, ಮುಷ್ಫಿಕುರ್ ರಹೀಂ 51, ತೌಹಿಕ್ ಹೃದಯ್ 39; ಕ್ರಿಸ್ ವೋಕ್ಸ್ 49ಕ್ಕೆ2, ರೀಸ್ ಟೋಪ್ಲಿ 43ಕ್ಕೆ4).
ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 137 ರನ್‌ಗಳ ಜಯ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಅಂಕ
ನ್ಯೂಜಿಲೆಂಡ್	2	2	0	0	4
ಪಾಕಿಸ್ತಾನ	2	2	0	0	4
ದಕ್ಷಿಣ ಆಫ್ರಿಕಾ	1	1	0	0	2
ಭಾರತ	1	1	0	0	2
ಇಂಗ್ಲೆಂಡ್	2	1	1	0	2
ಬಾಂಗ್ಲಾದೇಶ	2	1	1	0	2
ಆಸ್ಟ್ರೇಲಿಯಾ	1	0	1	0	0
ಶ್ರೀಲಂಕಾ	2	0	2	0	0
ಅಫ್ಗಾನಿಸ್ತಾನ	1	0	1	0	0
ನೆದರ್ಲೆಂಡ್ಸ್	2	0	2	0	0

ಶತಕದ ಸಂಭ್ರಮದಲ್ಲಿ ಡೇವಿಡ್ ಮಲಾನ್ – ಎಎಫ್‌ಪಿ ಚಿತ್ರ

> ನಾವು ಯೋಜನೆಗೆ ಅಂಟಿಕೊಂಡೆವು. ಅಂದುಕೊಂಡ ಶೈಲಿಯಲ್ಲೇ ಆಡಿದೆವು. ಆದರೂ ಸುಧಾರಿಸಿಕೊಳ್ಳಬಹುದಾದ ಕ್ಷೇತ್ರಗಳೂ ಇವೆ.
> **ಜೋಸ್ ಬಟ್ಲರ್**
> ಇಂಗ್ಲೆಂಡ್ ತಂಡದ ನಾಯಕ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,512
ಇಂದಿನ ಅಂತ್ಯ	19,689
▲	177
ದಿನದ ಗರಿಷ್ಠ	19,717

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹555
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1620)
ಸೋಯಾ (ರಿಫೈನ್ಡ್)	₹855 (865)
ಸೂರ್ಯಕಾಂತಿ (ರಿಫೈನ್ಡ್)	₹870 (875)
ಪಾಮೋಲಿನ್	₹807 (815)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹144
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

(ಪ್ರತಿ ಕೆ.ಜಿಗೆ)

ಅಮೆರಿಕದಲ್ಲಿ ಗರಿಷ್ಠ ಬಡ್ಡಿದರ: ತಗ್ಗಿದ ಹೂಡಿಕೆ

ಏಷ್ಯಾದಿಂದ ₹93,458 ಕೋಟಿ ವಿದೇಶಿ ಬಂಡವಾಳ ಹಿಂತೆಗೆತ

ಬೆಂಗಳೂರು (ರಾಯಿಟರ್ಸ್): ಭಾರತವನ್ನೂ ಒಳಗೊಂಡು ಏಷ್ಯಾದ ಮಾರುಕಟ್ಟೆಗಳಿಂದ ಸೆಪ್ಟೆಂಬರ್‌ನಲ್ಲಿ ₹93,458 ಕೋಟಿ ಬಂಡವಾಳವನ್ನು ವಿದೇಶಿ ಹೂಡಿಕೆದಾರರು ಹಿಂದಕ್ಕೆ ಪಡೆದಿದ್ದಾರೆ.

ಅಮೆರಿಕದಲ್ಲಿ ಬಡ್ಡಿದರವು ದೀರ್ಘಾವಧಿಯವರೆಗೆ ಗರಿಷ್ಠ ಮಟ್ಟದಲ್ಲಿ ಇರುವ ಮತ್ತು ಬಾಂಡ್ ಗಳಿಕೆಯಲ್ಲಿ ಆಗುತ್ತಿರುವ ಏರಿಕೆಯೇ ಬಂಡವಾಳ ಹೊರಹರಿವಿಗೆ ಕಾರಣವಾಗಿದೆ.

ಭಾರತ, ತೈವಾನ್, ದಕ್ಷಿಣ ಕೊರಿಯಾ, ಇಂಡೊನೇಷ್ಯಾ, ಫಿಲಿಫೀನ್ಸ್, ಥಾಯ್ಲೆಂಡ್ ಮತ್ತು ವಿಯೆಟ್ನಾಂ ಮಾರುಕಟ್ಟೆಗಳ-ಲ್ಲಿನ ಮಾಹಿತಿಯ ಪ್ರಕಾರ, ವಿದೇಶಿ ಹೂಡಿಕೆದಾರರು ಸೆಪ್ಟೆಂಬರ್‌ನ-ಲ್ಲಿ ₹93,458 ಕೋಟಿಯಷ್ಟು ಬಂಡವಾಳವನ್ನು ಹಿಂದಕ್ಕೆ ಪಡೆದಿದ್ದಾರೆ.

ಮುಖ್ಯಾಂಶಗಳು
- ಭಾರತ, ತೈವಾನ್‌ನಿಂದ ಹೆಚ್ಚಿನ ಬಂಡವಾಳ ಹೊರಹರಿವು
- ಹೂಡಿಕೆ ಮೇಲೆ ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪರಿಣಾಮ ಸಂಭವ

2022ರ ಜೂನ್ ತಿಂಗಳ ಬಳಿಕ ಇದೇ ಮೊದಲಿಗೆ ಈ ಪ್ರಮಾಣದಲ್ಲಿ ಬಂಡವಾಳ ಹೊರಹರಿವು ಆಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಕಳೆದ ತಿಂಗಳು ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಆದರೆ, ವರ್ಷಾಂತ್ಯದ ವೇಳೆಗೆ ಏರಿಕೆ ಆಗುವ ಅಂದಾಜು ಮಾಡಲಾಗಿದೆ. ಹಣದುಬ್ಬರದ ಒತ್ತಡವನ್ನು ತಗ್ಗಿಸಲು 2024ರಲ್ಲಿಯೂ ಬಿಗಿಯಾದ ಹಣಕಾಸು ನೀತಿ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಫೆಡರಲ್ ರಿಸರ್ವ್ ಹೇಳಿದೆ. ಅಮೆರಿಕದ 10 ವರ್ಷಗಳ ಬಾಂಡ್ ಗಳಿಕೆಯು ಕಳೆದ ತಿಂಗಳು ಶೇ 4.68ಕ್ಕೆ ಏರಿಕೆ ಕಾಣುವ ಮೂಲಕ 16 ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ.

ಅಮೆರಿಕದಲ್ಲಿ ಬಡ್ಡಿದರ ಏರಿಕೆಯು ಈಕ್ವಿಟಿ ಗಳಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ಗೋಲ್ಡ್‌ಮನ್ ಸ್ಯಾಕ್ಸ್‌ನ ಏಷ್ಯಾ ಪೆಸಿಫಿಕ್‌ನ ಈಕ್ವಿಟಿ ತಜ್ಞ ತಿಮೋತಿ ಮೋ ಹೇಳಿದ್ದಾರೆ.

ವಿದೇಶಿ ಹೂಡಿಕೆದಾರರು ಭಾರತದ ಮಾರುಕಟ್ಟೆಯಿಂದ ಸೆಪ್ಟೆಂಬರ್‌ನಲ್ಲಿ ₹14,774 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ತೈವಾನ್ ಮಾರುಕ-ಟ್ಟೆಯಿಂದಲೂ ₹52,041 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿದೆ. 2022ರ ಜೂನ್ ಬಳಿಕ ದೊಡ್ಡ ಪ್ರಮಾಣದ ಹೊರಹರಿವು ಇದಾಗಿದೆ.

ಸಂಕ್ಷಿಪ್ತ ಸುದ್ದಿ

ಭಾರತದ ಜಿಡಿಪಿ ಶೇ 6.3: ಐಎಂಎಫ್

ನವದೆಹಲಿ (ಪಿಟಿಐ): ಅಂತರ-ರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಭಾರತದ ಆರ್ಥಿಕ ಬೆಳವಣಿಗೆ ಅಂದಾಜನ್ನು ಶೇ 0.2ರಷ್ಟು ಹೆಚ್ಚಿಸಿದ್ದು, ಶೇ 6.3ರಷ್ಟು ಆಗಲಿದೆ ಎಂದು ಹೇಳಿದೆ.

2023–24ರಲ್ಲಿ ಭಾರತದ ಆರ್ಥಿಕತೆಯು ಶೇ 6.1ರಷ್ಟು ಬೆಳವಣಿಗೆ ಕಾಣಲಿದೆ ಎಂದು ಜುಲೈನಲ್ಲಿ ಐಎಂಎಫ್ ಅಂದಾಜು ಮಾಡಿತ್ತು.

ಏಪ್ರಿಲ್–ಜೂನ್‌ನಲ್ಲಿ ಜನರ ಖರೀದಿ ಸಾಮರ್ಥ್ಯವು ನಿರೀಕ್ಷೆಗಿಂತಲೂ ಹೆಚ್ಚಿನದ್ದಾಗಿದೆ. ಹೀಗಾಗಿ ಜಿಡಿಪಿ ಬೆಳವಣಿಗೆಯ ಅಂದಾಜಿನಲ್ಲಿ ಈ ಬದಲಾವಣೆ ಮಾಡಲಾಗಿದೆ ಎಂದು ತಿಳಿಸಿದೆ. ಐಎಂಎಫ್ ಈಗ ಮಾಡಿರುವ ಅಂದಾಜು ಆರ್‌ಬಿಐ ಅಂದಾಜಿಗಿಂತಲೂ (ಶೇ 6.5) ಕಡಿಮೆ ಇದೆ. ಹೀಗಿದ್ದರೂ ವ ಚೀನಾದ ಜಿಡಿಪಿ ಬೆಳವಣಿಗೆಗಿಂತಲೂ ಹೆಚ್ಚಿಗೆ ಇರಲಿದೆ ಎಂದು ತಿಳಿಸಿದೆ.

ಬಿಒಬಿ ಆ್ಯಪ್: ಆರ್‌ಬಿಐ ನಿರ್ಬಂಧ

ಮುಂಬೈ (ಪಿಟಿಐ): ಬ್ಯಾಂಕ್ ಆಫ್ ಬರೋಡದ (ಬಿಒಬಿ) ಮೊಬೈಲ್ ಆ್ಯಪ್ 'bob World'ಗೆ ಹೊಸ ಗ್ರಾಹಕರನ್ನು ಸೇರಿಸುವುದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಂಗಳವಾರ ನಿರ್ಬಂಧ ಹೇರಿದೆ.

ತಕ್ಷಣದಿಂದ ಜಾರಿಗೆ ಬರುವಂತೆ ಹೊಸ ಗ್ರಾಹಕರ ಸೇರ್ಪಡೆ ನಿಲ್ಲಿಸುವಂತೆ ಬ್ಯಾಂಕ್‌ಗೆ ಸೂಚನೆ ನೀಡಿದೆ. ನಿಯಮ ಅನುಸರಣೆ ಮಾಡದೇ ಇರುವ ಸಂಬಂಧ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ–1949ರ ಸೆಕ್ಷನ್ 35ಎ ಅನ್ವಯ ಹೊಸ ಗ್ರಾಹಕರನ್ನು ಸೇರಿಸುವುದನ್ನು ಅಮಾನತಿನಲ್ಲಿ ಇಡುವಂತೆ ನಿರ್ದೇಶನ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಈಗಾಗಲೇ ಆ್ಯಪ್ ಬಳಕೆ ಮಾಡು-ತ್ತಿರುವವರಿಗೆ ಸೇವೆಯಲ್ಲಿ ಯಾವುದೇ ವ್ಯತ್ಯಯ ಆಗುವುದಿಲ್ಲ ಎಂದು ಬ್ಯಾಂಕ್ ತಿಳಿಸಿದೆ.

ಬೆಂಗಳೂರಿನಲ್ಲೇ 100 ಕುಬೇರರು

ಒಂದನೇ ಪುಟದಿಂದ...

ಡಿ-ಮಾರ್ಟ್‌ನ ರಾಧಾಕಿಷನ್ ದಮಾನಿ ಅವರ ಸಂಪತ್ತು ಮೌಲ್ಯದಲ್ಲಿ ಶೇ 18ರಷ್ಟು ಇಳಿಕೆ ಕಂಡಿದ್ದು ಸಂಪತ್ತಿನ ಒಟ್ಟು ಮೌಲ್ಯವು ₹1.43 ಲಕ್ಷ ಕೋಟಿ ಆಗಿದೆ. ಇದರಿಂದಾಗಿ ಅವರು 8ನೇ ಸ್ಥಾನಕ್ಕೆ ಇಳಿಕೆ ಕಂಡಿದ್ದಾರೆ.

ಸ್ವಂತ ಪರಿಶ್ರಮದಿಂದ ಸಿರಿವಂತರಾದ ಮಹಿಳೆಯರ ಪಟ್ಟಿಯಲ್ಲಿ ಜೋಹೊ ಕಂಪನಿಯ ರಾಧಾ ವೆಂಬು ಅವರು ನೈಕಾ ಕಂಪನಿಯ ಸಿಇಒ ಫಲ್ಗುಣಿ ನಾಯರ್ ಅವರನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಏರಿದ್ದಾರೆ. ಜೆಪ್ಟೊ ಕಂಪನಿಯ ಕೈವಲ್ಯ ವೊಹ್ರಾ ಅವರು ಪಟ್ಟಿಯಲ್ಲಿ ಸೇರಿರುವ ಕಿರಿಯ ವಯಸ್ಸಿನ ಸಿರಿವಂತೆ ಆಗಿದ್ದಾರೆ. ಸಂಪತ್ತು ಮೌಲ್ಯ ದುಪ್ಪಟ್ಟು ಆಗಿದ್ದ ಸಿರಿವಂತರ ಸಂಖ್ಯೆಯು ಕಳೆದ ವರ್ಷ 24 ಇತ್ತು. ಈ ವರ್ಷ ಸಿರಿವಂತರ ಸಂಖ್ಯೆಯು 51ಕ್ಕೆ ಏರಿಕೆ ಆಗಿದೆ ಎಂದು ಹುರೂನ್ ತಿಳಿಸಿದೆ.

ದೇಶದ ಪ್ರಮುಖ ಸಿರಿವಂತರ ವಿವರ

ಸ್ಥಾನ	ಹೆಸರು	ಕಂಪನಿ	ಒಟ್ಟು ಸಂಪತ್ತು (ಲಕ್ಷ ಕೋಟಿಗಳಲ್ಲಿ)
1	ಮುಕೇಶ್ ಅಂಬಾನಿ ಮತ್ತು ಕುಟುಂಬ	ರಿಲಯನ್ಸ್ ಇಂಡಸ್ಟ್ರೀಸ್	₹8.08
2	ಗೌತಮ್ ಅದಾನಿ ಮತ್ತು ಕುಟುಂಬ	ಅದಾನಿ	₹4.74
3	ಸೈರಸ್ ಪೂನಾವಾಲ ಮತ್ತು ಕುಟುಂಬ	ಸಿರಂ ಇನ್‌ಸ್ಟಿಟ್ಯೂಟ್	₹2.78
4	ಶಿವ ನಾಡಾರ್ ಮತ್ತು ಕುಟುಂಬ	ಎಚ್‌ಸಿಎಲ್ ಟೆಕ್ನಾಲಜೀಸ್	₹2.28
5	ಗೋಪಿಚಂದ್ ಹಿಂದುಜಾ ಮತ್ತು ಕುಟುಂಬ	ಹಿಂದುಜಾ	₹1.76
6	ದಿಲೀಪ್ ಸಾಂಘ್ವಿ	ಸನ್ ಫಾರ್ಮಾಸುಟಿಕಲ್	₹1.64
7	ಲಕ್ಷ್ಮಿ ಮಿತ್ತಲ್ ಮತ್ತು ಕುಟುಂಬ	ಆರ್ಸೆಲರ್ ಮಿತ್ತಲ್	₹1.62
8	ರಾಧಾಕಿಷನ್ ದಮಾನಿ ಮತ್ತು ಕುಟುಂಬ	ಅವೆನ್ಯು ಸೂಪರ್‌ಮಾರ್ಕೆಟ್ಸ್	₹1.43
9	ಕುಮಾರ ಮಂಗಲಂ ಬಿರ್ಲಾ ಮತ್ತು ಕುಟುಂಬ	ಆದಿತ್ಯ ಬಿರ್ಲಾ	₹1.25
10	ನೀರಜ್ ಬಜಾಜ್ ಮತ್ತು ಕುಟುಂಬ	ಬಜಾಜ್ ಆಟೊ	₹1.20

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹144
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

(ಪ್ರತಿ ಕೆ.ಜಿಗೆ)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಹಳತು	46000-48500
ಕೋಕ	15000-27500
ಚನ್ನಗಿರಿ	
ರಾಶಿ	43699-47200
ಹೊನ್ನಾವರ	
ಹಳೆಚಾಲಿ	37500-41000
ಹೊಸಚಾಲಿ	31000-34000
ಕಾರ್ಕಳ	
ಹಳತು	30002-48500
ಕುಂದಾಪುರ	
ಹಳೆಚಾಲಿ	43500-47000
ಹೊಸಚಾಲಿ	37000-41500
ಪಾವಗಡ	
ಕೆಂಪು	35000-42000
ಪುತ್ತೂರು	
ಹೊಸತು	34000-45000
ಸಾಗರ	
ಬಿಳಿಗೋಟು	26569-32269
ಚಾಲಿ	35099-38599
ಕೋಕ	30989-35145
ಕೆಂಪುಗೋಟು	30989-35145
ರಾಶಿ	36899-46409
ಸಿಪ್ಪೆಗೋಟು	19390-21169
ಶಿವಮೊಗ್ಗ	
ಬೆಟ್ಟೆ	46069-52789
ರಾಶಿ	35069-47069
ಸರಕು	48003-82596
ಸಿದ್ದಾಪುರ	
ಬಿಳಿಗೋಟು	31699-34809
ಚಾಲಿ	36679-40200
ಕೋಕ	30099-35408
ಕೆಂಪುಗೋಟು	33199-33199
ರಾಶಿ	43199-46927
ತಟ್ಟಿಬೆಟ್ಟೆ	36509-40619
ಶಿರಸಿ	
ಬೆಟ್ಟೆ	40399-46849
ಬಿಳಿಗೋಟು	25599-38160
ಚಾಲಿ	37099-41568
ಕೆಂಪುಗೋಟು	27628-37719
ರಾಶಿ	45169-48099
ತುಮಕೂರು	
ರಾಶಿ	42100-45200
ಯಲ್ಲಾಪುರ	
ಅಪಿ	54379-54379
ಬಿಳಿಗೋಟು	28318-35900
ಚಾಲಿ	36900-40899
ಕೋಕ	16829-29899
ಕೆಂಪುಗೋಟು	29236-35215
ರಾಶಿ	45009-54000
ತಟ್ಟಿಬೆಟ್ಟೆ	37790-44982

ಮುದ್ರೆಮನೆ ಕಾಫಿ

ಎಪಿ	₹10250
ಎಸಿ	₹6075
ಆರ್‌ಪಿ	₹9000
ಆರ್‌ಸಿ	₹5830

(50 ಕೆಜಿಗೆ)

ಮುಂಬೈ ಧಾರಣೆ

ಶೇಂಗಾ

10-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	12900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1630)
ಒಂದು ವಾರದ ಡೆಲಿವರಿ	1595 (1625)
ಸೋಯಾ ಕಚ್ಚಾ	820 (830)
ಪಾಮ್ ವಾರದ ಡೆಲಿವರಿ	805 (813)
ಸೂರ್ಯಕಾಂತಿ ಎಣ್ಣೆ ಕಚ್ಚಾ	800(805)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,200 (57,000)
ಬೆಳ್ಳಿ ಕೆ.ಜಿ 68,650 (68,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಯಂತ ಪಾಟೀಲ

- **ಪ್ರಶ್ನೆ:** ನನ್ನ ನಿವೃತ್ತಿ ವೇತನ 2023-24 ರ ಆರ್ಥಿಕ ವರ್ಷದಲ್ಲಿ ಅಂದಾಜು ₹ 7,65,000 ಆಗುವ ಸಂಭವವಿದೆ. ಹಿರಿಯ ನಾಗರಿಕ ಉಳಿತಾಯ ಯೋಜನೆಯಲ್ಲಿ (ಎಸ್‌ಸಿಎಸ್‌ಎಸ್) ಅಂದಾಜು ₹ 10,000 ಬಡ್ಡಿ ಬರುವ ನಿರೀಕ್ಷೆ ಇದೆ. ಬೇರೆ ಯಾವುದೇ ಆದಾಯವಿಲ್ಲ. ನನ್ನ ವಯಸ್ಸು 77. ಹೊಸ ಪದ್ಧತಿಯ ಪ್ರಕಾರ ಆದಾಯ ತೆರಿಗೆ ಉಳಿತಾಯ ಮಾಡಲು ಅವಕಾಶ ಇದ್ದರೆ ತಿಳಿಸಿ.

ಉತ್ತರ: ನಿಮ್ಮ ನಿರೀಕ್ಷಿತ ಆದಾಯ, ಪಿಂಚಣಿ ಹಾಗೂ ಬಡ್ಡಿ ಆದಾಯದ ಮೂಲದಿಂದ ಇರುತ್ತದೆ. ಇನ್ನು ನಿಮ್ಮ ಪಿಂಚಣಿ ಆದಾಯಕ್ಕೆ ₹ 50000 ದಷ್ಟು ಸ್ಟ್ಯಾಂಡರ್ಡ್ ಡಿಡಕ್ಷನ್ ಇರುತ್ತದೆ. ಉಳಿದ ಎಲ್ಲಾ ಮೊತ್ತಕ್ಕೆ ಹೊಸ ತೆರಿಗೆ ಪದ್ಧತಿ ಅನುಸರಿಸುವ ಸಂದರ್ಭದಲ್ಲಿ ತೆರಿಗೆ ಇರುತ್ತದೆ. ಇದರಂತೆ ₹ 7,25,000 ದ ಆದಾಯಕ್ಕೆ₹ 26,000 ದ ತೆರಿಗೆ ಇದೆ. ನಿಮ್ಮಲ್ಲಿ ಯಾವುದೇ ಹೂಡಿಕೆ ಇತ್ಯಾದಿ ಇಲ್ಲದ ಕಾರಣ ಹಳೆಯ ತೆರಿಗೆ ಪದ್ಧತಿಗಿಂತ ಹೊಸ ತೆರಿಗೆ ಪದ್ಧತಿ ಲಾಭದಾಯಕ.

ಅರ್ ಮೈಲಾರಪ್ಪ, ಬೆಂಗಳೂರು

- **ಪ್ರಶ್ನೆ:** ನಾನೊಬ್ಬ ನಿವೃತ್ತ ಸರ್ಕಾರಿ ನೌಕರ. ನಾನು ವಾರ್ಷಿಕವಾಗಿ ₹ 5.50 ಲಕ್ಷ ಪಿಂಚಣಿ ಪಡೆ-ಯುತ್ತಿದ್ದೇನೆ. ಇದರ ಹೊರತಾಗಿ ಬೇರೆ ಯಾವ ಆದಾಯವೂ ಇಲ್ಲ. ಆದಾಯ ವಿವರಗಳನ್ನು ತೆರಿಗೆ ಇಲಾಖೆಗೆ ಸಲ್ಲಿಸುತ್ತಿದ್ದೇನೆ. ನನ್ನ ಸಂದೇಹ ಏನೆಂದರೆ, ನಾನು ಪಿಂಚಣಿ ಪಡೆಯುತ್ತಿರುವ ಬ್ಯಾಂಕಿನಿಂದ ಪಿಂಚಣಿ ಹಣವನ್ನು ನಗದಾಗಿ ಹಿಂಪಡೆದು ನನ್ನ ಹೆಸರಲ್ಲೇ ಇರುವ ಇನ್ನೊಂದು ಬ್ಯಾಂಕಿನ ಖಾತೆಗೆ ಜಮಾ ಮಾಡಿದರೆ ಅಂತಹ ಜಮಾವನ್ನು ಆದಾಯವೆಂದು ಪರಿಗಣಿಸಬೇಕೇ? ಒಂದು ವೇಳೆ ಆದಾಯವೆಂದು ಪರಿಗಣಿಸಬೇಕಿ-ದ್ದರೆ, ಯಾವ ರೀತಿ ಜಮಾ ಮಾಡಿದರೆ ವಿನಾಯಿತಿ ಪಡೆಯಬಹುದು ಎಂಬುದನ್ನೂ ತಿಳಿಸಿಕೊಡಿ.

ಉತ್ತರ: ನೀವು ಈಗಾಗಲೇ ಹಿರಿಯ ನಾಗರಿಕರಾಗಿದ್ದು ಕೇವಲ ಪಿಂಚಣಿ ಆದಾಯ ಗಳಿಸುತ್ತಿದ್ದೀರಿ. ₹ 3 ಲಕ್ಷಕ್ಕಿಂತ ಮೇಲಿನ ಆದಾಯ ಇರುವ ಕಾರಣ ರಿಟರ್ನ್ಸ್ ಸಲ್ಲಿಸಿ. ಪ್ರಸ್ತುತ ಹೊಸ ತೆರಿಗೆ ಪದ್ಧತಿಯಡಿ ₹ 7 ಲಕ್ಷದ ತನಕದ ಆದಾಯಕ್ಕೆ ಸೆಕ್ಷನ್ 87ಎ ಅಡಿ ರಿಬೇಟ್ ಸಹಿತ ವಿನಾಯಿತಿ ಇದೆ. ಹೀಗಾಗಿ ನಿಮಗೆ ಯಾವುದೇ ತೆರಿಗೆ ಬರುವ ಸಾಧ್ಯತೆ ಇಲ್ಲ.

ನಿಮ್ಮ ಪ್ರಶ್ನೆಯೆಂದರೆ, ನಿಮ್ಮದೇ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣವನ್ನು ನಗದು ರೂಪದಲ್ಲಿ ಜಮಾಯಿಸಿದಾಗ ತೆರಿಗೆ ಬರುತ್ತದೆಯೇ ಎಂಬುದು. ಮೊದಲನೆಯದಾಗಿ ಇದು ಈಗಾಗಲೇ ತೆರಿ-ಗೆಗೊಳಪಟ್ಟ ಅಥವಾ ವಿನಾಯಿತಿ ಮಿತಿಯಲ್ಲಿ ಒಳಪಟ್ಟ ಆದಾಯ. ಮಾತ್ರವಲ್ಲ, ಮೂಲ ಹಂತದಲ್ಲಿ ಜಮಾ ಆದ ಮೊತ್ತವನ್ನು ನಿಮ್ಮದೇ ಇತರ ಖಾತೆಗಳಿಗೆ ವರ್ಗಾವಣೆ ಮಾಡಿದಾಗ ಅದು ಮತ್ತೊಮ್ಮೆ ಆದಾಯದ ಸ್ವರೂಪ ಪಡೆಯುವುದಿಲ್ಲ. ಹೀಗಾಗಿ, ಯಾವುದೇ ತೊಂದರೆ ಇಲ್ಲ.

ರುದ್ರಗೌಡ ಪಾಟೀಲ, ಗಜೇಂದ್ರಗಡ

- **ಪ್ರಶ್ನೆ:** ನಾನು ನಿವೃತ್ತಿಯಾಗಿದ್ದೇನೆ. ವಯಸ್ಸು 70. ಕೊಪ್ಪಳ ತಾಲೂಕಿನ ಭಾಗ್ಯನಗರ ಗ್ರಾಮ ಪಂಚಾಯತಿಯ ಸುಮಾರು 4 ಕಿ.ಮೀ ವ್ಯಾಪ್ತಿಯಲ್ಲಿ ಒಂದು ನಿವೇಶನವನ್ನು (47.5*43 ಅಳತೆ) ₹20,000 ಕ್ಕೆ ದಿನಾಂಕ 04/10/2000 ರಲ್ಲಿ ಖರೀದಿಸಿದ್ದೆ. ಸದರಿ ನಿವೇಶನವನ್ನು ₹7,60,000 ಗಳಿಗೆ ದಿನಾಂಕ 03/05/2023 ರಂದು ಮಾರಾಟ ಮಾಡಿರುತ್ತೇನೆ. ನಾನು ಈಗ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ವಾಸವಿರುತ್ತೇವೆ. ಇಬ್ಬರು ಗಂಡು ಮಕ್ಕಳಿದ್ದಾರೆ. ಹೀಗಾಗಿ ಈಗ ವಾಸವಿರುವ ಮನೆಯ ಮೇಲೆ ಮಹಡಿ ಮನೆ ಕಟ್ಟಬೇಕೆಂದು ನಿರ್ಧರಿಸಿದ್ದೇನೆ. ಅಂದರೆ, ನಿವೇಶನ ಮಾರಿದ ಹಣದಿಂದ ಕಟ್ಟಡ ನಿರ್ಮಾಣ ಮಾಡಬೇಕಾಗಿದೆ. ಅದಕ್ಕೆ ಬಂಡವಾಳ ವೃದ್ಧಿ ತೆರಿಗೆಯಿಂದ ವಿನಾಯಿತಿ ಪಡೆಯಬಹುದೇ ಎಂಬ ಬಗ್ಗೆ ತಿಳಿಸಬೇಕಾಗಿ ವಿನಂತಿ.

ಉತ್ತರ: ನೀವು ನಿವೇಶನ ಖರೀದಿಸಿದ ವರ್ಷದಿಂದ ಪ್ರಸ್ತುತ ಮಾರಾಟ ವರ್ಷದ ತನಕ ನಿಮ್ಮ ಆಸ್ತಿಯ ಮೌಲ್ಯ ವೃದ್ಧಿಯಾಗಿದೆ. ಅದೇ ರೀತಿ ನಿಮ್ಮ ಮೂಲ ಆಸ್ತಿಯ ಬೆಲೆ ₹ 20,000 ಆಗಿದ್ದರೂ ಅದರ ಪ್ರಸ್ತುತ ಬೆಲೆ ಹಣದುಬ್ಬರದ ಕಾರಣ ಹೆಚ್ಚಾಗಿರುತ್ತದೆ. ಅದನ್ನು ಸರಿದೂಗಿಸಲು ಹಣದುಬ್ಬರ ಸೂಚ್ಯಂಕದ ಅನುಪಾತದಲ್ಲಿ ಆಸ್ತಿಯ ಪ್ರಸ್ತುತ ಅಸಲು ಬೆಲೆಯನ್ನು ಮರು ನಿರ್ಧರಿಸಬೇಕು. ಈ ಮೊತ್ತ ಸುಮಾರು ₹ 70,000 ಆಗಿರುತ್ತದೆ. ಇದಕ್ಕೂ ಹೆಚ್ಚಿನ ಮೊತ್ತವನ್ನು ನಿಮ್ಮ ಬಂಡವಾಳ ಅಸ್ತಿ ಮಾರಾಟದ ಲಾಭವೆಂದು ಪರಿಗಣಿಸಲಾಗುತ್ತದೆ. ಅಂದರೆ ಹೆಚ್ಚು ಕಮ್ಮಿ ₹ 7 ಲಕ್ಷದ ಸಮೀಪ ನಿಮ್ಮ ಲಾಭಾಂಶ ಆಗಿರುತ್ತದೆ.

ಇನ್ನು ಇಂತಹ ಮೊತ್ತವನ್ನು ನಿಮ್ಮ ಹೊಸ ಮನೆಯ ನಿರ್ಮಾಣಕ್ಕೆ ಉಪಯೋಗಿಸಿಕೊಂಡಾಗ ತೆರಿಗೆ ವಿನಾಯಿತಿ ಸಿಗುತ್ತದೆ. ಆದಾಯ ತೆರಿಗೆಯ ಸೆಕ್ಷನ್ 54ಎಫ್ ಪ್ರಕಾರ, ಮನೆಯ ಹೊರತಾದ ಯಾವುದೇ ಆಸ್ತಿ ಮಾರಾಟಮಾಡಿ (ನಿಮ್ಮ ವಿಚಾರದಲ್ಲಿ ನಿವೇಶನ) ಹೊಸ ಮನೆಯ ನಿರ್ಮಾಣಕ್ಕೆ ಹಣ ಹೂಡಿಕೆ ಮಾಡಿದರೆ, ಹೂಡಿಕೆ ಹಾಗೂ ಮಾರಾಟ ಮೌಲ್ಯದ ಅನುಪಾತದಲ್ಲಿ ತೆರಿಗೆ ರಿಯಾಯಿತಿ ಸಿಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ನಿಮ್ಮ ಹೊಸ ಕಟ್ಟಡದ ವೆಚ್ಚ ಈ ಮೊತ್ತಕ್ಕಿಂತ ಅಧಿಕವೇ ಇರಬಹುದು.

ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವೆಂದರೆ, ನೀವು ಹಿರಿಯ ನಾಗರಿಕರಾಗಿರು-ವುದರಿಂದ ನಿಮ್ಮ ವಯೋಮಿತಿಗೆ ಸಂಬಂಧಿಸಿ ನಿಮ್ಮ ಮೂಲ ಆದಾಯದ ವಿನಾಯಿತಿ ಮಿತಿ ₹ 3 ಲಕ್ಷ. ಹೀಗಾಗಿ ಇದಕ್ಕಿಂತಲೂ ನಿಮ್ಮ ಆದಾಯ ಅಧಿಕ ಇದ್ದ ಸಂದರ್ಭದಲ್ಲಿ ನೀವು ತೆರಿಗೆ ರಿಟರ್ನ್ಸ್ ಸಲ್ಲಿಸಿ, ಅನ್ವಯವಾಗುವ ವಿನಾಯಿತಿಯನ್ನು ಪಡೆಯಬೇಕಾಗು-ತ್ತದೆ. ನಿಮ್ಮ ಹೂಡಿಕೆ ತಡವಾಗುವುದಿದ್ದರೆ, ಮಧ್ಯಂತರ ಅವಧಿಯಲ್ಲಿ ನೀವು ಪ್ರತ್ಯೇಕವಾಗಿ ಇದಕ್ಕೆ ಸಂಬಂಧಿಸಿದ ಕ್ಯಾಪಿಟಲ್ ಗೇನ್ ಖಾತೆಯನ್ನು ಬ್ಯಾಂಕಿನಲ್ಲಿ ತೆರೆದು ಹಣ ಜಮಾ ಮಾಡಬೇಕಾಗುತ್ತದೆ. ನಂತರ ಅಸ್ತಿ ಮಾರಾಟವಾದ ಮೂರು ವರ್ಷದೊಳಗೆ ಮನೆ ಕಟ್ಟಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ಅಶ್ವಿನಿಗೆ ಮೂರು ವಿಕೆಟ್

ಗುವಾಹಟಿ: ಅಶ್ವಿನಿ ನಿಶಾದ್ (18ಕ್ಕೆ3) ಮತ್ತು ಯಾಯತಿ ಗಾವದ್ (15ಕ್ಕೆ3) ಅವರ ಉತ್ತಮ ಬೌಲಿಂಗ್ ಬಲದಿಂದ ಮುಂಬೈ ಕ್ರಿಕೆಟ್ ಸಂಸ್ಥೆ ತಂಡವು ಮಹಿಳೆಯರ 19 ವರ್ಷದೊಳಗಿನವರ ಏಕದಿನ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕದ ಎದುರು 65 ರನ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮುಂಬೈ ಕ್ರಿಕೆಟ್ ಸಂಸ್ಥೆ: 32 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 166 (ಐರಾ ಜಾಧವ್ 43, ಸನಿಕಾ ಛಲ್ಕೆ 29, ಮೆಹಕ್ ಪೋಕರ್ ಔಟಾಗದೆ 44, ಮಿಥಿಲಾ ವಿನೋದ್ 26ಕ್ಕೆ2) ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ: 29 ಓವರ್‌ಗಳಲ್ಲಿ 102 (ಲಾವಣ್ಯ ಚಲಾನಾ 25, ನಿಕಿ ಪ್ರಸಾದ್ 36, ಅಶ್ವಿನ್ ನಿಶಾದ್ 18ಕ್ಕೆ3, ಯಯಾತಿ 15ಕ್ಕೆ3)

ಮರ್ಡೇಕಾ ಕಪ್ ಪರಿಷ್ಕೃತ ವೇಳಾಪಟ್ಟಿ

ಕ್ವಾಲಾಲಂಪುರ (ಮಲೇಷ್ಯಾ): ಇಲ್ಲಿ ಇದೇ 13ರಂದು ಆರಂಭವಾಗುವ ಮರ್ಡೇಕಾ ಕಪ್ ಫುಟ್‌ಬಾಲ್ ಟೂರ್ನಿಯ ವೇಳಾಪಟ್ಟಿ ಪರಿಷ್ಕರಿಸಲಾಗಿದೆ. ಪ್ಯಾಲಸ್ಟೀನ್ ತಂಡ ಕಣದಿಂದ ಹಿಂದೆ ಸರಿದಿರುವ ಕಾರಣ ಈ ಟೂರ್ನಿಯಲ್ಲಿ ನಾಲ್ಕು ತಂಡಗಳ ಬದಲು ಮೂರೇ ತಂಡಗಳು ಭಾಗವಹಿಸಲಿವೆ.

ಭಾರತ, ತಜಿಕಿಸ್ತಾನದ ಜೊತೆ ಆತಿಥೇಯ ಮಲೇಷ್ಯಾ ಕಣದಲ್ಲಿದ್ದು ಟೂರ್ನಿಯ ಮೂರು ತಂಡಗಳ ನಾಕೌಟ್‌ಗೆ ಸೀಮಿತಗೊಂಡಿದೆ. ಕೊನೆಗಳಿಗೆಯಲ್ಲಿ ಪ್ಯಾಲಸ್ಟೀನ್ ಹಿಂದೆಸರಿದ ಕಾರಣ ಬದಲಾವಣೆ ಮಾಡಲಾಗಿದೆ ಎಂದು ಮಲೇಷ್ಯಾ ಫುಟ್‌ಬಾಲ್ ಸಂಸ್ಥೆ (ಎಫ್‌ಎಎಂ) ತಿಳಿಸಿದೆ.

ಎಚ್‌ಎಎಲ್‌ಗೆ ಜಯ

ಬೆಂಗಳೂರು: ಎಚ್‌ಎಎಲ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–1ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ವಿರುದ್ಧ ಜಯ ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಬಿಯುಎಫ್‌ಸಿ ತಂಡವು 2–0 ಯಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿತು.

ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್ ಇಂದಿನಿಂದ

ಬೆಂಗಳೂರು: ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಆಶ್ರಯದಲ್ಲಿ 62ನೇ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಬುಧವಾರದಿಂದ ಅ. 15ರವರೆಗೆ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಸುಮಾರು 1200 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಮಾಹಿತಿಗೆ ಮೊ: 9448438276.

ದಾಖಲೆಯ ಗುರಿ ಬೆನ್ನಟ್ಟಿ ಗೆದ್ದ ಪಾಕ್ • ಶ್ರೀಲಂಕಾ ತಂಡಕ್ಕೆ ನಿರಾಸೆ

ರಿಜ್ವಾನ್ ಆಟಕ್ಕೆ ಒಲಿದ ಜಯ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸ್ನಾಯುಸೆಳೆತದ ನೋವಿನಲ್ಲಿಯೂ ಮೊಹಮ್ಮದ್ ರಿಜ್ವಾನ್ ಗಳಿಸಿದ ಅಮೋಘ ಶತಕದ ಬಲದಿಂದ ಪಾಕಿಸ್ತಾನ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಉಭಯ ತಂಡಗಳ ಆಟಗಾರರಿಂದ ಒಟ್ಟು ನಾಲ್ಕು ಶತಕಗಳು ದಾಖಲಾದವು. ಆದರೆ ಅದಕ್ಕೆ ಜಯ ಒಲಿದಿದ್ದು ರಿಜ್ವಾನ್ (ಅಜೇಯ 134; 121ಎ, 4X9, 6X3) ಅವರ ಆಟಕ್ಕೆ. ಇದರಿಂದಾಗಿ ಪಾಕ್ ತಂಡವು 6 ವಿಕೆಟ್‌ಗಳಿಂದ ಶ್ರೀಲಂಕಾ ವಿರುದ್ಧ ಜಯಿಸಿತು. ಪಾಕ್ ತಂಡಕ್ಕೆ ಇದು ಟೂರ್ನಿಯಲ್ಲಿ ಎರಡನೇ ಜಯ. ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ಜಯಿಸಿತು.

ಇಲ್ಲಿ ಟಾಸ್ ಗೆದ್ದ ಶ್ರೀಲಂಕಾ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 344 ರನ್ ಗಳಿಸಿತು. ಅದಕ್ಕೆ ಕಾರಣವಾಗಿದ್ದು ಕುಶಾಲ್ ಮೆಂಡಿಸ್ (122; 77ಎ, 4X14 6X6) ಹಾಗೂ ಸದೀರ ಸಮರವಿಕ್ರಮ (108; 89ಎ, 4X11, 6X2) ಅವರ ಶತಕಗಳು. ಈ ಗುರಿಯನ್ನು ಪಾಕ್ ತಂಡವು 48.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ತಲುಪಿತು. ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿಯೇ ಅತಿ ದೊಡ್ಡ ಗುರಿ ಬೆನ್ನಟ್ಟಿ ಗೆದ್ದ ದಾಖಲೆ ಇದಾಗಿದೆ.

ಪಾಕ್ ತಂಡವು 7.2 ಓವರ್‌ಗಳಲ್ಲಿ 37 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಆತಂಕದಲ್ಲಿತ್ತು. ಈ ಸಂದರ್ಭದಲ್ಲಿ ಕ್ರೀಸ್‌ನಲ್ಲಿದ್ದ ಆರಂಭಿಕ ಬ್ಯಾಟರ್ ಅಬ್ದುಲ್ಲಾ ಶಫೀಕ್ (113; 103) ಅವರ ಜೊತೆಗೂಡಿದ ರಿಜ್ವಾನ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 176 ರನ್ ಸೇರಿಸಿದರು.

34ನೇ ಓವರ್‌ನಲ್ಲಿ ಅಬ್ದುಲ್ಲಾ ವಿಕೆಟ್ ಗಳಿಸಿದ ಮಥೀಷ ಪಥಿರಾಣ ಸಂಭ್ರಮಿಸಿದರು. ಆದರೆ ರಿಜ್ವಾನ್ ಅವರೊಂದಿಗೆ ಸೇರಿದ ಸಾದ್ ಶಕೀಲ್ (31, 30ಎ) ತಾಳ್ಮೆಯ ಆಟವಾಡಿದರು. ಅವಶ್ಯಕ ರನ್ ರೇಟ್ ಅಂತರವನ್ನು ಕಡಿಮೆ ಮಾಡುತ್ತ ಗೆಲುವಿನ ದಡ ಸೇರಿಸುವಲ್ಲಿ ರಿಜ್ವಾನ್ ಯಶಸ್ವಿಯಾದರು.

ಆಟದ ನಡುವೆ ತಮ್ಮ ಸ್ನಾಯು ಸೆಳೆತದ ನೋವಿಗೆ ವೈದ್ಯಕೀಯ ಸಿಬ್ಬಂದಿಯಿಂದ ಚಿಕಿತ್ಸೆ ಪಡೆದು ಮತ್ತೆ ಆಡಿದರು. ಪಿಚ್‌ನಲ್ಲಿ ಓಡುವಾಗ ಅವರು ತುಸು ಕುಂಟುತ್ತಿದ್ದರು. ಆದರೂ ಛಲ ಬಿಡದೇ ಆಡಿದರು.

ಆಸ್ಪತ್ರೆಗೆ ಮೆಂಡಿಸ್

ಶ್ರೀಲಂಕಾ ತಂಡದ ಆಟಗಾರ ಉಶಾಲ ಮೆಂಡಿಸ್ ಅವರು ಸ್ನಾಯುಸೆಳೆತದಿಂದ ಬಳಲಿದ್ದರಿಂದ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಮಂಗಳವಾರ ಪಾಕ್ ಎದುರಿನ ಪಂದ್ಯದಲ್ಲಿ ಅವರು ಶತಕ ಗಳಿಸಿದ್ದರು.

‘ಬ್ಯಾಟಿಂಗ್ ಮುಗಿಸಿ ಮರಳಿದ ಅವರು ಸ್ನಾಯುಸೆಳೆತದಿಂದ ನೋವು ಅನುಭವಿಸಿದರು. ಕೂಡಲೇ ಅವರನ್ನು ಆಸ್ಪತ್ರೆಗೆ ಕಳಿಸಲಾಯಿತು’ ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಕುಶಾಲ ಅವರ ಬದಲಿಗೆ ದುಶಾನ್ ಹೇಮಂತ ಅವರು ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸಿದರು‘ ಎಂದೂ ಪ್ರಕಟಣೆ ತಿಳಿಸಿದೆ.

ಕ್ರಿಕೆಟ್ ವಿಶ್ವಕಪ್ ಭಾರತ 2023

ಮೆಂಡಿಸ್–ಸಮರವಿಕ್ರಂ ಬೀಸಾಟ: ಈ ಟೂರ್ನಿಯಲ್ಲಿ ಶ್ರೀಲಂಕಾ ತಂಡವು ತನ್ನ ಬ್ಯಾಟಿಂಗ್ ಶೈಲಿಯನ್ನು ಬದಲಿಸಿಕೊಂಡಿದೆ. ಆಕ್ರಮಣ ಶೀಲ ಆಟಕ್ಕೇ ಹೆಚ್ಚು ಆದ್ಯತೆ ನೀಡಿದೆ. ಆದ್ದರಿಂದ ಪ್ರತಿ ಪಂದ್ಯದಲ್ಲಿ ಯೂ ದೊಡ್ಡ ಮೊತ್ತವನ್ನು ಗಳಿಸುವತ್ತ ಚಿತ್ತ ನೆಟ್ಟಿದೆ.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 344 (ಪಥುಮ್ ನಿಸಾಂಕ 51, ಕುಶಾಲ ಮೆಂಡಿಸ್ 122, ಸದೀರ ಸಮರವಿಕ್ರಮ 108, ಧನಂಜಯ ಡಿಸಿಲ್ವಾ 25, ಹಸನ್ ಅಲಿ 71ಕ್ಕೆ4, ಹ್ಯಾರಿಸ್ ರವೂಫ್ 64ಕ್ಕೆ2) **ಪಾಕಿಸ್ತಾನ:** 48.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 345 (ಅಬ್ದುಲ್ಲಾ ಶಫೀಕ್ 113, ಮೊಹಮ್ಮದ್ ರಿಜ್ವಾನ್ ಔಟಾಗದೆ 131, ಸಾದ್ ಶಕೀಲ್ 31, ಇಫ್ತಿಕಾರ್ ಅಹಮದ್ ಔಟಾಗದೆ 22, ದಿಲ್ಶಾನ್ ಮಧುಶಂಕಾ 60ಕ್ಕೆ2) **ಫಲಿತಾಂಶ:** ಪಾಕಿಸ್ತಾನ ತಂಡಕ್ಕೆ 6 ವಿಕೆಟ್‌ಗಳ ಜಯ.



ಮೊಹಮ್ಮದ್ ರಿಜ್ವಾನ್ —ಎಎಫ್‌ಪಿ ಚಿತ್ರ

ಸಿಗದ ತವರಿನ ಪ್ರೇಕ್ಷಕರ ಬೆಂಬಲ

ಹೈದರಾಬಾದ್: ಪಾಕಿಸ್ತಾನದ ಕ್ರಿಕೆಟ್ ಅಭಿಮಾನಿಗಳಿಗೆ ಮತ್ತು ಪತ್ರಕರ್ತರಿಗೆ ವೀಸಾ ನೀಡಲು ಭಾರತ ಸರ್ಕಾರ ಇನ್ನೂ ಸಿದ್ಧವಿಲ್ಲದ ಕಾರಣ ಪಾಕ್ ತಂಡವು ತಮ್ಮ ಪ್ರೇಕ್ಷಕ ಪಡೆಯ ಬೆಂಬಲವಿಲ್ಲದೆ ಆಟ ಮುಂದುವರಿಸಿದೆ.

ಶ್ರೀಲಂಕಾ ವಿರುದ್ಧದ ಪಂದ್ಯದ ವೇಳೆ ಹೈದರಾಬಾದ್‌ನ ಸ್ಥಳೀಯ ಕ್ರಿಕೆಟ್ ಅಭಿಮಾನಿಗಳು ಪಾಕ್ ತಂಡವನ್ನು ಹುರಿದುಂಬಿಸಿದರು. ಆದರೂ ತನ್ನ ದೇಶದ ಅಭಿಮಾನಿಗಳು ಪೆವಿಲಿಯನ್‌ನಲ್ಲಿ ಇರುತ್ತಿದ್ದರೆ ಪಾಕ್ ಆಟಗಾರರಿಗೆ ಇನ್ನಷ್ಟು ಹುರುಪು ಸಿಗುತ್ತಿತ್ತು. ಅ.14ರಂದು ಭಾರತ– ಪಾಕಿಸ್ತಾನ ಮಧ್ಯೆ ಅಹಮದಾಬಾದ್‌ನಲ್ಲಿ ನಡೆಯುವ ಹೈವೋಲ್ಟೇಜ್ ಪಂದ್ಯಕ್ಕೂ ಪಾಕ್ ಅಭಿಮಾನಿಗಳಿಗೆ ವೀಸಾ ಸಿಗುವ ಸ್ಪಷ್ಟತೆ ಇಲ್ಲ.

ಬ್ಯಾಡ್ಮಿಂಟನ್: ಅಗ್ರ ಕ್ರಮಾಂಕಕ್ಕೇರಿದ ಸಾತ್ವಿಕ್–ಚಿರಾಗ್

ನವದೆಹಲಿ (ಪಿಟಿಐ): ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಬ್ಯಾಡ್ಮಿಂಟನ್ ಡಬಲ್ಸ್ ವಿಶ್ವ ಕ್ರಮಾಂಕದಲ್ಲಿ ಮಂಗಳವಾರ ಅಗ್ರಸ್ಥಾನಕ್ಕೇರಿದರು. ಈ ಗೌರವಕ್ಕೆ ಪಾತ್ರರಾದ ಭಾರತದ ಮೊದಲ ಜೋಡಿ ಇವರು.

ಚೀನಾದ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಈ ಜೋಡಿ ಭಾನುವಾರ ಸ್ವರ್ಣ ಗೆದ್ದಾಗಲೇ ಅಗ್ರಸ್ಥಾನಕ್ಕೆ ಏರುವುದು ಖಚಿತವಾಗಿತ್ತು. ಭಾರತ ಹಿಂದೆಂದೂ ಏಷ್ಯನ್ ಗೇಮ್ಸ್ ಬ್ಯಾಡ್ಮಿಂಟನ್ ಇತಿಹಾಸದಲ್ಲಿ ಡಬಲ್ಸ್‌ನಲ್ಲಿ ಚಿನ್ನ ಗೆದ್ದಿರಲಿಲ್ಲ.

ಈ ಹಿಂದೆ ಬ್ಯಾಡ್ಮಿಂಟನ್ಸ್ ಸಿಂಗಲ್ಸ್ ವಿಶ್ವ ಕ್ರಮಾಂಕದಲ್ಲಿ ಪ್ರಕಾಶ ಪಡುಕೋಣೆ, ಸೈನಾ ನೆಹ್ವಾಲ್ ಮತ್ತು ಕಿದಂಬಿ ಶ್ರೀಕಾಂತ್ ಅವರು ಅಗ್ರಸ್ಥಾನಕ್ಕೇರಿದ್ದಾರೆ.

ಕಾಮನ್ವೆಲ್ತ್ ಗೇಮ್ಸ್ ಹಾಲಿ ಚಾಂಪಿಯನ್ ಆಗಿರುವ ಸಾತ್ವಿಕ್– ಚಿರಾಗ್, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಭಾನುವಾರ (ಅ. 8) ದಕ್ಷಿಣ ಕೊರಿಯಾದ ಚೊಯಿ ಸೊಲಗ್ಯು ಮತ್ತು ಕಿಮ್ ವನ್‌ಹೊ ಜೋಡಿಯನ್ನು ಸೋಲಿಸಿ ಏಷ್ಯನ್ ಕ್ರೀಡಾಕೂಟದ ಚಿನ್ನವನ್ನೂ ಮುಡಿಗೇರಿಸಿಕೊಂಡಿದ್ದರು.

ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆಲ್ಲಲಾಗದಿದ್ದರೂ ಪಿ.ವಿ. ಸಿಂಧು ಎರಡು ಸ್ಥಾನಗಳಷ್ಟು ಬಡ್ತಿ ಪಡೆದು 13ನೇ ಕ್ರಮಾಂಕದಲ್ಲಿದ್ದಾರೆ.

ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ

12 ತಂಡಗಳ ತೆಕ್ಕೆಗೆ 118 ಆಟಗಾರರು

ಪ್ರೊ ಕಬಡ್ಡಿ ಲೀಗ್‌ನ 10ನೇ ಸೀಸನ್: ಹರಾಜು ಪ್ರಕ್ರಿಯೆ

ಮುಂಬೈ: ಪ್ರೊ ಕಬಡ್ಡಿ ಲೀಗ್‌ನ 10ನೇ ಸೀಸನ್‌ಗೆ ಸೋಮವಾರ ಮತ್ತು ಮಂಗಳವಾರ ನಡೆದ ಹರಾಜಿನಲ್ಲಿ ಒಟ್ಟು 118 ಆಟಗಾರರು 12 ಫ್ರಾಂಚೈಸಿಗಳ ಪಾಲಾದರು.

ಮೂವರು ಅನುಭವಿ ಆಟಗಾರರು ಹರಾಜಿನಲ್ಲಿ ಎರಡು ಕೋಟಿ ರೂಪಾಯಿಗೂ ಅಧಿಕ ಮೌಲ್ಯ ಪಡೆದುಕೊಂಡರೆ, ಐವರು ಒಂದು ಕೋಟಿಗೂ ಅಧಿಕ ಮೊತ್ತಕ್ಕೆ ತಂಡಗಳ ತೆಕ್ಕೆಗೆ ಜಾರಿದರು.

ಭಾರತ ಕಬಡ್ಡಿ ತಂಡದ ನಾಯಕ, ರೈಡರ್ ಪವನ್ ಸೆಹ್ರಾವತ್ ಈ ಬಾರಿಯೂ ಲೀಗ್‌ನ ಅತಿ ದುಬಾರಿ ಆಟಗಾರನೆಂಬ ದಾಖಲೆ ಬರೆದರು. ಅವರು ತೆಲುಗು ಟೈಟನ್ಸ್ ತಂಡದ ಪಾಲಾದರೆ, ಆಲ್‌ರೌಂಡರ್ ಆಟಗಾರ ಇರಾನ್‌ನ ಮೊಹಮ್ಮದ್‌ರೇಜಾ ಶಾಡ್ಲೋಯಿ ಚಿಯೆನಾ ಎರಡನೇ ದುಬಾರಿ ಆಟಗಾರಿ ಎನಿಸಿಕೊಂಡರು. ಅವರನ್ನು ಪುಣೇರಿ ಪಲ್ಟನ್ಸ್ ತಂಡ ತನ್ನ ತೆಕ್ಕೆಗೆ ಹಾಕಿಕೊಂಡಿತು.

ರೈಡರ್ ಮಣಿಂದರ್ ಸಿಂಗ್ ಬೆಂಗಾಲ್ ವಾರಿಯರ್ಸ್ ಪಾಲಾದರೆ, ಡಿಫೆಂಡರ್ ಇರಾನ್‌ನ ಫಝಲ್ ಅತ್ರಾಚಲಿ ಅವರನ್ನು ಗುಜರಾತ್ ಜೈಂಟ್ಸ್ ತೆಕ್ಕೆಗೆ ಹಾಕಿಕೊಂಡಿತು.

ರೈಡರ್ ಸಿದ್ಧಾರ್ಥ್ ದೇಸಾಯಿ ಅವರನ್ನು ಹರಿಯಾಣ ಸ್ಟೀಲರ್ಸ್ ಪಡೆದರೆ, ರೈಡರ್ ಅಶು ಮಲಿಕ್ ಮತ್ತು ಮೀತು ಅವರನ್ನು ದಬಾಂಗ್ ಡೆಲ್ಲಿ ತನ್ನದಾಗಿಸಿಕೊಂಡಿತು.

ಪ್ರೊ ಕಬಡ್ಡಿ ಲೀಗ್: ದುಬಾರಿ ಆಟಗಾರರು		
ಆಟಗಾರ	ತಂಡ	ಪಡೆದ ಮೊತ್ತ
ಪವನ್ ಸೆಹ್ರಾವತ್	ತೆಲುಗು ಟೈಟಾನ್ಸ್	₹2.60 ಕೋಟಿ
ಮೊಹಮ್ಮದ್‌ರೇಜಾ ಶಾಡ್ಲೋಯಿ ಚಿಯೆನಾ	ಪುಣೇರಿ ಪಲ್ಟನ್ಸ್	₹2.35 ಕೋಟಿ
ಮಣಿಂದರ್ ಸಿಂಗ್	ಬೆಂಗಾಲ್ ವಾರಿಯರ್ಸ್	₹2.21 ಕೋಟಿ
ಫಝಲ್ ಅತ್ರಾಚೆಲಿ	ಗುಜರಾತ್ ಜೈಂಟ್ಸ್	₹1.60 ಕೋಟಿ
ಸಿದ್ಧಾರ್ಥ್ ದೇಸಾಯಿ	ಹರಿಯಾಣ ಸ್ಟೀಲರ್ಸ್	₹1 ಕೋಟಿ
ಅಶು ಮಲಿಕ್	ದಬಾಂಗ್ ಡೆಲ್ಲಿ	₹96.25 ಲಕ್ಷ
ಮೀಟು	ದಬಾಂಗ್ ಡೆಲ್ಲಿ	₹93 ಲಕ್ಷ
ಮಂಜೀತ್	ಪಟ್ನಾ ಪೈರೇಟ್ಸ್	₹92 ಲಕ್ಷ
ಗುಮಾನ್ ಸಿಂಗ್	ಯು–ಮುಂಬಾ	₹85 ಲಕ್ಷ
ವಿಜಯ್ ಮಲಿಕ್	ಯುಪಿ ಯೋಧಾಸ್	₹85 ಲಕ್ಷ

ಉಳಿದಂತೆ ಅನುಭವಿ ಆಲ್‌ರೌಂಡರ್ ಮಂಜೀತ್ ಅವರು ಪಟ್ನಾ ಪೈರೇಟ್ಸ್, ರೈಡರ್ ಗುಮಾನ್ ಸಿಂಗ್ ಅವರು ಯು–ಮುಂಬಾ, ಆಲ್‌ರೌಂಡರ್ ವಿಜಯ್ ಮಲಿಕ್ ಅವರು ಯುಪಿ ಯೋಧಾಸ್ ಪಾಲಾದರು.

₹ 20 ಲಕ್ಷಕ್ಕಿಂತ ಅಧಿಕ ಮೊತ್ತ ಪಡೆದವರು: ಬೆಂಗಾಲ್ ವಾರಿಯರ್ಸ್: ಶುಭಂ ಶಿಂಧೆ (32.25 ಲಕ್ಷ), ಶ್ರೀಕಾಂತ್ ಜಾಧವ್ (₹32.25 ಲಕ್ಷ), ನಿತಿನ್ ಕುಮಾರ್ (₹32 ಲಕ್ಷ) ನಿತಿನ್ ರಾವಲ್ (₹30 ಲಕ್ಷ); **ಬೆಂಗಳೂರು ಬುಲ್ಸ್;** ವಿಕಾಸ್ ಖಂಡೋಲ (₹55.25 ಲಕ್ಷ), ಮೋನು (₹24.10 ಲಕ್ಷ), ವಿಶಾಲ್ (₹20 ಲಕ್ಷ); **ದಬಾಂಗ್ ಡೆಲ್ಲಿ:** ಸುನಿಲ್ (₹20 ಲಕ್ಷ); **ಗುಜರಾಜ್ ಜೈಂಟ್ಸ್:** ರೋಹಿತ್ ಗುಲಿಯಾ (₹58.50), ಮೊಹಮ್ಮದ್ ನಬಿಭಕ್ಷ್ (₹22 ಲಕ್ಷ), ಅಕ್ರಂ ಶೇಖ್ (₹20.25 ಲಕ್ಷ), ಸೋಂಬಿರ್ (₹26.25 ಲಕ್ಷ); **ಹರಿಯಾಣ ಸ್ಟೀಲರ್ಸ್:** ಚಂದ್ರನ್ ರಂಜಿತ್ (₹62 ಲಕ್ಷ), ರಾಹುಲ್ ಸೇಠಪಾಲ್ (₹40.70 ಲಕ್ಷ); **ಪಟ್ನಾ ಪೈರೇಟ್ಸ್:** ಅಂಕಿತ್ (31.50 ಲಕ್ಷ); **ತಮಿಳು ತಲೈವಾಸ್:** ಅಮೀರ್‌ಹೋಸೇನ್ ಬಸ್ತಾಮಿ (30 ಲಕ್ಷ), ಹಿಮಾಂಶು ಸಿಂಗ್ (₹25 ಲಕ್ಷ), ಮಾಸಣಮುತ್ತು ಲಕ್ಷ್ಮಣನ್ (₹32.20 ಲಕ್ಷ); **ಯು–ಮುಂಬಾ:** ಅಮೀರ್ ಮೊಹಮ್ಮದ್ (₹68 ಲಕ್ಷ), ಮಹೇಂದರ್ ಸಿಂಗ್ (₹40.25 ಲಕ್ಷ), ಗಿರೀಶ್ ಮಾರುತಿ (₹20 ಲಕ್ಷ).

ಧೋನಿಯಷ್ಟು ಶಾಂತಚಿತ್ತನಲ್ಲ: ಹರ್ಮನ್‌ಪ್ರೀತ್

ನವದೆಹಲಿ (ಪಿಟಿಐ): ತಮ್ಮನ್ನು ಕ್ರಿಕೆಟ್ ದಂತಕಥೆ ಮಹೇಂದ್ರಸಿಂಗ್ ಧೋನಿ ಅವರೊಂದಿಗೆ ಹೋಲಿಕೆ ಮಾಡಿರುವುದು ಹೆಮ್ಮೆಯ ವಿಚಾರ. ಆದರೆ ಅವರಷ್ಟು ಶಾಂತಚಿತ್ತ ತಮಗಿಲ್ಲ ಎಂದು ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಹೇಳಿದರು.

ಹರ್ಮನ್‌ಪ್ರೀತ್ ಸಿಂಗ್

ಈಚೆಗೆ ಏಷ್ಯನ್ ಗೇಮ್ಸ್ ಕ್ರೀಡಾಕೂಟದ ಪುರುಷರ ಹಾಕಿಯಲ್ಲಿ ಹರ್ಮನ್ ನಾಯಕತ್ವದ ಭಾರತ ತಂಡವು ಚಿನ್ನದ ಪದಕ ಜಯಿಸಿತು. ಆ ಸಂದರ್ಭದಲ್ಲಿ ಹಾಕಿ ಕ್ರೀಡೆ ದಿಗ್ಗಜ ಧನರಾಜ್ ಪಿಳ್ಳೈ ಅವರು ‘ಹರ್ಮನ್ ಅವರು ಮಹೇಂದ್ರಸಿಂಗ್ ಧೋನಿ ಅವರಂತಹ ನಾಯಕ’ ಎಂದು ಶ್ಲಾಘಿಸಿದ್ದರು.

ಮಂಗಳವಾರ ಈ ಕುರಿತು ಪ್ರತಿಕ್ರಿಯಿಸಿರುವ ಹರ್ಮನ್, ‘ಮೈದಾನದಲ್ಲಿ ಆಡುವಾಗ ನಾನು ಯಾವಾಗಲೂ ಶಾಂತಚಿತ್ತನಾಗಿ ಇರುವುದಿಲ್ಲ. ಬಹಳ ಆಕ್ರಮಣಶೀಲನಾಗಿರುತ್ತೇನೆ. ಧೋನಿ ಆಟದಂಗಳದಲ್ಲಿ ಸಮಾಧಾನ ಚಿತ್ತರಾಗಿರುತ್ತಾರೆ. ಆದರೆ ನಾನು ಆಟದಿಂದ ಹೊರಗಿದ್ದಾಗ ಶಾಂತ ಸ್ವಭಾವದಿಂದ ಇರುವುದು ಹೌದು‘ ಎಂದಿದ್ದಾರೆ.

‘ಮಹಾನ್ ಆಟಗಾರ ಧೋನಿ ಯೊಂದಿಗೆ ಹೋಲಿಕೆ ಮಾಡಿರುವುದು ನನ್ನ ಗೌರವ ಹೆಚ್ಚಿಸಿದೆ. ಆದರೆ ನಾವು ಆಡುವ ಕ್ರೀಡೆಯಲ್ಲಿ ಆಕ್ರಮಣಶೈಲಿಗೆ ಹೆಚ್ಚು ಆದ್ಯತೆ. ಅದಕ್ಕೆ ಸಹಜವಾಗಿಯೇ ನಾನು ಶಾಂತವಾಗಿರಲು ಸಾಧ್ಯವಾಗದು‘ ಎಂದರು.

ಏಷ್ಯನ್ ಗೇಮ್ಸ್‌ನಲ್ಲಿ ಹರ್ಮನ್ 13 ಗೋಲು ಗಳಿಸಿದರು. ತಂಡವು ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ನೇರ ಅರ್ಹತೆ ಗಳಿಸಿತು.

ಪ್ಯಾರಿಸ್ ಒಲಿಂಪಿಕ್ಸ್ ನಮ್ಮ ಗುರಿ: ಪೂನಿಯಾ

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಇತ್ತೀಚೆಗೆ ಹಿನ್ನಡೆ ಕಂಡರೂ ಭಾರತ ಮಹಿಳಾ ತಂಡ ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಆಡಲಿದೆ ಎಂಬ ಬಗ್ಗೆ ತಂಡದ ನಾಯಕಿ ಸವಿತಾ ಪೂನಿಯಾ ಅವರಿಗೆ ಯಾವುದೇ ಸಂದೇಹ ಇಲ್ಲ. ಆ ಬಗ್ಗೆ ಅವರು ಆಶಾವಾದಿಯಾಗಿದ್ದಾರೆ.

ಮಹಿಳಾ ಹಾಕಿಯಲ್ಲಿ, ಚೀನಾ ತನಗಿಂತ ಹೆಚ್ಚಿನ ಕ್ರಮಾಂಕ ಹೊಂದಿ ರುವ ಭಾರತ ತಂಡವನ್ನು ಅಚ್ಚರಿಯ ರೀತಿ ಸೋಲಿಸಿ ಫೈನಲ್ ತಲುಪಿತ್ತು. ಆ ಮೂಲಕ ಚಿನ್ನ ಗೆದ್ದು, ಒಲಿಂಪಿಕ್ಸ್‌ಗೆ ನೇರ ಪ್ರವೇಶ ಪಡೆಯುವ ಭಾರತದ ಕನಸನ್ನು ಭಗ್ನಗೊಳಿಸಿತ್ತು.

ಚೀನಾ ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿ ಚಿನ್ನ ಗೆದ್ದುಕೊಂಡರೆ, ಕಂಚಿನ ಪದಕಕ್ಕೆ ನಡೆದ ಪೈಪೋಟಿಯಲ್ಲಿ ಭಾರತ, ಕಳೆದ ಸಲದ ಚಾಂಪಿಯನ್ ಜಪಾನ್ ತಂಡವನ್ನು ಸೋಲಿಸಿತ್ತು.

‘ಟೋಕಿಯೊ 2020ರಲ್ಲಿ ಪದಕ ಗೆಲ್ಲಬೇಕೆಂಬ ಕನಸು ಈಡೇರಲಿಲ್ಲ. ಆದರೆ ಅರ್ಹತಾ ಟೂರ್ನಿ ಮೂಲಕ ಪ್ಯಾರಿಸ್ ಕ್ರೀಡೆಗಳಲ್ಲಿ ಸ್ಥಾನ ಪಡೆಯಲು ಆಟಗಾರ್ತಿಯರು ದೃಢ ನಿರ್ಧಾರ ಮಾಡಿದ್ದಾರೆ’ ಎಂದರು.

This Dussehra, bring home a Kia and win a scratch card with assured gifts, a benefit voucher worth up to ₹75 000, and a chance to win a trip to Dubai as a bumper prize. Book and take delivery of your Kia any time between 1st Oct to 31st Oct, to give your festive season an inspiring start.

Scratch the card to win an assured gift of up to ₹ 75 000*

Bumper Prize Trip to Dubai | iPad 10.2-inch (9th Gen) | iPhone 14 128GB | Cashback of ₹ 6 000 | Fuel Voucher of ₹ 6 000 | Kia Genuine Accessories of ₹ 6 000 | Gold Voucher Worth ₹ 10 000 | Philips Audio Multimedia 4.1 Speaker | Gift Card up to ₹ 10 000 | Choose Your Gift | + Benefit Vouchers Worth ₹ 5 000

Exclusive ownership privileges for the Sonet*

Free Maintenance for 3 years** | Extended Warranty Up to 5 years# | Zero Down Payment Nil processing fee and foreclosure charges^ | Additional Benefits for select corporates

Exclusive ownership privileges for the Carens*

Special Accessories Package~ | Zero Down Payment Nil processing fee and foreclosure charges^ | Additional Benefits for select corporates | Competitive Interest Rate 8.75% onwards^

Kia cars now available through Canteen Stores Department (CSD) as well.

For more information, visit our dealership or contact: 1800 108 5000 | www.kia.com/in | Book Kia | 093195 91407 | kiacare@kiaindia.net | Look for "Kia India" @

*T&C Apply. Scratch and win offer is applicable only on Sonet & Carens and early delivery on Seltos (Selected trims only) as per availability. **Service inclusion as per periodic maintenance schedule defined in the owner's manual under normal driving conditions and applicable up to 3 years/30 000 km whichever is earlier. #Limited Period Offer. 3 year standard warranty & 2 year extended warranty. ^With select partners banks only. ~Special accessory package is applicable on all trims (chrome kit). The product shown is for representation purposes only. Actual features, colors and specifications may not be part of standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/discontinue any offer/scheme/service without prior notice. For more details, visit your nearest Kia dealership. Kia urges you to follow traffic rules. These are meant to keep you safe on roads. Valid only in Andhra Pradesh, Karnataka, and Telangana.

Advaith Kia Lalbagh Main Road Tel: 9611006006 | **Epitome Kia** Whitefield: Tel: 9606970216 Yelahanka: Tel: 7406343339 Kolar: Tel: 8951903224 | **JSP Kia** Hosur Road: Tel: 9606011244 Bellandur: Tel: 9071077717 | **Naara Kia** J.P Nagar Tel: 7406528200 | **PPS Kia** Mysore Road: Tel: 6309990010 Tumkur: Tel: 6303622210 | **Taapasi Kia** Kalyan Nagar Tel: 8095537777 | **VST Kia** Palace Road: Tel: 9606988123 Yeshwanthpur: Tel: 9606988124